॥ ಶ್ರೀ ಹರಿಃ ಓಂ ॥

ಶ್ರೀ ಹರಿದಾಸ ಸಾಹಿತ್ಯ ಪ್ರಚಾರ ಗ್ರಂಥಮಾಲೆ



ಶ್ರೀಜಗನ್ನಾಥದಾಸವರ್ಯ ವಿರಚಿತ

# ಶ್ರೀಮದ್ಧರಿಕಥಾಮೃತಸಾರ

**ಸಕಲದುರಿತನಿವಾರಣಸಂಧಿ (ಭಕ್ತಾಪರಾಧಸಹಿಷ್ಣುಸಂಧಿ)**

**(ಸಂಪುಟ-22)**

**ಸರ್ವವ್ಯಾಖ್ಯಾನಸಾರಸಂಗ್ರಹ**

ಪ್ರಕಾಶಕರು :

ಹೆಚ್. ಎಸ್. ಶ್ರೀನಿವಾಸಮೂರ್ತಿ

ನಂ. 61, "ಶ್ರೀ ಉರಗಾದ್ರಿ"

5ನೇ ಅಡ್ಡರಸ್ತೆ, ನರಸಿಂಹರಾಜ ಕಾಲೋನಿ,

ಬೆಂಗಳೂರು-560 019

ದೂರವಾಣಿ : 602351

"ಶ್ರೀಮದ್ಧರಿಕಥಾಮೃತಸಾರ"
ಸರ್ವವ್ಯಾಖ್ಯಾನಸಾರಸಂಗ್ರಹ
**ಸಕಲದುರಿತನಿವಾರಣಸಂಧಿ (ಭಕ್ತಾಪರಾಧಸಹಿಷ್ಣುಸಂಧಿ)**

**ಸಂಪುಟ-22**

ಪುಟಗಳ ಸಂಖ್ಯೆ :
ಪ್ರಥಮ ಮುದ್ರಣ : 1995
ಪ್ರತಿಗಳ ಸಂಖ್ಯೆ : 1000

**ಬೆಲೆ : 50 ರೂ. ಗಳು**

**ಪ್ರತಿಗಳು ದೊರೆಯುವ ಸ್ಥಳ :**

1) **ಹೆಚ್. ಎಸ್. ಶ್ರೀನಿವಾಸಮೂರ್ತಿ**
ನಂ. 61. "ಶ್ರೀ ಉರಗಾದ್ರಿ"
5ನೇ ಅಡ್ಡರಸ್ತೆ, ನರಸಿಂಹರಾಜಾ ಕಾಲೋನಿ,
ಬೆಂಗಳೂರು 560 019
**ದೂರವಾಣಿ ಸಂಖ್ಯೆ : 602351**

2) **ವೇದಾಂತ ಬುಕ್ ಹೌಸ್**
ಉಮಾ ಚಿತ್ರಮಂದಿರದ ಸಮೀಪ
ಚಾಮರಾಜಪೇಟೆ, ಬೆಂಗಳೂರು-560 018
**ದೂರವಾಣಿ ಸಂಖ್ಯೆ : 600480**

3) **ನ್ಯೂ ವೇದಾಂತ ಬುಕ್ ಹೌಸ್**
8ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-560 003

**ಮುದ್ರಕರು :**
**ಮಾಸ್ತಿ ಮುದ್ರಣಾಲಯ**
ಹನುಮಂತನಗರ, ಬೆಂಗಳೂರು-560 028.
ದೂರವಾಣಿ : 626521

# ದಿವಂಗತ ಶ್ರೀ ಸುಬ್ಬರಾವ್ ವೆಂಕಟರಾವ್ ಯಲವಿಗಿಯವರ ಸಂಕ್ಷಿಪ್ತ ಜೀವನ ಪರಿಚಯ



ಶ್ರೀಯುತರು ಸವಣೂರಿನ ಶ್ರೀ ಸತ್ಯಬೋಧತೀರ್ಥರ ಪರಮ ಭಕ್ತರು. ಜನ್ಮಸ್ಥಳ ಸವಣೂರು. ಉತ್ತಮ ಮಾಧ್ವ ಸಂಪ್ರದಾಯಸ್ಥರ ಮನೆತನ ಸಂಜಾತರು. ಅಂಚೆ ಇಲಾಖೆಯಲ್ಲಿ 40 ವರ್ಷಗಳ ಕಾಲ ತಾಕೀರ ವೃತ್ತಿ. ದಕ್ಷ ಕಾರ್ಯಕರ್ತರೆಂದು ಖ್ಯಾತರಾಗಿದ್ದರು. ಹುಬ್ಬಳ್ಳಿಯ ಪೋಸ್ಟ್ ಮಾಸ್ತರಾಗಿ ನಿವೃತ್ತಿ. ಸೋದೆ ಶ್ರೀ ವಾದಿರಾಜ ಗುರುಸಾರ್ವಭೌಮರ ಅಂತರಂಗ ಭಕ್ತರು. ಶಿರ್ಸಿಯಲ್ಲಿ ಉದ್ಯೋಗದಲ್ಲಿದ್ದಾಗ, ಸೋದೆಯಲ್ಲಿ ಪೋಸ್ಟ್ ಆಫೀಸಿನ ಸ್ಥಾಪನೆಗೆ ಕಾರಣರಾದರು. ಇವರ ನಿಷ್ಠಾವಂತ ಹಾಗೂ ದಕ್ಷತೆಯ ಕಾರ್ಯ ಇಡೀ ಬೊಂಬಾಯಿ ಪ್ರಾಂತ್ಯದಲ್ಲಿ ಖ್ಯಾತವಾಗಿತ್ತು. ಉತ್ತಮ ದರ್ಜೆಯ ಪೋಸ್ಟ್ ಮಾಸ್ತರೆಂದು ಬೆಳ್ಳಿಯ ಪಾರಿತೋಷಕವನ್ನು ಗಳಿಸಿದರು. ಸವಣೂರಿನ ಶ್ರೀ ಸತ್ಯಬೋಧ ಸ್ವಾಮಿಗಳ ಮಠದ

ಜೀರ್ಣೋದ್ಧಾರ ಕಾರ್ಯವನ್ನು ಆರಂಭಿಸಿ, "ಶ್ರೀ ಸತ್ಯಬೋಧ ಸೇವಾ ಸಂಘ" ವನ್ನು ರಚಿಸಿ, ತನ್ಮೂಲಕ ಸೇವಾಕಾರ್ಯ ಕ್ಷೇತ್ರವನ್ನು ವಿಸ್ತರಿಸಿದರು. ಇವರ ತಮ್ಮಂದಿರು ಶ್ರೀ ಲಕ್ಷ್ಮಣರಾವ್, ನೆಗಳೂರು ಮತ್ತು ಶ್ರೀ ಡಬೀರರು ಇವರ ಸಹಕಾರದೊಡನೆ ದ್ರವ್ಯ ಸಂಗ್ರಹಣ ಕಾರ್ಯದಲ್ಲಿ ತೊಡಗಿ, ಮಠದಲ್ಲಿ ಶಿಥಿಲಗೊಂಡಿದ್ದ ಪಾಠಶಾಲೆಯನ್ನು ವಿಸ್ತಾರವಾಗಿ ಕಟ್ಟಿಸಿ, ಭಕ್ತರು ಅಧಿಕ ಸಂಖ್ಯೆಯಲ್ಲಿ ಭೋಜನಕ್ಕೆ ಕೂಡುವಂತೆ ಅಣಿ ಮಾಡಿದರು. ಪಾಕಶಾಲೆಗೆ ದೊಡ್ಡ ಪಾತ್ರೆಗಳನ್ನು ಒದಗಿಸಿಕೊಟ್ಟರು.

ಇವರು ತಾವು ನಿವೃತ್ತರಾದನಂತರ, ಪ್ರತಿನಿತ್ಯವೂ ಶ್ರೀ ಜಗನ್ನಾಥ ದಾಸವರ್ಯರ ಮೇರುಕೃತಿ ಶ್ರೀಮದ್ಹರಿಕಥಾಮೃತಸಾರವನ್ನು ಪಠಣ ಮಾಡುತ್ತಿದ್ದರು. ಹತ್ತಾರು ಜನರನ್ನು ಕೂಡಿಸಿ ಪದ್ಯಗಳ ತಾತ್ವಿಕಾರ್ಥಗಳನ್ನು ಅನುವಾದ ಮಾಡುತ್ತಿದ್ದರು. ಆ ಗ್ರಂಥದಲ್ಲಿ ಅವರಿಗಿದ್ದ ಭಕ್ತಿಯ ಪಾರಮ್ಯವು ಅವರ ಸಾವಿನಲ್ಲಿ ಅಭಿವ್ಯಕ್ತವಾಯಿತು. ಕಾರ್ತೀಕ ಶುದ್ಧ ನವಮೀ ದಿನದಂದು ಸಾಯಂಕಾಲ ಗ್ರಂಥ ಪಠಣ ಹಾಗೂ ಅನುವಾದ ನಡೆಯುತ್ತಿತ್ತು. ರಾತ್ರಿ ಹತ್ತು ಗಂಟೆಯಾಗಿದೆ. ಶ್ರೋತೃಗಳೇ ಮಾರನೆಯ ದಿನ ಮುಂದುವರಿಸೋಣ ಎಂದರು. ಅದಕ್ಕೆ ಸುಬ್ಬರಾಯರು "ಇವತ್ತೇ ಪೂರ್ಣ ಮಾಡಬೇಕು. ಇಲ್ಲದಿದ್ದರೆ ಮುಂದಿನ ಜನ್ಮಕ್ಕೆ ಹೋಗುವುದು" ಎಂದು ಪ್ರತ್ಯುತ್ತರಿಸಿದರು. ಮರುದಿನ, ಅಂದರೆ ದಿನಾಂಕ 19-11-1969 ಕಾರ್ತಿಕ ಶುದ್ಧ ದಶಮೀ ದಿನದಂದು (ಶ್ರೀ ವಿಜಯದಾಸರ ಪುಣ್ಯದಿನ) ಅವರ ಮಗಳು ಕೊಠಡಿಯ ಬಾಗಿಲನ್ನು ತಟ್ಟಿದರು. ಶಬ್ದವೇ ಇಲ್ಲ. ಶ್ರೀಯುತರು ದಕ್ಷಿಣಕ್ಕೆ ತಲೆ ಮಾಡಿ, ಶುಭ್ರವಾದ ಪಂಚೆಯನ್ನುಟ್ಟುಕೊಂಡು ಮಲಗಿ, ಶ್ರೀ ಹರಿವರನನ್ನು ಸೇರಿದ್ದರು. ಎಂತಹ ಪುಣ್ಯಾತ್ಮರು ! ಅವರ ಧರ್ಮಪತ್ನಿ ಶ್ರೀಮತಿ ಜೀವೂಬಾಯಿಯವರೂ ಸಹ ಧಾರ್ಮಿಕಪ್ರವೃತ್ತಿಯ ಸಹಧರ್ಮಿಣಿ. 6 ಜನ ಪುತ್ರರು ಮತ್ತು 5 ಮಂದಿ ಹೆಣ್ಣುಮಕ್ಕಳ ತುಂಬು ಸಂಸಾರ. ಶ್ರೀಯುತರ ಪುತ್ರರಾದ ವೆಂಕಟರಾವ್ ಸುಬ್ಬರಾವ್ ಯಲಿವಿಗಿ ಅವರ ತಂದೆಯ ಸ್ಮರಣಾರ್ಥವಾಗಿ ಪ್ರಸಕ್ತ ಸಂಧಿಯ ಪ್ರಕಟಣೆಗಾಗಿ 2500 ರೂಪಾಯಿಗಳನ್ನು ಉದಾರವಾಗಿ ನೀಡಿ, ಮುದ್ರಣದ ವಿಚಾರಗೆ ಸಹಕರಿಸಿದ್ದಾರೆ. ಅವರ ಕುಟುಂಬ ವರ್ಗದ ಸಮಸ್ತರಿಗೂ ಶ್ರೀ ಹರಿವಾಯು ಗುರುಗಳು ಸಕಲ ಸನ್ಮಂಗಳವನ್ನುಂಟು ಮಾಡಲೆಂದು ಪ್ರಕಾಶಕರು ಸರ್ವೇಶ್ವರನಲ್ಲಿ ಪ್ರಾರ್ಥಿಸುತ್ತಾರೆ.

ಇಂತೀ,

ಹೆಚ್. ಎಸ್. ಶ್ರೀನಿವಾಸಮೂರ್ತಿ

ಪ್ರಕಾಶಕರು

॥ ಶ್ರೀ ಹರಿಃ ಓಂ ॥

# ಪ್ರಕಾಶಕರ ನುಡಿ

ಹರಿದಾಸಸಾಹಿತ್ಯಾಭಿಮಾನಿ ವಾಚಕರಲ್ಲಿ ಸವಿನಯಪೂರ್ವಕ ವಿನಂತಿ,

ದಿನಾಂಕ ೨೯-೯-೧೯೯೫ರಂದು, ಹಿಂದಿನ **ಸಂಧಿ-೨೧, ಬೃಹತ್ತಾರತಮ್ಯ ಸಂಧಿಯು**, ಶ್ರೀಮನ್ಮಾಂತ್ರಾಲಯಕ್ಷೇತ್ರದಲ್ಲಿ ಶ್ರೀ ರಾಘವೇಂದ್ರ ಗುರುಸಾರ್ವಭೌಮರ ದಿವ್ಯ ಭವ್ಯ ಸನ್ನಿಧಿಯಲ್ಲಿ ಪರಮಪೂಜ್ಯ **ಶ್ರೀ ೧೦೮ ಶ್ರೀ ಶ್ರೀ ಸುಶಮೀಂದ್ರ ತೀರ್ಥ ಶ್ರೀಪಾದಂಗಳವರ** ಅಮೃತಹಸ್ತದಿಂದ ಬಿಡುಗಡೆಯಾಯಿತು. ಇದು ೨೧ನೆಯ ಸಂಧಿಯವೈಶಿಷ್ಟ್ಯ. ಅಂದು, ಸಂಧಿಗತ ವಿಷಯವನ್ನು ಕುರಿತು, **ವಿದ್ವಾನ್ ಶ್ರೀ ರಾಜಾಪುರದದ್ರೋಣಾಚಾರ್ಯರು** ವಿದ್ವತ್ಪೂರ್ಣವಾದ ಪ್ರವಚನವನ್ನು ನೀಡಿದರು.

೨೧ನೆಯ ಸಂಧಿಯು ಬಿಡುಗಡೆಯಾದ ಕೇವಲ ಎರಡು ತಿಂಗಳ ಅವಧಿಯಲ್ಲಿ ಪ್ರಸಕ್ತ **ಸಂಧಿ-೨೨, ಸಕಲದುರಿತನಿವಾರಣಸಂಧಿಯನ್ನು (ಭಕ್ತಾಪರಾಧಸಹಿಷ್ಣುಸಂಧಿ)** ನಮ್ಮ ಸನ್ಮಾನ್ಯ ವಾಚಕರ ಕೈಯ್ಯಲ್ಲಿಡಲು ಪರಮಸಂತಸದ ಸಂಗತಿ.

**ಉದಾರದ್ರವ್ಯ ಸಹಾಯ** :

ಬೆಂಗಳೂರು, ಜಯನಗರದ **ಶ್ರೀ ವೆಂಕಟರಾವ್ ಸುಬ್ಬರಾವ್ ಯಲಿವಿಗಿಯವರು** ತಮ್ಮ ತೀರ್ಥರೂಪರವರಾದ **ದಿವಂಗತ ಶ್ರೀ ಸುಬ್ಬರಾವ್ ವೆಂಕಟರಾವ್ ಯಲಿವಿಗಿಯವರ** ಸಂಸ್ಮರಣಾರ್ಥವಾಗಿ, **೨೫೦೦ ರೂ.ಗಳ ಉದಾರ ಧನಸಹಾಯ ನೀಡಿ**, ಪ್ರಸಕ್ತ ಸಂಧಿಯ ಪ್ರಕಟಣಾ ಖರ್ಚಿಗೆ ತುಂಬ ನೆರವಾಗಿದ್ದಾರೆ. ಶ್ರೀಯುತ ಯಲಿವಿಗಿಯವರಿಗೆ ಪ್ರಕಾಶಕರು ತಮ್ಮ ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸುತ್ತಾರೆ.

ಇದೇ ರೀತಿಯಲ್ಲಿ ಶೀಘ್ರದಲ್ಲಿಯೇ ಬಿಡುಗಡೆಗೆ ತಯಾರಾಗುತ್ತಿರುವ ಮುಂದಿನ **ಸಂಧಿ ೨೩-ಕಲ್ಪಸಾಧನಸಂಧಿ (ಅಪರೋಕ್ಷತಾರತಮ್ಯಸಂಧಿ)ಯ** ಪ್ರಕಟಣೆಗೆ ಉದಾರ ಸಹಾಯ ಮತ್ತು ನೆರವನ್ನು ನೀಡಿ, ಶ್ರೀಹರಿವಾಯುಗುರುಗಳಿಗೆ ಅತ್ಯಂತ

ಪ್ರೀತ್ಯಾಸ್ಪದವಾದ ಈ ಜ್ಞಾನವು ಪ್ರಚಾರರೂಪವಾದ ಪುಣ್ಯಕಾರ್ಯದಲ್ಲಿ ಸಹಕರಿಸಬೇಕೆಂದು ಪ್ರಕಾಶಕರ ಸವಿನಯಪೂರ್ವಕ ಮನವಿ.

ಹಿಂದಿನಂತೆಯೇ, ಈ ಸಂಧಿಯ ಪ್ರಕಟಣಾಕಾರ್ಯದಲ್ಲಿ ಜಾಹೀರಾತನ್ನು ನೀಡಿ, ಸಹಕರಿಸಿದ **ಕಿರ್ಲೋಸ್ಕರ್ ಇನ್‌ವೆಸ್ಟ್‌ಮೆಂಟ್ಸ್ ಮತ್ತು ಫೈನಾನ್ಸ್ ಲಿಮಿಟೆಡ್ ಸಂಸ್ಥೆಗೂ** ಮತ್ತು ಅದಕ್ಕೆ ಪ್ರಧಾನಕಾರಣರಾದ **ಶ್ರೀ ಪಿ. ಆರ್. ಮುಂದೇವಾಡಿಯವರಿಗೆ** ಪ್ರಕಾಶಕರು ಆಭಾರಿಗಳಾಗಿದ್ದಾರೆ. ಅವರ ನಿರಂತರ ನೆರವಿನ ಸಹಾಯವೇ ಇಲ್ಲಿಯ ಪರ್ಯಂತ ಪ್ರಕಟವಾಗಿರುವ ಸಂಧಿಗಳಿಗೆ ಮುಖ್ಯ ಕಾರಣವಾಗಿದೆ.

**೧೮೦ ರೂ.ಗಳನ್ನು ನೀಡಿ. ತಟಸ್ಥರಾಗಿರುವ ಸದಸ್ಯರುಗಳಲ್ಲಿ ಪುನರ್ಮನವಿ :**

(೧) ಹಿಂದೆ ಏಳು ಸಂಪುಟಗಳ ಯೋಜನೆಯು ಜಾರಿಯಲ್ಲಿದ್ದಾಗ, ಅನೇಕ ಮಂದಿ ಕೇವಲ ೧೮೦ ರೂಗಳನ್ನು ನೀಡಿ, ಏಳು ಸಂಧಿಗಳ ಪ್ರತಿಗಳನ್ನು ಪಡೆದು, ಮುಂದಿನ ಮಾಸಿಕ ಕಂತುಗಳನ್ನು ನೀಡದೆ ತಟಸ್ಥರಾಗಿದ್ದಾರೆ.

(೨) **ದಿನಾಂಕ ೧–೧–೧೯೯೨ರಿಂದ ನೂತನ ಯೋಜನೆ ಜಾರಿಗೆ ಬಂದಿದೆ.** ಆದರಿಂದ ಹಿಂದಿನ ಯೋಜನೆ ರದ್ದಾಗಿದೆ. ತಟಸ್ಥರಾಗಿ, ಮೋಕ್ಷಪ್ರದವಾದ ಇಂತಹ ಕೃತಿರತ್ನದ ವಿಷಯವಾಗಿ ಯಾವ ಆಸಕ್ತಿಯನ್ನೂ ತೋರಿಸದೆ, ಉದಾಸೀನ ಮನೋಭಾವದಿಂದಿರುವ ಆ ಪ್ರತಿಯೊಬ್ಬ ಸದಸ್ಯರಿಗೂ ಪ್ರತ್ಯೇಕವಾಗಿ **ಪುನರ್ವಿನಂತಿ ಪತ್ರಗಳನ್ನು** ಮೇಲಿಂದ ಮೇಲೆ ಬರೆದರೂ, ಪ್ರಕಾಶಕರ ವಿನಂತಿ ಅವರ ಮನಸ್ಸನ್ನು ಮುಟ್ಟಲ್ಲ. ಕಲ್ಲು ಮನಸ್ಸು ಮಾಡಿಕೊಂಡಿರುವ ಅವರ ಅಂತರಂಗವನ್ನು ಗ್ರಂಥ ಪ್ರತಿಪಾದ್ಯದೇವತಾ ಗರುಡವಾಹನ ಶ್ರೀಲಕ್ಷ್ಮೀನರಸಿಂಹನೇ ತನ್ನ ದೈವಿಕ ಪ್ರೇರಣೆಯಿಂದ ಮೃದುವಾಗಿಸಿ, ಇತ್ತ ಕಡೆಗೆ ಅವರ ಗಮನ ಹರಿಸಬೇಕಾಗಿದೆ. ಶ್ರೀಹರಿವಾಯುಗುರುಗಳ ಅನುಗ್ರಹದಿಂದಲೇ ಈ ಕಾರ್ಯ ಸಾಧಿತವಾಗಬೇಕಾಗಿದೆ. ಪುನಃ ಅವರೆಲ್ಲರೂ ಪ್ರಕಾಶಕರ ನುಡಿಯ ಈ ಕಳಕಳಿ ಮನವಿಯನ್ನು ಮನ್ನಿಸಿ, ಅವರು ಪಡೆದಿರುವ ಸಂಧಿಗಳನ್ನು ಬಿಟ್ಟು, ಅದರ ಮುಂದಿನ ಸಂಧಿಯಿಂದ ೩೨ನೆಯ ಸಂಧಿಯವರೆಗೆ, ಲೆಕ್ಕಹಾಕಿಕೊಂಡು ಪ್ರತಿಸಂಧಿಗೂ ಸರಾಸರಿ ೨೫ ರೂ. ಮೌಲ್ಯದಂತೆ ಪರಿಗಣಿಸಿ, ಆಗುವ ಒಟ್ಟು ಮೊಬಲಗನ್ನು ಒಟ್ಟಾಗಿ ಆಗಲೀ, ಅಥವಾ ಮಾಸಿಕ ಕಂತುಗಳಲ್ಲಿ ಆಗಲೀ ನೀಡಿ, ಉಳಿದಿರುವ ೧೧

ಸಂಧಿಗಳ ಪ್ರಕಟಣೆಗೆ ನೆರವಾಗುತ್ತಾರೆಂದು ಆಶಿಸೋಣವೇ? ಈ ವಿನಂತಿಯು ಕೇವಲ ಪ್ರಶ್ನಾರ್ಥಕವಾಗಿ ಉಳಿಯದಿರಲಿ. ಪ್ರಕಾಶಕರ ಪ್ರಾರ್ಥನೆ ಈಡೇರಲೆಂದು ಸರ್ವೇಶ್ವರನಲ್ಲಿ ಪ್ರಾರ್ಥನೆ.

**ಸಂತಸದ ಸಂಗತಿ :**

೨೩ರಿಂದ ೩೦ರವರೆಗೆ ಎಂಟು ಸಂಧಿಗಳ ಮುದ್ರಣಕಾರ್ಯ ಬೇರೆ ಬೇರೆ ಮುದ್ರಣಾಲಯಗಳಲ್ಲಿ ಏಕಕಾಲದಲ್ಲಿ ಆರಂಭವಾಗಿದೆ-ಎಂಬ ಸಂಗತಿಯನ್ನು ಭಗವದ್ಭಕ್ತರಲ್ಲಿ ನಿವೇದಿಸಲು ಪ್ರಕಾಶಕರಿಗೆ ತುಂಬಾ ಆನಂದವಾಗುತ್ತಿದೆ. ನಂತರ ಕೇವಲ ಮೂರು ಸಂಧಿಗಳ ಪ್ರಕಟಣೆಗೆ ಮಾತ್ರ ಉಳಿದಂತಾಗುವುದು. ಶ್ರೀಹರಿವಾಯುಗುರುಗಳ ಪರಮಾನುಗ್ರಹದಿಂದಲೂ ಮತ್ತು ಸನ್ಮಾನ್ಯ ಭಗವದ್ಭಕ್ತರ ನೆರವಿನಿಂದ ಕೈಗೊಂಡ ಮಹತ್ಕಾರ್ಯ ಪೂರ್ಣಗೊಂಡು ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ.

**ಮಾಸಿಕ ಸಂಚಿಕೆಗಳು :**

(೧) ಜನವರಿ ೧೯೯೫ರಿಂದ ಪ್ರತಿ ತಿಂಗಳೂ ಮಾಸ ಸಂಚಿಕೆಗಳ ಪ್ರಕಟಣೆ ಆರಂಭವಾಗಿದೆ. ಡಿಸೆಂಬರ್ ಪರ್ಯಂತ ಇಲ್ಲಿಯವರೆಗೆ ೧೨ ಸಂಚಿಕೆಗಳು ಪ್ರಕಟವಾಗಿ ಪ್ರಥಮ ಸಂಪುಟ ಮುಕ್ತಾಯವಾಗಿದೆ.

(೨) ೧೯೯೬ನೆಯ ಸಾಲಿನಿಂದ **ದ್ವಿತೀಯ ಸಂಪುಟದ ಪ್ರಕಟಣೆ** ಆರಂಭವಾಗಲಿದೆ.

(೩) ಪ್ರತಿ ಸಂಚಿಕೆಯೂ ಚಂದಾದಾರರಿಗೆ ಪ್ರತಿ ತಿಂಗಳಿನ ೨೦ನೆಯ ದಿನಾಂಕದ ಒಳಗೆ ಸೇರುವುದು (ಅಂಚೆದ್ವಾರಾ).

(೪) **ವಾರ್ಷಿಕ ಚಂದಾ ಮೊಬಲಗು ಕೇವಲ - ೪೦ ರೂ.ಗಳು (ಅಂಚೆವೆಚ್ಚ ಸೇರಿದಂತೆ)**.

(೫) ೧೯೯೬ನೆಯ ಸಾಲಿನಿಂದ ತಾರತಮ್ಯ ಕ್ರಮಾನುಸಾರವಾಗಿ ಪ್ರಕಟವಾಗುತ್ತಿರುವ ಕೀರ್ತನಸಾಹಿತ್ಯ (ಪದಶಃ ವಿವರವಾದ ಅರ್ಥವಿವರಣೆ ಸಹಿತ) ಮುಂದುವರಿಯುವುದು (ಪಾರ್ವತೀ ದೇವಿಯರ ಪ್ರಕರಣದಿಂದ ಆರಂಭ). **ಜೊತೆಗೆ ತಾರತಮ್ಯ ಪ್ರಕರಣ-ಸೃಷ್ಟಿ ಪ್ರಕರಣ**-ಇತ್ಯಾದಿ ಪ್ರಮೇಯಗರ್ಭಿತವಾದ ತಾತ್ವಿಕ ವಿಷಯಗಳ ಲೇಖನಗಳು ಪ್ರಕಟಿಸಲ್ಪಡುವುವು.

(೬) ಅಧಿಕಸಂಖ್ಯೆಯಲ್ಲಿ ತತ್ತ್ವಜಿಜ್ಞಾಸುಗಳು ಚಂದಾದಾರರಾಗಿ, ಈ ಜ್ಞಾನಸತ್ರದಲ್ಲಿ ಪಾಲ್ಗೊಳ್ಳಬೇಕೆಂದು ಪ್ರಕಾಶಕರ ನಮ್ರ ವಿನಂತಿ.

**(೭) ೧೯೯೫ರ ಚಂದಾದಾರರು ಪುನಃ ೪೦ ರೂ.ಗಳನ್ನು ಎಂ.ಓ/ಡಿ.ಡಿ. ದ್ವಾರಾ ನೀಡಿ, ೧೯೯೬ರ ಸಾಲಿಗೆ ಪುನರ್ನವೀಕರಿಸಿಕೊಳ್ಳಬೇಕೆಂದು ವಿನ್ನಹ.**

ನಿಮ್ಮೆಲ್ಲರ ಅಂತಃಕರಣಪೂರಿತವಾದ ನೆರವು, ಪ್ರೋತ್ಸಾಹಗಳೇ ನಮ್ಮ ಕಾರ್ಯಕ್ಕೆ ಪ್ರೇರಕಶಕ್ತಿಯಾಗಲಿ. ಅಭಿಮಾನವಿರಲಿ.

ಇಂತೀ ವಂದನೆಗಳು

ಬೆಂಗಳೂರು

**ಹೆಚ್. ಎಸ್. ಶ್ರೀನಿವಾಸಮೂರ್ತಿ**

ದಿನಾಂಕ ೧-೧೨-೧೯೯೫

(ಪ್ರಕಾಶಕರು)

॥ ಶ್ರೀ ಹರಿಃ ಓಂ ॥

॥ ಶ್ರೀ ಗರುಡವಾಹನ ಲಕ್ಷ್ಮೀನರಸಿಂಹಾಭಿನ್ನ
ಶ್ರೀ ಜಗನ್ನಾಥವಿಠ್ಠಲಾಯ ನಮಃ ॥

# ಸಂಧಿ-೨೨

## ಸಕಲದುರಿತನಿವಾರಣ ಸಂಧಿ

### (ಭಕ್ತಾಪರಾಧಸಹಿಷ್ಣು ಸಂಧಿ)

ಹರಿಕಥಾಮೃತಸಾರ ಗುರುಗಳ ।
ಕರುಣದಿಂದಾಪನಿತು ಪೇಳುವೆ ।
ಪರಮ ಭಾಗವತಭಕ್ತರಿದನಾದರದಿ ಕೇಳುವುದು ॥ಪ॥

## ಪದ್ಯ-೧

ಮೂಲ :

ಶ್ರೀಲಕುಮಿವಲ್ಲಭಗೆ ಸಮ ಕರು ।
ಣಾಳುಗಳ ನಾ ಕಾಣೆ ನೆಲ್ಲಿ ಕು ।
ಚೇಲನವಲಿಗೆ ಮೆಚ್ಚಿ ಕೊಟ್ಟನು ಸಕಲ ಸಂಪದವ ॥
ಕೇಳಿದಾಕ್ಷಣ ವಸ್ತ್ರಗಳ ಪಾಂ ।
ಚಾಲಿಗಿತ್ತನು ದೈತ್ಯನುದರದ ।
ಸೀಳಿ ಸಂತೈಸಿದನು ಪ್ರಹ್ಲಾದನ ಕೃಪಾಸಾಂದ್ರ ॥೧॥

**ಅವತರಣಿಕೆ :**

ಶ್ರೀ ಲಕ್ಷ್ಮೀರಮಣನಾದ ಶ್ರೀಹರಿಯು ಪರಮಕೃಪಾಸಾಂದ್ರನೆಂದು ದೃಷ್ಟಾಂತಪೂರ್ವಕವಾಗಿ ತಿಳಿಸುತ್ತಾರೆ. ॥೧॥

**ಪ್ರತಿಪದಾರ್ಥ :**

**ಶ್ರೀ ಲಕುಮಿವಲ್ಲಭಗೆ** = ಕಾಂತಿಸಂಪನ್ನರಾದ ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನಿಗೆ. **ಸಮಕರುಣಾಳುಗಳ** = ಜೀವರಲ್ಲಿ ಕರುಣ ಮಾಡುವ ವಿಷಯದಲ್ಲಿ ಸಮಾನರಾದ. ಕರುಣಾವಂತನನ್ನು. **ಎಲ್ಲಿ** = ರಮಾಬ್ರಹ್ಮಾದಿ ದೇವತಾವರ್ಗದಲ್ಲೂ. ಜಗತ್ತಿನ ಯಾರಲ್ಲಿಯೂ. **ನಾಕಾಣೆ** = ನಾನು ನೋಡಲಿಲ್ಲ. **ಕುಚೇಲನ** = ಸುದಾಮನಾಮಕ ಭಕ್ತನ **ಅವಲಿಗೆ** = ಕೇವಲ ಅವಲಕ್ಕಿಗಾಗಿ. **ಮೆಚ್ಚಿ** = ಅವನ ಭಕ್ತಿಗೆ ಒಲಿದು. **ಸಕಲ ಸಂಪದವ** = ಐಹಿಕ ಹಾಗೂ ಪಾರತ್ರಿಕವಾದ ಸಮಸ್ತ ಸಂಪತ್ತನ್ನು. **ಕೊಟ್ಟನು** = ನೀಡಿದನು. **ಕೇಳಿದಾಕ್ಷಣ** = ತನ್ನ ಮಾನಸಂರಕ್ಷಣೆಗಾಗಿ ಶ್ರೀ ಕೃಷ್ಣನಲ್ಲಿ ಮೊರೆಯಿಟ್ಟಾಗ. **ಪಾಂಚಾಲಿಗೆ** = ದ್ರೌಪದೀದೇವಿಯರಿಗೆ. **ವಸ್ತ್ರಗಳ** = ಉಟ್ಟ ವಸ್ತ್ರವೇ ಅಕ್ಷಯವಾಗುವಂತೆ, **ಇತ್ತನು** = ವರವನ್ನು ದಯಪಾಲಿಸಿದನು **ದೈತ್ಯನ** = ತಮೋಜೀವಿಯಾದ ಹಿರಣ್ಯಕಶಿಪುವಿನ, **ಉದರವ ಸೀಳಿ** = ಹೊಟ್ಟೆಯನ್ನೇ ಬಗೆದು, **ಕೃಪಾಸಾಂದ್ರ** = ದಯಾಸಮುದ್ರನಾದ ಶ್ರೀ ಹರಿಯು. **ಪ್ರಹ್ಲಾದನ** = ಭಾಗವತೋತ್ತಮನಾದ ಪ್ರಹ್ಲಾದ ಬಾಲಕನನ್ನು. **ಸಂತೈಸಿದನು** = ತಂದೆಯಿಂದ ಒದಗಿದ ಬಾಧಾ ಪರಿಹರಿಸಿ, ಸಂರಕ್ಷಿಸಿದನು. ॥೧॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ಪರಮಾತ್ಮ ದಯಾಳು - ಎಂತ ಹೇಳತಾರೆ.

ಕಾಂತಿಸಂಪನ್ನರಾದ ಶ್ರೀಲಕ್ಷ್ಮೀದೇವೀರಿಗೆ ಪತಿಯಾದ ಗುಣಪೂರ್ಣ

ನಾದ ಶ್ರೀ ನಾರಾಯಣದೇವರಿಗೆ, ಅಸ್ವತಂತ್ರಪ್ರಾಣಿಗಳಾದ, ತನ್ನ ಪಾದಾರವಿಂದ ಸ್ವರೂಪಭಾವದಲ್ಲಿಪ್ಪ ಜೀವರಲ್ಲಿ, ಕರುಣಾಮಾಡೋ ವಿಷಯದಲ್ಲಿ ಸಮರಾದ ಕರುಣಾಳುಗಳು ರಮಾಬ್ರಹ್ಮಾದಿ ದೇವತೆಗಳಲ್ಲಿ. ಇಲ್ಲಿ ನೋಡಿದ ಕಾಲಕ್ಕೂ ನಾನು ಕಾಣೆ. ಎಂದರೆ. ರಮಾ-ಬ್ರಹ್ಮಾದಿಗಳು ತಮ್ಮ ತಮ್ಮ ಸ್ಥಾನದಲ್ಲಿ ಅಂತಃಕರಣಮಾಡತಕ್ಕವರಾದ ಕಾಲಕ್ಕೂ, ಶ್ರೀಪರಮಾತ್ಮನ ವ್ಯತಿರಿಕ್ತ, ಪಾರ್ಥಕ್ಯೇನ ಅಂತಃಕರಣಮಾಡತಕ್ಕವರು ದಾರನ್ನೂ ನಾನು ನೋಡಲಿಲ್ಲ-ಎಂತ ತಾತ್ಪರ್ಯ. ಸುದಾಮನಾಮಕ ಭಕ್ತ ತನ್ನ ಛಿದ್ರವಸ್ತ್ರದಲ್ಲಿ ಕಟ್ಟಿ ತಂದುಕೊಟ್ಟ ಅವಲಕ್ಕಿಗಾಗಿ. ತಾನು ಅತಿ ಸಂತೋಷದಿಂದ ಆ ಅವಲಕ್ಕಿ ಕಾರಣ ಮಾಡಿಕೊಂಡು, ಐಹಿಕ-ಪಾರತ್ರಿಕದಲ್ಲಿ ಆಗಬೇಕಾದ ಸಮಸ್ತವಾದ ಸಂಪತ್ತನ್ನ ಕೊಡೋವನಾದನು. ಅವಲಕ್ಕಿ ಸರ್ವಸಾಧಾರಣ, ಸರ್ವರೂ ತಪ್ಪಾರಾ, ಮಹದೈಶ್ವರ್ಯ ಹೊಂದಬಹುದಲ್ಲ- ಎಂದರೆ- ಶ್ರೀಪರಮಾತ್ಮಗೆ ಅಪರೂಪವಾದ ಭಕ್ತಿರಸ ಅವಲಕ್ಕಿಯೊಳಗೆ ಮೇಳಲನಮಾಡಿಕೊಡೋಣದರಿಂದ. ಅಂಥಾ ಅವಲಕ್ಕಿಗೆ ಮಹಾಫಲ ಕೊಡೋವನಾದನೇ ಹೊರ್ತು, ಬರೀ ಅವಲಕ್ಕೀ ಕೊಟ್ಟಮಾತ್ರಕ್ಕೆ ಮಹದೈಶ್ವರ್ಯ ಕೊಟ್ಟವನಲ್ಲ- ಎಂತ ತಾತ್ಪರ್ಯ. ದ್ರೌಪದೀದೇವೇರ ವಸ್ತ್ರವನ್ನು ಸಭಾವಲ್ಲಿ ದುರ್ಯೋಧನಾದಿಗಳು 'ಸೆಳೆ'- ಎಂತ ಹೇಳಿದ ಮಾತು. ಸರ್ವತ್ರವ್ಯಾಪ್ತನಾದ ಪರಮಾತ್ಮ ಕೇಳಿದಾಕ್ಷಣ. ಮತ್ತು ಆ ದ್ರೌಪದೀದೇವೇರು ಆ ಮಾತು ಕೇಳಿದಾಕ್ಷಣವೇ, ಮಾನುಷತ್ವೇನ ಅವತಾರ ಮಾಡಿದ ಕಾರಣದ ದೆಶೆಯಿಂದ, ಅಜ್ಞಾನಶೂನ್ಯನಾದ ಕಾಲಕ್ಕೂ. ಮಾನುಷಲೀಲಾ ತೋರಿಸಬೇಕಾಗಿ, ತನಗೆ ಪ್ರಾಪ್ತವಾದ ಆಪತ್ತು ಪರಿಹಾರ ಮಾಡೆಂದು ಪರಮಾತ್ಮನ ಪ್ರಾರ್ಥನಮಾಡಿದ್ದು ಕೇಳಿದಾಕ್ಷಣ, ಉಟ್ಟ ಒಂದು ವಸ್ತ್ರವೇ ನಾನಾ ವಿಚಿತ್ರವಾದ ಅನೇಕ ವಸ್ತ್ರಗಳು ಆಗುವಂತೆ, ದ್ರೌಪದೀದೇವೇರಿಗೆ ಅನುಗ್ರಹಮಾಡಿ ಕೊಡೋವನಾದನು. ಭಕ್ತಿಭರಿತನಾದ ಪ್ರಹ್ಲಾದನ ನುಡಿ ಕೇಳಿ, ಕಂಭದಿಂದ ಜನಿಸಿ ಬಂದ. ಶ್ರೀನೃಸಿಂಹದೇವರು. ದೈತ್ಯನಾದ ಭಗವದ್ದ್ವೇಷಿಯಾದ ಹಿರಣ್ಯಕಶಿಪುವಿನ ಉದರ ಸೀಳಿದವನಾಗಿ. ಪ್ರಹ್ಲಾದಗೆ ಅವನ ತಂದೆಯಿಂದ ಬಾಧಾ ಪರಿಹಾರಮಾಡೋವನಾದನು.

ದಯಾಸಮುದ್ರನಾದ ಶ್ರೀಪರಮಾತ್ಮ ತನ್ನ ಭಕ್ತರನ್ನು ಈ ಪ್ರಕಾರ ಸಂರಕ್ಷಿಸುವನೆಂಬ ತಾತ್ಪರ್ಯ. ಶ್ರೀಪರಮಾತ್ಮ ರಕ್ಷಿಸಬೇಕಾದರೆ, ಭಕ್ತಿ ಪ್ರಾಧಾನ್ಯ ಎಂತ- ತಾತ್ಪರ್ಯ. ॥೧॥

## ೨. ಭಾವಪ್ರಕಾಶಿಕೆ

ಕರುಣಾಸಮುದ್ರನೆಂದರೆ, ಶ್ರೀಲಕ್ಷ್ಮೀಪತಿಯಾದ ಪರಮಾತ್ಮನಷ್ಟೆ. ಅವನಿಗೆ ಸಮರಾದವರು ಮತ್ತಾರೂ ಜಗತ್ತಿನಲ್ಲೇ ಇಲ್ಲವು. ಅಂತಹ ಕಾರುಣ್ಯವನ್ನು ಯಾರಲ್ಲಿ ತೋರಿಸಿರುವನೆಂದರೆ. ಕುಚೇಲನೆಂಬ ಬ್ರಾಹ್ಮಣನು ತಂದಿದ್ದ ನಾಲ್ಕು ಮುಷ್ಠಿ ಅವಲಕ್ಕಿಯಲ್ಲಿ ಒಂದು ಮುಷ್ಠಿ ಅವಲಕ್ಕಿಯನ್ನು ತೆಗೆದುಕೊಂಡು. ಅವನಿಗೆ ಐಹಿಕದಲ್ಲಿ ಮಹದೈಶ್ವರ್ಯವನ್ನೂ ಪರಲೋಕದಲ್ಲಿ ಮುಕ್ತಿಯನ್ನೂ ಕೊಟ್ಟನು. ದ್ರೌಪದಿಯು ಸಭೆಯಲ್ಲಿ ದುಶ್ಶಾಸನನು ತನ್ನ ವಸ್ತ್ರವನ್ನು ಸುಲಿಯುತ್ತಿರುವಾಗ. 'ಹಾ ಕೃಷ್ಣಾ ದ್ವಾರಕಾವಾಸಿನ್'-ಎಂದು ಕೃಷ್ಣನನ್ನು ಪ್ರಾರ್ಥಿಸಿದ ಕೂಡಲೇ. ವಸ್ತ್ರವನ್ನು ಅಕ್ಷಯವನ್ನಾಗಿ ಮಾಡಿದನು. ಹಿರಣ್ಯಕಶಿಪನು ತನ್ನ ಮಗನಾದ ಪ್ರಹ್ಲಾದನನ್ನು ಕೊಲ್ಲುವುದಕ್ಕೆ ಸಿದ್ಧನಾಗಲು, ಪರಮಾತ್ಮನು ನರಸಿಂಹಾವತಾರಮಾಡಿ ಹಿರಣ್ಯನನ್ನು ಕೊಂದು ಪ್ರಹ್ಲಾದನನ್ನು ರಕ್ಷಿಸಿದನು. ಆದುದರಿಂದ, ಪರಮಾತ್ಮನು ಕೃಪಾಸಾಂದ್ರನೆಂದರು. ॥೧॥

## ೩. ಭಾವದರ್ಪಣ

ತನ್ನ ಚರಣಾರವಿಂದ ಉಪಾಸನೆಮಾಡತಕ್ಕ ಭಕ್ತರ ನಡಿಸತಕ್ಕ ಕ್ರಮದಲ್ಲಿ ವ್ಯತ್ಯಾಸ ಬಂದಾಗ್ಯೂ, ಅಪರಾಧ ಸಹನ ಮಾಡುತ್ತಾನೆಂದು ಹೇಳೋ ಉದ್ದಿಶ್ಯ **ಅಪರಾಧಸಹಿಷ್ಣು ಸಂಧಿ** ಉಪಕ್ರಮಿಸುತ್ತಾರೆ. ಹಲ ಕಥೀತಿ, ಸುದಾಮ, ಪ್ರಹ್ಲಾದ, ದೌಪದಿ - ಇವರನ್ನು ಪರಿಪಾಲನಮಾಡಿದ ಪ್ರಮೇಯ ಸರ್ವರಿಗೂ ಜ್ಞಾತವಾದದ್ದೇ. ಆದ್ದರಿಂದ, ವಿವರಿಸೋದಿಲ್ಲ.

ಶ್ರೀಲಕುಮಿ. ಕುಚೇಲ ಕುತ್ಸಿತವಾದ ವಸ್ತ್ರವುಳ್ಳವ ಎಂಬರ್ಥ. ಅವಲ= ಅವಲಕ್ಕಿ. ॥೧॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಶ್ರೀರಸ್ತು ॥ಹರಿಃ ಓಂ॥ ತ್ರ್ಯಕ್ಷ ಲಕ್ಷ್ಮೀಕಟಾಕ್ಷಪ್ರೇಕ್ಷಿತಾತ್ಮನೇ ನಮಃ "ಕಿಂ ತೃಷ್ಣಯಾ ಭವವಾಹಿನ್ಯಾ ಸರ್ವಾತ್ಮನಾ ಶರಣಮುಪಗತೇ ಸರ್ವಜಿಷ್ಣೌ ವಿಷ್ಣೌ? ಶ್ರೀಕೃಷ್ಣ ಏವ ಸರ್ವಾಪರಾಧಸಹಿಷ್ಣುಃ"- ಇತಿ ವಕ್ಷ್ಯಂ ಏತಸ್ಸಂಧ್ಯಾರಂಭಃ॥ ತತ್ರ ತಾವತ್ ತತ್ತದಪರಾಧೋಪಮರ್ದೇ ಅಸಾಧಾರಣಕಾರುಣ್ಯೇನ ಭವಿತವ್ಯಮ್-ಇತಿ ಅತ ಆಹ "ಶ್ರೀ" ಇತಿ॥ "ಅವಲು" "ಅವಲಕ್ಕಿ"॥ ದರ್ಶನ ಪ್ರತಿಬಂಧಕೋಪಮರ್ದೇನ ಮಂದಾರಾದ್ಯಾಪಾದಕೇಕ್ಷಣದಾನಂ॥ "ನ ಸಾಮಾನ್ಯಾತ್"–ಇತಿ ಸೂತ್ರಾತ್॥ "ಕೇಳಿ"–ವಿಲಾಸ ದರ್ಶನೇ ರತಾಃ ಸ್ತ್ರಿಯಃ ಚತುರ್ಮುಖಿಂ ಪ್ರತಿ॥ ತದೀಯಶಾಪಸಂಯುತಾಃ ನರೇಷು ದೇಹಸಂಯುತಾಃ॥ "ತದಾಪರಾಧಕರ್ಮಜಪ್ರಭೂತ ಮಾನಖಂಡನಮ್॥ ಸಮಾಪ್ಯ ವಸ್ತ್ರರಾಶಿಕಂ ದದೌ ಹರಿಃ ಕೃಪೋದಧಿಃ॥ "ಚತುರ್ಮುಖೀಯ ಶಾಪತಃ ಸುರೇಷು ಸಂಭವೇ ಜನೇಃ॥ ಕೃಪಾಲುರೀಕ್ಷಿತೋಭವತ್ ಸಭಾತಲೇ ನೃಕೇಸರೀ" ॥೧॥

### ಕನ್ನಡಾರ್ಥ

ಸರ್ವನಿಯಾಮಕನಾದ ನಾರಾಯಣನನ್ನು ಸರ್ವವಿಧವಾದ ಶರಣು ಹೊಂದಿದವನಿಗೆ, ಈ ಸಂಸಾರದಲ್ಲಿ ಮತ್ತಷ್ಟು ಮುಳುಗಿಸುವ ವಿಷಯತೃಷ್ಣೆಯು ಬಾಧಿಸುವುದಿಲ್ಲ. ಅವನೇ ಭಕ್ತರ ಸರ್ವಅಪರಾಧಗಳನ್ನು ಕ್ಷಮಿಸುವ ಸಹಿಷ್ಣುವಾಗಿರುತ್ತಾನೆ- ಎಂದು ಶ್ರೀನಾರಾಯಣಾನುಗ್ರಹಪಾತ್ರರಾದ ಶ್ರೀವಾಸವರ್ಯರು ಈ ಸಂಧಿಯನ್ನು ಪ್ರಾರಂಭಿಸುತ್ತಾರೆ. ಆ ಅಪರಾಧಗಳನ್ನು ನಾಶಪಡಿಸಲು, ಅಥವಾ ಕಡಿಮೆ ಮಾಡಲು, ಶ್ರೀಹರಿಯು

ಅಸಾಧಾರಣ ಕರುಣಾಮಯನಾಗಿರಬೇಕು. ಅದುದರಿಂದ, ಹೇಳುತ್ತಾರೆ- "ಶ್ರೀ" ಎಂಬ ಪದ್ಯವನ್ನು.

॥ಓಂ॥ಸಸಾಮಾನ್ಯಾದಪ್ಯುಪಲಬ್ಧೇಃ ಮೃತ್ಯುವತ್ ನಹಿ ಲೋಕಾಪತ್ತಿಃ" ಓಂ ಎಂಬ ಬ್ರಹ್ಮಸೂತ್ರ (ಅ.೩.ಪಾ.೩.ಸೂ.೫೩)ದಲ್ಲಿ "ಮರಣಮಾತ್ರಾನಂತರ ಮುಕ್ತಿಯಾಗದೇ ಲಿಂಗದೇಹಭಂಗಾನಂತರವೇ ಮುಕ್ತಿಯಾಗುವಂತೆ. ಬಿಂಬದರ್ಶನಾನಂತರದಲ್ಲಿಯೇ ಮುಕ್ತಿ; ಅದು ಸಾಮಾನ್ಯಭಗವದ್ರೂಪಗಳ ದರ್ಶನದಿಂದ ಆಗುವುದಿಲ್ಲ. ಇನ್ನು, ಸಾಮಾನ್ಯಭಗವದ್ರೂಪದರ್ಶನವು ಮಹರಾದಿಲೋಕಗಳನ್ನು ಹೊಂದಿಸಿಕೊಡುವುದು"-ಎಂದು ಹೇಳಿರುತ್ತಾರೆ. ಅದರಂತೆ, ಶ್ರೀಹರಿಯು ಅವರವರ ಬಿಂಬಾಪರೋಕ್ಷಜ್ಞಾನದ ಪ್ರತಿಬಂಧಕಗಳನ್ನೇ ಪರಿಹರಿಸಿ, (ಕಡಿಮೆ ಮಾಡಿ) ಮಹರಾದಿ ಲೋಕಗಳನ್ನು ಕೊಟ್ಟು ಕುಚೇಲಾದಿಗಳಿಗೆ ಕರುಣಿಸಿರುತ್ತಾನೆ-ಎಂದು ತಿಳಿಯಬೇಕು.

"ಕೇಳಿದಾಕ್ಷಣ"-ವೆಂಬ ಚರಣದಿಂದ ದ್ರೌಪದಿಗೆ ಅಕ್ಷಯವಸ್ತ್ರತರಣ ರೂಪವಾದ ಹರಿಯ ಕರುಣೆಯನ್ನು ಹೇಳುತ್ತಾರೆ. ಮಹಾಸಭೆಯಲ್ಲಿ ಉಷಾ-ಶಚಿ-ಶಾಮಲಾ-ಉಮಾ- ಇವರುಗಳು ಸ್ವೈರಿಣಿಯರಂತೆ ವಿಲಾಸವನ್ನು ಬ್ರಹ್ಮದೇವನ ಮುಂದೆ ತೋರಿಸಿದರು. ಆಗ, ಅದರಿಂದ ಕುಪಿತನಾದ ಬ್ರಹ್ಮದೇವನು ಶಾಪವನ್ನಿತ್ತನು. ಅವನ ಶಾಪಯುಕ್ತರಾಗಿಯೇ, ಅವರು ಮನುಷ್ಯಸ್ತ್ರೀಯರಾಗಿ ಹುಟ್ಟಿದರು. ಈ ಮೂವರ ಆ ಅಪರಾಧಕರ್ಮದಿಂದ ಆದ ವಸ್ತ್ರಾಪಹರಣರೂಪಮಾನಖಂಡನವನ್ನು ಮುಗಿಯಿಸಿ, ಕೃಪಾಸಾಗರ ಹರಿಯು ವಸ್ತ್ರರಾಶಿಗಳನ್ನು ಕೊಟ್ಟು ಪರಿಹರಿಸಿದನು. ದ್ರೌಪದಿಯ ದೇಹದಲ್ಲಿ ಇರುವ ಆವರ ಮೊರೆಯನ್ನು ಕೇಳಿ, ಭಾರತಿಯ ಸ್ತೋತ್ರಕ್ಕೆ ಪ್ರೀತನಾಗಿ, ಸಂರಕ್ಷಿಸಿದನು- ಎಂಬ ವಿಶೇಷವನ್ನು ಇಲ್ಲಿ ತಿಳಿಯಬೇಕು. ॥೧॥

## ೨. ಶ್ರೀ ಗುರುಹೃದಯ ಪ್ರಕಾಶಿಕೆ

ಅಣುತ್ವ ಮಹತ್ವಾದಿ ವಿರುದ್ಧಗುಣಗಳು ದೇವರಲ್ಲಿರುವಂತೆ, ಮೇಲೆ ಹೇಳಿದ ಸರ್ವೋತ್ತಮತ್ವ ಸರ್ವಸೌಲಭ್ಯಾದಿಗಳು ಅನೇಕ ಉಂಟೆಂತಲೂ, ಹಂ

**ಸಕೃಚ್ಛಿಷತ್**-ಎಂಬ ಶ್ರುತ್ಯುಕ್ತರೀತ್ಯಾ, ಹದಿನೆಂಟು ರೂಪದಿಂದ ದೇವರು ಸರ್ವರಕ್ಷಕನೆಂತಲೂ, ಅನ್ನಮಯಾದ್ಯನೇಕ ರೂಪದಿಂದ ಪೋಷಕನೆಂತಲೂ ವಿರಕ್ತಿಯಿಂದ ಶ್ರೀಹರಿಭಕ್ತಶೇಷ ಮೂಲಕ ಜೀವಿಸಿ, ತದೇಕನಿಷ್ಠರಾಗಿ ಪ್ರಾರ್ಥಿಸಿದವರಿಗೆ ದೊರಕುವ. ಕರುಣಾಳುವೆಂಬುದೇ ಮೊದಲಾದನ್ನ ಹೇಳುವ ಹರಿಕಥೆಯೇ ಅಮೃತಕ್ಕಿಂತ ಸವಿಯಾದದ್ದು. ವಿಶೇಷ ಹರಿಭಕ್ತರು ಕೇಳತಕ್ಕದ್ದು. ಗುರುಕೃಪೆಯಿಂದ ಯಥಾಶಕ್ತಿ ಈ ೨೨ನೇ ಸಂಧಿಯಲ್ಲಿ ಹೇಳುವನು- ಎಂದರ್ಥ. ॥೩೦।೫॥

ಕುಚೇಲನೆಂಬ ಬ್ರಾಹ್ಮಣನ ಒಂದು ಹಿಡಿ ಅವಲಕ್ಕಿಗೆ ಮೆಚ್ಚಿ, ಇದ್ದಲ್ಲೇ ಸಕಲೈಶ್ವರ್ಯ ಸಂಪತ್ತು ಉಂಟುಮಾಡಿಕೊಟ್ಟನು. ಸ್ವಾಭಾವಿಕ ಭಕ್ತ್ಯುದ್ರೇಕದಿಂದ- 'ಹಾ ಕೃಷ್ಣ, ದ್ವಾರಕಾವಾಸಿನ್' - ಎಂಬ ತನ್ನ ನಾಮಸ್ಮರಣೆಗಳನ್ನು ಕೇಳದಾಕ್ಷಣವೇ, ವಸ್ತ್ರಗಳನ್ನು ಇದ್ದಲ್ಲೇ ಅಭಿವೃದ್ಧಿಮಾಡಿ ಕೊಟ್ಟು. ಪಾಂಚಾಲಿ-ಎಂಬ ದ್ರೌಪದಿಯನ್ನು ಬಹುಮಾನಿಸಿದನು. ತನ್ನ ಭಕ್ತಬಾಧಕನಾದ ಹಿರಣ್ಯಕಶಿಪುವಿನ ಉದರವನ್ನು ನಖಾಗ್ರದಿಂದ ಸೀಳಿ, ಪ್ರಹ್ಲಾದನೆಂಬ ಭಕ್ತನನ್ನು ಸಂರಕ್ಷಿಸಿದನು. ಆದ್ದರಿಂದ. ಶ್ರೀಲಕ್ಷ್ಮೀಪತಿಗೆ ಸಮರಾದ ಕರುಣಉಳ್ಳವರನ್ನು, ವೇದಶಾಸ್ತ್ರಗಳಲ್ಲಿ ಹುಡುಕಿ, ನಾನು ಎಲ್ಲಿಯೂ ಕಾಣಲಿಲ್ಲವೆಂದರ್ಥ.

**ನ ಹರಿಶ್ಚಾರ್ಚಿತಸ್ತೇನ ಕದಾಚಿತ್ಕಮಲಿಪ್ಸಯಾ ।**
**ಅನ್ಯೇನಮೇವ ತದ್ಭಕ್ತೈಃ ಕೃಷ್ಣೈಕಾ ಸಂಸ್ಥಿತಾ ಸದಾ ॥**

ಎಂಬ ನಿರ್ಣಯೋಕ್ತಿಯಿಂದ, ಧನಾಕಾಂಕ್ಷೆಯಿಂದ ಸುಧಾಮನು ದೇವರನ್ನು ಭಜಿಸಲಿಲ್ಲ. ವಸ್ತ್ರಾರ್ಥವಾಗಿ, ದ್ರೌಪದಿ, ದೇವರನ್ನು ಸ್ಮರಿಸಲಿಲ್ಲ. ನಿಜ ಭಕ್ತರುಗಳಿಗೆ ಕೃಷ್ಣಸ್ಮರಣೆ ಸ್ವಾಭಾವಿಕವೆಂದು ತಿಳಿಯಬೇಕೆಂದಭಿಪ್ರಾಯ.॥೧॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಶ್ರೀಪರಮಾತ್ಮನು ತನ್ನನ್ನು ಸದಾ ಭಕ್ತಿಯಿಂದ ಉಪಾಸಿಸುತ್ತಿರುವ ಭಕ್ತರ ಪಾಲಿಗೆ ಕಾಮಧೇನು- ಕಲ್ಪವೃಕ್ಷ ಸದೃಶನು. ಅವರಲ್ಲಿ ಕಾರಣಾಂತರ

ಗಳಿಂದ ಅಪರಾಧರೂಪವಾದ ಕಾರ್ಯ ನಡೆದಿದ್ದಾಗ್ಯೂ ಸಹ, ಅದನ್ನು ಸಹನಮಾಡಿ, ಅವರಿಗೆ ಸಕಲಾಭೀಷ್ಟಗಳನ್ನು ನೀಡುವ ಪರಮಕರುಣಾಳು- ಎಂದು ತಿಳಿಸುತ್ತಾರೆ- ಪ್ರಸಕ್ತಸಂಧಿಯಿಂದ. ಈ ಕಾರಣದಿಂದಲೇ, ಪ್ರಸಕ್ತ ಸಂಧಿಗೆ **ಸಕಲದುರಿತನಿವಾರಣ ಸಂಧಿ** ಅಥವಾ **ಭಕ್ತಾಪರಾಧಸಹಿಷ್ಣು ಸಂಧಿ**-ಎಂದು ಹೆಸರಿಟ್ಟಿರುವರು. ಪರಮಕರುಣಾಸಾಗರನಾದ ಆ ಪರಾತ್ಪರನು ಭಕ್ತರಿಗೆ ಒದಗುವ ಸಕಲದುರಿತಗಳನ್ನೂ ನಿವಾರಿಸಿ, ಅವರನ್ನು ಸದಾ ಸಂರಕ್ಷಿಸುತ್ತಿರುವ ಅನುಪಮಚರಿತನು.

೨ ರಮಾಬ್ರಹ್ಮಾದಿ ತೃಣಾಂತಸಮಸ್ತದೇವತಾವರ್ಗದಲ್ಲಿ ಎಲ್ಲೆಲ್ಲಿ ಹುಡುಕಿದರೂ, ರಮಾರಮಣನಿಗೆ ಸಮನಾದ ಕರುಣಾಶಾಲಿಗಳು ಯಾರೂ ಇಲ್ಲವೇ ಇಲ್ಲ. ಅವನ ಕಾರುಣ್ಯಾತಿಶಯ ಅಷ್ಟು ಅಪಾರವಾದದ್ದು. ಇದು ಈಶ-ದಾಸರಿಗಿರುವ ಅನ್ಯೋನ್ಯಸಂಬಂಧ. ಭಕ್ತರಿಗೆ ಈಶನಲ್ಲಿ ಮಾಡುವ ಅನನ್ಯಭಕ್ತಿ. ಈಶನು ಭಕ್ತರಲ್ಲಿ ತೋರಿಸುವ ಕಾರುಣ್ಯಾತಿಶಯ- ಇವೇ ಪರಸ್ಪರ ಧರ್ಮಗಳು.

೩. ಶ್ರೀಲಕುಮೀವಲ್ಲಭನ ಕರುಣಾತಿಶಯಗುಣವನ್ನು ಮೂರು ದೃಷ್ಟಾಂತಗಳಿಂದ ದಾಸರಾಯರು ಉದಹರಿಸುತ್ತಾರೆ.

೪. **ಸುಧಾಮನು** ಶ್ರೀಹರಿಯ ಪರಮಭಕ್ತನು. ಪರಮದರಿದ್ರಾವಸ್ಥೆಯಲ್ಲಿದ್ದಾಗ್ಯೂ, ಶ್ರೀಹರಿಯನ್ನೇ ಸದಾ ಅನನ್ಯ ಭಕ್ತಿಭಾವದಿಂದ ಉಪಾಸಿಸುತ್ತಿರುವ ಏಕಾಂತಭಕ್ತನು. ಆತನ ಸಾಧ್ವಿ ಪರಮಾನೆಗಳಿಂದ ಬೇಡಿ ತಂದ. ಮೂರುಹಿಡಿ ಅವಲಕ್ಕಿಯನ್ನು ಉಪಾಯನರೂಪದಲ್ಲಿ ಗಂಟಿನಲ್ಲಿ ಕಟ್ಟಿಕೊಂಡು, ಶ್ರೀಕೃಷ್ಣನ ದರ್ಶನಾರ್ಥವಾಗಿ, ಸುಂದರ ದ್ವಾರಾವತಿಗೆ ಹೊರಟನು. ಅಲ್ಲಿ ಪರಮದಯಾಸಾಂದ್ರನಾದ ದಾಮೋದರನು ಆ ದರಿದ್ರ ಬ್ರಾಹ್ಮಣನನ್ನು ಆತ್ಮಾದರದಿಂದ ಸ್ವಾಗತಿಸಿ, ಅವನು ತಂದ ಮೂರು ಹಿಡಿ ಅವಲಕ್ಕಿಯಲ್ಲಿ ಒಂದು ಮುಷ್ಟಿ ತೆಗೆದುಕೊಂಡು, ಸ್ವೀಕರಿಸಿ, ನಿತ್ಯತೃಪ್ತನಾದ ಆ ನಿರಂಜನನು ತೃಪ್ತಿಪಟ್ಟದ್ದು, - ಪರಮಾಸೋಜಿಗವಲ್ಲವೇ? ತತ್ಕಾಲವಾಗಿ

ಕುಚೇಲನಿಗೆ ಇಹದಲ್ಲಿ ಸಕಲಭೋಗಭಾಗ್ಯಗಳನ್ನಿತ್ತು. ಪರದಲ್ಲಿ ನಿತ್ಯಾನಂದ ರೂಪವಾದ ಮೋಕ್ಷಭಾಗ್ಯವನ್ನು ಕರುಣಿಸಿದನು.

೫. ತುಂಬಿದ ಮಹಾಸಭೆಯಲ್ಲಿ ದುರ್ಯೋಧನನ ಆದೇಶದಂತೆ, ದುರುಳನಾದ ದುಶ್ಯಾಸನನು ಅಗ್ನಿಕನ್ಯೆಯಾದ ದ್ರೌಪದಿಯನ್ನು ಮುಡಿಹಿಡಿದೆಳೆತಂದು, ಉಟ್ಟಿದ್ದ ಸೀರೆಯನ್ನು ಎಳೆಯಲು ಉದ್ಯುಕ್ತನಾದಾಗ, ದ್ರೌಪದಿಯು ತನ್ನ ಮಾನಸಂರಕ್ಷಣೆಗಾಗಿ - "ಹಾ ಕೃಷ್ಣ. ಹಾ ದ್ವಾರಕಾವಾಸಿನ್ - ಎಂದು ಆ ದಯಾನಿಧಿಯಲ್ಲಿ ಮೊರೆ ಇಟ್ಟಾಗ. "ದ್ರೌಪದಿಯು ಉಟ್ಟಿರುವ ವಸ್ತ್ರವು ಅಕ್ಷಯವಾಗಲಿ" - ಎಂದು ವರಪ್ರದಾನಮಾಡಿದ ಕಂಜದಳಾಯತಾಕ್ಷನಾದ ಶ್ರೀಕೃಷ್ಣ ದ್ರೌಪದಿಯ ಮಾನಸಂರಕ್ಷಣೆಮಾಡಿದ ಪಾಂಚಾಲಿವರದನ ಕಾರುಣ್ಯಾತಿಶಯ ಅನುಪಮವು !

೬. "ಸತ್ಯಂ ವಿಧಾತುಂ ನಿಜಭೃತ್ಯಭಾಷಿತಂ" - ಎಂಬ ಭಾಗವತೋಕ್ತಿಯಂತೆ, ಸಕಲ ಅಣುರೇಣುಕಾಷ್ಠಾದಿಗಳಲ್ಲಿ ಆ ಸರ್ವೋತ್ತಮನು ಪೂರ್ಣ ವ್ಯಾಪ್ತನೆಂದು. ಉದ್ಘೋಷಿಸಿದ ಬಾಲಕ ಪ್ರಹ್ಲಾದನ ಮಾತನ್ನು ಸತ್ಯವಾಗಿಸಲು ಸ್ತಂಭವನ್ನು ಸೀಳಿ. ಬಗೆದು ಬಂದ ಆ ಸ್ತಂಭದ ಶ್ರೀಲಕ್ಷ್ಮೀನಾರಸಿಂಹನು, ದೈತ್ಯನ ಉದರವನ್ನು ಬಗೆದು. ಕ್ರೂರಿಯಾದ ಹಿರಣ್ಯಕಶಿಪುವನ್ನು ಸಂಹರಿಸಿ ಭಾಗವತೋತ್ತಮನಾದ ಪ್ರಹ್ಲಾದನನ್ನು ಸಂತೈಸಿ, ಸಂರಕ್ಷಿಸಿದ ಆ ಪ್ರಹ್ಲಾದ ವರದನು ಅದೆಂತಹ ಕೃಪಾಸಾಂದ್ರನು !

೭. ಪೂರ್ವೋಕ್ತದೃಷ್ಟಾಂತಗಳಲ್ಲಿ. ಸುದಾಮನು ಶ್ರೀಕೃಷ್ಣನನ್ನು ಧನಾಕಾಂಕ್ಷೆಯಿಂದ ಉಪಾಸಿಸಲಿಲ್ಲ. ಸ್ವಾರ್ಥವಾಗಿ ದ್ರೌಪದಿ ಶ್ರೀಕೃಷ್ಣನನ್ನು ಸ್ಮರಿಸಲಿಲ್ಲ. ಅವನು ಕರುಣಾಸಾಂದ್ರನೆಂದೂ. ಶರಣಾಗತರ ಕಲ್ಪದ್ರುಮನೆಂದೂ, ಭಜಿಸಿದರು. ಇದರಿಂದ ಸುದಾಮ - ದ್ರೌಪದೀ-ಪ್ರಹ್ಲಾದ-ಇನ್ನೂ ಇತರ ಭಕ್ತರನ್ನು ಆಪತ್ತಿನಿಂದ ರಕ್ಷಿಸಿ. (ದುರಿತಾಪಹಾರ) ಅವರನ್ನು ಅನುಗ್ರಹಿಸಿದ

ಆ ಅಜಭವಾದಿ ಜನಕನು ಅತ್ಯಂತ ಕರುಣಾಸಾಂದ್ರನೆಂದು ತಿಳಿಯುವ ವಿಷಯ ವಸ್ತುವೇ ಪ್ರಸಕ್ತಸಂಧಿಯ ತಾತ್ಪರ್ಯವು. ॥೧॥

## ಪದ್ಯ-೨

**ಮೂಲ :**

**ದೇವಶವರ್ಮಾಹ್ವಯ ಕುಟುಂಬಕೆ ।**
**ಜೀವನೋಪಾಯವನು ಕಾಣದೆ ।**
**ದೇವ ದೇವ ಶರಣ್ಯ ರಕ್ಷಿಸು ರಕ್ಷಿಸೆನೆ ಕೇಳಿ ॥**
**ತಾನೊಲಿದು ಪಾಲಿಸಿದ ಸೌಖ್ಯ ಕೃ ।**
**ಪಾವಲೋಕನದಿಂದ ಈತನ ।**
**ಸೇವಿಸದೆ ಸೌಖ್ಯಗಳ ಬಯಸುವರಲ್ಪಮಾನವರು ॥೨॥**

**ಅವತರಣಿಕೆ :**

ಶ್ರೀಹರಿಯ ಕಾರುಣ್ಯವಿಶೇಷವನ್ನು ಮತ್ತೊಂದು ದೃಷ್ಟಾಂತದಿಂದ ತಿಳಿಸುತ್ತಾರೆ. ॥೨॥

**ಪ್ರತಿಪದಾರ್ಥ :**

**ದೇವಶವರ್ಮಾಹ್ವಯ** = ದೇವಶರ್ಮನಾಮಕನಾದ ಬ್ರಾಹ್ಮಣನು. **ಕುಟುಂಬಕೆ**= ತನ್ನ ಸಂಸಾರವನ್ನು ಪೋಷಿಸಲು, **ಜೀವನೋಪಾಯ ಕಾಣದೆ**= ಯಾವದಾರಿಯನ್ನೂ ಕಾಣದೇ, **ದೇವ ದೇವ**= ಬ್ರಹ್ಮಾದಿ ಸಮಸ್ತ ದೇವತೆಗಳಿಗೆ ಸ್ವಾಮಿಯಾದವನೇ, **ಶರಣ್ಯ**= ತನ್ನನ್ನೇ ಮೊರೆಹೊಕ್ಕ ಭಕ್ತ ಜನರ ರಕ್ಷಕನೇ, **ರಕ್ಷಿಸು ರಕ್ಷಿಸೆನೆ**= ಸಲಹು ಸಲಹು - ಎಂದು ದೈನ್ಯದಿಂದ ಪ್ರಾರ್ಥಿಸಲು **ಕೇಳಿ**= ಅವನ ಮೊರೆಯನ್ನು ಆಲಿಸಿ, **ತಾನೊಲಿದು**= ತಾನೇ

ಬಂದು ಅನುಗ್ರಹಿಸಿ. **ಕೃಪಾವಲೋಕನದಿಂದ** = ಕರುಣಾಕಟಾಕ್ಷವೀಕ್ಷಣದಿಂದ. **ಸೌಖ್ಯ** = ಇಹದಲ್ಲಿ ದಾರಿದ್ರ್ಯನಾಶ, ಪರದಲ್ಲಿ ಮೋಕ್ಷಾನಂದವನ್ನು. **ಪಾಲಿಸಿದ** = ಕೊಟ್ಟು ಸಂರಕ್ಷಿಸಿದನು. **ಅಲ್ಪಮಾನವರು** = ಅಜ್ಞಾನಿಗಳಾದ ಪಾಮರರು, **ಈತನ ಸೇವಿಸದೆ** = ಭಕ್ತಿಯಿಂದ ಶ್ರೀಹರಿಯನ್ನು ಸೇವಾ ಪೂರ್ವಕ ಭಜಿಸದೆ. **ಸೌಖ್ಯಗಳ ಬಯಸುವರು** = ಕೇವಲ ಕ್ಷಣಿಕವಾದ ಐಹಿಕ ಸೌಖ್ಯಗಳನ್ನು ಅನ್ಯದೇವತಾ ಸೇವಾ ದ್ವಾರಾ ಅಪೇಕ್ಷಿಸುತ್ತಾರೆ. ॥೨॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ:-

ಮತ್ತೂ, ಶ್ರೀ ಪರಮಾತ್ಮನ ದಯಾಳುತ್ವವನ್ನೇ ಹೇಳುತಾರೆ. ದೇವಶರ್ಮನೆಂಬ ಬ್ರಾಹ್ಮಣನು ಅತ್ಯಂತದರಿದ್ರನಾಗಿ ಜೀವನ ಮಾಡೋದಕ್ಕೆ ದಾವ ಉಪಾಯವೂ ಕಾಣದೇನೆ, ಬ್ರಾಹ್ಮಣಾದಿಗಳಿಗೆ ಸ್ವಾಮಿಯಾದವನೇ ಗುಣಪೂರ್ಣನಾದ ಶ್ರೀ ಶ್ರೀನಿವಾಸನೇ- ನಿನ್ನ ಭಕ್ತರಿಂದ ವಂದನ ಮಾಡಿಸಿಕೊಳ್ಳಲ್ಪಟ್ಟವನೇ-ನನ್ನ ಕಾಪಾಡಬೇಕು-ಎಂತ ಕೇವಲ ಪ್ರಾರ್ಥನೆಮಾಡಿದನು, ರಕ್ಷಿಸು ರಕ್ಷಿಸು-ಅಂಬೋಣದರಿಂದ ಆದ ದ್ವಿರುಕ್ತಿ ಮಾತನ್ನು ಕೇಳಿ, ಶ್ರೀಪರಮಾತ್ಮ ತಾನು ಒಲಿದು, ಕರುಣಾ ಎನತಕ್ಕ, ಕಟಾಕ್ಷವೀಕ್ಷಣದಿಂದ ಇಹದಲ್ಲಿ ದಾರಿದ್ರ್ಯನಾಶ, ಪಾರತ್ರಿಕದಲ್ಲಿ ಮೋಕ್ಷವನ್ನು ಕೊಡೋಣನಾಗಿದ್ದಾನೆ. ಅದ ಕಡಿಯಿಂದ, ಅಜ್ಞಾನಿಗಳಾದವರು, ಭಗವದ್ಭಕ್ತಿರಹಿತರಾದವರು- ಈ ದೇವರನ್ನ ಸೇವೆಮಾಡದೆ, ಅನ್ಯದೇವತೆಗಳ ಪೂಜಾಮಾಡಿ, ನಶ್ವರವಾದ ಅಲ್ಪಸುಖ ಹೊಂದತಾರೇ ಹೊರ್ತು, ಇಹಪರಕ್ಕೆ ಸಾರ್ಥಕವಾದ ಸೇವಾಮಾಡದೆ, ಅಲ್ಪ ಫಲ ಹೊಂದಿ, ಇಹಸುಖ ಬೇಡತಾರೆ. ಮಹಾಸುಖ ಹೊಂದಬೇಕಾದರೆ, ಶ್ರೀ ಪರಮಾತ್ಮನ ಅನುಗ್ರಹದ ಹೊರ್ತು, ಅನ್ಯದೇವತೆಗಳಿಂದ ಆಗೋದಿಲ್ಲ-ಎಂತ ತಾತ್ಪರ್ಯ. ॥೨॥

**೨ ಭಾವದರ್ಪಣ :**

"ಸುಖಮಿಚ್ಛಂತಿ ಯೇ ಮೂಢಾಃ ನೇಚ್ಛಂತಿ ಸುಖಕಾರಣಂ" -ಎಂಬ ವಚನ ಇರೋಣದರಿಂದ, ಶ್ರೀಪರಮಾತ್ಮನ ಭಜಿಸತಕ್ಕವರಿಗೇನೇ ಫಲವೆಂದು ಸದೃಷ್ಟಾಂತದಿಂದ ಹೇಳುತಾರೆ. ದೇವಶರ್ಮಾ,ದೇವ ವೇದಶರಣ್ಯ.ತದುಕ್ತಂ ಆದಿತ್ಯಪುರಾಣ ವೆಂಕಟೇಶಮಹಾತ್ಮ್ಯೇ" - ಇತಿ ಸ್ತುತ್ವಾ ವೆಂಕಟೇಶಂ ರಮೇಶಂ ತೂಷ್ಣೀಂ ಭೂತೋ ದೇವಶರ್ಮಾ ಸುಭಕ್ತಃ। ಭಕ್ತೇಭ್ಯೋಽಭಿ ಷ್ಟಾರ್ಥ ವರ್ಷ ಪ್ರಬುದ್ಧಃ ಸಾಷ್ಟಾಂಗಂ ಶಂ ಪ್ರಣಮತ್ಯೇಷ್ಟದೇವಂ॥ ಅಥ ಸ್ತೋತ್ರೇಣ ಸಂತುಷ್ಟೋ ಶ್ರೀನಿವಾಸಃ ಸತಾಂಗತಿಃ। ಮೇಘ ಗಂಭೀರಯಾ ವಾಚಾ ವರದಾನಮಥಾಬ್ರವೀತ್। ಶ್ರೀನಿವಾಸ ಉವಾಚ, ಪ್ರೀತೋಽಹಂ ತೇ ದ್ವಿಜಶ್ರೇಷ್ಠ ಮದುಪಾಸನಕರ್ಮಣಾ। ಮಹದೈಶ್ವರ್ಯ ಸಂಸಿದ್ಧಿಕಾರಣಂ ಸ್ತೋತ್ರಮುತ್ತಮಂ। ಕೃತವಾನಸಿ, ಯಸ್ಮಾತ್ತ್ವಂ ಮಾ ಭೈಷ್ಟಾತ್ರ ಪರತ್ರ ಹಿ। ಮತ್ಪ್ರಿಯಸ್ಯಾಣಿಶಿಷ್ಯಸ್ಯ ಗುರುಪಾದಾವಲಂಬಿನಃ॥ ವಿಪನ್ನಾ ತೇ ಸಂಪದಾಪ್ತಿರ್ಭೂಯಾತ್ತೇ ಮದನುಗ್ರಹಾತ್। ಮಮ ಭಕ್ತಸ್ಯ ತೇ ಗೇಹೇ ಸ್ವರ್ಣವೃಷ್ಟಿ ದಿನೇದಿನೇತಿ"॥-ಆಹ್ವಯ=ಹೆಸರು, ಅವಲೋಕನ =ನೋಡೋಣ. ॥೨॥

## ೩. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ತಿಭಿಃ ಸಾಕ್ಷಿಭಿಃ ಅಪರಿತೋಷಾತ್ ಆಹ "ದೇವ" ಇತಿ॥ "ಎನೆ" ವಚನವ್॥ "ಕುಕರ್ಮಣಾಂ ದರಿದ್ರತಾಂ ನಿರಸ್ಯ ದರ್ಶನಂ ದದೌ. ॥೨॥

## ಕನ್ನಡಾರ್ಥ

ಕುಚೇಲ ದ್ರೌಪದೀ ಪ್ರಹ್ಲಾದ-ಈ ಮೂವರ ದೃಷ್ಟಾಂತಗಳಿಂದ ಅಲಂ ಬುದ್ಧಿ (ಸಾಕು ಎಂಬ ಬುದ್ಧಿ)ಯನ್ನು ಹೊಂದದೇ, ಇನ್ನೂ ಪುರಾಣೋಕ್ತ

ಒಂದು ದೃಷ್ಟಾಂತವನ್ನು ಹೇಳುತ್ತಾರೆ- "**ದೇವಶರ್ಮ**" ಎಂಬ ಪದ್ಯದಿಂದ.

ದೇವಶರ್ಮನೆಂಬ ಬ್ರಾಹ್ಮಣನು ಪರಿಪರಿಯಾಗಿ ಪ್ರಾರ್ಥಿಸಲು, ಅವನ ಭಕ್ತಿಯುಕ್ತಸ್ತೋತ್ರ ಪ್ರಾರ್ಥನೆಗಳಿಗೆ ಮೆಚ್ಚಿ, ಶ್ರೀಶ್ರೀನಿವಾಸನು ಪೂರ್ವ ಜನ್ಮದ ಪಾಪಕರ್ಮಗಳ ಫಲವಾಗಿ ಬಂದೊದಗಿದ ಅವನ ದಾರಿದ್ರ್ಯವನ್ನು ಹೋಗಿಸಿ, ತನ್ನ ಸಂದರ್ಶನವನ್ನು ಅನುಗ್ರಹಿಸಿದನು, ಎಂದು **ಆದಿತ್ಯಪುರಾಣ ವೆಂಕಟೇಶಮಹಾತ್ಮ್ಯೆಯಲ್ಲಿ** ಹೇಳಲಾಗಿದೆ. ॥೨॥

## ೪. ಭಾವಪ್ರಕಾಶಿಕೆ

ದೇವಶರ್ಮನೆಂಬ ಬ್ರಾಹ್ಮಣನು ತನ್ನ ಹೆಂಡಿರು ಮಕ್ಕಳು ಮೊದಲಾದವರನ್ನು ಪೋಷಿಸಲು ಮಾರ್ಗವಿಲ್ಲದೆ, ದಾರಿದ್ರ್ಯಾವಸ್ಥೆಯಿಂದ ಕಷ್ಟಪಡುತ್ತಾ, ಶ್ರೀನಿವಾಸದೇವರನ್ನು ಕುರಿತು ಸ್ತೋತ್ರಮಾಡಲು, ಶ್ರೀನಿವಾಸನು ಪ್ರಸನ್ನನಾಗಿ, ವರವನ್ನು ಕೊಟ್ಟನು. ಆದಿತ್ಯಪುರಾಣ ವೆಂಕಟೇಶ ಮಹಾತ್ಮ್ಯದಲ್ಲಿ ಈ ಕಥೆಯನ್ನು ಹೇಳಿರುವರು. ವರವನ್ನು ಕೊಟ್ಟ ಪ್ರಕಾರ, ಆದಿತ್ಯಪುರಾಣದಲ್ಲಿ "ಶ್ರೀನಿವಾಸ ಉವಾಚ॥ ಪ್ರೀತೋಽಹಂತೇ ದ್ವಿಜಶ್ರೇಷ್ಠ ಮದುಪಾಸನ ಕರ್ಮಣಾ॥ ಮಹದೈಶ್ವರ್ಯ ಸಂಸಿದ್ಧಿ ಕಾರಣಂ ಸ್ತೋತ್ರ ಮುತ್ತಮಂ॥ ಕೃತವಾನಸಿಯನ್ಮಾತ್ತ್ವಂ ಮಾಭೈಷ್ಟಾತ್ತ್ರ ಪರತ್ರಹಿ॥ ವಿಪನ್ನಾಶಃ ಸಂಪದಾಪ್ತಿರ್ಭೂಯಾತ್ತ್ವೇಮದನುಗ್ರಹಾತ್॥ಮಮಭಕ್ತಸ್ಯತೇ ಗೇಹೇ ಸ್ವರ್ಣ ವೃಷ್ಟಿರ್ದಿನೇ ದಿನೇ"॥ ಶ್ರೀನಿವಾಸನು ದೇವಶರ್ಮನನ್ನು ನೋಡಿ ಹೇಳಿದುದೇನೆಂದರೆ- ಎಲೈ ಬ್ರಾಹ್ಮಣಶ್ರೇಷ್ಠ! ನೀನು ಮಾಡಿದ ನನ್ನ ಉಪಾಸನಾ ರೂಪವಾದ ಸ್ತೋತ್ರದಿಂದ ನಾನು ಸಂತುಷ್ಟನಾದೆನು. ಮಹದೈಶ್ವರ್ಯ ಪ್ರಾಪ್ತಿಯಾಗುವುದಕ್ಕೆ ಯೋಗ್ಯವಾದ ಉತ್ತಮವಾದ ಸ್ತೋತ್ರವನ್ನು ನೀನು ಮಾಡಿರುವೆ. ಆದುದರಿಂದ, ನೀನು ಇಹದಲ್ಲೂ, ಪರದಲ್ಲೂ ಸಹ ಭಯಪಡಬೇಕಾದುದು ಇಲ್ಲ. ನನ್ನ ಅನುಗ್ರಹದಿಂದ ನಿನ್ನ ವಿಪತ್ತು ಪರಿಹಾರವಾಗುವುದು. ಮಹದೈಶ್ವರ್ಯವೂ ಪ್ರಾಪ್ತಿಯಾಗುವುದು. ನನ್ನ ಭಕ್ತನಾದ

ನನ್ನ ಮನೆಯಲ್ಲಿ ಪ್ರತಿದಿವಸದಲ್ಲೂ ಭಂಗಾರದ ಮಳೆಗರೆಯುವುದು- ಎಂದು ವರವನ್ನಿತ್ತನು- ಎಂದು ಹೇಳಿರುವರು. "ಸುಖಮಿಚ್ಛಂತಿ ಯೇಮೂಢಾಃ ನೇಚ್ಛಂತಿ ಸುಖಕಾರಣಂ"- ಎಂಬ ವಾಕ್ಯದಂತೆ- ಎಲ್ಲರಿಗೂ ಸುಖಮಾತ್ರಬೇಕು. ಏನು ಮಾಡಿದರೆ ಸುಖ ಪ್ರಾಪ್ತಿಯಾಗುವುದೋ, ಅದರ ಕಾರಣ ಮಾತ್ರ ಯಾರಿಗೂ ಬೇಡ. ಅಲ್ಪಮನುಷ್ಯರಾದವರು ಪರಮಾತ್ಮನನ್ನು ಸೇವಿಸದೇ ಸುಖವನ್ನು ಮಾತ್ರ ಬೇಡುವರು. ಅದು ಎಂದಿಗೂ ಲಭ್ಯವಾಗದೆಂದು ತಾತ್ಪರ್ಯ. ॥೨॥

## ೫. ಶ್ರೀಗುರುಹೃದಯ ಪ್ರಕಾಶಿಕೆ

ದೇವಶರ್ಮನೆಂಬ ಬ್ರಾಹ್ಮಣನು ಸ್ವಕುಟುಂಬಜೀವನಕ್ಕೆ ಉಪಾಯವನ್ನೇನೂ ಕಾಣದೆ, ದೇವದೇವನಾದ ವೆಂಕಟೇಶನೇ, ಮುಖ್ಯಾಶ್ರಯನೇ. ನಮ್ಮನ್ನು ರಕ್ಷಿಸು' - ಎಂದು ಸ್ತೋತ್ರಮಾಡಿದ್ದನ್ನು ಕೇಳಿ, ತಾನಾಗಿಯೇ ಒಲಿದು, ಸಕಲಸಂಪತ್ತು ಸೌಖ್ಯವನ್ನು ಕೃಪಾಕಟಾಕ್ಷದಿಂದಲೇ ಕೊಟ್ಟನು. ಈ ಸ್ವಾಮಿಯನ್ನು ಸೇವಿಸದೆ, ಇಹಪರ ಸೌಖ್ಯಗಳನ್ನು ಅಪೇಕ್ಷಿಸುವರು ಅಲ್ಪ ಮನುಷ್ಯರು. ॥೨॥

# ಸರ್ವವ್ಯಾಖ್ಯಾನಸಾರ ಸಂಗ್ರಹ

೧ **ದೇವಶರ್ಮ**ನೆಂಬ ಹೆಸರಿನ ಬ್ರಾಹ್ಮಣನ ದೃಷ್ಟಾಂತವನ್ನು ಕೊಟ್ಟು, ಶ್ರೀಹರಿಯ ಕಾರುಣ್ಯವಿಶೇಷವನ್ನು ತಿಳಿಸುತ್ತಾರೆ ಪ್ರಸಕ್ತಪದ್ಯದಿಂದ

೨. ಹಿಂದೆ ದೇವಶರ್ಮನೆಂಬ ವಿಪ್ರನೊಬ್ಬನು ಬಡತನದ ಬೇಗೆಯಲ್ಲಿ ಬಳಲುತ್ತಾ ಬಸವಳಿದು, ಸಂಸಾರದ ಪೋಷಣೆಯ ಮಾರ್ಗವನ್ನು ಅರಿಯದೇ, ಸಪ್ತಗಿರಿವಾಸನಾದ ಶ್ರೀವೆಂಕಟೇಶನನ್ನು ಮೊರೆಹೊಕ್ಕು- 'ಹೇ ದಯಾನಿಧೇ, ದೇವದೇವ-ನನ್ನನ್ನು ಕಾಪಾಡು. ದಾರಿದ್ರ್ಯವೆಂಬ ತಾಪದಿಂದ ದಗ್ಧನಾಗುತ್ತಿ

ದ್ದೇನೆ. ಪತ್ನೀಪುತ್ರರಿಗೆ ಅನ್ನೋದಕಗಳನ್ನು ಕೊಡಲು ದಾರಿಕಾಣದಾಗಿದೆ. ಈ ಕಡುಬಡತನದಿಂದ ನನ್ನನ್ನು ರಕ್ಷಿಸು" -ಎಂದು ಪ್ರಾರ್ಥಿಸಿಕೊಂಡ. ಆ ದಯಾಮಯನು ಭಕ್ತನ ಮೊರೆಯನ್ನು ಆಲಿಸಿ, ಅವನಿಗೆ ಒಲಿದು, ಪರಮಾನುಗ್ರಹಮಾಡಿ ಸಂರಕ್ಷಿಸಿದ.

**ಪ್ರಮಾಣವಚನ :**

"ದೇವದೇವ ಶರಣ್ಯ-ತದುಕ್ತಂ ಆದಿತ್ಯಪುರಾಣ ವೆಂಕಟೇಶ ಮಹಾತ್ಮ್ಯೇ- ಇತಿ ಸ್ತುತ್ವಾ, ವೆಂಕಟೇಶಂ ರಮೇಶಂ ತೂಷ್ಣೀಂ ಭೂತೋ ದೇವಶರ್ಮಾ ಸುಭಕ್ತಃ॥

ಅಥ ಸ್ತೋತ್ರೇಣ ಸಂತುಷ್ಟೋ ಶ್ರೀನಿವಾಸಃ ಸತಾಂಗತಿಃ ।

ಮೇಘ ಗಂಭೀರಯಾ ವಾಚಾ ವರದಾನಮಥಾಬ್ರವೀತ್ ।

ಶ್ರೀನಿವಾಸ ಉವಾಚ॥ "ಪ್ರೀತ್ಯೋಹಂ ತೇ ದ್ವಿಜಶ್ರೇಷ್ಠ ಮದುಪಾಸನ ಕರ್ಮಣಾ । ಮಹದೈಶ್ವರ್ಯ ಸಂಸಿದ್ಧ ಕಾರಣಂ ಸ್ತೋತ್ರಮುತ್ತಮಂ ।

ಮಮ ಭಕ್ತಸ್ಯ ತೇ ಗೃಹೇ ಸ್ವರ್ಣವೃಷ್ಟಿ ರ್ದಿನೇ ದಿನೇತಿ"॥

**-ಆದಿತ್ಯಪುರಾಣ ವೆಂಕಟೇಶ ಮಹಾತ್ಮ್ಯೆ**

ಇಂತಹ ಭಕ್ತರ ಪಾಲಿಗೆ, ಪರಮಸುಲಭನಾದ ಭಕ್ತ್ಯೈಕಲಭ್ಯನನ್ನು ಸೇವಿಸದೆ, ಅಜ್ಞಾನಿಗಳೂ, ಭಕ್ತಿಹೀನರೂ ಆದ ಅಲ್ಪಮಾನವರು ಕ್ಷಣಿಕವಾದ ವೈಷಯಿಕಸುಖಭೋಗಪ್ರಾಪ್ತಿಗಾಗಿ, ಅನ್ಯದೇವತೆಗಳನ್ನು ಉಪಾಸನೆಮಾಡಿ, ಅನರ್ಥವನ್ನು ಹೊಂದುವರು. ಇದರಿಂದ, ಶ್ರೀ ಹರಿಯು ದಯಾಮಯನು ಭಕ್ತಪರಾಧೀನನು. ಅವನ ಪರಮಪ್ರಸಾದದಿಂದಲೇ ಸಚ್ಚಿದಾನಂದರೂಪವಾದ ಮುಕ್ತಿಯ ಸುಖಪ್ರಾಪ್ತಿ, ಅವನ ಉಪಾಸನಾದಿಗಳಿಂದ ಇಹದಲ್ಲಿ ಸೌಖ್ಯ. ಪರದಲ್ಲಿ ಶಾಶ್ವತಮುಕ್ತಿ ಲಭ್ಯವೆಂದು ಪ್ರಸಕ್ತ ಪದ್ಯದ ತಾತ್ಪರ್ಯ. ಕ್ಷಣಿಕಪ್ರಾಪಂಚಿಕ ಸುಖಕ್ಕಾಗಿ ಕ್ಷುದ್ರದೇವತೆಗಳ ಸೇವೆ ಸಲ್ಲದು-ಎಂದು ದಾಸರಾಯರ ದೃಷ್ಟಾಂತಪೂರ್ವಕ ಸ್ಪಷ್ಟೀಕರಣ. ॥೨॥

## ಪದ್ಯ-೩

**ಮೂಲ :-**

**ಶ್ರೀನಿವಾಸನ ಪೋಲ್ವ ಕರುಣಿಗ ।**
**ಳೀನಳಿನಜಾಂಡದೊಳು ಕಾಣೆ ಪ್ರ ।**
**ವೀಣರಾದವರರಸಿ ನೋಳ್ಪುದು ಶ್ರುತಿ ಪುರಾಣದೊಳು ।**
**ದ್ರೋಣ ಭೀಷ್ಮ ಕೃಪಾದಿಗಳು ಕುರು ।**
**ಸೇನೆಯೊಳಗಿರಲವರವಗುಣಗ ।**
**ಳೇನು ನೋಡದೆ ಪಾಲಿಸಿದ ಪರಮಾತ್ಮ ಪರಗತಿಯ ॥೩॥**

**ಅವತರಣಿಕೆ**

ಶ್ರೀಹರಿಯ ಕರುಣಾತಿಶಯಾತ್ಮಕವಾದ ಮಹಿಮೆಯನ್ನೇ ಇನ್ನೂ ದೃಷ್ಟಾಂತಪೂರ್ವಕವಾಗಿ ವಿವರಿಸುತ್ತಾರೆ. ॥೩॥

**ಪ್ರತಿಪದಾರ್ಥ**

**ಶ್ರೀನಿವಾಸನ ಪೋಲ್ವ** = ಶ್ರೀಲಕ್ಷ್ಮೀನಿಲಯನಾದ ಶ್ರೀನಿವಾಸ ನಾಮಕ ಶ್ರೀಹರಿಗೆ ಸದೃಶರಾದ, **ಕರುಣಿಗಳ** = ಅಸದೃಶವಾಗಿ ಕರುಣಾ ಮಾಡತಕ್ಕವರನ್ನು. **ಈ ನಳಿನಜಾಂಡದೊಳು** = ಈ ಬ್ರಹ್ಮಾಂಡದಲ್ಲಿ. **ಕಾಣೆ** = ನಾನು ಕಾಣಲಿಲ್ಲ, **ಪ್ರವೀಣರಾದವರು** = ಕುಶಲರಾದ ಬ್ರಹ್ಮಜ್ಞಾನಿಗಳು, **ಶ್ರುತಿಪುರಾಣದೊಳು** = ವೇದಗಳಲ್ಲಿ ಪುರಾಣ ಇತಿಹಾಸಾದಿಗಳಲ್ಲಿ, **ಅರಸಿನೋಳ್ಪುದು** = ಹುಡುಕಿನೋಡುವವರಾಗಬೇಕು. **ದ್ರೋಣ** = ದ್ರೋಣಾಚಾರ್ಯರು, **ಭೀಷ್ಮ** = ಭೀಷ್ಮಾಚಾರ್ಯರು, **ಕೃಪಾದಿಗಳು** = ಕೃಪಾಚಾರ್ಯರೇ ಮೊದಲಾದವರು, **ಕುರುಸೇನೆಯೊಳು ಇರಲು** = ಭಗವಂತನ ದ್ವೇಷಿಯೂ, ಭಗವದ್ಭಕ್ತರ ದ್ವೇಷಿಯೂ ಆಗಿದ್ದ,

ದುರ್ಯೋಧನನ ಸೈನ್ಯದೊಳಗಿದ್ದು, ಅವನಿಗೆ ಸಹಾಯಕರಾಗಿದ್ದಾಗ್ಯೂ, **ಅವರ ಅವಗುಣಗಳನು** ಅವರ ಕೆಟ್ಟ ಗುಣಗಳೇನಿದ್ದರೂ, **ಏನುನೋಡದೆ** = ಅವುಗಳನ್ನು ಗಣನೆಗೆ ತಾರದೇ, **ಪರಮಾತ್ಮ** = ಶ್ರೀಮನ್ನಾರಾಯಣನು. **ಪರಗತಿಯ** = ಉತ್ತಮವಾದ ಮುಕ್ತಿಯನ್ನು. **ಪಾಲಿಸಿದ** = ನೀಡುವವನಾದನು. ॥೩॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಮತ್ತೂ, ಪರಮಾತ್ಮನ ಕರುಣವಿಚಾರವೇ ಹೇಳತ್ತಾರೆ.

ಲಕ್ಷ್ಮೀಪತಿಯಾದ, ಸರ್ವೋತ್ತಮನಾದ, ಗುಣಪೂರ್ಣನಾದ ಶ್ರೀವಾಸುದೇವರಿಗೆ ಸದೃಶರಾದ ಅಸದೃಶರು ಮಾನವತಕ್ಕವರ ವರ್ತಮಾನ ಬ್ರಹ್ಮಾಂಡದೊಳು ನಾನು ಕಾಣಲಿಲ್ಲ. ಇದೇ ನ್ಯಾಯ- ಎಂತ ಬ್ರಹ್ಮಾಂಡದಲ್ಲೂ, ಕುಶಲರಾದ ಅಪರೋಕ್ಷ ಜ್ಞಾನಿಗಳಾದವರು, ವೇದಗಳಲ್ಲಿ ಪುರಾಣಗಳಲ್ಲಿ ಹುಡುಕಿ ನೋಡೋವರಾಗಬೇಕು. ವೇದಪುರಾಣಗಳಲ್ಲಿ ಹುಡುಕಿ ನೋಡಲು, ಅನ್ಯರು ದಾರೂ ಇಲ್ಲ, ಅಂದರೆ, ಕಾಣತೂ ಇಲ್ಲ-ಎಂತ ತಾತ್ಪರ್ಯ. ದ್ರೋಣಾಚಾರ್ಯರು, ಭೀಷ್ಮಾಚಾರ್ಯರು, ಕೃಪಾಚಾರ್ಯರು-ಇವರೇ ಮೊದಲಾದ ಇನ್ನೂ ಕೆಲವರು, ಭಗವದ್ದ್ವೇಷ, ಭಕ್ತರ ದ್ವೇಷಯುಕ್ತನಾದ ದುರ್ಯೋಧನನ ಸೈನ್ಯದೊಳಗಿದ್ದು, ಅವನಿಗೆ ಸಹಾಯ ಭೂತರಾಗಿರಲು, ಕುರುಸೇನೆಯಲ್ಲಿದ್ದ ಕಾಲಕ್ಕೂ, ಶ್ರೀಪರಮಾತ್ಮನಲ್ಲಿ ಅವರ ಭಕ್ತಿ ಕೆಡಲಿಲ್ಲ. ಆದ್ದರಿಂದ, ಅವರ ಬಾಹ್ಯದ ಕೆಟ್ಟಗುಣಗಳೇನಿದ್ದರೂನೂ ನೋಡದೇನೇ, ಭಕ್ತತ್ವೇನ ಸ್ವೀಕಾರ ಮಾಡಿ, ಶ್ರೀನಾರಾಯಣದೇವರು ಅವರಿಗೆ ಉತ್ತಮವಾದ ಸ್ವಯೋಗ್ಯ ಸ್ಥಾನಗಳನ್ನ ಕೊಡೋವನಾದ, ಆದಕಡಿಯಿಂದ, ಕರ್ಮವಶಾತ್ತಾಗಿ ದುಷ್ಕರ್ಮ ಮಾಡಿದರೂ, ಶ್ರೀದೇವರಲ್ಲಿ ಭಕ್ತಿ ವಿಶ್ವಾಸ ಅವಿಚ್ಛಿನ್ನವಾಗಿರಬೇಕೆಂದು ತಾತ್ಪರ್ಯ. ॥೩॥

### ೩. ಭಾವದರ್ಪಣ

ಪರಮಕರುಣಾಶಾಲಿ ಶ್ರೀಹರಿಯೆಂದು ಹೇಳುತ್ತಾರೆ. ಶ್ರೀನಿವಾಸ. ಅರಿಸಿ= ಹುಡಿಕಿ, ನೋಡಲು = ನೋಡಿದಾಗ್ಯೂ. ॥೩॥

### ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ

ನನು ರಮಾದೀನಾಂ ದಯಾಸಾರಾಣಾಂ (ಸಾಂದ್ರಾಣಾಂ) ಸತ್ವೇಽಪಿ ಕಿಂ ವಿಶಿಷ್ಯ ಹರೇರೇವ ಪ್ರಶಂಸಾ? ಇತಿ ಚೇತ್ ನ॥ "ಶ್ರಿಯಾಂ ವಸಾನಾ"- ಇತ್ಯಾದಿಷು ಅಸ್ಯೈವ ಘೃಣಾಪಾರಾವಾರತ್ವಂ ಭಾಸತೇ ಪರೀಕ್ಷಕಾಣಾಂ ಇತ್ಯಾಹ- "ಶ್ರೀ" ಇತಿ॥ "ವಿಯುಧ್ಯತೋಽಪಿ ಸಂಗರೇ ಪಿಧಾಯ ಪದ್ಮಲೋಚನಮ್ । ಸುಶಸ್ತ್ರವೃಷ್ಟಿಭಿಃ ಪುರಾ ದಧಾರ ತಾನ್ ಕೃಪಾಬಲಾತ್. ॥೩॥

## ಕನ್ನಡಾರ್ಥ

ರಮಾ ಮುಂತಾದ ದಯಾವಂತರನ್ನು ಬಿಟ್ಟು, ಶ್ರೀಹರಿಯನ್ನೇ ಯಾಕೆ ಪ್ರಶಂಸಿಸಬೇಕು?- ಎಂದು ಆಕ್ಷೇಪವು ಉದಯಿಸುತ್ತದೆ. ಆದರೆ, "ಶ್ರಿಯಂ ವಸಾನಾ'' ಎಂದು ಮುಂತಾದ ಶ್ರುತಿ ಸ್ಮೃತಿಗಳನ್ನು ಪರೀಕ್ಷಿಸುವವರಿಗೆ, ಶ್ರೀಹರಿಯೇ ದಯಾಸಮುದ್ರನೆಂಬುದಾಗಿ ತಿಳಿದು ಬರುತ್ತದೆ. ಆದುದರಿಂದ, ಎಲ್ಲರಿಗಿಂತ ಹೆಚ್ಚಿನ ಕರುಣಾಪೂರ್ಣನಾದುದರಿಂದ, ಅವನನ್ನೇ ಪ್ರಶಂಸಿಸುವದು ಅತ್ಯುಚಿತ.

ಭೀಷ್ಮ ದ್ರೋಣ- ಮುಂತಾದವರು ಬಾಣದ ಮಳೆಗಳನ್ನು ತನ್ನ ಮೇಲೆ ಸುರಿಸಿ, ಸಂಗ್ರಾಮದಲ್ಲಿ ಯುದ್ಧ ಮಾಡುತ್ತಿದ್ದರೂ, ಶ್ರೀಕೃಷ್ಣನು ಕಣ್ಣು ಮುಚ್ಚಿ, ಅಪರಾಧಗಳನ್ನೆಣಿಸದೆ, ಅವರಿಗೆ ಸದ್ಗತಿಯನ್ನು ದಯಪಾಲಿಸಿದನು. ಇದು ಭಾರತಾದಿ ಇತಿಹಾಸ ಪುರಾಣಗಳಲ್ಲಿ ಸಿದ್ಧವಾದ ವಿಷಯವಾಗಿದೆ. ॥೩॥

## ೪. ಭಾವಪ್ರಕಾಶಿಕೆ

ಶ್ರೀಶ್ರೀನಿವಾಸನಂತೆ, ಕರುಣಾಸಮುದ್ರರು ಈ ಬ್ರಹ್ಮಾಂಡದೊಳಗೆ ಎಲ್ಲಿ ಹುಡಿಕಿದರೂ ನಮಗೆ ದೊರಕರು. ಜ್ಞಾನಿಗಳಾದವರು ಈ ವಿಷಯವಲ್ಲಿ ಸಂಶಯವಿದ್ದರೆ,ಶ್ರುತಿಗಳನ್ನೂ ಪುರಾಣಗಳನ್ನೂ ಚೆನ್ನಾಗಿ ಪರಿಶೀಲನೆ ಮಾಡಿ ನೋಡಬಹುದು. ದ್ರೋಣಾಚಾರ್ಯರು, ಭೀಷ್ಮಾಚಾರ್ಯರು, ಕೃಪಾಚಾರ್ಯರು- ಮೊದಲಾದವರು ಶ್ರೀಕೃಷ್ಣನಿಗೆ ವಿರೋಧ ಪಕ್ಷೀಯರಾದ ಕೌರವರ ಸೈನ್ಯದೊಳಗೆ ಸೇರಿ,ಪಾಂಡವರ ಸಂಗಡ ಯುದ್ಧವನ್ನು ಮಾಡಿದರು. ಹಾಗಿದ್ದರೂ, ಅವರ ಅವಗುಣಗಳನ್ನೆಣಿಸದೆ, ಅವರೆಲ್ಲರಿಗೂ ಉತ್ತಮ ಗತಿಯನ್ನು ಕೊಟ್ಟಿರುವನು. ॥೩॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ

ದ್ರೋಣ, ಭೀಷ್ಮ, ಕೃಪ-ಮೊದಲಾದ ಸಜ್ಜನರು ಕೌರವರ ಪಕ್ಷಪಾತ ವನ್ನು ವಹಿಸಿ, ತನ್ನಲ್ಲಿಯೂ ತನ್ನ ಭಕ್ತ ಪಾಂಡವರಲ್ಲಿಯೂ ಸಹ ವಿರೋಧಿಸಿ ದಾಗ್ಯೂ ಪರಮಾತ್ಮನು ಅವರಿಗೆ ಸದ್ಗತಿಯನ್ನೇ ದಯಮಾಡಿ ಕೊಟ್ಟನು. ಆದ್ದರಿಂದ, ಶ್ರೀನಿವಾಸನನ್ನು ಹೋಲುವ ಎಂದರೆ, ಆತನಿಗೆ ಸಮನಾಗಿ ತೋರುವ ಕರುಣಾಳುಗಳನ್ನು ಈ ನಳಿನಜಾಂಡವೆಂಬ ಬ್ರಹ್ಮಾಂಡದಲ್ಲಿ ನಾನು ಕಾಣಲಿಲ್ಲ. ಪ್ರವೀಣರೆಂಬ ವಿವೇಕಿಗಳು ಶ್ರುತಿಪುರಾಣಗಳಲ್ಲಿ ಹುಡುಕಿ ಪರೀಕ್ಷಿಸಬಹುದೆಂದರ್ಥ. ॥೩॥

# ಸರ್ವವ್ಯಾಖ್ಯಾನಸಾರ ಸಂಗ್ರಹ

೧. ಶ್ರೀಪರಮಾತ್ಮನ ಕರುಣಾತಿಶಯವೆಂಬ ವಿಶೇಷಗುಣವನ್ನು ಇನ್ನೂ ದೃಷ್ಟಾಂತಪೂರ್ವಕವಾಗಿ ತಿಳಿಸುತ್ತಾರೆ- ಪ್ರಸಕ್ತ ಪದ್ಯದಿಂದ.

೨. ಶ್ರೀ-ಎಂದರೆ ಪರಮ ಮಂಗಳ ಸ್ವರೂಪಿಣಿಯಾದ ಕಾಂತಿಸಂಪನ್ನಳಾದ ಶ್ರೀಲಕ್ಷ್ಮೀದೇವಿ. ನಿವಾಸ-ಎಂದರೆ ನಿಲಯ ಎಂದರ್ಥ. ಲಕ್ಷ್ಮೀ-ನಾರಾಯಣರು ಪರಸ್ಪರ ನಿತ್ಯಾವಿಯೋಗಿಗಳು. ಶ್ರೀಹರಿಯ ವಕ್ಷೋನಿವಾಸಿನಿಯಾಗಿದ್ದಾಳೆ ಶ್ರೀರಮಾ. ಲಕ್ಷ್ಮೀನಿಲಯನಾದ ಶ್ರೀ ಪರಮಾತ್ಮನು **ಶ್ರೀನಿವಾಸನಾಮಕನು.**

೩. **ಶ್ರೀನಿವಾಸನಿಗೆ** ಸದೃಶರಾದ ಕರುಣಾಶಾಲಿಗಳು ಅನ್ಯರಾರೂ ಇಲ್ಲವೇ ಇಲ್ಲ. ನಳಿನ-ಎಂದರೆ ಕಮಲ. ನಳಿನಜ-ಎಂದರೆ, ಶ್ರೀಪರಮಾತ್ಮನ ನಾಭೀಕಮಲದಲ್ಲಿ ಸಂಜಾತರಾದ ಹಿರಣ್ಯಗರ್ಭನಾಮಕ ಚತುರ್ಮುಖ ಬ್ರಹ್ಮದೇವರು. ನಳಿನಜಾಂಡ-ಎಂದರೆ ಬ್ರಹ್ಮಾಂಡವು. ಶ್ರೀನಿವಾಸನಿಗೆ ಸಮರಾದ ಕರುಣಾಳುಗಳು ಈ ಬ್ರಹ್ಮಾಂಡದಲ್ಲಿ ಎಲ್ಲೆಲ್ಲಿ ಹುಡುಕಿನೋಡಿದರೂ ಸಿಗುವುದಿಲ್ಲ. ಶ್ರೀಪರಮಾತ್ಮನು ಸ್ವಭಕ್ತರ ವಿಷಯದಲ್ಲಿ ಪರಮಕರುಣಾಮಯನು.

೪. ಕುಶಲರಾದ ಬ್ರಹ್ಮಜ್ಞಾನಿಗಳು- **ಪ್ರವೀಣರು.** ಅಂತಹ ಪ್ರವೀಣರು ಸಕಲ ವೇದರಾಶಿಗಳಲ್ಲಿ (ಶ್ರುತಿ) ಪುರಾಣಗಳಲ್ಲಿ ಮತ್ತು ಇತಿಹಾಸಗಳಲ್ಲಿ ಎಲ್ಲೆಲ್ಲಿ ಅರಸಿನೋಡಿದರೂ, ಶ್ರೀನಿವಾಸನ ಪೋಲ್ವ ಕರುಣಾಳುಗಳು ಮತ್ತೊಬ್ಬರು ಸಿಗುವುದೇ ಇಲ್ಲ.

ರಮಾ. ವಾಯು- ಇವರೇ ಮೊದಲಾದವರು ದಯಾವಂತರಲ್ಲವೇ? - ಎಂದರೆ, **ಶ್ರೀಯೊಂವಸನಾ-** ಎಂಬ ಶ್ರುತ್ಯರ್ಥದಿಂದ ಸಮಸ್ತದೇವತಾವರ್ಗದಲ್ಲಿ ಶ್ರೀಹರಿಯಷ್ಟು ದಯಾಸಾಂದ್ರರೇ ಇಲ್ಲ- ಎಂದು ವ್ಯಕ್ತವಾಗುವುದು. ಎಲ್ಲರಿಗಿಂತ ಅಧಿಕಕರುಣಾಪೂರ್ಣನು ಶ್ರೀನಿವಾಸನು.

೫. ಕುರುಕ್ಷೇತ್ರ ಮಹಾಸಂಗ್ರಾಮದಲ್ಲಿ ಅತಿರಥ ಮಹಾರಥರಾದ ದ್ರೋಣಾಚಾರ್ಯರು, ಭೀಷ್ಮಾಚಾರ್ಯರು, ಕೃಪಾಚಾರ್ಯರು- ಇತ್ಯಾದಿ ಅವರ ಭಗವದ್ಭಕ್ತರು ತಮ್ಮ ಪ್ರಾರಬ್ಧಕರ್ಮಾನುಭೋಗದ ದೆಶೆಯಿಂದ ಕಲಿಸ್ವರೂಪನಾದ ದುರ್ಯೋಧನನ ಪಕ್ಷ ವಹಿಸಿ, ಅವನ ಪರವಾಗಿ ಪರಮಭಗವದ್ಭಕ್ತರಾದ ಪಾಂಡವರ ವಿರುದ್ಧವಾಗಿ ಕಾದಾಡಿದರು. ಶ್ರೀಕೃಷ್ಣಾರ್ಜುನರ ಮೇಲೆ ಬಾಣದ ವರ್ಷವನ್ನು ಸುರಿಸಿದರು. ಆದರೂ, ಅವರೆಲ್ಲರೂ

ತನ್ನ ಭಗವದ್ಭಕ್ತರಾದ್ದರಿಂದ. ಅವರ ಅವಗುಣರೂಪವಾದ ದೋಷಗಳನ್ನು ಎಣಿಸದೆ, ಪರಮದಯಾಸಾಂದ್ರನಾದ ಆ ಪರಾತ್ಪರನು ಅವರಿಗೆ ಸದ್ಗತಿಯನ್ನೇ ಅನುಗ್ರಹಿಸಿದನು. ಶ್ರೀಹರಿಯ ದಯಾವಿಶೇಷಕ್ಕೆ ಇದಕ್ಕಿಂತ ಅನ್ಯ ದೃಷ್ಟಾಂತವುಂಟೆ? - ಎಂದು ದಾಸರಾಯರ ಹುದ್ಗತ ಭಾವವು. ॥೩॥

## ಪದ್ಯ-೪

**ಮೂಲ :**

**ಚಂಡ ವಿಕ್ರಮ ಚಕ್ರ ಶಂಖವ ।**
**ತೊಂಡಮಾನ ನೃಪಾಲಗಿತ್ತನು ।**
**ಭಾಂಡಕಾರ ಭೀಮನ ಮೃದಾಭರಣಗಳಿಗೊಲಿದ ॥**
**ಮಂಡೆ ಒಡೆದಾಕಾಶರಾಜನ ।**
**ಹೆಂಡತಿಯ ಸುಡಿ ಕೇಳಿ ಮಗಳಿಗೆ ।**
**ಗಂಡನೆನಿಸಿದ ಗಹನಮಹಿಮ ಗದಾಬ್ಜಧರಪಾಣಿ ॥೪॥**

**ಅವತರಣಿಕೆ :**

ಶ್ರೀ ಪರಮಾತ್ಮನು ಮಹಾಮಹಿಮಸಂಪನ್ನನೆಂದು ಮತ್ತೂ ಹೇಳುತಾರೆ. ॥೪॥

**ಪ್ರತಿಪದಾರ್ಥ :**

**ಚಂಡವಿಕ್ರಮ** – ಮಹಾ ಪರಾಕ್ರಮಶಾಲಿಯಾದ ಶ್ರೀನಿವಾಸದೇವರು. **ಚಕ್ರಶಂಖವ** – ತನ್ನ ಚಕ್ರಾಯುಧ ಮತ್ತು ಶಂಖ ಇವೆರಡನ್ನೂ, **ತೊಂಡಮಾನ ನೃಪಾಲಗೆ** – ಆಕಾಶರಾಜನ ತಮ್ಮನಾದ ತೋಂಡಮಾನ ರಾಜನಿಗೆ, **ಇತ್ತನು** – ಯುದ್ಧ ಸಮಯದಲ್ಲಿ ಕೊಟ್ಟನು. **ಭಾಂಡಕಾರ** – ಗಡಿಗೆಗಳನ್ನು

ಮಾಡುವ ಕುಂಬಾರನಾದ. **ಭೀಮನ** – ಭೀಮ ಎಂಬ ಭಕ್ತನ. **ಮೃದಾಭರಣಗಳಿಗೆ** – ಮಣ್ಣಿನಿಂದ ಮಾಡಿದ ತುಲಸೀ ಮೊದಲಾದ ಆಭರಣಗಳಿಗೆ **ಒಲಿದ** – ಸಂತೋಷದಿಂದ ಸ್ವೀಕರಿಸಿದನು. **ಮಂಡಿ ಒಡೆದ** – ಗೋಪಾಲಕನ ಕುಠಾರದಿಂದ ಒಡೆಯಲ್ಪಟ್ಟ ಶಿರವುಳ್ಳ ಶ್ರೀನಿವಾಸದೇವರು, **ಆಕಾಶರಾಜನ** – ಆಕಾಶರಾಜನ. **ಹೆಂಡತಿಯ ನುಡಿ ಕೇಳಿ** – ಹೆಂಡತಿಯಾದ ಧರಣೀದೇವಿಯ ದ್ವಾರಾ ತಾನು ಕೇಳಿ, **ಮಗಳಿಗೆ** – ಆಕಾಶರಾಜನ ಪುತ್ರಿಯಾದ ಪದ್ಮಾವತಿಗೆ, **ಗಂಡನೆನಿಸಿದ** – ಪತಿ, ಎಂದೆನಿಸಿಕೊಂಡ, **ಗಹನಮಹಿಮ** – ಅಪಾರ ಮಹಿಮಾಸಂಪನ್ನನಾದ ಶ್ರೀನಿವಾಸನು, **ಗದಾ** – ಗದಾಯುಧ, **ಅಬ್ಜ** – ಪದ್ಮ **ಧರ** – ಚಕ್ರಾಯುಧ, **ಪಾಣಿ** – ತನ್ನ ಹಸ್ತದಲ್ಲಿ ಧರಿಸಿದ್ದಾನೆ. ॥೪॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಇನ್ನೂ ಶ್ರೀ ಪರಮಾತ್ಮನ ಮಹಾತ್ಮ್ಯವನ್ನೇ ಹೇಳತಾರೆ.

ಮಹಾಬಲಿಷ್ಠನಾದ ಶ್ರೀನಿವಾಸದೇವರು ಕೇವಲ ಭಕ್ತರಲ್ಲಿ ಪರಮಾಂತಃಕರಣಯುಕ್ತನಾಗಿ, ತನ್ನ ಹಸ್ತದಲ್ಲಿ ಇದ್ದಂಥಾ ಚಕ್ರಾಯುಧ, ಶಂಖ-ಈ ಎರಡನ್ನೂ ತೋಂಡಮಾನರಾಜನಿಗೆ ಯುದ್ಧಕಾಲದಲ್ಲಿ ಕೊಡೋವನಾಗಿದ್ದಾನೆ. ಕುಂಬಾರನಾದ ಭೀಮ ಎಂಬುವನ, ಮಣ್ಣಿನಿಂದ ಮಾಡಿದ ತುಲಸೀ ಮೊದಲಾದ ಆಭರಣಗಳಿಗೆ ದೇವರು ಸಂತೋಷಪಡೋವನಾದ ಮತ್ತು ಗೋಪಾಲಕನ ಕುಠಾರದಿಂದ ಒಡೆಯಲ್ಪಟ್ಟ ಶಿರಸ್ಸುಳ್ಳ ಶ್ರೀನಿವಾಸದೇವರು, ಆಕಾಶರಾಯನ ಪುತ್ರಿಯಾದ ಪದ್ಮಾವತೀದೇವೇರಿಗೆ ರಾಮಾವತಾರದಲ್ಲಿ ತನ್ನ ಪತ್ನಿಯಾದ ಸೀತಾದೇವೇರ ವಾಕ್ಯ ಕೇಳಿ, ಶ್ರೀ ಶ್ರೀನಿವಾಸಾವತಾರದಲ್ಲಿ ಪತಿ ಅಂತ ಎನಿಸೋವನಾದ (ಮತ್ತು ಆಕಾಶರಾಯನ ಹೆಂಡತೀ ಧರಣೀದೇವಿಯ ನುಡಿಯನ್ನು ಬಕುಳ ಮಾಲಾದೇವಿ ದ್ವಾರಾ ಕೇಳಿದವನಾಗಿ ಆಕಾಶರಾಯನ ಮಗಳಿಗೆ ಪತಿ ಎನಿಸಿದ ಅಂತಲೂ ತಾತ್ಪರ್ಯವು). ಶ್ರೀನಿವಾಸದೇವರು ಎಂಥವ

ನೆಂದರೆ, ಅಪ್ರಮೇಯನಾದವನು. ಗದಾಯುಧ, ಪದ್ಮಾಯುಧ-ಎರಡೂ ಧರಿಸಿ ಇರತಕ್ಕವನೆಂತ ತಾತ್ಪರ್ಯ. ಶಂಖ-ಚಕ್ರಗಳು ತೋಂಡಮಾನ ನೃಪಾಲಗೆ ಕೊಡೋವನಾಗಿದ್ದಾನೆಂತ ಪೂರ್ವದಲ್ಲಿ ಹೇಳಲ್ಪಟ್ಟಿದೆ. ಭಕ್ತರಲ್ಲಿ ಇಂಥಾ ದಯವುಳ್ಳವನು-ಎಂತ ತಾತ್ಪರ್ಯ, ಇಂಥಾ ಅನುಗ್ರಹ ಮಾಡೋದಕ್ಕೆ ಭಕ್ತರ ಆ ಭಕ್ತಿಯೇ ಕಾರಣವೆಂದು ಅರ್ಥ. ॥೪॥

## ೨. ಭಾವದರ್ಪಣ

ತೋಂಡಮಾನರಾಜನಿಗೆ ಶ್ರೀನಿವಾಸನು ಶಂಖಚಕ್ರ ಕೊಟ್ಟರೀತಿ ಹೇಳುತ್ತಾರೆ. ಚಂಡವಿಕ್ರಮ — ಕ್ರೂರ ಪರಾಕ್ರಮ ಉಳ್ಳವನೆಂಬರ್ಥ. ತೋಂಡಮಾನ ಉದುಕ್ತಂ ಭವಿಷ್ಯೋತ್ತರ ಪುರಾಣೇ 'ತೋಂಡ ನೃಪತೇರ್ದಿವ್ಯ ಶಂಖ ಚಕ್ರೇ ದದೌ ಹರಿರಿತಿ'- ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ" ಎಂಬ ಭಗವತ್ವಚನಾನುಸಾರ ಕುಂಬಾರ ಭೀಮನಿಂದ ಅರ್ಪವಾದಂಥ ಮೃದಾಭರಣಗಳಿಗೆ ಒಲಿದನೆಂದು ಹೇಳುತ್ತಾರೆ. ಭಾಂಡಕಾರ ತದುಕ್ತಂ ಭವಿಷ್ಯೋತ್ತರಪುರಾಣೆ-'ತೇಷಾಂ ಮಧ್ಯೇ ಕುಲಾಲೋಸ್ತಿ ನಾಮ್ನಾ ಭೀಮ ಇತಿ ಸ್ಮೃತಃ। ವಿಚಾರ್ಯಮಾಣೇ ತಚ್ಛ್ರುತ್ವಾ ಗರುಡಸ್ಕಂಧವಾಹನಃ। ತದ್ಗೃಹಂತು ಸಮಾಸಾದ್ಯ ಗಚ್ಛ ಭದ್ರ ಪರಂ ಪದಂ। ಸಾಯುಜ್ಯಂ ತು ದದೌ ತಸ್ಮೈತಿ॥ ಶ್ರೀನಿವಾಸಮೂರ್ತಿ ಶ್ರೀಪದ್ಮಾವತಿಯನ್ನು ಸ್ವೀಕಾರಮಾಡಿದ ರೀತಿ ಹೇಳುತ್ತಾರೆ. ಮಂಡೆಪಡೆದ. ಇಲ್ಲಿ ನಡೆಸತಕ್ಕ ಮಾರ್ಗ ಬಹಳ ಚಮತ್ಕಾರವದೆ. ಅದು ವಿವರಿಸುತ್ತದೆ. ಚಿತ್ತೈಸಬೇಕು. ಮಂಡೆವಡೆದಾಕಾಶರಾಯನ- ಎಂಬಲ್ಲಿ ಶಿರಸ್ಫೋಟನ ಮಾಡಿಸಿದವ ಆಕಾಶರಾಯನೇ ಆಗುತ್ತಾನೆ. ಆತನಲ್ಲ। ಹೆಂಡತಿಯ ನುಡಿಕೇಳಿ-ಎಂದರೆ ಶ್ರೀನಿವಾಸನೇ ಪ್ರತ್ಯಕ್ಷವಾಗಿ ಆಕಾಶರಾಯನ ಪತ್ನಿಯಾದ ಧರಣೀದೇವಿಯ ಮಾತು ಕೇಳಿಧಾಂಗೆ ತೋರತದೆ. ಆದರೆ, ಸಾಕ್ಷಾಚ್ಛ್ರೀನಿವಾಸನೇ ಹೋಗಿ, ಆತನ ಹೆಂಡತಿಯನ್ನು ಕೇಳಲಿಲ್ಲ. ಕೊರವಂಜಿಯ ರೂಪದಿಂದ ಅತ್ತೆಯನ್ನು ಕಂಡುಕೊಂಡಿದ್ದಾನೆ. ಏವಂರೀತ್ಯಾ ತದ್ಯಾನ್ವಯ ಹಚ್ಚಿದರೆ, ಸರಿಯಾದ ಅರ್ಥವಾಗೋದಿಲ್ಲವಾದ್ದರಿಂದ,ಅನ್ವಯ

ಬರಿಯುತ್ತಿದೆ. ಮನಸನ್ನು ತರತಕ್ಕದ್ದು. ಗದಾಪದ್ಮಗಳೇ ಹಸ್ತದಲ್ಲಿ ಧರಿಸಿದಂಥ ತಿಳಿಯಲಿಕ್ಕೆ ಅಶಕ್ಯವಾದ ಮಹಿಮಾ ಉಳ್ಳಂಥಾ ಮುಂಡೆ ಒಡೆದ. ತಲೆ ವಡಿಸಿಕೊಂಡಂಥ, ಶ್ರೀನಿವಾಸನು ಸೀತಾದೇವಿಯ ನುಡಿ ಕೇಳಿ, ಆಕಾಶರಾಜನ ಮಗಳಿಗೆ ಗಂಡನೆನಿಸಿದ ಎಂಬರ್ಥ. ಇದೇ ವಿಷಯದಲ್ಲಿ ಪ್ರಮಾಣ-ತದುಕ್ತಂ ಭವಿಷ್ಯೋತ್ತರ ಪುರಾಣೇ-"ಜಾನಕ್ಯುವಾಚ। ಮದ್ದ್ವಿಯಂ ಧ್ಯಾನಯಾ ಭುಕ್ತಂ ನಿರ್ನಿಮಿತ್ತಂ ದಯಾಪರ। ನಾಮ್ನಾ ವೇದವತೀ ಚೇಯಂ ಸ್ವಾಹಾಯಾ। ಸನ್ನಿಧೌ ಸ್ಥಿತಾ॥ ತಾಮಂಗೀಕುರು ಗೋವಿಂದ ವಿವಾಹಂ ವಿಧಿಪೂರ್ವಕಂ। ಇತಿ ಸೀತಾವಚಃಶ್ರುತ್ವಾ ರಾಮೋವಚನಮಬ್ರವೀತ್। ರಾಮ ಉವಾಚ। ಏಕಪತ್ನೀವ್ರತಂ ಮೇಽದ್ಯಕೃತಂ ಜಾನಾಸಿ ಭಾಮಿನಿ। ತವ ವಾಕ್ಯಂ ಕರಿಷ್ಯಾಮಿ ಅಷ್ಟಾವಿಂಶತಿಮೇ ಕಲೌ॥ ತಾವದೇಷಾ ಬ್ರಹ್ಮಲೋಕೇ ಬ್ರಹ್ಮಣಾ ಪೂಜಿತಾ ಭವೇತ್। ಶ್ರುತ್ವಾ ದಾಶರಥೇರ್ವಾಕ್ಯಂ ಜಗಾಮ ಭವನಂ ವಿಧೇರಿತಿ।" ॥೪॥

## ೨. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ

'ಚಂಡ' ಇತಿ॥ ತೋಂಡಮಾನ್ ನೃಪತೇಃ ದಿವ್ಯೌ ಚಕ್ರಶಂಖೌದದೌ ಹರಿಃ॥ ದ್ವಿಜಾಪ್ಯಪೇಕ್ಷಕಾಯ ತಸ್ಮೈಧಾ ವಿಧಾಯ ಮಾದರಃ॥ 'ಭಾಂಥ' ಇತಿ॥ ಬಿಲಮಾರ್ಗೇಣ ಚಾಗತ್ಯ ತುಲಸೀ ಮಂಜುಲೈಃ ಶುಭೈಃ॥ ಸಹಸ್ರೈಃ ಸ್ವರ್ಣರಚಿತೈಃ ಸಂಪೂಜ್ಯ ಜಗದೀಶ್ವರಮ್॥ ಗಚ್ಛತಿ ಸ್ಮ ನೃಪಶ್ರೇಷ್ಠೋ ತತಃ ಕಾಲಾಂತರೇ ಹರೇಃ॥ ರಾಜಾರ್ಚಿತಾಂ ಚ ತಾಂ ಪೂಜಾಂ ತುಲಸೀ ದಲ ಮಂಡಲೈಃ॥ ತಾಂ ತಿರಸ್ಕೃತ್ಯ ಗೋವಿಂದಃ ಮೃಣ್ಮಾತ್ರ ತುಲಸೀ ದಲಾನ್॥ ಗೃಹೀತವಾನ್ ಕುಲಾಲೇನ ಭಕ್ತ್ಯಾಸ್ವಸ್ಯ ಸಮರ್ಪಿತಾನ್॥ ಆಗತ್ಯ ತಾನ್ ದದರ್ಶಾಸೌ ಇದಂ ಕೇನ ವಿನಿರ್ಮಿತಮ್॥ ಸ್ವಾಮಿನ್ ನಾಥ ಜಗದ್ವ್ಯಾಪಿನ್ ಕೇನ ಸಂಪೂಜ್ಯತೇ ಸದಾ॥ ಉವಾಚ ವಚನಂ ದೇವಃ ಭಕ್ತಾಃ ಸಂತಿ ಹಿ ಕೋಟಿಶಃ॥ ಅಭಾಗ್ಯಾಶ್ಚ ಸಭಾಗ್ಯಾಶ್ಚ ಮಿಶ್ರಿತಾಃ ನೃಪಸತ್ತಮ॥ ತೇಷಾಂ ಮಧ್ಯೇ ಕುಲಾಲೋಽಸ್ತಿ ನಾಮ್ನಾ ಭೀಮ ಇತಿ ಸ್ಮೃತಃ॥ ಕುರ್ವನ್ ಗ್ರಾಮೇ ವಂದ್ರೋಽಸೌ ಸಮೋ ಮೃತ್ತಿಕಪಂಜರೀ॥ ದಾರುಮೂರ್ತೇಸ್ತು ಮತ್ತಾಗ

ಪಾಂಕಜೇತ್ಯುಪಾಯಿಷ್ಯತಿ॥ ಸಾಯುಜ್ಯಂ ಚ ದದೌ ತಸ್ಯ ಸಭಾರ್ಯಸ್ಯ ಜಗತ್ಪತಿಃ॥ ಇತ್ಯೇತತ್ ಕಥಾದ್ವಯಂ ದ್ವಾದಶತ್ರಯೋದಶಾಧ್ಯಾಯಯೋ ಭವಿಷ್ಯೋತ್ತರೇ ಸ್ಪಷ್ಟಮ್॥ 'ಮಂಡೇ' ಇತಿ॥ 'ಒಡಕ' ಇತಿ ಕೇ॥ ಪ್ರಕರಣೋಪಚಿತ್ ರೋಧಾತ್ ಇದಂ ಪದ್ಮಾಪತೇಃ ವಿಶೇಷಣಮ್॥ ಇದಂ ಸ್ಪಷ್ಟಮ್॥ 'ಅಬ್ಜ' ಶಂಖಃ॥ ಸ್ವರತಃ ಅಪಿ ರಾಮಾಯಾ ಅಶ್ಮವರ್ಷ ಸಂತಾಡಿತ ಪೂರ್ವಕ್ಷತಮಸ್ತಕ ಪದಾಭಾಸಕೋಽಪಿ ಭಾಸಮಾನಕಾಮುಕವತ್ ಶ್ರೀ ಸುಂದರೀ ಪ್ರವಿಹಾರ ಭಾವಂ ಧೂಸಮುತ್ಥಾಂ ಭಾಸಮಾಹ್ವಯನಃ ಮಾಣೀಃ ಊರೀ ಚಕಾರ॥ ಸುಗುಣಃ ದಯಾಬ್ಧಿ ಇತಿ ಭಾವಃ ॥೪॥

## ಕನ್ನಡಾರ್ಥ

ತೋಂಡಮಾನರಾಜನ ಭಕ್ತಿಗೆ ಮೆಚ್ಚಿ, ಶಂಖಚಕ್ರಗಳನ್ನು ಅವನಿಗೆ ಕೊಟ್ಟನು. ಬಿಲಮಾರ್ಗದಿಂದ(ಸುರಂಗ ಮಾರ್ಗದಿಂದ)ಒಂದು ಭಂಗಾರದ ಸಹಸ್ರ ತುಲಸೀಮಂಜರಿಗಳಿಂದ ನಾರಾಯಣನನ್ನು (ಶ್ರೀನಿವಾಸನನ್ನು) ಸಂಪೂಜಿಸಿ, ರಾಜನೊಬ್ಬನು ದಿನಾಲು ಮನೆಗೆ ಹೋಗುತ್ತಿದ್ದನು. ಕೆಲಕಾಲ ಕಳೆದ ನಂತರ, ಆ ಭಂಗಾರದ ತುಲಸೀದಳ ಮಂಜರಿಗಳಿಂದ ಆಗುವ ಪೂಜೆಯನ್ನು ಶ್ರೀ ಹರಿಯು ಸ್ವೀಕರಿಸದೆ, ಕುಂಬಾರನಿಂದ ಭಕ್ತಿಯಿಂದ ಸಮರ್ಪಿಸಲ್ಪಟ್ಟ ಮಣ್ಣಿನ ತುಲಸೀದಳಗಳನ್ನು ಸ್ವೀಕರಿಸಿ ಧರಿಸಿದ್ದನು. ರಾಜನು ಇದನ್ನು ನೋಡಿ, ಇದನ್ನು ಮಾಡಿದವರ್‍ಯಾರು? ಜಗದ್ವ್ಯಾಪಿನ್ ಸ್ವಾಮಿ ! ಶ್ರೀನಾಥ ! ಯಾರ ಪೂಜೆಯನ್ನು ಸದಾ ನೀನು-ಸ್ವೀಕರಿಸುತ್ತೀ?-ಎಂದು ಕೇಳಿಕೊಂಡನು.

ಆದಕ್ಕೆ ಶ್ರೀನಿವಾಸನು ಹೇಳುತ್ತಾನೆ. 'ನನಗೆ ಕೋಟಿ ಕೋಟಿ ಭಕ್ತರಿರುತ್ತಾರೆ. ಭಾಗ್ಯವಂತರೂ,ನಿರ್ಭಾಗ್ಯರೂ-ಎಲ್ಲರೂ ನನ್ನ ಭಕ್ತರೇ ಇರುತ್ತಾರೆ. ಅವರಲ್ಲಿ ಗ್ರಾಮದಲ್ಲಿದ್ದು,ದರಿದ್ರನಾದ **ಭೀಮನೆಂಬ** ಕುಂಬಾರನೂ ಇರುವನು. ಅವನು ನನ್ನ ಕಾಷ್ಠಮೂರುತಿಯ ಪಾದಪದ್ಮಗಳಲ್ಲಿ ಮಣ್ಣಿನ ತುಲಸೀದಳಗಳನ್ನು ಭಕ್ತಿಯಿಂದ ಅರ್ಪಿಸುತ್ತಾನೆ. ಅವನ ಪೂಜೆಯನ್ನು ನಾನು ಸ್ವೀಕ

ರಿಸಿರುತ್ತೇನೆ'- ಎಂದು ಹೀಗೆ ನಾರಾಯಣನು ಹೇಳಿ, ಆ ಭಕ್ತ ಕುಂಬಾರನಿಗೆ, ಅವನ ಹೆಂಡತಿಗೆ ಸಾಯುಜ್ಯವನ್ನು ಕೊಟ್ಟನು.

ಇವೆರಡು ಕಥೆಗಳು ಭವಿಷ್ಯೋತ್ತರ ಪುರಾಣದ ೧೨-೧೩ ಅಧ್ಯಾಯಗಳಲ್ಲಿ ನಿರೂಪಿತವಾಗಿವೆ.

'ಮಂಡೆಯೊಡೆದ' ಎಂದೂ ಕೆಲವು ಪಾಠವುಂಟು.

'ಸ್ವರಮಣನಾದರೂ, ಶ್ರೀರಮಣನು ಪೂರ್ವದಲ್ಲಿ ಗೋಪಸೇವಕನಿಂದ ತಲೆಯೊಡೆಸಿಕೊಂಡು, ಅನಂತರ ರಮಣಿಯು ಶಿಲಾವರ್ಷದಿಂದ ತಾಡಿತನಾದವನಂತೆ ನಟಿಸಿ, ಕಾಮುಕನಂತೆ ತೋರುತ್ತಾ, ಭೂಮಿಯಿಂದ ಉದ್ಭವಿಸಿರುವ ರಮಾಸಮಾಕೃತಿಯಾದ ಪದ್ಮಾವತಿಯನ್ನು ಧರಣೀದೇವಿಯ ವಚನಗಳಿಂದ ಅಂಗೀಕರಿಸಿದನು'- ಈ ಮಹಿಮೆಯು ಅಲ್ಲಿಯೇ ಸ್ಪಷ್ಟವಿರುತ್ತದೆ.

ಪರಮಾತ್ಮನು ಇಷ್ಟು ಸುಗುಣನೂ, ದಯಾಸಾಗರನೂ, ಇರುವನೆಂಬುದು ಇದರಿಂದ ಸ್ಫುಟವಾಗುತ್ತದೆ. ॥೪॥

## ಭಾವಪ್ರಕಾಶಿಕೆ

ತೊಂಡಮಾನರಾಜನ ಭಕ್ತಿಗೆ ಮೆಚ್ಚಿ, ತನ್ನ ಶಂಖ ಚಕ್ರವನ್ನು ಅವನಿಗೆ ಕೊಟ್ಟನು. ಗದಾ ಪದ್ಮಗಳನ್ನು ಮಾತ್ರ ತಾನು ಧರಿಸಿರುವನು. ಭೀಮನೆಂಬ ಕುಂಬಾರನ ಭಕ್ತಿಗೆ ಮೆಚ್ಚಿ, ಅವನು ಸಮರ್ಪಿಸಿದ ಮಣ್ಣಿನ ತುಳಸೀದಳಗಳನ್ನು ಸ್ವೀಕರಿಸಿದನು. ಚೋಳರಾಜನ ದನಗಳನ್ನು ಕಾಯುತ್ತಿರುವ ಗೋಪಾಲನು ಗೋರೂಪಿಯಾದ ಬ್ರಹ್ಮದೇವರು ಶ್ರೀನಿವಾಸನಿಗೆ ಕ್ಷೀರಾಭಿಷೇಕ ಮಾಡುತ್ತಿರುವುದನ್ನು ಸಹಿಸದೆ, ಕೊಡಲಿಯಿಂದ ಗೋವನ್ನು ಹೊಡೆಯಲು, ಗೋರಕ್ಷಣೆಗೋಸ್ಕರ ತನ್ನ ತಲೆಯನ್ನು ಒಡೆದುಕೊಂಡನು. ರಾಮಾವತಾರದಲ್ಲಿ ಸೀತೆಗೆ ಪ್ರತಿನಿಧಿಯಾಗಿ **ವೇದವತಿ** ಎಂಬಾಕೆಯು ಸೀತೆಯ ರೂಪದಿಂದ ಒಂದು ವರ್ಷ ರಾವಣನ ಮನೆಯಲ್ಲಿ, ಕಷ್ಟಪಟ್ಟುದುದರಿಂದ, ಈ ವೇದವತಿಯನ್ನು ಮದುವೆ ಮಾಡಿಕೊಳ್ಳಬೇಕೆಂದು ಸೀತೆಯು ಬೇಡಲು, ಈ ಅವತಾರ

ದಲ್ಲಿ ತಾನು ಏಕಪತ್ನಿಯ ವ್ರತವನ್ನು ಧರಿಸಿರುವೆನು. ಕೃಷ್ಣಾವತಾರದಲ್ಲಿ ಈಕೆಯನ್ನು ಮದುವೆಮಾಡಿಕೊಳ್ಳುವೆನೆಂದು ಪ್ರತಿಜ್ಞೆಯನ್ನು ಮಾಡಿದ್ದನು. ಹೆಂಡತಿಯಾದ ಸೀತಾದೇವಿಗೆ ಕೊಟ್ಟ ವಾಕ್ಯವನ್ನು ಸತ್ಯಮಾಡುವುದಕ್ಕಾಗಿ ಆಕಾಶರಾಜನ ಮಗಳನ್ನು ಮದುವೆಯಾದನು. ಆಕಾಶರಾಜನ ಮಗಳಾದ ಪದ್ಮಾವತಿಯೇ **ವೇದವತಿ** ಎಂಬ ತಾತ್ಪರ್ಯ. ಈ ಕಥೆ ಎಲ್ಲವೂ ಭವಿಷ್ಯೋತ್ತರಪುರಾಣ ವೆಂಕಟೇಶಮಾಹಾತ್ಮ್ಯದಲ್ಲಿ ವಿಸ್ತಾರವಾಗಿ ಹೇಳಿರುವರು. ಅಲ್ಲಿನ ಕಥೆಯನ್ನು ದಾಸಾರ್ಯರು ಸಂಕೋಚದಿಂದ ಇಲ್ಲಿ ಸೂಚಿಸಿರುವರು. ॥೪॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ

ದುಷ್ಟವಿಷಯದಲ್ಲಿ ಅತಿತೀಕ್ಷ್ಣಪರಾಕ್ರಮ ಉಳ್ಳವನಾದಾಗ್ಯೂ, ಆಕಾಶರಾಜನ ಮಗ ವಸುಧಾನನಿಗೂ, ಅವನ ಚಿಕ್ಕಪ್ಪ ತೋಂಡಮಾನ ದೊರೆಗೂ ಯುದ್ಧ ನಡೆದ ಕಾಲದಲ್ಲಿ, ತನ್ನ ಚಕ್ರ ಶಂಖಗಳನ್ನು ತೋಂಡಮಾನನಿಗೆ ಕೊಟ್ಟು, ವಸುಧಾನನಿಗೆ ತಾನೇ ಸಹಾಯವಾಗಿ, ಚಕ್ರದಿಂದ ತಾನು ಮೂರ್ಛೆಹೋದಂತೆ ವಿಡಂಬನೆ ಮಾಡಿ, ಭಕ್ತರೀರ್ವರನ್ನೂ ಸಮಾಧಾನ ಮಾಡಿ ರಕ್ಷಿಸಿದನು. ಭಾಂಡವೆಂಬ ಗಡಿಗೆಗಳನ್ನು ದೇವರ ಗುಡಿಗೆ ಮಾಡಿಕೊಡುವ ಭೀಮನೆಂಬ ಕುಂಬಾರ, ಮಣ್ಣಿನ ತುಲಸೀ ಆಭರಣಗಳನ್ನು ಮಾಡಿ, ಅರ್ಚಿಸಿದ್ದಕ್ಕೆ ಒಲಿದು, ಸಾರೂಪ್ಯವನ್ನು ಕೊಟ್ಟನು. ಮುಂಡೆ ಎಂಬ ತನ್ನ ಶಿರಸ್ಸನ್ನು ಒಡೆದು, ಅಂದರೆ, ಗೋಪಾಲಕನ ಕೊಡಲಿಯಿಂದ ಒಡಕೊಂಡ ಹಾಗೆ ವಿಡಂಬನವನ್ನು ತೋರಿಸಿ, ತನ್ನ ಮಹಿಮೆಯನ್ನು ಪ್ರಕಾಶಮಾಡಿ, ರಕ್ತಾದಿ ಸೃಷ್ಟಿ ಮಾಡಿ, ಔಷಧಾದಿಗಳನ್ನು ಮಾಡಿಕೊಂಡಂತೆಯೂ ತೋರಿಸಿ, ಆಕಾಶರಾಜನ ಹೆಂಡತಿಯಲ್ಲಿ ಕೊರವಂಜಿರೂಪದಿಂದ ಹೋಗಿ, ಆಕೆಯಿಂದ ಮಗಳನ್ನು ವೆಂಕಟೇಶನಿಗೆ ಕೊಡುತೇನೆಂಬ ನುಡಿಯನ್ನು ಪ್ರತಿಜ್ಞೆಮಾಡಿಸಿ ಕೇಳಿ, ಆಕೆಯ ಮಗಳಾದ ಪದ್ಮಾವತಿಗೆ ಹೊಸದಾಗಿ ಗಂಡನಾದಂತೆ ತೋರಿಸಿ, ನಿತ್ಯ ರಮಾಸಮೇತನಾಗಿ ಇದ್ದಾನೆ. ಆದ್ದರಿಂದ, ಗದಾ-ಪದ್ಮಧಾರಿ ಶ್ರೀಹರಿ ಸರ್ವರಿಗೂ ಗಹನಮಹಿಮಾ- ಅಂದರೆ, ಅರಿಯಲು ಅಶಕ್ಯನಾದ ಮಹಾಮಹಿಮೆ ಉಳ್ಳವನು- ಎಂದರ್ಥ. ॥೫॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಚಂಡ-ಎಂದರೆ ಅಸಾಧಾರಣವಾದ ಎಂದರ್ಥ. ವಿಕ್ರಮ-ಶಬ್ದಕ್ಕೆ ಪರಾಕ್ರಮಶಾಲಿ ಅಥವಾ ಬಲಿಷ್ಠವಂತನೆಂದರ್ಥ. ಶ್ರೀಹರಿಯು ಅಸದೃಶ ಪರಾಕ್ರಮಿಯಾದ್ದರಿಂದ, **ಚಂಡವಿಕ್ರಮನೆಂದು** ತಿಳಿಸುತ್ತಾರೆ- ದಾಸವರ್ಯರು.

೨. **ತೋಂಡಮಾನನು** ಆಕಾಶರಾಜನ ತಮ್ಮನು. ಒಮ್ಮೆ, ಆಕಾಶರಾಜನ ಪುತ್ರನಾದ ವಸುಧಾನನಿಗೂ ಅವನ ಚಿಕ್ಕಪ್ಪನಾದ ತೋಂಡಮಾನರಾಜನಿಗೂ ಯುದ್ಧ ಸಂಭವಿಸಿತು. ಆಗ ಶ್ರೀನಿವಾಸನು ತನ್ನ ಶಂಖ ಮತ್ತು ಚಕ್ರಾಯುಧಗಳನ್ನು ತೋಂಡಮಾನನಿಗೆ ಕೊಟ್ಟನು. ವಸುಧಾನನಿಗೆ ತಾನೇ ಸಹಾಯಕನಾದನು. ಅಂತ್ಯದಲ್ಲಿ ಭಕ್ತರಾದ ಈರ್ವರನ್ನೂ ಸಂತೈಸಿ, ರಕ್ಷಿಸಿದನು. ಈ ಪ್ರಸಂಗವಿಶೇಷವನ್ನು ದಾಸರಾಯರು **ಚಂಡ-ವಿಕ್ರಮ ಚಕ್ರ ಶಂಖವ ತೋಂಡಮಾನ ನೃಪಾಲಗಿತ್ತನು** ಎಂದು ಹೇಳಿದ್ದಾರೆ.

೩. **ಭೀಮನೆಂಬುವನು** ಸಾಮಾನ್ಯ ಕುಂಬಾರ. ಗಡಿಗೆ ಮಡಿಕೆಗಳನ್ನು ಮಾಡಿ, ಅವುಗಳನ್ನು ಮಾರಿ ಜೀವಿಸುತ್ತಿದ್ದ. ಶ್ರೀ ಹರಿಭಕ್ತನು. ಪ್ರತಿನಿತ್ಯವೂ ಮೃದುವಾದ ಮಣ್ಣಿನಿಂದ ತುಳಸೀ ಮಂಜರಿಗಳನ್ನು ನಾಜೂಕಾಗಿ ನಿರ್ಮಿಸಿ, ಆ ಮೃದಾಭರಣಗಳನ್ನು ಶ್ರೀ ವೆಂಕಟೇಶನಿಗೆ ಅರ್ಪಿಸುತ್ತಿದ್ದ. ಅವನ ಅನನ್ಯ ಭಕ್ತಿಗೆ ಮೆಚ್ಚಿ, ಶ್ರೀನಿವಾಸನು ಅವನಿಗೆ ಸದ್ಗತಿ ನೀಡಿದನು.

**ಪ್ರಮಾಣ:-**

೧) "ತೋಂಡಮಾನ ಪತೀರ್ದಿವ್ಯ ಶಂಖ ಚಕ್ರ ದದೌ ಹರಿಃ" - **ಇತಿ ಭವಿಷ್ಯೋತ್ತರ ಪುರಾಣೇ**

೨ 'ತೇಷಾಂ ಮಧ್ಯೇ ಕುಲಾಲೋಸ್ತಿ ನಾಮ್ನಾ ಭೀಮ ಇತಿ ಸ್ಮೃತಃ ।
ವಿಚಾರ್ಯಮಾಣೇ ತಚ್ಛಿದ್ರೇ ಗರುಡಸ್ಕಂಧವಾಹನಃ ।
ತದ್ಗೃಹಂತು ಸಮಾಸಾದ್ಯ ಗಚ್ಛ ಭದ್ರ ಪರಂ ಪದಂ ।
ಸಾಯುಜ್ಯಂ ತು ದದೌ ತಸ್ಯೇತಿ' ॥
**-ತದುಕ್ತಂ ಭವಿಷ್ಯೋತ್ತರ ಪುರಾಣೇ ।**

೪. ಹುತ್ತದಲ್ಲಿ ಅಡಗಿ ಕುಳಿತಿದ್ದ ಶ್ರೀನಿವಾಸನು ಆಕಳ ರೂಪದಲ್ಲಿ ಬಂದು, ತನಗೆ ನಿತ್ಯವೂ ಹಾಲೆರೆಯುತ್ತಿದ್ದ ಬ್ರಹ್ಮದೇವರನ್ನು ಕುಠಾರಪ್ರಹಾರದಿಂದ ರಕ್ಷಿಸುವುದಕ್ಕಾಗಿ, ಆಕಳನ್ನು ಬಿದಿಗೆಸರಿಸಿ, ನಿಶಿತವಾದ ಕುಠಾರ ಪ್ರಹಾರಕ್ಕೆ ತನ್ನ ಶಿರಸ್ಸನ್ನು ಒಡ್ಡಿದ ಪರಮಕರುಣಾಸಾಂದ್ರನಾದ ಆ ಪರಮಪುರುಷ, ಕೊಡಲಿಯು ಅವನ ಮಂಡೆಗೆ ತಾಕಿ ಏಳು ತಾಳೆಮರದ ಎತ್ತರಕ್ಕೆ ರಕ್ತ ಚಿಮ್ಮಿತು. ಅಪ್ರಾಕೃತ ಪುರುಷನಾದ ಅಪ್ರಮೇಯನ ದೇಹದಲ್ಲಿ ರಕ್ತ ಎಲ್ಲಿಂದ ಬಂದಿತು? ತತ್ಕಾಲದಲ್ಲಿ ಪ್ರಾಕೃತರೂಪವಾದ ರಕ್ತವನ್ನು ಸಂಕಲ್ಪಮಾತ್ರದಿಂದ ಸೃಷ್ಟಿಸಿ, ತೋರಿಸಿದ ಅದ್ಭುತ ವಿಡಂಬನಮೂರ್ತಿ ಶ್ರೀನಿವಾಸ! ಈ ಪ್ರಸಂಗವಿಶೇಷವನ್ನು **ಮಂಡೆ ಒಡೆದ**–ಎಂದಿದ್ದಾರೆ. ಮಂಡೆ- ಎಂದರೆ, ತಲೆ (ಶಿರಸ್ಸು). ಭೇದಭೇದ ವಿದೂರನಾದ ಪೂರ್ಣಾನಂದ ಜ್ಞಾನಾತ್ಮಕ ಶರೀರವುಳ್ಳವನಿಗೆ ಗಾಯವೆಂದರೇನು? ರಕ್ತ ದರ್ಶನವೆಂದರೇನು? ಎಲ್ಲಾ ಅವನ ಲೀಲಾ ವೈಭವರೂಪವಾದ ವಿಡಂಬನಾ ವ್ಯಾಪಾರ !

**೫ ಆಕಾಶರಾಜ**

ಕಲಿಯುಗದಲ್ಲಿ **ಮಾಧವನೆಂಬ** ಹೆಸರಿನ ಬ್ರಾಹ್ಮಣನು **ಕುಂತಳೆ**-ಎಂಬ ಚಂಡಾಲ ಸ್ತ್ರೀಯಲ್ಲಿ ಮೋಹಿತನಾಗಿ, ದುರಾಚಾರಿಯಾಗಿ, ಪಾಪಕರ್ಮನಿರತನಾಗಿದ್ದನು. ಕುಂತಳೆಯ ಮರಣಾನಂತರ, ಅವನಿಗೆ ವೈರಾಗ್ಯ ಹುಟ್ಟಿ, ತನ್ನ ಪಾಪಕಾರ್ಯಗಳಿಗೆ ಪಶ್ಚಾತಾಪ ಪಡುತ್ತಾ, ಕಪಿಲತೀರ್ಥದಲ್ಲಿ ಸ್ನಾನಮಾಡಿ, ಮೃತ್ಪಿಂಡಗಳಿಂದ ತನ್ನ ಪಿತೃಗಳಿಗೆ ಅರ್ಪಿಸಿ, ತಿರುಪತಿಯ ಪಾವಟಿಗೆಗಳನ್ನು ಏರಿದನು. ಆ ಗಿರಿಯ ಸ್ಪರ್ಶಮಾತ್ರದಿಂದಲೇ ಅವನ ಸಮಸ್ತಪಾಪಗಳೆಲ್ಲವೂ ಪರಿಹಾರವಾಗಿ, ಶ್ರೀಶನ ಕೃಪೆಯಿಂದ ಆ ಮಾಧವ ಬ್ರಾಹ್ಮಣನು **ಆಕಾಶರಾಜನೆಂಬ** ಹೆಸರಿನಿಂದ ಅವತರಿಸಿದನು. ಆಕಾಶರಾಜನು ಸುಧರ್ಮರಾಜನ ಮಗನು. ರಾಜನು ಪುತ್ರಕಾಮೇಷ್ಟಿ ಯಾಗಾರ್ಥವಾಗಿ ಭೂಶೋಧನೆ ಮಾಡಿಸುತ್ತಿರಲು, ಭೂಗರ್ಭದಲ್ಲಿ ಸುವರ್ಣ ಕಮಲದಲ್ಲಿ ದೊರೆತ ಸುಂದರ ಕನ್ಯೆಯೇ ಪದ್ಮಾವತೀ ದೇವಿ. ತ್ರೇತ್ರಾಯುಗದಲ್ಲಿ ಸೀತಾಪ್ರತೀಕ ರೂಪದಲ್ಲಿದ್ದ **ವೇದವತಿಯು** ಪದ್ಮಾವತಿಯಾಗಿ ಅವತರಿಸಿದಳು. ಶ್ರೀನಿವಾಸನು **ಬೇಟೆ**

ಯಾಡುವ ನೆಪದಲ್ಲಿ, ಉದ್ಯಾನವನದಲ್ಲಿ ತನ್ನ ಸಂಗಾತಿಗಳೊಡನೆ ಇದ್ದ ಪದ್ಮಾವತಿಯನ್ನು ನೋಡಿ. ಅವಳ ಅನುಪಮರೂಪ ಸೌಂದರ್ಯಗಳಿಗೆ ವಶನಾದಂತೆ ನಟಿಸಿದ, ಬಕುಳಾದೇವಿಯನ್ನು ಆಕಾಶರಾಜನ ಅರಮನೆಗೆ ಕಳುಹಿಸಿ, ತಾನೇ ಕೊರವಂಜೀ ವೇಷತಾಳಿ, ಆಕಾಶರಾಜನ ಪತ್ನಿ ಧರಿಣೀದೇವಿಯನ್ನು ಕಂಡು, ಭವಿಷ್ಯವಾಣಿ ನುಡಿದ. ಅದರಂತೆ, ಆಕಾಶರಾಜನ ಪುತ್ರಿ ಪದ್ಮಾವತಿಯನ್ನು ತಾನು ಅತ್ಯಂತ ಸಂಭ್ರಮ ಸಡಗರಗಳಿಂದ ಸಕಲದೇವತಾ ಪರಿವಾರಸಹಿತನಾಗಿ ಲಗ್ನನಾದನು. ಇದನ್ನೇ ದಾಸರಾಯರು – **ಆಕಾಶ ರಾಜನ ಹೆಂಡತಿಯ ನುಡಿಕೇಳಿ ಮಗಳಿಗೆ ಗಂಡನೆನಿಸಿದ**-ಎಂದಿದ್ದಾರೆ.

೬. ಆಕಾಶರಾಜನ ಜಾಮಾತನೂ, ಪದ್ಮಾರಮಣನೂ ಆದ ಶ್ರೀನಿವಾಸನು ಅಗಮ್ಯಮಹಿಮಾಸಂಪನ್ನನು. ಅವನ ಮಹಾತ್ಮ್ಯ ಅಸದೃಶ ಮತ್ತು ಅಪರಿಚ್ಛಿನ್ನ. ಇದರಿಂದ **ಗಹನಮಹಿಮನು.**

೭. ಗಹನಮಹಿಮನಾದ ಆ ಗರುಡಗಮನನು ತನ್ನ ಹಸ್ತದಲ್ಲಿ ಕೌಮೋದಕೀ ಎಂಬ ಗದೆಯನ್ನೂ, ಪದ್ಮವನ್ನೂ (ಅಬ್ಜ) ಮತ್ತು ಸುದರ್ಶನವೆಂಬ ಚಕ್ರವನ್ನು ಧರಿಸಿದ್ದಾನೆ. ಅರವುಳ್ಳದ್ದು ಚಕ್ರ, "**ಪಾಂಚಜನ್ಯ**" ಎಂಬ ಧಾರಿಯೂ ಹೌದು. ||೪||

## ಪದ್ಯ-೫

**ಮೂಲ:-**

**ಗೌತಮನ ನಿಜ ಪತ್ನಿಯನು ಪುರು |**
**ಹೂತನೈದಿರೆ ಕಾಯ್ದು ವೃತ್ರಾನ |**
**ಘಾತಿಸಿದ ಪಾಪವನು ನಾಲ್ಕು ವಿಭಾಗ ಮಾಡಿದನು ||**
**ಶಾತಕುಂಭಾತ್ಮಕ ಕಿರೀಟವ |**
**ಕೈತವದಿ ಕದ್ದೊಯಿದ ಇಂದ್ರಾ |**
**ರಾತಿ ಬಾಗಿಲ ಕಾಯ್ದ ಭಕ್ತನ ಸ್ವೀಕರಿಸಿ ||೫||**

**ಅವತರಣಿಕೆ**

ಶ್ರೀಹರಿಯ ಕಾರುಣ್ಯಮಹಿಮಾ ಪ್ರಸಂಗವಿಶೇಷಗಳನ್ನು ಇನ್ನೂ ತಿಳಿಸುತ್ತಾರೆ. ॥೫॥

**ಪ್ರತಿಪದಾರ್ಥ**

**ಗೌತಮನ**=ಗೌತಮ ಋಷಿಗಳ. **ನಿಜಪತ್ನಿಯನು**=ಸ್ವಕೀಯ ಹೆಂಡತಿಯಾದ ಅಹಲ್ಯೆಯನ್ನು, **ಪುರುಹೂತನು**=ಶತಕ್ರತುವಾದ ಇಂದ್ರನು, **ಐದಿರೆ**=ಹೊಂದಿರಲಾಗಿ (ಸಂಸರ್ಗ ಮಾಡಲಾಗಿ), **ಕಾಯ್ದು**=ಶಿಲೆಯಾಗಿದ್ದ ಅಹಲ್ಯೆಯನ್ನು ಶ್ರೀರಾಮನು ತನ್ನ ಪಾದಸ್ಪರ್ಶ ಮಾತ್ರದಿಂದ ಉದ್ಧರಿಸಿ. **ವೃತ್ರನ**=ವೃತ್ರಾಸುರನನ್ನು, **ಘಾತಿಸಿದ**—ವಜ್ರಾಯುಧದಿಂದ ಸಂಹರಿಸಿದ ಇಂದ್ರನ, **ಪಾತಕವನು**=ಬ್ರಹ್ಮಹತ್ಯಾ ರೂಪವಾದ ಪಾಪವನ್ನು, **ನಾಲ್ಕು ವಿಭಾಗ ಮಾಡಿದನು**=ಕರುಣಾಳುವಾದ ಶ್ರೀಹರಿಯು ನಾಲ್ಕು ಭಾಗಗಳಾಗಿ ವಿಭಾಗಿಸಿ, ಒಂದು ಭಾಗವನ್ನು ಸ್ತ್ರೀಯರಲ್ಲಿ ಋತುರೂಪದಿಂದಲೂ, ಎರಡನೆಯ ಅಂಶವನ್ನು ನೀರಿನಲ್ಲಿ ಫೇನರೂಪದಿಂದಲೂ (ನೊರೆ-ಬುರುಗು), ಮೂರನೆಯ ಭಾಗವನ್ನು ವೃಕ್ಷಗಳಲ್ಲಿ ಗೋಂದಿನ ರೂಪದಲ್ಲಿಯೂ, ನಾಲ್ಕನೆಯ ಭಾಗವನ್ನು ಬಂಜರುಭೂಮಿಯಲ್ಲಿ ಸವಳು ರೂಪದಿಂದಲೂ (ಉಪ್ಪಾಪ ಮರಳು) ಇಟ್ಟನು. **ಶಾತಕುಂಭಾತ್ಮಕ**=ಚಿನ್ನದಿಂದ ಮಾಡಲ್ಪಟ್ಟ, **ಕಿರೀಟವ**=ಶ್ರೀಹರಿಯ ಕಿರೀಟವನ್ನು, **ಕೈತವದಿ**=ಕಳ್ಳತನದಿಂದ, **ಕದ್ದೊಯಿದ**=ತೆಗೆದುಕೊಂಡು ಹೋದ, **ಇಂದ್ರಾರಾತಿ**—ಇಂದ್ರನ ಶತ್ರುವಾದ ಬಲಿಚಕ್ರವರ್ತಿಯನ್ನು, **ಭಕ್ತಿಕ್ತನೆನೆ ಸ್ವೀಕರಿಸಿ**=ಸ್ವರೂಪತಃ ಯೋಗ್ಯಚೇತನನಾದ್ದರಿಂದ, ಭಕ್ತನೆಂದು ಎಣಿಸಿದವನಾಗಿ., **ಬಾಗಿಲ ಕಾಯ್ದ**=ಈಗಲೂ ರಸಾತಳದಲ್ಲಿ ವಾಮನರೂಪದಿಂದಲೇ ಬಲಿಚಕ್ರವರ್ತಿಯ ಅರಮನೆಯ ದ್ವಾರಪಾಲಕನಾಗಿದ್ದಾನೆ-ಆ ಭಕ್ತವತ್ಸಲನಾದ ಕರುಣಾಮಯನು. ॥೬॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ.

ಇನ್ನೂ ಶ್ರೀ ಪರಮಾತ್ಮನ ಮಹಾತ್ಮ್ಯವನ್ನೇ ಹೇಳುತಾರೆ. ಗೌತಮ ಋಷಿಗಳ ಸ್ವಕೀಯಳಾದ ಪಂಡಿತೆಯಾದ ಅಹಲ್ಯಾದೇವಿಯನ್ನು ಇಂದ್ರ ದೇವರು (ಕ್ರೀಡಾ ಮಾಡೋವರಾದರು). ಹೊಂದಿರಲಾಗಿ. ಆಕೆ ಪತಿಶಾಪದಿಂದ ಶೈಲತ್ವವನ್ನು ಐದಿರಲಾಗಿ. ರಾಮಾವತಾರದಲ್ಲಿ ತನ್ನ ಪಾದಸ್ಪರ್ಶದಿಂದ ಆಕೆಯನ್ನು ಪುನಃ ದಿವ್ಯಸ್ತ್ರೀಯನ್ನಾಗಿ ಮಾಡಿ ಗೌತಮರಿಗೆ ಕೋಡೋವನಾದ. ಇಂದ್ರನು ಬ್ರಾಹ್ಮಣನಾದ ವೃತ್ರಾಸುರನ್ನ ಸಂಹಾರ ಮಾಡಿದ. ಆ ಪಾಪವನ್ನು ನಾಲ್ಕು ಭಾಗವನ್ನಾಗಿ ಮಾಡಿದವನಾಗಿ ಒಂದು ಭಾಗ ಸ್ತ್ರೀಯರಲ್ಲಿ ಋತು ರೂಪದಿಂದಲೂ. ಎರಡನೆಯ ಭಾಗ ಉದಕದಲ್ಲಿ ಫೇನರೂಪದಿಂದಲೂ, ಮೂರನೆಯ ಭಾಗ ವೃಕ್ಷಗಳಲ್ಲಿ ಗೋಂದು ರೂಪದಿಂದಲೂ, ನಾಲ್ಕನೆಯ ಭಾಗ ಊಸರ ಕ್ಷೇತ್ರದಲ್ಲಿ (ಬಂಜರು ಭೂಮಿ) ಸವಳು ರೂಪದಿಂದಲೂ–ಈ ಪ್ರಕಾರ ನಾಲ್ಕು ಭಾಗ ಮಾಡಿ, ಅಲ್ಲಲ್ಲಿ ಇಡೋವನಾಗಿದ್ದಾನೆ. ಈ ಪ್ರಕಾರ ಇಟ್ಟು, ಇಂದ್ರದೇವರನ್ನ ಕಾಪಾಡೋವನಾದನು. ಬಂಗಾರದಿಂದಲೂ, ನವರತ್ನಗಳಿಂದಲೂ ರಚಿತವಾದ ಶ್ರೀಪರಮಾತ್ಮನ ಕಿರೀಟವನ್ನು ಕಳ್ಳತನದಿಂದ ತೆಗೆದುಕೊಂಡು ಹೋದಂಥಾ, ಇಂದ್ರದೇವರಿಗೆ ಶತ್ರು ವಾದಂಥಾ ಬಲಿಚಕ್ರವರ್ತಿಯನ್ನು, ಈ ಬಲಿಚಕ್ರವರ್ತಿ ಅಸುರಯೋನಿಜ ನಾದಾಗ್ಯೂ ಸಹ, ಸ್ವರೂಪಸ್ಥಭಾವದಲ್ಲಿ ದೇವರಲ್ಲಿ ಭಕ್ತಿ ಇರುವದ್ದರಿಂದಲೂ ಮತ್ತು ಶುಕ್ರಾಚಾರ್ಯರಿಂದ, ಶ್ರೀವಾಮನ ರೂಪಿ ಪರಮಾತ್ಮ ಸರ್ವೋತ್ತಮ ನೆಂದು ತಾನು ತಿಳದು. ಈ ದೇವರು ಬೇಡಿದ ದಾನವನ್ನು ತಕ್ಷಣವೇ ಭಕ್ತಿಯಿಂದ ಕೊಟ್ಟದ್ದರಿಂದಲೂ, ಈ ಬಲಿ ಚಕ್ರವರ್ತಿಯನ್ನ ಭಕ್ತತ್ವೇನ ಎಣಿಸಿದವನಾಗಿ, ಇವನ ದ್ವಾರಪಾಲಕನಾಗಿ ಇದ್ದಾನೆ. ಆದಕಾರಣ ಶ್ರೀಪರಮಾತ್ಮ ಭಕ್ತರಲ್ಲಿ ಪರಮಾಂತಃಕರಣ ಉಳ್ಳವನೆಂದು ತಾತ್ಪರ್ಯ. ॥೫॥

## ೩. ಭಾವದರ್ಪಣ

ಅಹಲ್ಯಾಗಮನ ಪಾಪದ ದಿಂದ ಇಂದ್ರನ ಸಂರಕ್ಷಣ ಮಾಡಿದನೆಂದು ಹೇಳುತ್ತಾರೆ- ಗೌತಮನು. ವೃತ್ರಾಸುರವಧ ಮಾಡಿದಂಥ ಬ್ರಹ್ಮಹತ್ಯಾದೋಷ ಚತುರ್ಭಾಗ ಮಾಡಿ ಹಂಚಿಹಾಕಿ. ಇಂದ್ರನ ರಕ್ಷಣಮಾಡಿದನೆಂದು ಋಷಿ ಪಂಚಮಿಕಥೆಯಲ್ಲಿ ಹೇಳಿದ್ದರಂತೆ ಇಲ್ಲಿ ಹೇಳುತ್ತಾರೆ. ವೃತ್ರ, ಶಾತಕುಂಭ— ಭಂಗಾರ, ಕೈತವ—ವಂಚನ. ಇಂದ್ರಾರಾತಿ—ಬಲಿಚಕ್ರವರ್ತಿ. ॥೫॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ

"ಗೌತಮ" ಇತಿ॥ "ಇದಿರೆ" ಗಮನಸಲು॥ "ನ ಲೋಪಃ" ಇತಿ ಶ್ರುತಿಃ॥ ಯದ್ವಾ ಪೂರ್ವಂ ಅನ್ವೇತಿ ॥ ಶೈಲ ಕರ್ಮ ವಿನಾಶ್ಯ ॥ ಪಾಪಂ ॥ ಸ್ಪಷ್ಟಂ ॥ "ಶಾತಕುಂಭಃ" ಸ್ವರ್ಣಂ॥ "ಅರಾತಿ" ಶತ್ರುಃ ॥ ಬಲಿಶ್ಯಾಗಾತ್ ತತ್ರ ಸಂದ್ರಷ್ಟುಮ್ ಇತ್ಯತ್ರ ಸ್ಪಷ್ಟ ಕಥಾ. ॥೫॥

## ಕನ್ನಡಾರ್ಥ

"ಇದಿರೆ"-ಗಮನ ಮಾಡಲು ॥"ಅಹಲ್ಯೆಯ ಅಭಿಗಮನದಿಂದ ಇಂದ್ರನಿಗೆ ಪ್ರಾಪ್ತವಾದ ಸ್ವಯೋಗ್ಯಕ್ಲಪ್ತವಾದ ಪುಣ್ಯಕ್ಕೆ ಯಾವ ಬಾಧೆಯೂ ಇಲ್ಲ"- ಎಂದು ಶ್ರುತಿಯು ಹೇಳುತ್ತಿದೆ. ಅಹಲ್ಯೆಯ ಶಿಲಾಜನ್ಮವನ್ನು ಕಳೆದು, ಪಾಪದಿಂದ ಉಳಿಸಿದನು. ಈ ಕಥೆಯೂ ಪ್ರಸಿದ್ಧವಿರುತ್ತದೆ. ಶಾತ ಕುಂಭ—ಬಂಗಾರ. ಅರಾತಿ— ಶತ್ರು. "ಬಲಿರಾಜನು ನಾರಾಯಣನನ್ನು ಸಂದರ್ಶಿಸಲು ಅಲ್ಲಿಗೆ ಬಂದನು"- ಎಂಬ ಪುರಾಣಕಥಾ ಸಂದರ್ಭದಲ್ಲಿ ಈ ಕಥೆಯು ಬಂದಿರುತ್ತದೆ. ॥೫॥

## ೫. ಭಾವಪ್ರಕಾಶಿಕೆ

ದೇವೇಂದ್ರನು ಗೌತಮರ ಪತ್ನಿಯಾದ ಅಹಲ್ಯೆಯನ್ನು ಗೌತಮರ ವೇಷದಿಂದ ವಂಚಿಸಿ, ಆಕೆಯನ್ನು ಪರಿಗ್ರಹಿಸಿದ ದೊಡ್ಡ ಪಾಪದಿಂದ ಇಂದ್ರನನ್ನು ರಕ್ಷಿಸಿದನು, ಮತ್ತು ದೇವೇಂದ್ರನು ವೃತ್ರಾಸುರನನ್ನು ಕೊಂದು

ಬ್ರಹ್ಮಹತ್ಯೆಯನ್ನು ಅನುಭವಿಸುವಾಗ, "ಭೂಮ್ಯಂ ಬುಸ್ರುಮ ಯೋಷಿದ್ಭ್ಯಃ ಚತುರ್ಧಾವ್ಯಭಜದ್ಧರಿಃ"- ಎಂಬ ಭಾಗವತ ವಾಕ್ಯಾನುಸಾರ, ಬ್ರಹ್ಮಹತ್ಯೆಯನ್ನು ನಾಲ್ಕುಭಾಗ ಮಾಡಿ, ಭೂಮಿಯಲ್ಲಿ ಒಂದು ಭಾಗ ವನ್ನೂ, ಉದಕದಲ್ಲಿ ಒಂದು ಭಾಗವನ್ನೂ, ವೃಕ್ಷದಲ್ಲಿ ಒಂದು ಭಾಗವನ್ನೂ, ಸ್ತ್ರೀಯರಲ್ಲಿ ಒಂದು ಭಾಗವನ್ನೂ ಇಟ್ಟು, ಇಂದ್ರನನ್ನು ಪಾಪಮುಕ್ತನನ್ನಾಗಿ ಮಾಡಿದನು. ಈ ನಾಲ್ಕು ಸ್ಥಳಗಳಲ್ಲಿ ಈಗಲೂ ಬ್ರಹ್ಮಹತ್ಯೆಯು ನಾಲ್ಕು ಪ್ರಕಾರವಾಗಿ ತೋರುವುದು. ಅದು ಹೇಗೆಂದರೆ :- "ಕಾರಣಂ ಬ್ರಹ್ಮ ಹತ್ಯಾಯು ರೂಪಂ ಭೂವತಾ ಪ್ರದೃಶ್ಯತೇ"- ಸೌಳು ಮಣ್ಣು ರೂಪವಾಗಿ ಭೂಮಿಯಲ್ಲಿ ಬ್ರಹ್ಮಹತ್ಯೆಯು ತೋರುವುದು. ನೀರಿನಲ್ಲಿ ಒಂದು ಭಾಗ ಬ್ರಹ್ಮಹತ್ಯೆಯು ಇರುವುದು. "ತಾಸು ಬುದ್ಬುದ ಫೇನಾಭ್ಯಾಂ ದೃಷ್ಟಂ ತದ್ಧರಿಕಲ್ಬಿಷಂ"- ನೀರಿನಲ್ಲಿ ನೊರೆಗಳು (ಬುರುಗು) ಏಳುವುದು. ಈ ರೂಪದಿಂದ ಬ್ರಹ್ಮಹತ್ಯೆಯ ಭಾಗವು ಕಾಣುವುದು. ವೃಕ್ಷಗಳಲ್ಲಿ ಒಂದು ಭಾಗ ಬ್ರಹ್ಮಹತ್ಯಾ ಇರುವುದು, "ತೇಷಾಂ ನಿರ್ಯಾಸರೂಪೇಣ ಬ್ರಹ್ಮ ಹತ್ಯಾ ಪ್ರದೃಶ್ಯತೇ" ಅವುಗಳಲ್ಲಿ ಗೋಂದು (ಅಂಕೆ) ರೂಪವಾಗಿ ಬ್ರಹ್ಮ ಹತ್ಯೆಯು ಕಾಣುವುದು. ಸ್ತ್ರೀಯರಲ್ಲಿ ಒಂದು ಭಾಗ ಬ್ರಹ್ಮಹತ್ಯೆಯು ಕಾಣುವುದು. "ರಜೋರೂಪೇಣ ತಾಸ್ವಂಹೋ ಮಾಸಿಮಾಸಿ ಪ್ರದೃಶ್ಯತೇ". ತಿಂಗಳಿಗೊಮ್ಮೆ, ರಜಸ್ವಲೆಯು ರೂಪವಾಗಿ ಬ್ರಹ್ಮಹತ್ಯೆಯು ತೋರುವುದು- ಎಂದು ಭಾಗವತ ಷಷ್ಠಸ್ಕಂಧದಲ್ಲಿ ವಿಶದ ಮಾಡಿರುವರು. ಇಂದ್ರ ಶತ್ರುವಾದ ಬಲಿಚಕ್ರವರ್ತಿಯು ಪರಮಾತ್ಮನ ಕಿರೀಟವನ್ನು ಕಳ್ಳತನದಿಂದ ಅಪಹರಿಸಿದನು. ಇದು ಎಲ್ಲಿಯ ಕಥೆ- ಎಂದರೆ; ಭಾಗವತ ದಶಮಸ್ಕಂಧದಲ್ಲಿ ವಿಸ್ತಾರವಾಗಿ ಹೇಳಿರುವರು. ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಸಂಕ್ಷೇಪವಾಗಿ ಹೇಳಿರುವರು. ಅದಂತೆನೇ- ಮಹಾಭಾರತ ತಾತ್ಪರ್ಯ ನಿರ್ಣಯ ೧೭ನೇಯ ಅಧ್ಯಾಯದಲ್ಲಿ, "ತದಾದುಗ್ಧಾಬ್ಧ ಸಂಸ್ಥಿತಿ ಸ್ಥೌ ಸುರಾದ್ಯೈಃ ಪೂಜಾ ಅಪ್ಯಂ ಸ್ಥಾನ ಮೇಪಾಂಚ ಯೋಗ್ಯಂ" ಮುಕ್ತ ಸ್ಥಾನಾವಾಪ ನಾರಾಯಣೋಜೋ ಬಲಿಸ್ಥಾಗಾತ್ರತ್ರ ಸಂದೃಷ್ಟುಮೀಶಂ॥ ತಶ್ರಾಸುರಾವೇಶ ಮಪಯಷ್ಯ ವಿಷ್ಣುಃ ಸಂದರ್ಶಯನ್ ಸುಪ್ರಿಹೇಸೋಪಿ

ಸಿತ್ಯಂ ॥ ಸಂಸುಪ್ತವಿಚ್ಛಿಶ್ಚ ಉದಾರಕರ್ಮಾ ಸಂಜ್ಞಾಯ್ಯೈ ದೇವಾನಾಂ ಮುಖಮೀಕ್ಷ್ಯಪ್ರಮೋದಯಃ ॥೫॥ ದೇವಾಶ್ಚತದ್ವ್ಯಪವಿದೋಃ ಪೀತಾಶ್ಚ ನಿಮೀಲಿತಾಕ್ಷಾಃ ಶಯನೇಷು ಚಿಕ್ರಿರ್ಯೇ ॥ ತದಾ ಬಲಿಸ್ತಸ್ಯ ವಿಷ್ಣೋಃ ಕಿರೀಟ ಮಾದಾಯಾಗಾದ್ಯ್ಮತ ಸಂಸ್ಪರ್ಶ ದೇವಾಃ ॥೬॥ ನಾರಾಯಣೇ ಸರ್ವದೇವೈಃ ಸಮೇತೇ ಬ್ರಹ್ಮಾದಿಭಿರ್ಹಾಸಮಾನೇಸುಪರ್ಣ ॥ ಗತ್ವಾ ಪಾತಾಲಂ ಯುಧಿ ಜಿತ್ವಾ ಬಲಿಂಚ ಕಿರೀಟ ಮಾದಾಯಾಭ್ಯಯಾದ್ಯತ್ರ ಕೃಷ್ಣಃ ॥೭॥ ಶ್ರೀಕೃಷ್ಣನು ಜರಾಸಂಧನೊಂದಿಗೆ ೧೭ ಸಲ ಯುದ್ಧವನ್ನೂ ಮಾಡಿ, ಜಯಿಸಿ ೧೮ನೇ ಸಲ ಅವನಿಗೆ ಜಯವನ್ನು ಕೊಡಿಸುವ ಉದ್ದೇಶವನ್ನು ಮನಸ್ಸಿನಲ್ಲಿಟ್ಟುಕೊಂಡು, ಬಲಾಢ್ಯರಾದ ಶತ್ರುಗಳು ಹೆಚ್ಚಿದಾಗ, ತಾವು ಊರನ್ನು ಬಿಟ್ಟು ದುರ್ಗಾದಿಗಳನ್ನೂ ಸೇರುವುದು ನೀತಿಶಾಸ್ತ್ರಸಮ್ಮತವೆಂದು ತೋರ್ಪಡಿಸುತ್ತಾ, ೧೮ನೇ ಸಲ ಯುದ್ಧಾರಂಭಕ್ಕೆ ಮುಂಚಿತವಾಗಿ ದುರ್ಗವನ್ನು ನೋಡುವುದಕ್ಕಾಗಿ ಗೋಮಂತಪರ್ವತಕ್ಕೆ ಹೋಗಿದ್ದನು. ಆ ಸಮಯದಲ್ಲಿ ಮುಕ್ತಸ್ಥಾನದಲ್ಲಿರುವ ಶ್ರೀನಾರಾಯಣನು ಅಮುಕ್ತರಾದ ಬ್ರಹ್ಮಾದಿ ದೇವತೆಗಳು ತನ್ನನ್ನು ಸೇವಿಸಲು, ಮುಕ್ತಸ್ಥಾನದಲ್ಲಿ ಪ್ರವೇಶವಿಲ್ಲದಿರುವುದರಿಂದ, ಅವರುಗಳಿಂದ ಸೇವೆ ತೆಗೆದುಕೊಳ್ಳುವ ಉದ್ದೇಶವಾಗಿ, ಕ್ಷೀರಸಮುದ್ರಮಧ್ಯದಲ್ಲಿರುವ ಶ್ವೇತದ್ವೀಪಕ್ಕೇ ಬಂದಿದ್ದನು. ಪರಮಾತ್ಮನನ್ನು ನೋಡುವುದಕ್ಕಾಗಿ ಅಲ್ಲಿಗೆ ದೇವತೆಗಳೆಲ್ಲರೂ ಬಂದಿದ್ದನು. ಬಲಿಚಕ್ರವರ್ತಿಯೂ ಸಹ, ಅದೇ ಕಾಲದಲ್ಲಿ ಶ್ರೀನಾರಾಯಣನನ್ನು ಸೇವಿಸುವ ನಿಮಿತ್ತದಿಂದ ಬಂದನು. ಅವನಲ್ಲಿ ಅಸುರಾವೇಶವಿರುವುದನ್ನು ಜನರಿಗೆ ತೋರ್ಪಡಿಸುವ ನಿಮಿತ್ತ, ಶ್ರೀಪರಮಾತ್ಮನು ದೇವತೆಗಳನ್ನು ಮಲಗಿಕೊಳ್ಳುವಂತೆ ಸಂಕೇತ ಮಾಡಿ, ಎಂದಿಗೂ ನಿದ್ರೆ ಇಲ್ಲದವನಾದರೂ, ತಾನೂ ಮಲಗಿಕೊಂಡು ನಿದ್ರೆ ಮಾಡುವವನಂತೆ ತೋರಿದನು. ಬಲಿಚಕ್ರವರ್ತಿಯು ಅಲ್ಲಿಗೆ ಬಂದು, ಎಲ್ಲರೂ ಮಲಗಿ ನಿದ್ರೆಮಾಡುತ್ತಿರುವುದನ್ನು ಕಂಡು, ಅಸುರಾವೇಶದಿಂದ ಪರಮಾತ್ಮನ ತಲೆಯ ಮೇಲಿರುವ ಅದ್ಭುತವಾದ ಕಿರೀಟವನ್ನು ಮೆಲ್ಲಗೆ ತೆಗೆದು, ವಸ್ತ್ರದಲ್ಲಿ ಸುತ್ತಿಕೊಂಡು ಹೊರಟುಹೋದನು. ಆಗ ದೇವತೆಗಳು

ಮತ್ತು ಪರಮಾತ್ಮನೂ ಸಹ ಅವನ ಕಳ್ಳತನದ ಬುದ್ಧಿಯನ್ನು ಕಂಡು ನಗುತ್ತಿದ್ದರು. ಆ ಸಮಯದಲ್ಲಿ ಗರುಡನು ಬಲಿಚಕ್ರವರ್ತಿಯನ್ನು ಅನುಸರಿಸಿ ಹಿಂದಯೇ ಸುತಳ ಲೋಕಕ್ಕೆ ಹೋಗಿ, ಅವನನ್ನು ಜಯಿಸಿ, ಕಿರೀಟವನ್ನು ತೆಗೆದುಕೊಂಡು ಬರುವಾಗ ಗೋಮಂತ ಪರ್ವತದ ಮೇಲೆ ನಿಂತಿದ್ದ ಶ್ರೀಕೃಷ್ಣನ ತಲೆಯ ಮೇಲೆ ಆ ಕಿರೀಟವನ್ನಿಟ್ಟು ನಮಸ್ಕರಿಸಿದನೆಂದು ಹೇಳುವರು. ಆ ಅಭಿಪ್ರಾಯವನ್ನೇ ದಾಸಾರ್ಯರು ಇಲ್ಲಿ ಹೇಳಿರುವರು. ಇಂತಹಾ ಅಪರಾಧವನ್ನು ಬಲಿಚಕ್ರವರ್ತಿಯು ಮಾಡಿದ್ದರೂ, ವಾಮನರೂಪದಿಂದ ಅವನ ಮನೆ ಬಾಗಿಲು ಕಾಯುತ್ತಾ, ಅವನನ್ನು ಅನ್ವಹ ರಕ್ಷಿಸುತ್ತಿರುವನು. ಅದರಿಂದಲೇ, ಇಂತಹಾ ಕರುಣಾಳುಗಳನ್ನು ಜಗತ್ತಿನಲ್ಲಿ ಕಾಣೆನೆಂದು ದಾಸಾರ್ಯರು ಹೇಳಿರುವರು. ॥೫॥

**೫. ಶ್ರೀ ಗುರುಹೃದಯಪ್ರಕಾಶಿಕೆ**

ಗೌತಮಋಷಿಪತ್ನಿ ಅಹಲ್ಯೆಯನ್ನು ಪುರಹೂತನೆಂಬ ಇಂದ್ರನು ಜಾರತನದಿಂದ ಹೊಂದಿದ್ದರೂ, ದೋಷ ಎಣಿಸದೆ, ಅಹಲ್ಯೆಯ ಶಾಪ ಬಿಡಿಸಿ, ಕಾಯ್ದ. ವೃತ್ರಾಸುರನನ್ನು ಕೊಂದ ಬ್ರಹ್ಮಹತ್ಯವೆಂಬ ಪ್ರಾರಬ್ಧಸೂತಕ ಪಾಪವನ್ನು ದೇವೇಂದ್ರನಿಗೆ ಬಿಡಿಸಿ, ವೃಕ್ಷ, ಭೂಮಿ, ಜಲ, ಸ್ತ್ರೀಯರು- ಈ ನಾಲ್ಕು ಸ್ಥಳಗಳಲ್ಲಿ ವಿಭಾಗಮಾಡಿ ಕಳೆದನು. ಶಾತಕುಂಭವೆಂಬ ಸ್ವರ್ಣಾತ್ಮಕ ರತ್ನಕಿರೀಟವನ್ನು ಕೈತವವೆಂಬ ಕಳ್ಳತನದಿಂದ ಕದ್ದಂಥಾ ಇಂದ್ರಾರಾತಿ- ಎಂದರೆ, ಇಂದ್ರಶತ್ರುವಾದ ಬಲಿಯ ಅಪರಾಧವನ್ನು ಎಣಿಸದೆ, ಭಕ್ತತ್ವೇನ ಅಂಗೀಕರಿಸಿ, ಅವನ ಮನೆಯ ಬಾಗಿಲನ್ನು ಕಾಯ್ದನು, ಅದ್ದರಿಂದ, ಮಹಾ ಕರುಣೆಯೊಂದರ್ಘ. ॥೬॥

## ಸರ್ವವ್ಯಾಖ್ಯಾನಸಾರ ಸಂಗ್ರಹ

**೧. ಗೌತಮನ-**

ಸಪ್ತರ್ಷಿಗಳಲ್ಲಿ ಒಬ್ಬರು. ಉಚಥ್ಯನ ಮಗನಾದ ದೀರ್ಘತಮ ಮುನಿಯ ಪುತ್ರ, ಕುಲಪತಿ. ಗೋತ್ರಪ್ರವರ್ತಕ ಋಷಿ. ಅಹಲ್ಯೆ

ಈತನ ಪತ್ನಿ. ಉದಂಕಮುನಿ ಈತನ ಶಿಷ್ಯನಾಗಿದ್ದು, ನಂತರ ಅಳಿಯನಾದನು. ಅನೇಕ ವರ್ಷಗಳ ಕಾಲ ಭೂಮಿಯಲ್ಲಿ ಘೋರಕ್ಷಾಮ ಬಂದಾಗ, ಅನೇಕ ಬ್ರಾಹ್ಮಣರು ಗೌತಮರ ಆಶ್ರಮದಲ್ಲಿ ಆಶ್ರಯ ಪಡೆದರು. ವಿಪ್ರರ ವಂಚನೆಯಿಂದ ತಪ್ತರಾದ ಗೌತಮರು ಅವರ ಜ್ಞಾನತಿರೋಧಾನವಾಗಲೆಂದು ಶಾಪವಿತ್ತರು. ಇದೇ ಕಾರಣವಾಗಿ ಶ್ರೀವೇದವ್ಯಾಸರ ಅವತಾರ. ಈತನ ಪುತ್ರ ಶತಾನಂದರು. ಜನಕರಾಜನ ಕುಲಪುರೋಹಿತರು.

**೨. ನಿಜಪತ್ನಿಯನು -**

ಗೌತಮರ ಸ್ವೀಯಳಾದ ಪತ್ನಿ ಅಹಲ್ಯಾದೇವಿ. ಪಂಚಕನ್ಯೆಯರಲ್ಲಿ ಒಬ್ಬಳು. ಮುದ್ಗಲ ಋಷಿಗಳ ಪುತ್ರಿ. ಶತಾನಂದರು ಈಕೆಯ ಪುತ್ರರು. ದಿವೋದಾಸನು ಈಕೆಯ ಸಹೋದರನು. ಒಮ್ಮೆ ಶತಕ್ರತುವಾದ ಇಂದ್ರನು ಗೌತಮರ ಆಶ್ರಮಕ್ಕೆ ಬಂದು, ಅಹಲ್ಯೆಯ ರೂಪಸೌಂದರ್ಯಗಳಿಗೆ ಮನ ಸೋತ. ಗೌತಮರ ವೇಷದಿಂದ ಆಕೆಯನ್ನು ಕೂಡಿದ. ಆ ವಿಷಯವು ಗೌತಮರಿಗೆ ತಿಳಿದು, ಅಹಲ್ಯೆಗೆ ಶಿಲೆಯಾಗಿ ಬಿದ್ದಿರೆಂದು ಶಪಿಸಿದರು. ಜಾರತ್ವವನ್ನು ಮಾಡಿದ ಇಂದ್ರನಿಗೆ ಸಹಸ್ರಯೋನಿಯಾಗೆಂದು ಶಾಪವನಿತ್ತರು. ಆಗ ದೇವತೆಗಳು ಇಂದ್ರನಿಗೆ ಮೇಷವೃಷಣವನ್ನು ತೊಡಿಸಿದರು. ಶ್ರೀರಾಮನ ಪಾದಸ್ಪರ್ಶದಿಂದ ಶಾಪವಿಮೋಚನೆಯಾಗುವುದೆಂದು ಅಹಲ್ಯೆಗೆ ತಿಳಿಸಿ, ತಾವು ಹಿಮವತ್ಪರ್ವತಕ್ಕಾಗಿ ತಪಸ್ಸಿಗಾಗಿ ತೆರಳಿದರು. ಶತ ಅಶ್ವಮೇಧ ಯಾಗಗಳನ್ನು ಪೂರೈಸಿ, ಇಂದ್ರಪದವಿಯನ್ನು ಹೊಂದಿರುವುದರಿಂದ, ಇಂದ್ರನಿಗೆ- **ಪುರುಹೂತ**ನೆಂದು ಹೆಸರು. ವಿಶ್ವಾಮಿತ್ರರೊಡಗೂಡಿ ಜನಕರಾಜನ ಮಿಥಿಲಾನಗರಕ್ಕೆ ಸೀತಾಸ್ವಯಂವರಕ್ಕಾಗಿ ಬರುತ್ತಿದ್ದ ಶ್ರೀರಾಮಚಂದ್ರನ ಪಾದಸ್ಪರ್ಶವಾಗುತ್ತಲೇ, ಅಹಲ್ಯೆಗೆ ಶಾಪವಿಮೋಚನೆಯಾಗಿ, ದಿವ್ಯ ಸುಂದರ ರೂಪ ಧರಿಸಿದಳು. ಆಗ ಗೌತಮರನ್ನು ಬರಮಾಡಿಕೊಂಡು, ಶಾಪವಿಮೋಚನೆಯ ಕಾರಣದಿಂದಾಗಿ, ಅಹಲ್ಯಾಗೆ ಪುನರ್ಜನ್ಮ ಪ್ರಾಪ್ತವಾಗಿರುವುದಾಗಿಯೂ, ಆ ಶ್ರೀರಾಮನ ಪಾದಸ್ಪರ್ಶದಿಂದ ಅವಳು ಪುನೀತಳಾದಳೆಂದೂ ತಿಳಿಸಿ. ಶ್ರೀರಾಮಚಂದ್ರನು ಗೌತಮರಿಗೆ ಅಹಲ್ಯೆಯನ್ನು ಸ್ವೀಕರಿಸು

ವಂತೆ ತಿಳಿಸಿ, ಅಹಲ್ಯೋದ್ಧಾರಕ್ಕೆ ಕಾರಣನಾದನು. ಇಂದ್ರನು ತತ್ತ್ವಾಭಿಮಾನಿ ದೇವತೆಯು. ಮನಸ್ಸಿಗೆ ಅಭಿಮಾನಿ. ತಾರತಮ್ಯದಲ್ಲಿ ಅಹಲ್ಯಾಗಿಂತ ಉತ್ತಮನು. ಆತನ ಪ್ರಾರಬ್ಧಕರ್ಮಭೋಗಕ್ಕಾಗಿ ಅಹಲ್ಯಾಯೊಡನೆ ಸಂಗಮವಾದುದು ಶ್ರೀಹರಿ ಇಚ್ಛೆಯಿಂದ. ಆದರೆ, ಸ್ವಯೋಗ್ಯ ಕ್ಲಪ್ತವಾದ ಪುಣ್ಯಕ್ಕೆ ಯಾವ ಬಾಧೆಯೂ ಇಲ್ಲ. ಗೌತಮರ ಶಾಪದಿಂದ ಇಂದ್ರನ ಪ್ರಾರಬ್ಧಕರ್ಮಕ್ಷಯ. ಇದು ಇಂದ್ರ-ಅಹಲ್ಯಾಯರ ಪ್ರಸಂಗದ ರಹಸ್ಯ.

**೩. ವೃತ್ರಾಸುರ**

ತ್ವಷ್ಟೃವಿನಿಂದ ಇಂದ್ರನ ವಧೆಗಾಗಿ ಜನಿಸಿದ ಬ್ರಾಹ್ಮಣವರ್ಣದ ಅಸುರ. ಅವನ ಚಿತ್ರಹಿಂಸೆಗಳನ್ನು ತಾಳಲಾರದೇ, ಇಂದ್ರನು ಮಹಾತಪಸ್ವಿಗಳಾಗಿದ್ದ ದಧೀಚಿಮುನಿಯನ್ನು ಪ್ರಾರ್ಥಿಸಿ, ಅವರ ಬೆನ್ನುಮೂಳೆಯನ್ನು ಪಡೆದು, ಅದರಿಂದ ವಜ್ರಾಯುಧವನ್ನು ನಿರ್ಮಿಸಿಕೊಂಡು, ವೃತ್ರಾಸುರನನ್ನು ಸಂಹರಿಸಿದನು. ಇದರಿಂದ, ಇಂದ್ರನಿಗೆ ಬ್ರಹ್ಮಹತ್ಯಾ ದೋಷವು ಬಂದಿತು. ಲೋಕಕಲ್ಯಾಣಾರ್ಥವಾಗಿ ವೃತ್ರನ ಸಂಹಾರವಾದ್ದರಿಂದ, ಇಂದ್ರನಿಗೆ ಪ್ರಾಪ್ತವಾದ ಬ್ರಹ್ಮಹತ್ಯಾದೋಷವನ್ನು ಶ್ರೀಹರಿಯು ಪರಿಹರಿಸಿ, ಆ ಪಾಪವನ್ನು ನಾಲ್ಕು ವಿಭಾಗಗಳಾಗಿ ಮಾಡಿದನು. ಒಂದು ಭಾಗವನ್ನು ಸ್ತ್ರೀಯರಲ್ಲಿ ಋತುರೂಪದಲ್ಲಿಟ್ಟನು. ಎರಡನೆಯ ಅಂಶವನ್ನು ನೀರಿನಲ್ಲಿ ಉಂಟಾಗುವ ನೊರೆ ಅಥವಾ ಫೇನ ರೂಪದಲ್ಲಿಟ್ಟನು. ಮೂರನೆಯ ವಿಭಾಗವನ್ನು ವೃಕ್ಷಗಳಲ್ಲಿ ಉತ್ಪತ್ತಿಯಾಗುವ ಗೋಂದಿನ ರೂಪದಲ್ಲಿಟ್ಟನು. ಉಳಿದ ನಾಲ್ಕನೆಯ ಭಾಗವನ್ನು ಬಂಜರು ಭೂಮಿಯಲ್ಲಿರುವ ಸವಳು (ಉಪ್ಪಾದ ಮರಳು) ರೂಪದಿಂದಲೂ ಇಟ್ಟನು.

**೪. ಕಾಂತಕುಂಭ**-ಎಂದರೆ ಸುವರ್ಣ. ಒಮ್ಮೆ ಬಲಿಚಕ್ರವರ್ತಿಯು ಶ್ರೀಹರಿಯ ರತ್ನಖಚಿತವಾದ ಬಂಗಾರದ ಕಿರೀಟವನ್ನು ಮೋಸದಿಂದ **(ಕೈತವದಿ)** ಕದ್ದು, ಒಯ್ದನು. ಶ್ರೀಹರಿಯು ರಸಾತಳಕ್ಕೆ ಹೋಗಿ ಬಲಿಯಿಂದ ತನ್ನ ಕಿರೀಟವನ್ನು ಪಡೆದನು. ಅಸುರಾವೇಶದಿಂದ ಎಸಗಿದ ಬಲಿಯ ಈ ಅಕೃತ್ಯವನ್ನು ಮನ್ನಿಸಿ, ಬಲಿಯ ಪ್ರಾರ್ಥನೆಯಂತೆ ಈಗಲೂ

ಬಲಿಯ ಅರಮನೆಯ ದ್ವಾರವನ್ನು ವಾಮನ ರೂಪದಿಂದ ಕಾಯುತ್ತಿದ್ದಾನೆ. ಬಲಿಯು ಪ್ರಹ್ಲಾದನ ಮೊಮ್ಮಗನು. ಅಸುರಯೋನಿಯಲ್ಲಿ ಜನಿಸಿದ್ದರೂ, ಸ್ವರೂಪತಃವಿಷ್ಣುಭಕ್ತನು. ಅವನ ಭಕ್ತಿಯನ್ನು ಪರಿಗಣಿಸಿ, ಅವನ ಅಪರಾಧವನ್ನು ಮನ್ನಿಸಿ, ಸಂರಕ್ಷಿಸಿದ ವಾಮನರೂಪೀ ಶ್ರೀಹರಿಯು, ಅದೆಂತಹ ಕರುಣಾಸಾಗರನು.! **ಅರಾತಿ**-ಎಂದರೆ, ಶತ್ರು. ಇಂದ್ರಾರಾತಿ-ಎಂದರೆ, ಇಂದ್ರನ ಶತ್ರುವಾದ ಬಲಿಚಕ್ರವರ್ತಿ. ॥೫॥

## ಪದ್ಯ-೬

**ಮೂಲ :-**

**ನಾರ ನಂದವ್ರಜದ ಸ್ತ್ರೀಯರ ।**
**ಜಾರಕರ್ಮಕೆ ಒಲಿದು ಅಜ ಸುಕು ।**
**ಮಾರನೆನಿಸಿದ ನಂದಗೋಪಗೆ ನಳಿನಭವಜನಕ ॥**
**ವೈರವರ್ಜಿತ ದೈತ್ಯರನು ಸಂ ।**
**ಹಾರಮಾಡಿದ ವಿಪಗಮನ ಪೆಗ ।**
**ಲೇರಿದನು ಗೋಪಾಲಕರ ವೃಂದಾವನದೊಳಿದ್ದು ॥೬॥**

**ಅವತರಣಿಕೆ :**

ಶ್ರೀಹರಿಯ ಕಾರುಣ್ಯಮಹಿಮಾತಿಶಯವನ್ನು ಇನ್ನೂ ದೃಷ್ಟಾಂತ ಪೂರ್ವಕವಾಗಿ ತಿಳಿಸುತ್ತಾರೆ. ॥೬॥

**ಪ್ರತಿಪದಾರ್ಥ :**

**ನಾರ**=ದೋಷದೂರನಾದ, **ನಳಿನಭವಜನಕ**=ಪದ್ಮನಾಭದೇವರ ನಾಭೀಕಮಲದಲ್ಲಿ ಸಂಜಾತರಾದ ಬ್ರಹ್ಮದೇವರ ತಂದೆಯಾದ, **ಅಜ**=

ಉತ್ಪತ್ತಿಶೂನ್ಯನಾದ (ಜನನ ವಿಹೀನ) ಶ್ರೀಹರಿಯು. **ನಂದಗೋಪನ** = ನಂದಗೋಪನಿಗೆ. **ಸುಕುಮಾರನೆನಿಸಿ** = ಸತ್ಪುತ್ರನೆಂದು ಕರೆಯಿಸಿಕೊಂಡು. ಶ್ರೀಕೃಷ್ಣನಾಮಕನಾಗಿ, **ನಂದವ್ರಜದ** = ನಂದಗೋಕುಲದ. **ಸ್ತ್ರೀಯರ** = ಗೋಪಸ್ತ್ರೀಯರ, **ಜಾರಕರ್ಮಕೆ** = ಶ್ರೀಕೃಷ್ಣನ ಅಂಗಸಂಗವನ್ನು ಬಯಸಿದ ಅವರ ಜಾರತ್ವರೂಪವಾದ ಕರ್ಮವನ್ನು. **ಒಲಿದು** = ದೋಷತ್ವೇನ ಪರಿಗಣಿಸದೆ, ಅವರನ್ನು ಉದ್ಧರಿಸಿದನು. **ವೈರವರ್ಜಿತ** = ದ್ವೇಷದೂರನಾದ. ಶ್ರೀಹರಿಯು, **ದೈತ್ಯರನು** = ತಮೋಯೋಗ್ಯರಾದ ದೈತ್ಯರನ್ನು. **ಸಂಹಾರ ಮಾಡಿದ** = ಸಂಹರಿಸಿದನು. (ದೈತ್ಯರ ಸಂಹಾರದಿಂದ, ಅವನಿಗೆ ದ್ವೇಷದೋಷ ದುರ್ಗುಣವಿಲ್ಲ. ಅವರ ಸ್ವರೂಪಕ್ಕೆ ತಕ್ಕಂತೆ ವ್ಯಾಪಾರ) **ವಿಹಗವಹನ** = ಪಕ್ಷಿಶ್ರೇಷ್ಠರಾದ ಗರುಡನನ್ನೇ ವಾಹನವನ್ನಾಗಿ ಉಳ್ಳ ಶ್ರೀಕೃಷ್ಣನು. **ವೃಂದಾವನದೊಳಿದ್ದು** = ವೃಂದಾವನ ಎಂಬ ಗೋಕುಲಕ್ಕೆ ಸಮೀಪವಾದ ಸ್ಥಳದಲ್ಲಿ ಇದ್ದು. **ಗೋಪಾಲಕರ** = ಗೋಪಾಲ ಬಾಲಕರ, **ಹೆಗಲೇರಿದನು** = ಹೆಗಲಿನ ಮೇಲೆ ಹತ್ತಿ, ಕೂತು, ನಾನಾವಿಧವಾದ ಕ್ರೀಡೆಗಳನ್ನು ಅವರಿಗೆ ತೋರಿಸಿದ ದಯಾಸಾಂದ್ರ ಆ ಧರಾಧರನು. ॥೬॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮನ ಮಹಾತ್ಮ್ಯ ಹೇಳತಾರೆ. ನಾರ- ಎಂದರೆ; ದೋಷ ದೂರನಾದವ (ಅರ ಎಂದರೆ ದೋಷ. ನ+ಅರ=ದೋಷವಿಲ್ಲದವ. 'ಅರ' ಎಂತ ಪದ), ಪದ್ಮನಾಭದೇವರ ನಾಭಿಕಮಲದಿಂದ ಜನಿಸಿದ ಬ್ರಹ್ಮದೇವರಿಗೆ ತಾದಿಯಾದ. ಉತ್ಪತ್ತಿಶೂನ್ಯನಾದ ಶ್ರೀಪರಮಾತ್ಮ. ನಂದಗೋಪಗೆ ಸತ್ಪುತ್ರನಾಗಿ, ಕೃಷ್ಣ-ಎಂತ ನಾಮ ಪಡೆದ. ಶ್ರೀಕೃಷ್ಣದೇವರು ನಂದವ್ರಜನಾಮಕ ಗ್ರಾಮಗತರಾದ ಸ್ತ್ರೀಯರುಗಳ, ತಮ್ಮ ಪತಿಗಳು ಇರಲಾಗಿ, ಸರ್ವೋತ್ತಮ

ನಾದ ಶ್ರೀಪರಮಾತ್ಮನ ಅನುಗ್ರಹಕ್ಕಾಗಿ ಶ್ರೀಕೃಷ್ಣನ ಕೂಡ ಜಾರತ್ವರೂಪವಾದ ಕರ್ಮವನ್ನು ಅವಲಂಬನ ಮಾಡುವವರಾದರು. ಇಂಥಾ ಕರ್ಮಕ್ಕೆ ಒಲಿದು, ಅವರನ್ನು ಉದ್ಧಾರಮಾಡುವವನಾದನು. ಜಾರತ್ವವನ್ನು ದೋಷತ್ವೇನ ಎಣಿಸಲಿಲ್ಲ. ಇಂಥಾ ಪರಮಾತ್ಮ ದ್ವೇಷವರ್ಜಿತರಾಗಿ ಭಕ್ತಿಯುಕ್ತರಾದವರನ್ನು ಸಂರಕ್ಷಣೆ ಮಾಡುವವನಾದನು. ತನ್ನಲ್ಲಿ ದ್ವೇಷ ಮಾಡಿದ ದೈತ್ಯರನ್ನು ನಾಶಪಡಿಸಿದನು. ಗರುಡವಾಹನನಾದ ಶ್ರೀಕೃಷ್ಣದೇವರು ವೃಂದಾವನ ನಾಮಕ ಗ್ರಾಮದೊಳು ಇದ್ದ ಕಾಲದಲ್ಲಿ. ಗೋಪಾಲಕರ ಹಗಲೇರುವುದೇ- ಮೊದಲಾದ ನಾನಾಕ್ರೀಡಾಗಳ ಅವರೊಡನೆ ತೋರಿದನು. ಕೆಲವರಿಗೆ ಸಾಧಾರಣ ಮನುಷ್ಯನೆಂತಲೂ, ಕೆಲವರಿಗೆ ಶತ್ರುವೆಂತಲೂ, ಕೆಲವರಿಗೆ ಮಹಾಶೂರನೆಂತಲೂ, ಕೆಲವರಿಗೆ ಮನ್ಮಥನೋಪಾದಿಯಲ್ಲಿ ಆಕಾರವುಳ್ಳವನೆಂತಲೂ, ಅವರವರ ಯೋಗ್ಯತಾನುಸಾರ ಮನಸ್ಸಿಗೂ, ದೃಷ್ಟಿಗೂ ತೋರೋವವನಾಗಿದ್ದಾನೆ. ಈ ಪರಮಾತ್ಮ ಅನವೃಕಮಹಿಮಾ ಉಳ್ಳವನೆಂದು ತಾತ್ಪರ್ಯ. ॥೬॥

**೨ ಭಾವದರ್ಪಣ** :

ನಾರಸಂದೇತಿ.। ನವಿದ್ಯತೇ ಅರಃ ದೋಷಃ ಏಷಾಂ ತೇ ನಾರಾಃ ಮುಕ್ತಾಃ ತಾನ್ ನಂದಯತೀತಿ ನಾರಂದಃ । ದೋಷಶೂನ್ಯರಾದ ಮುಕ್ತರನ್ನು ಸಂತೋಷ ಪಡಿಸಿದವ- ಎಂಬರ್ಥ । "ನಾರಶ್ಚಾಸೌ ನಂದಶ್ಚ ನಾರನಂದಃ ಹರಿಃ" । ನಿರ್ದುಷ್ಟವಾದಂಥ ಆನಂದವುಳ್ಳ ಪರಮಾತ್ಮ ಎಂಬರ್ಥ । ಏತಾದೃಶನಾದ ಶ್ರೀಕೃಷ್ಣನು ಗೋಪಸ್ತ್ರೀಯರ ಜಾರಕರ್ಮಕ್ಕೆ ಒಲಿದನೆಂತಾರೆ । ಅದು ಭಕ್ತತ್ವೇನ ಸ್ವೀಕಾರ ಮಾಡಿದನೆಂಬೋ ಭಾವ । ಅಜ-ಉತ್ಪತ್ತಿರಹಿತನಾದವನು. ಸುಕುಮಾರನೆನಿಸಿದ- ಎಂದರೆ, ಭಕ್ತಿರಸಕ್ಕೆ ಮೆಚ್ಚಿ ಪ್ರಾದುರ್ಭಾವನಾದ ಎಂಬ ಭಾವ । ಖಗಗಮನ-ಗರುಡಗಮನ. ಗೋಪಾಲಕರ ಹೆಗಲು-ಹೆಗಲು. ॥೬॥

## ೩. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

"ನಾರ" ಇತಿ । "ನಾರಃ" ನಿರ್ದೋಷಃ । "ವಿಪಃ" - ಗರುಡಃ । "ಅಂದು" ಆ ಹೊತ್ತು (ಅವತ್ತು) ॥೬॥

## ಕನ್ನಡಾರ್ಥ

"ನಾರ" ನಿರ್ದೋಷ. ಆರವೆಂದರೆ ದೋಷ. ಅವುಗಳಿಲ್ಲದವನು- ನಾರ. ವಿಪ-ಗರುಡ. ವಿ- ಅಂದರೆ, ಪಕ್ಷಿ. ಅವುಗಳಿಗೆ ಪತಿ ಗರುಡ- "ವಿಪ". ಅಂದು-ಆ ಹೊತ್ತು, ಆ ದಿವಸವೆಂದು ಅರ್ಥ. ॥೬॥

## ೪. ಭಾವಪ್ರಕಾಶಿಕೆ

ತಾನು ದೋಷರಹಿತನು. ಆದರೂ, ತನ್ನನ್ನು ಜಾರತ್ವೇನ ಉಪಾಸನೆ ಮಾಡುತ್ತಿರುವ, ನಂದಗೋಕುಲನಿವಾಸಿಗಳಾದ ಗೋಪಿಕಾಸ್ತ್ರೀಯರು ಗೋಪರು, ಅಂಗಸಂಗವನ್ನಿತ್ತು, ಪರಲೋಕದಲ್ಲಿ ದಿವ್ಯಗತಿಯನ್ನಿತ್ತನು. ಬ್ರಹ್ಮದೇವರ ತಂದೆಯಾದನು. ತನಗೆ ಹುಟ್ಟುವಿಕೆ- ಮೊದಲಾದವು ಇಲ್ಲದಿದ್ದರೂ, ನಂದಗೋಪನಿಗೆ ಮಗನೆನಿಸಿದನು. ತನಗೆ ದೈತ್ಯರಲ್ಲಿ ದ್ವೇಷವಿಲ್ಲದಿದ್ದರೂ, ದೇವಬ್ರಾಹ್ಮಣರ ಉದ್ಧಾರಕ್ಕಾಗಿ,ದೈತ್ಯರನ್ನು ಕೊಂದನು. ತಾನು ಗರುಡವಾಹನನು. ಆದರೂ, ತಾನು ಬಾಲಲೀಲೆಯನ್ನು ತೋರಿಸುತ್ತಾ, ಕುದುರೆಯ ಆಟದ ನಿಮಿತ್ತದಿಂದ, ಶ್ರೀದಾಮನೆಂಬ ಗೋಪಾಲನ ಹೆಗಲೇರಿ ಭಾಂಡೀರಕವೆಂಬ ವಟವೃಕ್ಷದ ಬುಡದಲ್ಲಿ ವಿಹರಿಸಿದನು. "ಉವಾಹ ಕೃಷ್ಣೋ ಭಗವಾನ್ ಶ್ರೀದಾಮಾನಂಪರಾಜಿತಃ"- ಎಂದ ಭಾಗವತ ದಶಮಸ್ಕಂಧದ ವ್ಯಾಖ್ಯಾನದಲ್ಲಿ- "ಶ್ರೀದಾಮಾ ಪರಾಜಿತಃ ಸನ್ ಕೃಷ್ಣಮುವಾಹ"- ಎಂದು

ಅರ್ಥಮಾಡಿರುವರು, ಅಂದರೆ, ಮೂಲದಲ್ಲಿ ಶ್ರೀಕೃಷ್ಣನು ಪರಾಜಿತನಾಗಿ ಶ್ರೀದಾಮನನ್ನು ಹೊತ್ತನೆಂದು ಅರ್ಥವಾಗುವುದು. ಆ ವಾಕ್ಯವು ಹರಿವಂಶಾದಿಗಳಿಗೆ ವಿರೋಧವಾಗಿರುವುದು. ಅದಕ್ಕಾಗಿ ಬಹುಮಾನ ವಿರೋಧೇತು ವ್ಯತ್ಯಾಸಃ ಶಬ್ದತೋರ್ಥತಃ"- ಎಂಬ ಭಾಗವತ ತಾತ್ಪರ್ಯಾನುಸಾರವಾಗಿ, ಮಹಾಗ್ರಂಥಗಳಿಗೆ ವಿರೋಧ ಬಂದಾಗ, ಶಬ್ದದಿಂದಲೂ, ಅರ್ಥದಿಂದಲೂ ವ್ಯತ್ಯಾಸವಾಗಿ ಅರ್ಥವನ್ನು ಹೇಳಬೇಕೆಂಬ ಆಧಾರದ ಮೇಲೆ ಶ್ರೀದಾಮನು ಕೃಷ್ಣನನ್ನು ಹೊತ್ತನೆಂದು ಅರ್ಥಮಾಡಿರುವರು. ಅದೇ ಅಭಿಪ್ರಾಯವನ್ನೇ ದಾಸಾರ್ಯರು ಇಲ್ಲಿ ಹೇಳಿರುವರು. ॥೬॥

## ೫. ಶ್ರೀಗುರುಹೃದಯ ಪ್ರಕಾಶಿಕೆ

ನಾರ-ಎಂದರೆ, ಅರವೆಂಬ ದೋಷರಹಿತನಾದ ದೇವರು. ನಂದಗೋಕುಲದ ಸ್ತ್ರೀಯರ ಜಾರಕರ್ಮಕೆ ಒಲಿದ- ಎಂದರೆ, ಕಾಮಯುಕ್ತಭಕ್ತಿಗೆ ಮೆಚ್ಚಿದನೆಂದರ್ಥ. ಅಜನೆಂಬ ಜನ್ಮವೆಂಬ ಜನ್ಮರಹಿತನಾದರೂ, ಸಕಲ ಭುವನೆಂಬ ಬ್ರಹ್ಮನನ್ನು ನಾಭೀಕಮಲದಿಂದ ಪಡೆದವನಾದರೂ, ನಂದಗೋಪಗೆ ಸುಕುಮಾರನೆನಿಸಿಕೊಂಡ. ತನಗೊಬ್ಬರಿಂದ ಹಾನಿ ಇಲ್ಲದ್ದರಿಂದ ಸ್ವಯಂ ವೈರರಹಿತನಾದರೂ, ಅವರ ದ್ವೇಷಫಲ ಕೊಡಬೇಕಾಗಿ ದೈತ್ಯರನ್ನು ಸಂಹರಿಸಿದ. ವಿಹಗಮನ, ಎಂದರೆ- ಪಕ್ಷಿಶ್ರೇಷ್ಠ ಗರುಡವಾಹನನಾದಾಗ್ಯೂ, ಅಥವಾ ಗರುಡನಿಗೂ ಕೂಡಾ ತಾನೇ ಶಕ್ತಿಪ್ರದನಾಗಿ ವಾಹನ ಮಾಡಿಕೊಂಡವನಾದರೂ, ವೃಂದಾವನದಲ್ಲಿ ಗೋಪಾಲಕರ ಭಕ್ತಿಗೋಸ್ಕರ ಅವರ ಹೆಗಲ ಮೇಲೆ ಕೂತು ಸಂಚರಿಸಿದನು,- ಪೂರ್ವದಲ್ಲಿ ಎಂದರ್ಥ. ಗರುಡನ ಮೇಲೆ ತನ್ನಒಂದು ಬೆರಳನ್ನು ಇಟ್ಟು, ಅದರ ಭಾರವನ್ನು ತಡೆಯಲಾರದೆ. ಗರುಡನು ಪ್ರಾರ್ಥಿಸಿಕೊಂಡನಂತರ, ಆತನ ಅಹಂಕಾರವನ್ನು ದೇವರು ಪರಿಹರಿಸಿ, ಅನುಗ್ರಹಿಸಿದನೆಂಬ ಭಾರತದ ಉದ್ಯೋಗಪರ್ವದ ಕಥೆಯನ್ನು 'ವಿಹಗಮನ ಹೆಗಲೇರಿದನು' ಎಂಬುವುದರಿಂದ ಸೂಚಿಸಿತು. ॥೬॥

# ಸರ್ವವ್ಯಾಖ್ಯಾನಸಾರಸಂಗ್ರಹ

**೧. ನಾರ-**

ಅರ-ಎಂದರೆ, ದೋಷಗಳು. ದೋಷಗಳಾವುವೂ ಯಾವಾತನಲ್ಲಿ ಇಲ್ಲವೋ, ಅಂತಹ ಸಮಸ್ತದೋಷವಿದೂರನಾದ ಶ್ರೀಹರಿಯೇ **ನಾರನು**.

"ನವಿದ್ಯತೇ ಅರಾಃ ದೋಷಾಃ ಏಷಾಂತೇ ನಾರಾಃ ।
ಮುಕ್ತಾಃ ತಾನ್ ನಂದಯತೀತಿ ನಾರಂದಃ ॥

ದೋಷಶೂನ್ಯರಾದ ಮುಕ್ತರು ನಾರಾಃ. ಅವರನ್ನು ಸಂತೋಷಪಡಿಸುವುದರಿಂದ ಶ್ರೀಹರಿಗೆ ''ನಾರ''-ನೆಂತ ಹೆಸರು. ಇದು ಇನ್ನೊಂದರ್ಥ.

**೨. ನಂದವ್ರಜದ ಸ್ತ್ರೀಯರು-**

ನಂದಗೋಕುಲದಲ್ಲಿದ್ದ ಗೋಪಿಕಾಸ್ತ್ರೀಯರು ತ್ರೇತಾಯುಗದಲ್ಲಿ ಶ್ರೀಹರಿಯ ಅಂಗಸಂಗಕ್ಕಾಗಿ ಅಪೇಕ್ಷಿಸಿದ ಋಷಿಗಳು. ಶ್ರೀ ಕೃಷ್ಣಾವತಾರ ಕಾಲದಲ್ಲಿ ನಂದವ್ರಜಸ್ತ್ರೀಯರಾಗಿ ಅವತರಿಸಿದರು.

**೩. ಜಾರಕರ್ಮಕೆ-**

ಪತಿಗಳಿದ್ದರೂ, ಶ್ರೀಕೃಷ್ಣನ ಅಂಗಸಂಗದಿಂದ ಆನಂದಿಸಿದರು ನಂದವ್ರಜಸ್ತ್ರೀಯರು. ಅವರಿಗೆ '**ಜಾರತ್ವ**'-ವೆಂಬ ದೋಷಬರಲಿಲ್ಲವೇ?-ಎಂಬ ಶಂಕಾ ಬಂದರೆ, ಶ್ರೀಕೃಷ್ಣನು ಸ್ವರಮಣನು. ನಿತ್ಯಪತ್ನಿಯಾದ ಶ್ರೀಲಕ್ಷ್ಮೀದೇವಿಯಿಂದ ಆತನಿಗೆ ಆನಂದ ಉಂಟಾಗಬೇಕಿಲ್ಲ. ತನ್ನ ಭಗವದ್ರೂಪಗಳಲ್ಲಿ ತಾನು ರಮಿಸುವ ನಿತ್ಯತೃಪ್ತನು. ಆತ್ಮಕಾಮನು. ಗೋಪಿಕಾಸ್ತ್ರೀಯರ ಅಂತರ್ಯಾಮಿರೂಪಗಳಾದ ತನ್ನದೇ ಆದ ರೂಪಗಳಲ್ಲಿ ರಮಿಸಿದನು. ಬಿಂಬನಾದ ಶ್ರೀಕೃಷ್ಣನ ಕ್ರೀಡೆಯಿಂದ ಪ್ರತಿಬಿಂಬಭೂತರಾದ ಗೋಪಿಕಾಸ್ತ್ರೀಯರಿಗೆ ತೃಪ್ತಿಯಾಯಿತು. ಪತಿಯೊಡನೆ ಪತಿವ್ರತೆಯು ರಮಿಸುವಾಗಲೂ, ಪತ್ಯಂತರ್ಗತ ಭಗವದ್ರೂಪವು ಪತ್ನ್ಯಂತರ್ಗತ ಭಗವದ್ರೂಪಗಳಲ್ಲಿ ರಮಿಸುವುದು. ಇದರಿಂದ ನಂದವ್ರಜಸ್ತ್ರೀಯರಿಗೂ ಜಾರತ್ವ ದೋಷವಿಲ್ಲ. ಸಮಸ್ತದೋಷವಿದೂರನಾದ ಆಸರ್ವಜೀವರ ಪ್ರೇರಕನಿಗೆ ಜಾರತ್ವ ದೋಷವೆಲ್ಲಿಂದ ಬಂದೀತು? ಗೋಪಿಕಾಸ್ತ್ರೀಯರ ನಿಷ್ಕಾಮಕರ್ಮಕ್ಕೆ ಒಲಿದು,

ಅನುಗ್ರಹಿಸಿ, ಅವರ ಅಭೀಷ್ಟಗಳನ್ನು ಸಲ್ಲಿಸಿದನು ಅನುಪಮಚರಿತನಾದ ಶ್ರೀಕೃಷ್ಣ. !

**೪. ಅಜ-**

ಜ-ಎಂದರೆ, ಜನನ ಅಥವಾ ಉತ್ಪತ್ತಿ ಎಂದರ್ಥ, ಜನನವಿಲ್ಲದಿರುವವನು- ಅಜನಾಮಕನಾದ ಶ್ರೀಹರಿಯು. ಉತ್ಪತ್ತಿಶೂನ್ಯನಾದ ಆ ಉತ್ತಮಪುರುಷನು ನಂದಗೋಪನಿಗೆ ಸತ್ಪುತ್ರನೆನಿಸಿಕೊಂಡು ವಿರಾಜಿಸಿದನು.

**೫. ನಳಿನಸಂಭವ ಜನಕ-**

ನಳಿನ-ಎಂದರೆ, ಕಮಲ ಪುಷ್ಪ. ಸಂಭವ-ಎಂದರೆ ಶ್ರೀಹರಿಯ ನಾಭೀಕಮಲದಲ್ಲಿ ಸಂಜಾತರಾದ ಚತುರ್ಮುಖ ಬ್ರಹ್ಮದೇವರು. ಬ್ರಹ್ಮಪಿತನಾದ ಪರಬ್ರಹ್ಮನು ತಾನು ಜನನಮರಣವಿದೂರನು. ಈ ಶಬ್ದಪ್ರಯೋಗದಿಂದ, ದಾಸವರ್ಯರು ಶ್ರೀಹರಿಯು ಉತ್ಪತ್ತಿಶೂನ್ಯನೆಂದು ತಿಳಿಸುತ್ತಾರೆ. ಜೀವೋತ್ತಮರಾದ ಬ್ರಹ್ಮದೇವರೇ ಶ್ರೀಹರಿಯ ನಾಭೀಕಮಲದಲ್ಲಿ ಸಂಜಾತರಾದರು. ಬ್ರಹ್ಮದೇವರ ಉತ್ಪತ್ತಿಗೆ ಕಾರಣನಾದ ಆದಿಮೂಲನಿಗೆ ಜನನವೆಲ್ಲಿಂದ ಬಂದೀತು?

**೬. ವೈರವರ್ಜಿತ-**

ಶ್ರೀಹರಿಗೆ ಪಕ್ಷಪಾತ ಮತ್ತು ನೈರ್ಘೃಣ್ಯವೆಂಬ ದೋಷಗಳಾವುವೂ ಇಲ್ಲ. ಅವನು ವೈಷಮ್ಯ ನೈರ್ಘೃಣ್ಯರಹಿತನು. ಸಾತ್ವಿಕರಾದ ದೇವತೆಗಳಲ್ಲಿ ಸ್ನೇಹವಾಗಲೀ, ರಜೋಸ್ವಭಾವದವರಾದ ನಿತ್ಯಸಂಸಾರಗಳಲ್ಲಿ ಉದಾಸೀನ ಭಾವವಾಗಲೀ, ತಮೋಯೋಗ್ಯರಾದ ದೈತ್ಯರಲ್ಲಿ ದ್ವೇಷರೂಪವಾದ ವೈರವಾಗಲೀ ಇಲ್ಲ. ಅವರವರ ಸ್ವರೂಪಯೋಗ್ಯತಾನುಸಾರ ಬಿಂಬಕ್ರಿಯಾ - ಶದನುಸಾರಿಯಾದ ಕರ್ಮಫಲಪ್ರದನು. ದುಷ್ಟಶಿಕ್ಷಣ-ಶಿಷ್ಟ ಪರಿಪಾಲನ ಈ ಕಾರ್ಯವು ಧರ್ಮಸಂಸ್ಥಾಪಕನಾದ ಆ ಧರ್ಮಸ್ವರೂಪಿಯ ಸಹಜವಾದ ಗುಣವು. ಆದರಿಂದಲೇ, ಸತ್ಯಸಂಕಲ್ಪನು, ಲೋಕಕಂಟಕರಾದ ದೈತ್ಯರನ್ನು ನಾಶಗೈದು, ಸಜ್ಜನರನ್ನು ರಕ್ಷಿಸಿದನು.

**೨. ವಿಹಗಮನ-**

ವಿ-ಎಂದರೆ, ಆಕಾಶದಲ್ಲಿ ಸಂಚರಿಸುವ ಪಕ್ಷಿಗಳು. ವಿಹ-ಎಂದರೆ, ಅಂತಹ ಪಕ್ಷಿವರ್ಗದಲ್ಲಿ ಶ್ರೇಷ್ಠನಾದ ಗರುಡನು. ಅವನ ಹೆಗಲಯೇರಿ ಸಂಚರಿಸುವುದರಿಂದ ಗರುಡವಾಹನನಾದ ಶ್ರೀಹರಿಯು ವಿಹಗಮನನು.

**೩. ವೃಂದಾವನದೊಳಿದ್ದು -**

ನಂದಗೋಕುಲಕ್ಕೆ ಸಮೀಪದಲ್ಲಿದ್ದ ಸುಂದರಸ್ಥಳವು ವೃಂದಾವನ. ಯಮುನಾನದಿಯ ದಡದಲ್ಲಿರುವ ರಮ್ಯಸ್ಥಳ. ಅಲ್ಲಿ ಗೋಪಾಲಕರೊಡಗೂಡಿ, ಶ್ರೀಕೃಷ್ಣನು ಅವರ ಹೆಗಲೇರಿ ಕುಳಿತು, ಸವಾರಿ ಮಾಡುವುದು-ಇತ್ಯಾದಿ ನಾನಾಕ್ರೀಡೆಗಳನ್ನು ಆಡುತ್ತಾ, ಅವರನ್ನು ಸಂತೋಷಪಡಿಸುತ್ತಿದ್ದನು. ವಿಹಗಮನನಾದ ಶ್ರೀಹರಿಯು ಗೋಪಾಲಕರ ಹೆಗಲೇರಿ, ಕ್ರೀಡೆ, ಮಾಡುವುದು, ಅದೆಂತಹ ಸೋಜಿಗದ ಲೀಲಾವೈಭವ! ॥೧॥

## ಪದ್ಯ-೨

**ಮೂಲ :**

**ಶ್ರೀಕರಾರ್ಚಿತ ಪಾದಪಲ್ಲವ ।**
**ಗೋಕುಲದ ಗೊಲ್ಲತಿಯರೊಲಿಸಿದ ।**
**ಪಾಕಶಾಸನಪೂಜ್ಯ ಗೋ ಗೋವತ್ಸಗಳ ಕಾಯ್ದ ॥**
**ಓಕರಿಸಿ ಕುರುಪತಿಯ ಭೋಜನ ।**
**ಸ್ವೀಕರಿಸಿದನು ವಿದುರನೌತಣ ।**
**ಬಾಕುಲಿಕನಂದಲಿ ತೋರಿದ ಭಕ್ತವತ್ಸಲನು ॥೨॥**

**ಅವತರಣಿಕೆ**

ನಂದಗೋಕುಲದ ಗೊಲ್ಲತಿಯರಿಗೆ ಅನುಗ್ರಹಮಾಡಿದ್ದು-ಗೋ ಗೋವತ್ಸಗಳನ್ನು ಕಾಯ್ದದ್ದು- ದುರ್ಯೋಧನನ ಔತಣವನ್ನು ತಿರಸ್ಕರಿಸಿ,

ಪರಮಭಕ್ತನಾದ ವಿದುರನ ಅತಿಥ್ಯವನ್ನು ಸ್ವೀಕರಿಸಿದ ಶ್ರೀಹರಿಯ ಕಾರುಣ್ಯ ಮಹಿಮೆಯನ್ನು ತಿಳಿಸುತ್ತಾರೆ. ॥೭॥

**ಪ್ರತಿಪದಾರ್ಥ**

**ಶ್ರೀಕರಾರ್ಚಿತ** = ಶ್ರೀಲಕ್ಷ್ಮೀದೇವಿಯರ ಕರಕಮಲದಿಂದ ಪೂಜಿತವಾದ, **ಪಾದಪಲ್ಲವ** = ಚಿಗುರಿನಂತೆ ಕೋಮಲವಾದ ಪಾದದ್ವಯಗಳುಳ್ಳ, ಶ್ರೀಕೃಷ್ಣನು. **ಗೋಕುಲದ** = ನಂದಗೋಕುಲದಲ್ಲಿದ್ದ, **ಗೊಲ್ಲತಿಯರ** = ಗೊಲ್ಲಸ್ತ್ರೀಯರ. **ಒಲಿಸಿದ** = ಆನಂದಪಡಿಸಿ, ಅನುಗ್ರಹಿಸಿದನು. **ಪಾಕಶಾಸನ ಪೂಜ್ಯ** = ಇಂದ್ರದೇವರಿಂದ ಪೂಜಿತನಾಗಿ, **ಗೋ ಗೋವತ್ಸಗಳ ಕಾಯ್ದ** = ಆಕಳುಗಳು, ಕರುಗಳನ್ನು ಘೋರವಾದ ಮಳೆಯಿಂದ ಸಂರಕ್ಷಿಸಿದನು. **ಕುರುಪತಿಯ ಭೋಜನ** = ಕುರುಕುಲದರಸನಾದ ದುರ್ಯೋಧನನ. **ಭೋಜನ** = ಭೋಜನವನ್ನು. **ಹಿಕರಿಸಿ** = ನಿರಾಕರಿಸಿದವನಾಗಿ. **ವಿದುರನ** = ಭಕ್ತನಾದ ವಿದುರನು ಕೊಟ್ಟ, **ಬಿಕಣ** = ಕುದಿತ ಕ್ಷೀರವನ್ನು. **ಸ್ವೀಕರಿಸಿದನು** = ತೆಗೆದುಕೊಂಡನು. **ಭಕ್ತವತ್ಸಲನು** = ಭಕ್ತರಲ್ಲಿ ಅಂತಃಕರಣವುಳ್ಳ ಶ್ರೀಹರಿಯು, **ಬಾಕುಲಿಕನೆಂದೆನಿ** = ಕೇವಲ ದೂತನಂತೆ (ಅರ್ಜುನನಿಗೆ ಸಾರಥಿಯಾಗಿ, ಪಾಂಡವರಿಗೆ ಸೇವಕನಾಗಿ), **ತೋರಿದ** = ಲಕ್ಷ್ಮೀಪತಿಯಾದ ಹರಿಲೋಲನು ವಿಡಂಬನೆ ಮಾಡಿದನು. ॥೭॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮ ಎಂಥಾವನೆಂದರೆ, ಇನ್ನೂ ಶ್ರೀದೇವರನ್ನ ವರ್ಣಿಸುತ್ತಾರೆ. ಮನುಷತ್ವೇನ ಅವತಾರಮಾಡಿದ ಶ್ರೀಕೃಷ್ಣದೇವರು ಲಕ್ಷ್ಮೀದೇವರ ಕರದಿಂದ ಪೂಜಿತವಾದಂಥ ಪಾದಗಳುಳ್ಳವ. ಈ ಪಾದಗಳು ಕೇವಲ

ಚಿಗುರುಗಳು ಹ್ಯಾಂಗವೋ, ತದ್ವತ್ ಅವೆ. ಗೋಕುಲಗತ ಗೊಲ್ಲಸ್ತ್ರೀಯರ ಒಲಿಸೋವನಾದನು. ಅವರಿಗೆ ತನ್ನಲ್ಲಿ ಭಕ್ತಿಯುಂಟುಮಾಡೋವನಾಗಿ, ಅವರುಗಳನ್ನ ಉದ್ಧಾರಮಾಡೋವನಾದನು. ಇಂದ್ರನ ಆಜ್ಞಾನದಿಂದ, ಗೋವುಗಳು, ಕರುಗಳು, ಶ್ರೀಕೃಷ್ಣದೇವರು ಇವರುಗಳ ನಾಶಕ್ಕಾಗಿ ಮೇಘಗಳು ಮಳೆ ಸುರಿಸಿದ ಕಾಲದಲ್ಲಿ, ಗೋವರ್ಧನಪರ್ವತವನ್ನು ತನ್ನ ಎಡಗೈ ಕಿರುಬೆರಳಿನಿಂದ ಕೊಡೆಯಾಗಿ ಹಿಡಿದು, ಆಕಳು ಕರು ಗೋಪಾಲಕರು ಇವರುಗಳನ್ನ ಸಂರಕ್ಷಣೆ ಮಾಡಿ, ಇಂದ್ರನ ಅಹಂಕಾರ ಪರಿಹಾರಮಾಡಿ, ಇಂದ್ರದೇವರಿಂದ ಪೂಜಿತನಾದನು. ದುರ್ಯೋಧನ ಶ್ರೀಕೃಷ್ಣದೇವರಿಗೆ ಔತಣ ಮಾಡೋ ಉದ್ದಿಶ್ಯ, ಸರ್ವಪದಾರ್ಥಗಳನ್ನೂ ಸಿದ್ಧಮಾಡಿರಲಾಗಿ ಅವರನ್ನ ನಿರಾಕರಣ ಮಾಡಿದವನಾಗಿ, ವಿದುರನು ಕೊಟ್ಟ ಕ್ಷೀರವನ್ನ ಅಂಗೀಕಾರ ಮಾಡಿದನು. ಅಭಕ್ತರಿಗೆ ಮಹಾದುಃಖ ಕೊಡೋ ಉದ್ದಿಶ್ಯದಿಂದಲೂ. ಈ ಪ್ರಕಾರ ಶ್ರೀಪರಮಾತ್ಮ ಮಾಡೋವನಾದನೆಂತ ತಾತ್ಪರ್ಯ. ॥೭॥

## ೩. ಭಾವದರ್ಪಣ

ಶ್ರೀಕರಾರ್ಚಿತ । ಲಕ್ಷ್ಮೀಕರದಿಂದ ಪೂಜಿತ । ಪಾಕಶಾಸನ-ಇಂದ್ರ, ನೀಕರಿಸಿ — ನಿರಾಕರಿಸಿ, ಬಾಕುಳಿಕ — ಸಾರಥಿ ಅಥವಾ ದೂತ. ॥೭॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ

"ಶ್ರೀ" ಇತಿ॥ "ನೀಕರಿಸಿ" ನಿರಾಕರಿಸಿ ॥ "ಬಾಕುಲಿಕ" — ಬಹಳ. ॥೭॥

## ಕನ್ನಡಾರ್ಥ

ನೀಕರಿಸಿ = ನಿರಾಕರಿಸಿ. ಬಾಕುಲಿಕ = ಬಹಳ ॥೭॥

## ೪. ಭಾವಪ್ರಕಾಶಿಕೆ

ಶ್ರೀಪರಮಾತ್ಮನು ಭಕ್ತವತ್ಸಲನು (ಭಕ್ತಜನಪ್ರಿಯನು)-ಎಂದು ತೋರಿಸುತ್ತಾನೆ. ಸ್ವಯಂ ಲಕ್ಷ್ಮೀದೇವಿಯಿಂದ ಪೂಜಿತವಾದ ಪಾದಕಮಲವುಳ್ಳವನು. ಅಲ್ಪರಾದ ಗೊಲ್ಲಜಾತಿಯವರಾದ ಗೋಪಿಕಾಸ್ತ್ರೀಯರ ಭಕ್ತಿಗೆ ಮೆಚ್ಚಿ, ಅವರಿಗೆ ಅಂಗಸಂಗವನ್ನಿತ್ತನು. ದೇವೇಂದ್ರ ಮೊದಲಾದವರಿಂದ ಪೂಜ್ಯನಾಗಿದ್ದರೂ, ಗೋಪಾಲರ ಪ್ರೀತಿಗೋಸುಗ ಹಸುಗಳನ್ನೂ, ಕರುಗಳನ್ನೂ ಕಾಯ್ದನು. ಪಾಂಡವರಿಗೂ ದುರ್ಯೋಧನಾದಿಗಳಿಗೂ ಸಂಧಿಮಾಡಿಸುವ ನಿಮಿತ್ತದಿಂದ, ಪಾಂಡವರ ದೂತನೆಂದೆನಿಸಿ, ದುರ್ಯೋಧನನ ಮನೆಗೆ ಬರಲು, ಅವನು ಶ್ರೀಕೃಷ್ಣನಿಗೋಸ್ಕರ ಮೃಷ್ಟಾನ್ನವನ್ನು ಸಿದ್ಧಪಡಿಸಿ ಭೋಜನಕ್ಕೆ ಕರೆಯಲು-"ದ್ವಿಷದನ್ನಂನಭೋಕ್ತವ್ಯಂ ದ್ವಿಷಂತಂನೈವ ಭೋಜಯೇತ್". ದ್ವೇಷಿಗಳ ಮನೆಯಲ್ಲಿ ಭೋಜನವನ್ನು ಮಾಡಬಾರದು, ದ್ವೇಷಿಗಳನ್ನು ಭೋಜನಕ್ಕೆ ಕರೆದು ಅವರಿಗೆ ಭೋಜನವನ್ನು ಮಾಡಿಸಲೂ ಬಾರದು. ನೀನು ಪಾಂಡವರನ್ನು ದ್ವೇಷಿಸುತ್ತಿರುವೆ. ಪಾಂಡವರು ನನ್ನ ಬಂಧುಗಳು (ಭಕ್ತರು). ಅವರ ದ್ವೇಷವೇ ನನ್ನ ದ್ವೇಷವು ಮತ್ತು ನೀನು ಭೋಜನ ಮಾತ್ರಕ್ಕೆ ಕರೆಯುವೆ! ಆದರೂ ನನ್ನಲ್ಲಿ ಪ್ರೀತಿಯಿಂದ ಆದರಪೂರ್ವಕವಾಗಿ ಕರೆಯುವವನಲ್ಲ. ದಂಭಕ್ಕೆ ಕರೆಯುವೆ; ಲೋಕದಲ್ಲಿ ಒಬ್ಬರ ಮನೆಗೆ ಮತ್ತೊಬ್ಬರು ಭೋಜನಕ್ಕೆ ಬರಬೇಕಾದರೆ. ಎರಡು ವಿಧ ಕಾರಣದಿಂದ ಬರುವರು. ಪ್ರೀತಿಯಿಂದ ಆದರಿಸಿ ಕರೆದರೆ, ಅವರ ಮನೆಗೆ ಭೋಜನಕ್ಕೆ ಬರುವುದುಂಟು; ಅಥವಾ ಪರಮಾಪದ್ಗತರಾಗಿ ಪರಸ್ಥಳಕ್ಕೆ ಬಂದು ಅನ್ನ ದೊರಕದ ಕಾಲದಲ್ಲಿ ಒಬ್ಬರ ಮನೆಗೆ ಅನ್ನಕ್ಕೆ ಹೋಗುವುದುಂಟು, ಅಂತಹಾ ಎರಡು ಸಂಭವವೂ ನನಗಿಲ್ಲ. "ನಚಸಂಪ್ರಿಯಸೇರಾಜನ್,ನ ಚೈವಾಪದ್ಗತಾವಯಂ". ನನಗೆ ನಿನ್ನಲ್ಲಿ ಪ್ರೀತಿಯೂ ಇಲ್ಲ. ಅನ್ನಕ್ಕಿಲ್ಲದೆ ನಿನ್ನ ಮನೆಗೆ ಬರಬೇಕಾದ ಆಪತ್ತು ಎಂದಿಗೂ ನನಗಿಲ್ಲ. ಆದ್ದರಿಂದ. ನಿನ್ನ ಮನೆಯಲ್ಲಿ ನಾನು ಭೋಜನ ಮಾಡುವುದಿಲ್ಲವೆಂದು ಹೇಳಿ, ವಿದುರನ ಮನೆಯಲ್ಲಿ

ತನ್ನೊಂದಿಗೆ ಬಂದಿದ್ದ ಬ್ರಾಹ್ಮಣರಿಂದ ಕೂಡಿ, ಭೋಜನ ಮಾಡಿದನೆಂದು ಭಾರತ ಉದ್ಯೋಗಪರ್ವದಲ್ಲೂ ಮಹಾಭಾರತತಾತ್ಪರ್ಯನಿರ್ಣಯದಲ್ಲೂ ಸಹ ಹೇಳಿರುವರು. ಆ ಅಭಿಪ್ರಾಯವನ್ನು ದಾಸಾರ್ಯರು ಇಲ್ಲಿ ಸೂಚಿಸಿರುತ್ತಾರೆ. ಪರಮಾತ್ಮನು ಬ್ರಹ್ಮಾದಿವಂದಿತನಾಗಿ, ಪಾಂಡವರ ದೂತನೆಂದೆನಿಸಿದನು. ಆದ್ದರಿಂದ, ಭಕ್ತವತ್ಸಲನೆಂಬ ಬಿರುದು ಪರಮಾತ್ಮನಿಗೆ ಸಲ್ಲುವುದೆಂಬ ತಾತ್ಪರ್ಯ. ॥೭॥

### ಶ. ಶ್ರೀಗುರುಹೃದಯ ಪ್ರಕಾಶಿಕೆ

ಲಕ್ಷ್ಮೀಹಸ್ತದಿಂದ ಪೂಜಿತ ಪಾದಕಮಲನಾದರೂ, ಅಲ್ಪಭಕ್ತರಾದ, ಗೋಕುಲದ ಗೊಲ್ಲತಿಯರನ್ನು ದೇವರು, ಮೆಚ್ಚಿಕೊಂಡನು. ಇಂದ್ರನಿಂದ ಪೂಜಿತನಾದಾಗ್ಯೂ, ಜಾತಿಯ ನಡತೆಯನ್ನು ತಿಳಿಸುವುದಕ್ಕೋಸ್ಕರ, ಗೋವುಗಳನ್ನು ಕರುಗಳನ್ನೂ ಮೇಯಿಸಿ ರಕ್ಷಿಸಿದ. ಕುರುಪತಿ ಎಂಬ ದುರ್ಯೋಧನನು ಭೋಜನಾರ್ಥವಾಗಿ ಮಾಡಿಸಿದ್ದ ಪಕ್ವಾನ್ನಗಳನ್ನು ಓಕರಿಸಿ, ಅಂದರೆ, ಉಗುಳಿದಹಾಗೆ ತ್ಯಾಗಮಾಡಿ, ಭಕ್ತಿಯುತನಾದ ವಿದುರನ ಹಾಲು ಮೊದಲಾದ ಔತಣವನ್ನು ಸ್ವೀಕರಿಸಿ, ಬಾಕುಳಿಕನಂದದಲಿ ಅಂದರೆ, ಬಾಕರೀ ಎಂದರೆ, ಹೊಟ್ಟೆ ಮೊದಲಾದ ಅನ್ನಕ್ಕೆ ಕಷ್ಟ ಪಡುವ ಜನದಂತೆ, ವಿಡಂಬನೆ ಮಾಡಿದನು. ಆದ್ದರಿಂದ, ಭಕ್ತವತ್ಸಲ, ಭಾಕರೀ-ಎಂಬ ಶಬ್ದದ ಮೇಲೆ ರೇಫಕ್ಕೆ 'ಳ' ಕಾರಾದೇಶ ಬಂದು, ಸ್ವಭಾವಾರ್ಥವನ್ನು ಹೇಳುವ ಉಣಗ ಪ್ರತ್ಯಯದಂತೆ 'ಇಗ'-ಪ್ರತ್ಯಯ ಬಂದು-**ಬಾಕುಳಿಗ** ಎಂದು ಶಬ್ದವಾಗುತ್ತೆಂದು ತಿಳಿಯುವುದು. ॥೭॥

## ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಲಕ್ಷ್ಮೀದೇವಿಯವರು ಸದಾ ಶ್ರೀಹರಿಯ ಸೇವೆಯಲ್ಲಿ ನಿರತರಾಗಿರುವರು. ಶ್ರೀಹರಿಯ ಚಿಗುರಿನಂತೆ ಕೋಮಲನಾದ ಚರಣಾರವಿಂದಗಳನ್ನು

ನಿರಂತರವೂ ತಮ್ಮ ಕರಪದ್ಮಗಳಿಂದ ಪೂಜಿಸುತ್ತಿರುವ ಪರಮಧನ್ಯೆ ಶ್ರೀ ರಮಾ. ಇದರಿಂದ **ಶ್ರೀಕರಾರ್ಜಿತ ಪಾದಪಲ್ಲವ**-ಎಂದಿದ್ದಾರೆ— ದಾಸರಾಯರು. ಪೂರ್ಣಜ್ಞಾನಾನಂದಾತ್ಮಕ ಶರೀರವಾದ್ದರಿಂದ, ಶ್ರೀಹರಿಯು ಚಾರುಚರಣನು.

೨. ನಂದಗೋಕುಲದಲ್ಲಿದ್ದ ಸಕಲಗೊಲ್ಲಸ್ತ್ರೀಯರೂ ಹಿಂದಿನ ಅವತಾರಗಳಲ್ಲಿ ಶ್ರೀಹರಿಯ ಅಂಗಸಂಗ ಸುಖವನ್ನು ಅಪೇಕ್ಷಿಸಿದವರು. ಅವರ ಇಷ್ಟಾರ್ಥಪೂರ್ತಿಗಾಗಿ, ಕೃಷ್ಣಾವತಾರದಲ್ಲಿ ಶ್ರೀಹರಿಯು ಗೋಪಸ್ತ್ರೀಯರಿಗೆ ತನ್ನ ಅಂಗಸಂಗವನ್ನು ನೀಡಿದನು. ಅವರನ್ನು ಆನಂದಪಡಿಸಿ, ಅನುಗ್ರಹಿಸಿದ ಪರಮ ಕರುಣಾಸಾಗರನು! ಶ್ರೀಹರಿಯು ಪರಾಪೇಕ್ಷರಹಿತನು. ಸ್ವರಮಣನು. ತನ್ನ ಭಾಗವರೂಪಗಳಲ್ಲಿಯೇ ರಮಿಸುವ ರಮಾರಮಣನು. ಅವರನ್ನು ಅನುಗ್ರಹಿಸಲೋಸುಗ ತನ್ನ ಅಂಗಸಂಗವನ್ನು ನೀಡಿದನು. ಇದರಿಂದ ನಿತ್ಯತೃಪ್ತನಾದ ಪೂರ್ಣಾನಂದಮಯನಿಗೆ ಗೊಲ್ಲತಿಯರಿಂದ ಯಾವ ಸುಖಾಪೇಕ್ಷೆಯೂ ಇಲ್ಲ.

೩. ಒಮ್ಮೆ ಗೋವರ್ಧನಪರ್ವತಾಭಿಮಾನಿ ದೇವತಾಪೂಜೆಗಾಗಿ ನಂದಗೋಪಾದಿ ಸಮಸ್ತಗೋಪಾಲಕರೂ ಸಿದ್ಧವಾಗುತ್ತಿದ್ದಾಗ, ಶ್ರೀಕೃಷ್ಣನು, ತನಗೆ ಆ ಪೂಜೆ ಸಲ್ಲಿಸಬೇಕೆಂದು ಸೂಚಿಸಿದನು. ನಂದಗೋಪ ಗೋಪಿಯರಿಂದ ಪೂಜಿತನಾದ ಆ ಪರಮಪುರುಷನ ಮೇಲೆ ಇಂದ್ರನಿಗೆ ಕೋಪ ಬಂದಿತು. ಅವನು ಪರ್ಜನ್ಯದೇವತೆಗಳಿಗೆ, ನಂದಗೋಕುಲದ ಮೇಲೆ ಘೋರ ಮಳೆಗರೆಯುವಂತೆ ಆಜ್ಞಾಪಿಸಿದನು, ಅದರಂತೆ ಭಯಂಕರ ಮಳೆಯು ಬಿಸಯುಂದಾಗಿ, ಇಡೀ ಗೋಕುಲವೇ ಕೊಚ್ಚಿಹೋಗುವ ಪ್ರಸಂಗ ಒದಗಿತು. ಆಗ ಪರಮ ಸಮರ್ಥನಾದ ಶ್ರೀಕೃಷ್ಣನು ಸಮಸ್ತರಿಗೂ ಅಭಯ ನೀಡಿ, ಗೋವರ್ಧನಗಿರಿಯನ್ನು ತನ್ನ ಕೈಯ್ಯಿನ ಕಿರುಬೆರಳಿನಿಂದ ಅನಾಯಾಸವಾಗಿ ಎತ್ತಿ ಹಿಡಿದು, ಸಕಲಗೋಗೋಪರನ್ನು ಮಳೆಯಿಂದ ಸಂರಕ್ಷಿಸಿದನು. ಆಗ ಇಂದ್ರನು ತನ್ನ ಅಪರಾಧಕ್ಕೆ ಪಶ್ಚಾತ್ತಾಪಪಟ್ಟು, ಶ್ರೀಕೃಷ್ಣನಿಗೆ ಶರಣಾಗತನಾದನು. ಈ ಕಾರಣದಿಂದ **ಪಾಕಶಾಸನ ಪೂಜ್ಯ**-ಎಂದಿದ್ದಾರೆ. ಆ ಸುರ

ಪತಿಯಾದ ಇಂದ್ರನಿಂದ ಪೂಜಿತನಾದ ಸುರೋತ್ತಮನು ನಂದಗೋಕುಲದ ಗೋವುಗಳನ್ನೂ, ಕರುಗಳನ್ನೂ ಕಾಯ್ದಿದ್ದು ಸೋಜಿಗದ ಸಂಗತಿಯಲ್ಲವೇ? ಇದರಿಂದ, ಗೋಬ್ರಾಹ್ಮಣಹಿತಸಂರಕ್ಷಕನಾದ ಆ ಬ್ರಾಹ್ಮಣ್ಯದೇವನ ಕರುಣಾತಿಶಯು ಅಭಿವ್ಯಕ್ತವಾಗುವುದು.

೪. ರಾಯಭಾರಕ್ಕಾಗಿ, ಹಸ್ತಿನಾವತಿಗೆ ಶ್ರೀಕೃಷ್ಣ ಆಗಮಿಸಿದ ಪ್ರಸಂಗ. ದುರ್ಯೋಧನನು ದುರುದ್ದೇಶದಿಂದ, ಸಕಲ ಭಕ್ಷ್ಯಭೋಜ್ಯಗಳನ್ನು ಮಾಡಿ, ಶ್ರೀಕೃಷ್ಣನನ್ನು ಔತಣಕ್ಕೆ ಆಮಂತ್ರಿಸಿದನು. ಪಾಂಡವದ್ವೇಷಿಯಾದ ಸುಯೋಧನನ ಆಮಂತ್ರಣವನ್ನು ನಿರಾಕರಿಸಿ, ಪರಮಭಕ್ತನಾದ ವಿದುರನ ಬಡಕುಟೀರಕ್ಕೆ ತೆರಳಿ, ಅಲ್ಲಿ ಅವನು ಭಕ್ತಿಯಿಂದ ನೀಡಿದ ಕುಡಿತಿ ಹಾಲನ್ನು ಸ್ವೀಕರಿಸಿ, ಅವನನ್ನು ಅನುಗ್ರಹಿಸಿದ ಆ ಅನಂತ ಮಹಿಮಾಸಂಪನ್ನನು ಪಾಂಡವರ ಮನೆಯ ಸೇವಕನಾಗಿ, ಅವರ ದೌತ್ಯಮಾಡಿದ ವಿಡಂಬನ ಪರಮಾದ್ಭುತ. । ॥೭॥

## ಪದ್ಯ-೮

**ಮೂಲ :**

**ಪುತ್ರನೆನಿಸಿದ ಗೋಪಿದೇವಿಗೆ ।**
**ಭರ್ತೃವೆನಿಸಿದ ವ್ರಜದ ನಾರಿಯ ।**
**ರುತ್ರ ಲಾಲಿಸಿ ಪರ್ವತವ ನೆಗಹಿದ ಕೃಪಾಸಾಂದ್ರ ॥**
**ಶತ್ರು ತಾಪನ ಯಜ್ಞಪುರುಷನ ।**
**ಪುತ್ರಿಯರ ತಂದಾಳ್ದ ತ್ರಿಜಗ ।**
**ದ್ಧಾತ್ರ ಮಂಗಳ ಗಾತ್ರ ಪರಮಪವಿತ್ರ ಸುರಮಿತ್ರ ॥೮॥**

**ಅವತರಣಿಕೆ :**

ಗೋಪೀದೇವಿಗೆ ಸುಕುಪುತ್ರನಾಗಿ, ಗೋಕುಲಸ್ತ್ರೀಯರಿಗೆ ಆನಂದಪ್ರದನಾಗಿ, ಗೋವರ್ಧನೋದ್ಧಾರಿಯಾಗಿ, ಅಗ್ನಿಪುತ್ರಿಯರಾದ ೧೬,೦೦೦ ಮಂದಿ ಕನ್ಯೆಯರನ್ನು ಲಗ್ನಮಾಡಿಕೊಂಡ ಆ ಮಂಗಲಮೂರ್ತಿಯ ಮಹಾತ್ಮ್ಯೆಯನ್ನು ವರ್ಣಿಸುತ್ತಾರೆ. ॥೮॥

**ಪ್ರತಿಪದಾರ್ಥ :**

**ಗೋಪೀದೇವಿಗೆ** = ನಂದಗೋಪನ ಪತ್ನಿ ಯಶೋದಾದೇವಿಗೆ. **ಪುತ್ರನೆನಿಸಿದ** = ಸುಕುಮಗನೆಂದು ಖ್ಯಾತನಾದ. **ವ್ರಜದನಾರಿಯರ** = ಗೋಕುಲದ ಗೋಪಿಕಾಸ್ತ್ರೀಯರ, **ಉತ್ರ ಲಾಲಿಸಿ** - ಪರಮಾತ್ಮನೇ ಪತಿಯಾಗಬೇಕೆಂದು ವ್ರತಾದಿಗಳ ದ್ವಾರಾ ಪ್ರಾರ್ಥಿಸಿದ ವಿಜ್ಞಾಪನೆಯನ್ನು ಕೇಳಿ. **ಭರ್ತೃನೆನಿಸಿ** = ಅವರಿಗೆ ಪತಿ ಎನಿಸಿಕೊಂಡ. **ಕೃಪಾಸಾಂದ್ರ** - ದಯಾಘನನಾದ ಶ್ರೀಕೃಷ್ಣನು. **ಪರ್ವತವ ನೆಗೆದಿಹ** = ಗೋವರ್ಧನ ಗಿರಿಯನ್ನು ಕೊಡೆಯಂತೆ ಎತ್ತಿಹಿಡಿದು, ಸಕಲಗೋಪ ಗೋಪಾಲಕರನ್ನು ಮಳೆಯ ಬಾಧೆಯಿಂದ ಸಂರಕ್ಷಿಸಿದನು. **ಶತೃತಾಪನ** = ಶತ್ರುಗಳನ್ನು ದಹಿಸುವ. **ಯಜ್ಞಪುರುಷನ** = ಅಗ್ನಿದೇವರ, **ಪುತ್ರಿಯರ** = ಪುತ್ರಿಯರಾದ ಋಷಿಗಳು ರಾಮಾವತಾರದಲ್ಲಿ ವರಪಡೆದು, ಶ್ರೀಕೃಷ್ಣಾವತಾರದಲ್ಲಿ ಸ್ತ್ರೀಯರಾಗಿ ಜನಿಸಿದ ಅಗ್ನಿದೇವರ ಪುತ್ರಿಯರನ್ನು, **ತಂದು** = ನರಕಾಸುರನನ್ನು ಸಂಹರಿಸಿ, ಅವನ ಬಂಧನದಿಂದ ಬಿಡಿಸಿ ತಂದು, **ಆಳ್ದ** = ಅವರನ್ನು ವಿವಾಹ ಮಾಡಿಕೊಂಡ. **ತ್ರಿಜಗದ್ಧಾತ್ರ** = ತ್ರಿಲೋಕಗತವಾದ ಇಡೀ ಬ್ರಹ್ಮಾಂಡವನ್ನು ಧರಿಸಿದ. **ಮಂಗಳಗಾತ್ರ** = ಶುಭಪೂರ್ಣ ಲಕ್ಷಣೋಪೇತವಾದ ದೇಹವುಳ್ಳ. **ಪರಮಪವಿತ್ರ** = ಅತ್ಯಂತ ಪವಿತ್ರ ವಸ್ತುವೆಂದೆನಿಸಿದ, **ಸುರಮಿತ್ರ** = ದೇವತೆಗಳ ಹಿತೈಷಿಯಾದ ಶ್ರೀಪರಮಾತ್ಮನು. ॥೮॥

# ವ್ಯಾಖ್ಯಾನಗಳು

## ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮನ ಮಹಿಮಾ ಇನ್ನೂ ಹೇಳತಾರೆ. ಹದಿನಾಲ್ಕು ಲೋಕವನ್ನು ವಿರಾಡ್ರೂಪದಿಂದ ಧರಿಸಿದಂಥಾ, ಅದಕ್ಕೆ ಆಧಾರಭೂತ ವಾದಂಥಾ, ಶುಭಕರವಾದ ಪೂರ್ಣಲಕ್ಷಣೋಪೇತವಾದ ಶರೀರವುಳ್ಳಂಥ ಅತ್ಯಂತ ಪವಿತ್ರನಾದಂಥ ಮತ್ತು ಪರಿಶುದ್ಧರಾದ ದೇವತೆಗಳಿಗೆ ಸ್ನೇಹಿತ ನಾದ ಶ್ರೀಪರಮಾತ್ಮ, ಗೋಪೀದೇವೇರಿಗೆ ಪುತ್ರತ್ವೇನ ಅವತಾರಮಾಡಿ ಮಗನೆನಿಸಿದ. ಮತ್ತು ಗೋಪೀದೇವೇರಲ್ಲಿ ಇರೋರಿಗೂ ಪುತ್ರನಾಗಿ, ಬಾಲಕರೂಪದಿಂದ ಬಾಲಕರೋಪಾದಿಯಲ್ಲಿದ್ದು, ಪುತ್ರನೆನಿಸೋವನಾದ. ಶತ್ರುಗಳ ಸಮೀಪದಲ್ಲಿ ಇದ್ದಾಗ್ಯೂ, ಅವರನ್ನ ದಹಿಸೋಪಾದಿಯಲ್ಲಿ ಇರತಕ್ಕವ. ಗೋಕುಲದಲ್ಲಿರತಕ್ಕ ಸ್ತ್ರೀಯರು ಪರಮಾತ್ಮನೇ ಪತಿಯಾಗಬೇಕೆಂದು, ವ್ರತಾದಿಗಳು ಮಾಡಿ, ಪರಮಾತ್ಮನ ಪ್ರಾರ್ಥಿಸೋರಾದರು. ಅಂಥಾ ವಿಜ್ಞಾಪನೆಯನ್ನು ಕೇಳಿ, ಅವರಿಗೆ ಪತಿ ಎಂತ ಕರಸಿಕೊಂಡ. ದೇವೇಂದ್ರನ, ಆಜ್ಞಾದಿಂದ ಸುರಿಸಲ್ಪಟ್ಟ ವರ್ಷಧಾರಾದಿಂದ ಗೋವುಗಳು, ಗೋಪಾಲಕರು ಮೊದಲಾದವರಿಗೆ ಬಂದ ಭಯಪರಿಹಾರಮಾಡೋ ಉದ್ದೇಶದಿಂದ ಗೋವರ್ಧನ ಪರ್ವತವನ್ನು ಕೊಡೆಯೋಪಾದಿಯಲ್ಲಿ ಹಿಡಿಯೋನಾದ. ಅಗ್ನಿದೇವರ ಪುತ್ರಿಯರಾದ, ಋಷಿಗಳು ರಾಮಾವತಾರದಲ್ಲಿ ವರಪಡೆದು, ಕೃಷ್ಣಾವತಾರದಲ್ಲಿ ಸ್ತ್ರೀಯರಾಗಿ ಜನಿಸಿದ' ಇಂಥಾ ಅಗ್ನಿದೇವರ ಪುತ್ರಿಯರ. ನರಕಾಸುರಪಟ್ಟಣದಲ್ಲಿ ನಿರ್ಬಂಧದಲ್ಲಿ ಸಿಲುಕಿ, ದುಃಖಪಡತಾ ಇದ್ದ ಸ್ತ್ರೀಯರ ತಂದು, ಅವರನ್ನ ವಿವಾಹ ಮಾಡಿಕೊಂಡು, ಅವರ ಸಂಗಡ ಕ್ರೀಡಾ ಮಾಡೋವನಾದ. ಈ ಪ್ರಕಾರ ಕೃಷ್ಣಾವತಾರ ಮಾಡಿ, ಅನೇಕ ಮಹಾ ಮಹಿಮಾ ತೋರಿಸಿ, ತನ್ನ ಭಕ್ತರನ್ನು ಉದ್ಧಾರಮಾಡಿದ ಕಥೆಯಿಂದ, ತನ್ನ ಭಕ್ತರಲ್ಲಿ ಪರಮಾಂತಃಕರಣವುಳ್ಳವನೆಂದೂ, ಭಕ್ತರು ಉಪಾಸನೆ ಮಾಡಿ

ಉದ್ಧಾರವಾಗಬೇಕೆಂದು ತನ್ನ ಲೀಲಾಪ್ರದರ್ಶನಮಾಡಿದ ಶ್ರೀಪರಮಾತ್ಮನ, ಮಹಿಮಾ ಹೇಳೋಣವಾಗಿದ್ದಾರೆಂತ-ತಾತ್ಪರ್ಯ. ॥೮॥

## ೩. ಭಾವದರ್ಪಣ

ಪುತ್ರ! ಪರ್ವತ ನೆಗೆದಿಹ—ಗೋವರ್ಧನ ಪರ್ವತ ಎತ್ತಿದ. ಶತ್ರು ಸಂಹಾರಕ. ಜಗದ್ಧಾತ್ರ—ಜಗದ್ರಕ್ಷಕ ಎಂತರ್ಥ. ॥೮॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

('ಉತ್ರ'—ಉತ್ತರ) "ಶತ್ರುತಾಪನ" "ಓಂ॥ ಅಯಮು ತ್ವಾ ವಿಚರ್ಷಣೀ ಜನೀರಿವಾಭಿಸಂವೃತಃ ಪ್ರಸೋಮ ಇಂದ್ರ ಸರ್ಪತು ತುವಿಗ್ರೀವೋ ವಪೋದರಃ ಸುಬಾಹುರಂಧಸೋ ಮದೇ ॥ಓಂ॥" ಇತ್ಯೂನ್ ವೃತ್ರಾದೀನ್ ತಾಪಯತಿ, ಇತಿ ತತ್ ಸಂತಾಪನಃ ತಥೋಕ್ತಃ। "ಅಗ್ನಿಪುತ್ರಾ ಮಹಾತ್ಮಾನಃ ತಪಸಾ ಸ್ತ್ರೀತ್ವಮಾಪಿರೇ" ॥ ಇತ್ಯುಕ್ತೇಃ॥ "ಅಳ್ದ"-ಅಳಿದ॥ "ಧಾತ್ರ"-ಧಾರಕಃ ಪೋಷಕಶ್ಚ. ॥೮॥

## ಕನ್ನಡಾರ್ಥ

"ಶತ್ರುತಾಪನ" ವೃತ್ರ ಮುಂತಾದ ಶತ್ರುಗಳನ್ನು ಸಂತಾಪಗೊಳಿಸುವವನು,

ಮಹಾಭಾಗ್ಯವಂತರಾದ ಅಗ್ನಿಪುತ್ರರು ತಪಸ್ಸನ್ನಾಚರಿಸಿ, ಸ್ತ್ರೀಯರಾದರು. ಅವರೇ ಗೋಪಿಕಾಸ್ತ್ರೀಯರು॥-ಎಂದು ಪ್ರಮಾಣದಲ್ಲಿ ಹೇಳಲಾಗಿದೆ. ॥೮॥

## ೨. ಭಾವಪ್ರಕಾಶಿಕೆ

ನಂದಗೋಪ ಯಶೋದೆಯರಿಗೆ ಮಗನೆಂದು ಲೋಕಪ್ರಖ್ಯಾತನಾದನು. ಗೋಪಿಕಾಸ್ತ್ರೀಯರಿಗೆ ಪತಿ ಎನಿಸಿದನು. ಅಥವಾ ನೀಲಾ ಎಂಬ ಗೋಪಕನ್ನಿಕೆಯ ಪತಿ ಎನಿಸಿದನು. ಯದ್ವಾ, ಈ ಪದ್ಯದಲ್ಲಿ ವ್ರಜದ ನಾರಿಯ ಉಕ್ತಿಲಾಲಿಸಿ ಭರ್ತೃವೆನಿಸಿದ ಎಂಬುವುದರಿಂದ ಗೋಪಿಕಾ ಸ್ತ್ರೀಯರ ಪ್ರಾರ್ಥನೆಯನ್ನು ಲಾಲಿಸಿ, ಅವರಿಗೆ ಪತಿ ಎನಿಸಿದನೆಂಬ ಅರ್ಥವು ತೋರುವುದು. ಆದರೆ, ಗೋಪಿಕಾಸ್ತ್ರೀಯರಿಗೆ ಪತಿಗಳು ಬೇರೆ ಇರುವುದರಿಂದ, ಇವನನ್ನು ಜಾರನೆಂದು ಹೇಳಬಹುದೇ ಆಗಲಿ, ಭರ್ತೃ ಎಂದಾಗಲಿ, ಪತಿ ಎಂದಾಗಲಿ ಹೇಳಲು ಸಾಧ್ಯವಿಲ್ಲ. ಏಕೆಂದರೆ, ಭರಣಾದ್ಭರ್ತಾ ಪಾಲನಾತ್ಪತಿಃ - ಎಂಬ ನಿರ್ವಚನದಿಂದ, ಮನೆಯಲ್ಲೇ ಇಟ್ಟುಕೊಂಡು ಅನ್ನಾದಿಗಳನ್ನು ಕೊಟ್ಟು ಸಂರಕ್ಷಣೆ ಮಾಡುವವನು ಮಾತ್ರ ಭರ್ತೃ ಎಂತಲೂ, ಪತಿ ಎಂತಲೂ. ಎನಿಸುವನು. ಮುಖ್ಯತಾತ್ಪರ್ಯ ಯಾವಾತೆಯನ್ನು ಮದುವೆಮಾಡಿಕೊಂಡನೋ ಆತನೇ ಪತಿ ಎಂದು ಹೇಳಬಹುದು. ಗೋಪಿಯರೆಲ್ಲರೂ ಮದುವೆಯಾದವರಲ್ಲ. ಆದ್ದರಿಂದ ಈ ಪದ್ಯದಲ್ಲಿರುವ "ಭರ್ತೃವೆನಿಸಿದ ವ್ರಜದ ನಾರಿಯುರುಕ್ತಿ ಲಾಲಿಸಿ"- ಎಂಬಲ್ಲಿ ರ-ಲ-ಳ ಈ ಅಕ್ಷರಗಳಿಗೆ ಭೇದವಿಲ್ಲೆಂದು ಭಾಗವತಾದಿಗಳಲ್ಲಿ 'ತಪೋಕರಾಟಂ'-ಎಂಬ ವಾಕ್ಯದಿಂದ, ಲಲಾಟ ಎಂಬ ವಾಕ್ಯಕ್ಕೆ ಬದಲು ರಲಾಟವೆಂದು ಪ್ರಯೋಗ ಮಾಡಿರುವರು. ಅದರಂತೆ, ಇಲ್ಲೂ ನಾರಿಯುರುಕ್ತಿ ಎಂಬಲ್ಲಿ ರು-ಎಂಬ ಅಕ್ಷರಕ್ಕೆ ಳು-ಎಂದು ಅರ್ಥ ಮಾಡಿಕೊಳ್ಳಬಹುದು. ನಾರಿಯುಳುಕ್ತಿ- ಎಂದು ಪದ ಮಾಡುವುದರಿಂದ, ವ್ರಜನಾರಿಯರ ಪೈಕಿ ಒಬ್ಬಳಿಗೆ ಪತಿಯಾಗಿರುವನೆಂದು ಅರ್ಥವು ದೊರಕುವುದು. ಆ ಒಬ್ಬಾಕೆಯು ನೀಲಾ ಎಂಬ ಹೆಸರುಳ್ಳ ಗೋಪಕನ್ನಿಕೆ- ಎಂದು ನಿರ್ಣಯಾದಿಗಳಲ್ಲಿ ಸಿದ್ಧಮಾಡಿರುವರು. ಮಹಾಭಾರತ ತಾತ್ಪರ್ಯ ನಿರ್ಣಯದ ೧೩ನೆಯ ಅಧ್ಯಾಯದಲ್ಲಿ- 'ಸಪ್ತೋಕ್ಷಣೋಽತಿ ಬಲಿನೋಽದಮಯುತಾನನದಪ್ಯಾನ್ ಸರ್ವಾನ್ ಗಿರೀಶವರತೋ ದಿತಿಜ ಪ್ರಧಾನಾನ್'॥ ಪತ್ನ್ಯಾಸುತಾಮಲಭದಸು ವಿಘುಯ್ಯ ಶೋಕಾ ಭ್ರಾತುಃ ಸಕುಂಭಕ ಸಮಾಹ್ವಯನೋಽಥನೀಲಾಂ ॥೪೬॥ ಯಾ

ಪೂರ್ವಜನ್ಮನಿ ತಪಃ ಪ್ರಥಮೈವಭಾರ್ಯಾ ಭೂಯಾಸಮಿತ್ಯಚರದಸ್ಯಹಿ ಸಂಗಮೋಮೇ॥ ಸ್ಯಾತ್ಕೃಷ್ಣ ಜನ್ಮನಿ ಸಮಸ್ತವರಾಂಗನಾಭ್ಯಃ ಪೂರ್ವಂತ್ವಿತಿ ಸ್ಮತದಿಮಾಂ ಪ್ರಥಮಂಸಲೇಭೇ ॥೫೦॥ ಅಗ್ರೇದ್ವಿಜತ್ವತ ಉಪಾವಹದೇವ ನೀಲಾಂಗೋಪಾಂಗನಾ ಅಪಿ ಪುರಾವರ ಮಾಪಿರೇಯತ್॥ ಸಂಸ್ಕಾರತಃ ಪ್ರಥಮಮೇವ ಸುಸಂಗಮೋನೋ ಭೂಯಾತ್ತ್ವಮೇತಿ ಪರಮಾಪ್ಸರಸಃ ಸ್ವರಾಯಾಃ॥೫೧॥ ಈ ಶ್ಲೋಕಗಳ ಸಾರಾಂಶವೆಂದರೆ, ಯಶೋದಾದೇವಿಗೆ ಅಣ್ಣನಾದ ಕುಂಭಕನೆಂಬ ಗೋಪಾಲಕನಿಗೆ ನೀಲಾ ಎಂಬ ಕನ್ನಿಕೆ ಇದ್ದಳು. ಆ ಕುಂಭಕನು ಆಕೆಯ ರೂಪ ಸೌಂದರ್ಯ ಗುಣಾತಿಶಯಗಳಿಗೆ ತಕ್ಕ ವರನನ್ನು ಪರೀಕ್ಷಿಸುವುದಕ್ಕಾಗಿ, ಅಡವಿಯಲ್ಲಿ ಸ್ವೇಚ್ಛೆಯಾಗಿ ಮೇಯುತ್ತಿದ್ದ ಏಳು ಗೂಳಿಗಳನ್ನು ಹಿಡಿದು, ಸ್ವಾಧೀನ ಮಾಡಿಕೊಡುವವನಿಗೆ ತನ್ನ ಮಗಳನ್ನು ಕೊಡುವುದಾಗಿ ಪ್ರಸಿದ್ಧಪಡಿಸಿದನು. ಆ ಏಳು ಗೂಳಿಗಳು ಸಾಧಾರಣವಾದವುಗಳಲ್ಲ, ರುದ್ರದೇವರ ವರದಿಂದ ಅವಧ್ಯರಾದ ಮಹಾ ದೈತ್ಯರೇ ಗೂಳಿಗಳ ರೂಪದಿಂದ ಇದ್ದರು. ಅವುಗಳ ಇದಿರಿನಲ್ಲಿ ಯಾರೂ ನಿಲ್ಲುತ್ತಿರಲಿಲ್ಲ. ಅಂತಹಾ ಗೂಳಿಗಳನ್ನು ಹಿಡಿಯಲು ಯಾರಿಂದಲೂ ಸಾಧ್ಯವಾಗದಿರಲು, ಶ್ರೀಕೃಷ್ಣನು ಆರು ವರ್ಷದ ಪ್ರಾಯದಲ್ಲಿರುವಾಗಲೇ, ಆ ಗೂಳಿಗಳನ್ನು ಹಿಡಿದು, ಸಂಹಾರಮಾಡಿ ಆ ನೀಲೆ ಎಂಬ ಕನ್ನಿಕೆಯನ್ನು ಮದುವೆ ಮಾಡಿಕೊಂಡನು. ಈಕೆಯು ಪೂರ್ವಜನ್ಮದಲ್ಲಿ ತಪಸ್ಸು ಮಾಡಿ, ನೀನು ಕೃಷ್ಣಾವತಾರದಲ್ಲಿ ಉಪನಯನವಾಗುವುದಕ್ಕೆ ಮುಂಚಿತವಾಗಿ, ಮತ್ತಾರನ್ನೂ ಮುಟ್ಟುವುದಕ್ಕೆ ಮುಂಚೆ ನನ್ನನ್ನು ಮದುವೆಯಾಗಬೇಕೆಂದು ವರ ಬೇಡಿದಳು. ಅದರಂತೆ, ಪರಮಾತ್ಮನು ವರ ಕೊಟ್ಟನು. ಅದನ್ನು ಸತ್ಯ ಮಾಡುವುದಕ್ಕಾಗಿ, ಮೊದಲು ನೀಲೆಯನ್ನು ಮದುವೆ ಮಾಡಿಕೊಂಡನು. ಇದೆ ನೀಲೆಯು, ನಗ್ನಜದ್ರಾಜನ ಮಗಳಾಗಿ ಹುಟ್ಟಿ, ಅಲ್ಲೂ ಇದೇ ರೀತಿಯಾಗಿ ಸ್ವಯಂವರದಲ್ಲಿ ಕೃಷ್ಣನಿಗೆ ಪತ್ನಿಯಾದಳು. ಅವಳ ಮದುವೆಯಾದ ಮೇಲೆ, ಆನೀಲೆಯಲ್ಲಿ ಈ ನೀಲೆಯೂ ಸೇರಿಹೋದಳು, ಅಂತು, ಕೃಷ್ಣನ ಅಷ್ಟಮಹಿಷಿಯರ ಪೈಕಿ ಪ್ರಸಿದ್ಧೆಯಾದ ನೀಲಾ ಎಂಬಾಕೆಯೇ ಗೋಪಕನ್ನಿಕೆ

ಎಂದು ತಿಳಿಯಬೇಕು. ದೇವೇಂದ್ರನಿಗೆ ಅಹಂಕಾರ ಬಂದಿರಲು. ಅದನ್ನು ಪರಿಹರಿಸುವುದಕ್ಕಾಗಿ. ಇಂದ್ರಯಾಗವನ್ನು ಮಾಡುವುದಕ್ಕಾಗಿ ಪ್ರಯತ್ನ ಮಾಡುತ್ತಿದ್ದ ಗೋಪಾಲಕರನ್ನು ತಡೆದು. ಗಿರಿಯಜ್ಞವೆಂಬ ಪಟ್ಟಕ್ಕೆ ಬಲಿ ರೂಪವಾದ ಯಾಗವನ್ನು ಮಾಡಿಸಲು. ಇಂದ್ರನು ಕೋಪದಿಂದ ಗೋಕುಲದ ನಾಶಕ್ಕಾಗಿ ಮಳೆ ಕರೆಯಲು ಗೋವರ್ಧನ. ಪರ್ವತವನ್ನು ಕೊಡೆಮಾಡಿ. ಗೋವುಗಳನ್ನು, ಗೋಪಾಲಕರನ್ನೂ ಸಂರಕ್ಷಿಸಿದನು. ಅಗ್ನಿದೇವರ ಮಕ್ಕಳಾದ ೧೬ ಸಹಸ್ರದ ೧೦೦ ಮಂದಿ ಋಷಿಗಳು ತಪಸ್ಸು ಮಾಡಿ, ಕೃಷ್ಣನ ಅಂಗ ಸಂಗಕ್ಕಾಗಿ ಅಪ್ಸರಸ್ತ್ರೀಯರಾಗಿ ಹುಟ್ಟಿ. ಕೆಲವು ಕಾಲವಿದ್ದು. ರಾಜಕನ್ನಿಕೆಯರಾಗಿ ಹುಟ್ಟಿ. ನರಕಾಸುರನ ಕೈ ಸೇರಿ ಅವನ ಮನೆಯಲ್ಲಿ ಸೆರೆಯಲ್ಲಿದ್ದರು. ಕೃಷ್ಣನು ನರಕಾಸುರನನ್ನು ಕೊಂದು, ಅವರನ್ನು ಮದುವೆ ಮಾಡಿಕೊಂಡನು. ಅದೇ ಅಭಿಪ್ರಾಯವನ್ನೇ ದಾಸಾರ್ಯರು ಇಲ್ಲಿ ಹೇಳಿದರು. ೧೬,೧೦೦ ಮಂದಿ ಹೆಂಡತಿಯರನ್ನು ರಕ್ಷಿಸಿದನೆಂಬುದು- ಆಶ್ಚರ್ಯವಲ್ಲವೆಂದು ತೋರಿಸುವುದಕ್ಕಾಗಿ. ತ್ರಿಜಗದ್ಭಾತ್ರನೆಂದರು. ಮೂರುಲೋಕವನ್ನೇ ಪಾಲಿಸುವವನಿಗೆ ೧೬ ಸಾವಿರ ಸಂಖ್ಯಾ ಉಳ್ಳವರನ್ನು ಪಾಲಿಸುವುದೇನಾಶ್ಚರ್ಯ? ಉಪನಯನಕ್ಕೆ ಮುಂಚೆಯೇ, ನೀಲೆಯನ್ನು ಮದುವೆಯಾದನೆಂತಲೂ. ಗೋಪಿಕಾಸ್ತ್ರೀಯರಿಗೆ ಜಾರನಾದನೆಂತಲೂ ಹೇಳಿದುದರಿಂದ. ಪರಮಾತ್ಮನಿಗೆ ದೋಷ ಸಂಭವ ಉಂಟೋ-ಹೇಗೆ. ಎಂಬ ಸಂಶಯವನ್ನು ಪರಿಹರಿಸುವುದಕ್ಕಾಗಿ. ಮಂಗಳಗಾತ್ರ. ಪರಮಪವಿತ್ರ ಎಂದು ಹೇಳಿದರು. ಸುರಮಿತ್ರ- ಎಂಬ ಪದದಿಂದ ದೇವತೆಗಳು ದೇವಸ್ತ್ರೀಯರು ಪರಮಾತ್ಮನಿಗೆ ಪ್ರಿಯರು. ಆದುದರಿಂದ, ಗೋಪಕನ್ನಿಕೆಯರೆಲ್ಲರೂ ಅಪ್ಸರಸ್ತ್ರೀಯರಾದುದರಿಂದ, ಅವರ ತಪಸ್ಸಿಗೆ ಮೆಚ್ಚಿ, ಪೂರ್ವದಲ್ಲಿ ಅವರಿಗೆ ಕೊಟ್ಟು, ವರವನ್ನು ಸತ್ಯಮಾಡುವುದಕ್ಕಾಗಿ, ಬಾಲ್ಯದಲ್ಲೇ ಅವರನ್ನು ಪರಿಗ್ರಹಿಸಿದನೇ ಹೊರತು, ತನ್ನ ಇಂದ್ರಿಯ ಪ್ರೀತಿಗಾಗಲ್ಲವೆಂದು ಸೂಚಿಸಿರುವರು. ||೮||

## ೫. ಶ್ರೀ ಗುರುಹೃದಯ ಪ್ರಕಾಶಿಕೆ

ತಪಃಫಲ ಕೊಡುವ ನಿಮಿತ್ತ, ಮಗನಲ್ಲದಿದ್ದರೂ, ಗೋಪಿದೇವಿಗೆ

ಪುತ್ರನೆನಿಸಿಕೊಂಡನು. ವ್ರಜವೆಂಬ ಗೋಕುಲದ ಸ್ತ್ರೀಯರಿಗೆ ಅವರವರ ಕಾಮಪೂರ್ಣಾರ್ಥವಾಗಿ ಪತಿ ಎನ್ನಿಕೊಂಡನು. ಗೋಪಾಲಕಾದಿ ಜನರ ಉತ್ತರ ದಂಬ ಪ್ರಾರ್ಥನೆಯನ್ನು ಲಾಲಿಸಿ, ಗೋವರ್ಧನಪರ್ವತವನ್ನು ಎತ್ತಿ ಗೋಕುಲವನ್ನು ರಕ್ಷಿಸಿದನು. ಶತ್ರುವಾದ ನರಕಾಸುರ ಮೊದಲಾದವರಿಗೆ ತಾಪನ ಅಂದರೆ, ಸಂಹಾರ ಸಂತಾಪ ಕೊಟ್ಟು, ಯಜ್ಞಪುರುಷನೆಂಬ ಅಗ್ನಿದೇವರ ಪುತ್ರಿಯರಾದ ಹದಿನಾರು ಸಾವಿರದ ನೂರು ಸ್ತ್ರೀಯರನ್ನು ತಂದು. ಮದುವೆಯಾಗಿ ಆಳಿದ. ಆದ್ದರಿಂದ, ತ್ರಿಜಗದ್ಧಾರಕನು. ಶುಭಸ್ವರೂಪನು ಪರಮಪಾವನನು. ದೇವರಕ್ಷಕನು. ಕೃಪಾಸಾಂದ್ರನು. ॥೮॥

## ಸರ್ವವ್ಯಾಖ್ಯಾನಸಾರ ಸಂಗ್ರಹ

೧. **ಗೋಪಿದೇವಿಯು** ಗೋಕುಲಾಧಿಪತಿಯಾದ ನಂದಗೋಪನ ಪತ್ನಿ. ಯಶೋದಾ- ಎಂತಲೂ ಆಕೆಗೆ ಹೆಸರು. ಅವಳ ತಪಃಫಲವಾಗಿ ಶ್ರೀಮನ್ನಾರಾಯಣನು ಶ್ರೀಕೃಷ್ಣಾವತಾರದಲ್ಲಿ ಅವಳಿಗೆ ಸಾಕುಪುತ್ರನೆನಿಸಿದನು. ದೇವಕೀ ಶ್ರೀಕೃಷ್ಣನಿಗೆ ಜನ್ಮವಿತ್ತ ತಾಯಿ. ಆಕೆಯಲ್ಲಿ ಸ್ವಯಂ ಪ್ರಕಟನಾದನು.

೨. ವ್ರಜ-ವೆಂದರೆ, ನಂದಗೋಕುಲ. ವ್ರಜದ ನಾರಿಯರೆಲ್ಲಾ ಹಿಂದೆ ಋಷಿಗಳಾಗಿದ್ದು, ರಾಮಾವತಾರದಲ್ಲಿ, ಶ್ರೀಹರಿಯ ಅಂಗಸಂಗ ಸುಖವನ್ನು ಪ್ರಾರ್ಥಿಸಿದ್ದರು. ಏಕಪತ್ನೀವ್ರತಸ್ಥನಾಗಿದ್ದ ಶ್ರೀರಾಮಚಂದ್ರಮೂರ್ತಿಯು ಅವರ ಕಾಮನೆಯನ್ನು ಕೃಷ್ಣಾವತಾರದಲ್ಲಿ ಪೂರೈಸುವೆನೆಂದು ಅಭಯವನಿತ್ತಿದ್ದನು. ಅದರಂತೆ, ಆ ಋಷಿಗಳೆಲ್ಲರೂ ಸ್ತ್ರೀಯರಾಗಿ ಅವತರಿಸಿದರು. ಆ ವ್ರಜದ ನಾರಿಯರಿಗೆ ಪತಿ (ಭರ್ತೃವೆನಿಸಿದ) ಯಾಗಿ, ಅವನ ಅಂಗಸಂಗದ ದ್ವಾರಾ, ಅವರಿಗೆ ಆನಂದಪ್ರದನಾದನು. ಸ್ವರಮಣನಾದ ಶ್ರೀಹರಿಗೆ ಗೋಪಿಯರ ಅಭಿಲಾಷೆ ಪೂರ್ಣಗೊಳಿಸಿದನು.

೩. ಇಂದ್ರನು ಕೃಷ್ಣನ ಮೇಲೆ ಸಿಟ್ಟಾಗಿ ನಂದಗೋಕುಲದಮೇಲೆ ಭಾರೀ ಮಳೆಯನ್ನು ಸುರಿಸಿದನು. ಆಗ, ಸಕಲಗೋಪಾಲ ಗೋಪಿಕಾಸ್ತ್ರೀಯರೆಲ್ಲರೂ, ಶ್ರೀಕೃಷ್ಣನು ಮೊರೆಹೊಕ್ಕರು. ಕೃಪಾಸಾಂದ್ರನಾದ ಶ್ರೀಕೃಷ್ಣನು ಅವರ ಪ್ರಾರ್ಥನೆಯನ್ನು ಆಲಿಸಿ, (ಉರುತ್ರಲಾಲಿಸಿ) ಗೋವರ್ಧನ ಗಿರಿಯನ್ನು ತನ್ನ ಹಸ್ತದ ಕಿರುಬೆರಳಿನಿಂದ ಎತ್ತಿಹಿಡಿದು, ಸಕಲಗೋಕುಲದ ಜನರನ್ನೂ ಚಂಡಮಳೆಯಿಂದ ಸಂರಕ್ಷಿಸಿದ. ಉತ್ರತಾರಿಸಿ- ಎಂಬುದನ್ನು ವ್ರಜನಾರಿಯರಿಗೂ ಮತ್ತು ಗೋಪಾಲಕರಿಗೂ ಉಭಯಾನ್ವಯ ಮಾಡಿ ಕೊಳ್ಳಬೇಕು.

೪. ಶತ್ರುಗಳ ಸಂಹಾರಿಯಾದ್ದರಿಂದ, ಶ್ರೀಹರಿಗೆ **ಶತ್ರುತಾಪನ**-ನೆಂದು ಹೆಸರು.

೫. ನರಕಾಸುರನು ಹದಿನಾರುಸಾವಿರದ ನೂರೊಂದು ಜನ ಕನ್ನೆಯರನ್ನು ಬಂಧಿಸಿ, ಸೆರೆಯಲ್ಲಿಟ್ಟಿದ್ದನು. ಶ್ರೀಕೃಷ್ಣನು ನರಕಾಸುರನನ್ನು ಸಂಹರಿಸಿದ ನಂತರ, ಆ ಕನ್ಯೆಯರೆಲ್ಲರೂ ವಿವಾಹವಾಗಬೇಕೆಂದು ಶ್ರೀಕೃಷ್ಣನಲ್ಲಿ ಪ್ರಾರ್ಥಿಸಿದರು. ಅವರ ಮೊರೆಯನ್ನು ಲಾಲಿಸಿ, ಶ್ರೀಕೃಷ್ಣನು ಅವರನ್ನೆಲ್ಲಾ ತನ್ನ ನಗರಿಗೆ ಕರೆದುಕೊಂಡು ಬಂದು, ಅವರನ್ನು ಲಗ್ನವಾದನು. ಆ ಕನ್ಯೆಯರೆಲ್ಲರೂ ಅಗ್ನಿಪುತ್ರಿಯರು. (ಯಜ್ಞಪುರುಷನ ಪುತ್ರಿಯರ), ತಂದಾಳ್ದ, ಎಂದರೆ, ಆ ಕನ್ಯೆಯರ ಬಂಧನವನ್ನು ಪರಿಹರಿಸಿ, ಅವರೊಡನೆ ವಿವಾಹವಾಗಿ ಅವರಿಗೆ ಪತಿ ಎಂದೆನಿಸಿದನು ಎಂತ ತಾತ್ಪರ್ಯ.

೬. ಮೂರು ಲೋಕಗತವಾದ ಈ ಬ್ರಹ್ಮಾಂಡಕ್ಕೆ ಶ್ರೀಹರಿಯು ಆಶ್ರಯದಾತನು ಮತ್ತು ಧರಿಸಿದ್ದಾನೆ. ಇದರಿಂದ **ತ್ರಿಜಗತ್ತ್ರಾತ್ರನು.** (ತ್ರಿಜಗತ= ಮೂರು ಲೋಕಗಳು: ಸ್ವರ್ಗ-ಭೂಮಿ-ಪಾತಾಳ. ತ್ರಾತನು= ಧಾರಣಮಾಡಿದವನು).

೮. ಜ್ಞಾನಾನಂದಪರಿಪೂರ್ಣದೇಹಿಯಾದ ಶ್ರೀಹರಿಯು ಮಂಗಳ ಮೂರ್ತಿಯು. ಶುಭಗುಣ ಶರೀರನು.

ಆ ಸಮಸ್ತದೋಷವಿದೂರನು, ಪರಮಪವಿತ್ರನು. ದೇವತೆಗಳ ಹಿತಾಸಕ್ತನು. ॥೮॥

## ಪದ್ಯ-೯

**ಮೂಲ :**

**ರೂಪನಾಮವಿಹೀನ ಗರ್ಗಾ ।**
**ರೋಪಿತ ಸುನಾಮದಲಿ ಕರೆಸಿದ ।**
**ವ್ಯಾಪಕ ಪರಿಚ್ಛಿನ್ನರೂಪದಿ ತೋರ್ದ ಲೋಗರಿಗೆ ॥**
**ದ್ವಾಪರಾಂತ್ಯದಿ ದೈತ್ಯರನು ಸಂ ।**
**ತಾಪಗೊಳಿಸುವೆನೆಂದು ಶ್ರೀಶ ।**
**ದೀಪ ಮಂದಿರನವತರಿಸಿ ಸಲಹಿದನು ತನ್ನವರ ॥೯॥**

**ಅವತರಣಿಕೆ :**

ರೂಪನಾಮರಹಿತನಾದ ಶ್ರೀಹರಿಯು ಗರ್ಗಾಚಾರ್ಯರಿಂದ ಶ್ರೀಕೃಷ್ಣ ನಾಮಾಂಕಿತನಾಗಿ ಕರೆಯಿಸಿಕೊಂಡವನಾಗಿ, ಲೋಕಜನರಿಗೆ ನರವೇಷಧಾರಿಯಾಗಿ ತೋರಿಸಿಕೊಳ್ಳುತ್ತಾ, ದುಷ್ಟಜನರ ನಾಶದ್ವಾರಾ, ಧರ್ಮಸಂಸ್ಥಾಪಕನಾಗಿ, ಪಾಂಡವರ ಹಿತವನ್ನು ಕಾಯ್ದನೆಂದು ತಿಳಿಸುತ್ತಾರೆ. ॥೯॥

**ಪ್ರತಿಪದಾರ್ಥ :**

**ರೂಪ**=ಅನಂತರೂಪಗಳಿಂದ ವಿರಾಜಮಾನನಾದ ಶ್ರೀಹರಿಗೆ ಇಂತ ಹುದೇ ನಿರ್ದಿಷ್ಟವಾದ ರೂಪವಿಲ್ಲ, **ನಾಮವಿಹೀನ**=ಅಂತೆಯೇ, ಅನಂತಾ

ನಂತ ನಾಮಗಳಿಂದ ಪ್ರಸಿದ್ಧನಾಗಿದ್ದಾನೆ. ಒಂದೇ ರೂಪ, ಒಂದೇ ನಾಮ ವಿಲ್ಲ, ಅನಂತಾನಂತರೂಪನು, ಅವತಾರನು, ನಾಮನು, ಕ್ರೀಡಾದಿವಿಶಿಷ್ಟನು. **ಗರ್ಗಾರೋಪಿತ**=ಯದುಕುಲಪುರೋಹಿತರಾದ ಗರ್ಗಾಚಾರ್ಯರಿಂದ ಇಡಲ್ಪಟ್ಟ, **ಸುನಾಮದಲಿ = ಶ್ರೀಕೃಷ್ಣನೆಂಬ** ಸಮೀಚೀನವಾದ ಹೆಸರಿನಿಂದ ಯುಕ್ತನಾಗಿ. **ಕರೆಸಿದ**=ಕರೆಯಿಸಿಕೊಂಡನು. **ವ್ಯಾಪಕ**= ಅಪರಿಚ್ಛಿನ್ನಅಖಂಡರೂಪಗಳಿಂದ ಸರ್ವತ್ರ ವ್ಯಾಪ್ತನಾಗಿದ್ದಾನೆ. **ಲೋಗರಿಗೆ**=ಪ್ರಾಕೃತರಾದ ಲೋಕದ ಸಾಮಾನ್ಯಜನರಿಗೆ. **ಪರಿಚ್ಛಿನ್ನರೂಪದಿ**=ಖಂಡರೂಪದಿಂದ (ನರವತ್ ಅಭಿವ್ಯಕ್ತನಾಗಿ ವಿಡಂಬನೆ) **ತೋರ್ದ**=ತೋರಿದನು. **ದ್ವಾಪರಾಂತ್ಯದಿ**-ದ್ವಾಪರಯುಗದ ಕೊನೆಯಲ್ಲಿ. **ದೈತ್ಯರನು**=ದುರುಳರಾದ ದೈತ್ಯರನ್ನು. **ಸಂತಾಪಗೊಳಿಸುವನೆಂದು**-ದುಃಖಗೊಳಿಸುವನೆಂಬ ಸಂಕಲ್ಪಯುಕ್ತನಾಗಿ. **ಶ್ವೇತದ್ವೀಪಮಂದಿರನು**-ಶ್ವೇತದ್ವೀಪವಾಸಿಯಾದ ಶ್ರೀಮನ್ನಾರಾಯಣನು **ಅವತರಿಸಿ**=ಕೃಷ್ಣನಾಮದಿಂದ ಅವತಾರಮಾಡಿ. **ತನ್ನವರ**—ತನ್ನ ಭಕ್ತರನ್ನು, **ಸಲಹಿದನು**—ಸಂರಕ್ಷಣೆ ಮಾಡಿದನು. ॥೯॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ:-

ಶ್ರೀಪರಮಾತ್ಮ ಅವತಾರ ಮಾಡಿದಕ್ಕೆ ಕಾರಣ ಹೇಳುತ್ತಾರೆ.

ಶ್ರೀಪರಮಾತ್ಮನು ರೂಪದಿಂದಲೂ, ನಾಮದಿಂದಲೂ ವಿಶೇಷಾಕಾರವಾಗಿ ಹೀನನಾದವನೆಂದರೆ, ಸರ್ವಾಧಿಷ್ಠಾನದಲ್ಲಿ ಸರ್ವನಾಮ, ಸರ್ವರೂಪದಿಂದ ಇರತಕ್ಕವ ಮತ್ತು ಅಧಿಷ್ಠಾನವ್ಯತಿರಿಕ್ತ ಸರ್ವನಾಮ ಸರ್ವನಾಮ ಸರ್ವರೂಪವುಳ್ಳವ ಇನ್ನೂ ಒಂದೊಂದೇ ರೂಪದಲ್ಲಿ ಗಜ-ತುರಗಾದಿ ವಿಲಕ್ಷಣಗಳಾದ ಅನೇಕರೂಪಗಳು ನವನಾಲೀ ಕುಂಜರವತ್ ಇರತಕ್ಕವನಾದ್ದರಿಂದ, ಇಂಥಾ ರೂಪವೇ, ಇಂಥಾ ನಾಮವೇ ಎಂತ ನಿರ್ಧಾರವಾಗಿ

ಹೇಳಲಿಕ್ಕೆ ಬಾರದವನೆಂದರೆ- ಅಪ್ರಾಕೃತಶರೀರನು. ಸರ್ವನಾಮವಾಚ್ಯನು. ಗರ್ಗರಾದಿ ಸರ್ವಶಬ್ದಗಳು ಈಶ್ವರನಲ್ಲಿ ಆಲೋಚಿತವಾಗಿವೆ. ಆದ ಕಾರಣದಿಂದ **ನಾಮಾನಿ ಸರ್ವಾಣಿ ಯಮಾ ವಿಶಂತಿ**- ಎಂಬ ಶ್ರುತಿಪ್ರತಿಪಾದ್ಯನಾದನು. ಇನ್ನೂ, ಗರ್ಗಾಚಾರ್ಯರಿಂದ ಇಡಲ್ಪಟ್ಟ ಸಮೀಚೀನ ನಾಮವಾದ ಕೃಷ್ಣ-ಎಂತ ನಾಮಾಂಕಿತನಾದವನು ಅಪರಿಚ್ಛಿನ್ನ ಅಖಂಡರೂಪದಿಂದ ವ್ಯಾಪ್ತನು. ಶ್ವೇತದ್ವೀಪವೇ ಮನೆಯಾಗಿವುಳ್ಳ ಶ್ರೀನಾರಾಯಣದೇವರು, ತನ್ನ ಭಕ್ತರಾದ ದೇವತೆಗಳನ್ನ ಹಿಂಸಾಮಾಡತಕ್ಕ ದೈತ್ಯರನ್ನ ದುಃಖಪಡಿಸಬೇಕೆಂತ, ದ್ವಾಪರಯುಗದ ಕೊನೇಗಾಲದಲ್ಲಿ ಕೃಷ್ಣಾವತಾರ ಮಾಡಿ ಪ್ರಾಕೃತರಾದ ಜನರಿಗೆ ಖಂಡರೂಪದಿಂದ ತೋರೋಣನಾದ. ಇನ್ನೂ, ತನ್ನ ಭಕ್ತರಿಗೆ ಅಪರಿಚ್ಛಿನ್ನವಾದ ತನ್ನ ರೂಪವನ್ನೂ ಮಹಿಮಾವನ್ನೂ ತೋರಿದನು. ತನ್ನ ಜನರಾದ ದೇವತೆಗಳನ್ನೂ, ಇನ್ನೂ ತನ್ನ ಸಂಬದ ಭಕ್ತರನ್ನೂ ಸಂರಕ್ಷಣ ಮಾಡೋಣನಾಗಿದ್ದಾನಾದ ಕಾರಣದಿಂದ ಶ್ರೀಪರಮಾತ್ಮನ ಮಹಾಮಹಿಮಾ ಇಂಥಾದ್ದೆಂತ ತಾತ್ಪರ್ಯ. ॥೯॥

೨. ಭಾವದರ್ಪಣ

ರೂಪನಾಮ, ಪ್ರಾಕೃತರೂಪನಾಮ ಶೂನ್ಯ ಎಂಬರ್ಥ. । ಗರ್ಗರೋಚಿತನಾಮ — ಗರ್ಗಾಚಾರ್ಯರಿಂದ ಇಡಲ್ಪಟ್ಟ ನಾಮ ಉಳ್ಳವ । ವ್ಯಾಪಕ-ಎಂದರೆ, ವ್ಯಾಪ್ಯ ಎಂಬರ್ಥ. । ಏತಾದೃಶ ಶ್ರೀಕೃಷ್ಣನು ಪರಿಚ್ಛಿನ್ನರೂಪ-ಎಂದರೆ, ಪರಿಚ್ಛಿತ್ತಿ ಎಂಬರ್ಥ । ಇದಕ್ಕೆ ಇಯತ್ತಾ- ಎಂತಲೂ ಸಂಖ್ಯಾ ಎಂತಲೂ, ಅರ್ಥವಾಗುತ್ತದೆ । ಅಂಥಾ ಪರಿಚ್ಛಿತ್ತಿ ಉಳ್ಳವನೇ ಪರಿಚ್ಛಿನ್ನ ಎಂದರೆ ಗುಣಗಣನಿಗೆ ಸಿಗತಕ್ಕವ ಎಂಬ ಭಾವ । ಇಂಥಾ ಭಾವದಿಂದ ಜನರಿಗೆ ಮನುಷ್ಯತ್ವೇನ ತೋರಿದನೆಂದು ತಾತ್ಪರ್ಯ । ಶ್ವೇತದ್ವೀಪ ಮಂದಿರನು-ಶ್ವೇತದ್ವೀಪ ಮನೆಯಾಗಿ ಉಳ್ಳವ ಎಂಬರ್ಥ । ಇಂಥಾ ಅಪರಿಚ್ಛಿನ್ನಅಪ್ರಾಕೃತನಾದ ಶ್ರೀಹರಿಯು ಕೃಷ್ಣತ್ವೇನ ಅವತರಿಸಿ ಭಕ್ತರನ್ನ ಸಲಹಿದನು. ॥೯॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ

"ರೂಪ" ಇತಿ ॥ "ಅನಾಮರೂಪವಸ್" ಇತ್ಯುಕ್ತೇಃ॥ ಅನಾಮಾ "ಸೋಽಪ್ರಸಿದ್ಧತ್ವಾತ್ ಅರೂಪೋ ರೂಪವರ್ಜನಾತ್" ॥ ಇತಿ ಸ್ಮೃತೇಃ ॥ ಗರ್ಗಾರೋಪಿತ-ಸಾಂಕೇತಿಕ-ಸ್ಥಾಪಿತ॥ ಪ್ರಾಕೃತವತ್ ಗುಣಕರ್ಮಜನ್ಯ ನಿರೂಪಿತವ್ಯ ನಾಮರೂಪವೈಧುರ್ಯಂ ವಾ ತತ್ಪದಾರ್ಥಃ॥ ಯಥೋಕ್ತಂ ದಶಮ ಪೂರ್ವಾರ್ಧೇ "ನನಾಮರೂಪೇ ಗುಣಕರ್ಮಜನ್ಮಭಿಃ ನಿರೂಪಿತವ್ಯೇ ತವ ತಸ್ಯ ಸಾಕ್ಷಿಣಃ ॥ ಇತಿ ॥ ಟೀಕಾಯಾಂ ಚ ಅಪ್ರಾಕೃತತ್ವಾತ್ ಸತ್ವಾದ್ಯಭಾವಾತ್ ಅಕ್ಲಿಷ್ಟಕಾರಿತ್ವಾತ್ ನಿತ್ಯತ್ವಾತ್ ಶುಕ್ಲಭಾಸ್ಕರ ಶಬ್ದಯೋರಿವ ದಹನಾತ್ಮಗುಣನಿರೂಪಣೀಯಾಗ್ನಿವತ್ ನ ಚೇತ್ ಅಪಿ ನ ಮಿಥ್ಯಾ ಉಭಯೋಃ ಸಾಕ್ಷಿಸಿದ್ಧತ್ವಾತ್ ॥ ಕಿಂ ತು "ಲೋಕಸಿದ್ಧಾರ್ಥನಾಮ್ನಾಃ ಸಃ ಇತ್ಯಾರಭ್ಯ "ಜಾನಂತಿ ಪರಮರ್ಷಯಃ ಇತ್ಯಂತಂ" ಆಚಾರ್ಯೋರ್ಲೇಶಾರ್ಥ ಸನ್ನಾಮ್ನಾಂ ತದ್ವಾಚ್ಯರೂಪಾಣಾಂ ಅನಂತತ್ವಾತ್ ಅನಾಮಾದಿವಚನಮ್॥ ಜ್ಞಾನಿಮಾನಸಾ ಚ ಅನುಮೇಯರೂಪಾಣಿ ಸಂತಿ॥ "ಸರ್ವನಾಮಾ ಸರ್ವಕರ್ಮಾ"-ರುಕ್ಮವರ್ಣಂ ಕರ್ತಾರಂ" ಇತಿ ಶ್ರುತೇಃ॥ ಸ್ವಸಾಮರ್ಥ್ಯೇನಾಪಿ, ಪರದೇವ ಶ್ರೀನಾರಾಯಣ ಪ್ರಸಾದಾತ್ ಜ್ಞಾತುಂ ಅಶಕ್ತಸ್ಯಾಪಿ ಜಾನಂತಿ"-ಇತ್ಯರ್ಥಕೋಽಯಂ ಉತ್ತರಾರ್ಧಃ । ಮನೋವಚೋಭ್ಯಾಂ ಅನುಮೇಯವರ್ತ್ಮನಾ ದೇವಕ್ರಿಯಾರ್ಥಾಃ ಪ್ರತಿಯಂತ್ಯಥೋಪಿ" ॥ಇತಿ॥

ಷಷ್ಠಭಾಗವತೇಚ "ಯೋಽನುಗ್ರಹಾರ್ಥಂ ಭಜತಾಂ ಪಾದಮೂಲಂ ಅನಾಮರೂಪೋ ಭಗವಾನ್ ಅನಂತಃ॥ ನಾಮಾನಿ ರೂಪಾಣಿ ಚ ಜನ್ಮಕರ್ಮಭಿಃ ಭೇಜೇ ಸ ಮಹ್ಯಂ ಪರಮಃ ಪ್ರಸೀದತು" ॥ ೬-೩೩॥ಇತಿ॥ ಅನೇನ "ಮೂಲರೂಪೇ"- ಇತಿ ಪೂರಣೀಯಮ್॥ ತತ್ರ ಅನಾಮರೂಪಃ ಅಪಿ ತತ್ಕರ್ಮರೂಪಾದ್ಯದೃಷ್ಟೇಃ ॥ ಅವತಾರೇ ಚ ಗರ್ಗಾರೋಪಿತ ನಾಮರೂಪಃ ॥ತದುಕ್ತಮ್॥ ತತ್ಕರ್ಮಣಾಂ ಅದೃಷ್ಟತ್ವಾತ್ ಅನಾಮಾ ಚಾಪ್ಯದರ್ಶನಾತ್ ॥ ಅದೂಸಸ್ತ್ವವತಾರೇಣ ರೂಪ ಕರ್ಮಾಣಿ ದರ್ಶಯನ್ ॥ ನಿತ್ಯರೂಪಃ ನಿತ್ಯಕರ್ಮಾವ್ಯಕ್ತತ್ವಮಪೇಕ್ಷ್ಯ ತು ॥ ಅರೂಪಕರ್ಮೇತ್ಯು॥

ನಿತ್ಯಃ ರೂಪಕರ್ಮೋಜ್ಝಿತೋsಸ್ತು" ॥ಇತಿ॥ (ಪ್ರಕಾಶ ಸಂಹಿತಾಯಾಂ) ಯದಿ ವಾ "ಹರೀತರಾನುಪಪನ್ನಾರ್ಥವಾಚಿ ನಾಮ ಯಸ್ಯ"- ಇತಿ ಸಃ ಅನಾಮಾ॥ ಯಥಾ ಮುಕ್ತಾನಾಂ ಪರಮಾ ಗತಿಃ"- ಕಮಲಾನಾಥಃ॥ ಮೂಲಸ್ಯ ಅತ್ಯಂತಂ ಅವ್ಯಕ್ತತ್ವಾತ್ ಅರೂಪಃ॥ ಲೋಕದೃಷ್ಟ್ಯಾ ಪ್ರಸಿದ್ಧ ಕಂಸಾರಿತ್ವ ಮುರಮಥನತ್ವಾದ್ಯರ್ಥಕನಾಮ ಕೃಷ್ಣಾದಿ ರೂಪವತ್ತ್ವಾತ್ (ರೂಪಿತ್ವಾತ್) ನಾಮರೂಪಃ॥ ಉಕ್ತಂ ಚ- "ಅನಾಮಾ ಸೋಽಧಿಕಾರ್ಥತ್ವಾತ್ ಅವ್ಯಕ್ತತ್ವಾತ್ ಅರೂಪಕಃ॥ ಕಂಸಾರಿತ್ವಾದಿ ಸಾಮರ್ಥ್ಯಃ ವ್ಯಕ್ತರೂಪ್ಯೋಪಿ ತಾರಣಃ॥ ಲೋಕದೃಷ್ಟ್ಯಾಧಿಕಾರ್ಥಾನಿ ಮೂಲನಾಮಾನಿ ಕೇಶವೇ॥ ಅಥ ದಾಮೋದರಾದೀನಿ ಲೋಕದೃಷ್ಟ್ಯಾ ಸಮಾನಿತಃ॥ ಅರಂದೋsವ್ಯಕ್ತರೂಪಸ್ತು ಮೂಲರೂಪಂ ಉದಾಹೃತವಾನ್॥ ಸ ಏವ ವ್ಯಕ್ತಿಮಾಪನ್ನಃ ಪ್ರಾದುರ್ಭಾವ ಉದೀರಿತಃ"॥ (ಉದಾಹೃತಃ॥) ಇತಿ॥ ತಸ್ಮಾತ್ ಸಾಧೂಕ್ತಂ- "ರೂಪನಾಮವಿಹೀನ"- ಇತಿ. ॥೯॥

## ಕನ್ನಡಾರ್ಥ

"ರೂಪನಾಮವಿಹೀನ"- ಎಂಬ ಪದವು "ಅನಾಮರೂಪಂ"- ಎಂಬ ಶ್ರುತಿಯ ಅರ್ಥವನ್ನು ಹೇಳುತ್ತದೆ. ಅದರಂತೆ, "ಅಪ್ರಸಿದ್ಧನಾದುದರಿಂದ ಅನಾಮನೆನಿಸುತ್ತಾನೆ. ಅವ್ಯಕ್ತನಾದುದರಿಂದ, ಮೂಲದಲ್ಲಿ ಪ್ರಾಕೃತರೂಪಾದಿಗಳಿಲ್ಲದ್ದರಿಂದ, ಅರೂಪನೆನಿಸಿಕೊಳ್ಳುತ್ತಾನೆ."- ಎಂದು ಸ್ಮೃತಿಯೂ ಹೇಳುತ್ತದೆ. ಆದರೂ, ಗರ್ಗಾಚಾರ್ಯರಿಂದ "ಆರೋಪಿತ" ಸಂಕೇತದಿಂದ ಇಟ್ಟ ನಾಮವುಳ್ಳವನು. ಅಂದರೆ, "ಪ್ರಾಕೃತಪುರುಷನಂತೆ ಗುಣ-ಕರ್ಮ-ಜನ್ಮಗಳಿಂದ ನಾಮರೂಪಗಳಿಂದ ಹೇಳಿಸಿಕೊಳ್ಳುವವನಲ್ಲ"- ಎಂದು "ರೂಪನಾಮವಿಹೀನ" ಎಂಬ ಪದದ ಅರ್ಥವೆಂದು ತಿಳಿಯಬೇಕು. ದಶಮ ಪೂರ್ವಾರ್ಧದಲ್ಲಿ ಹೀಗೆಯೇ ಹೇಳಲಾಗಿರುತ್ತದೆ, "ನ ನಾಮರೂಪೇ"- ಎಂಬ ಶ್ಲೋಕದಿಂದ.

"ಗುಣ-ಜನ್ಮ-ಕರ್ಮಗಳಿಂದ ಅಗ್ನ್ಯಾದಿಗಳನ್ನು ನಿರೂಪಿಸುವಂತೆ, ಹರಿಯ ನಾಮರೂಪಗಳನ್ನು ಹೇಳಲು (ನಿರೂಪಿಸಲು) ಅಶಕ್ಯವಾಗುತ್ತದೆ. ಆದರೂ, ಆ ನಾಮರೂಪ ಮುಂತಾದುವುಗಳ ಸಾಕ್ಷಾತ್ ದ್ರಷ್ಟವೆನಿಸುವ (ಸಾಕ್ಷಿಯೆನಿಸುವ) ಅವನ ರೂಪನಾಮಗಳನ್ನು ಶಾಸ್ತ್ರದಲ್ಲಿ ಹೇಳಿದಂತೆ, ದೇವನ (ಅವನ) ಪ್ರೇರಣಾರೂಪವಾದ ಅನುಗ್ರಹವಿಶೇಷ ರೂಪ ಪ್ರಸಾದದಿಂದ, ಮನೋವಚನಗಳಿಂದ ಶ್ರವಣಮನನಾದಿಗಳಿಂದ ನಿಶ್ಚಯಿಸಿ, ಜ್ಞಾನಿಗಳು ತಿಳಿದುಕೊಳ್ಳುತ್ತಾರೆ."- ಎಂದು ಶ್ಲೋಕಾರ್ಥ ॥೧೦-೨-೩೬ ॥ ಶ್ರೀವಿಜಯಧ್ವಜೀಯ ಟೀಕಾದಲ್ಲಿ–ಅಪ್ರಾಕೃತನಾದುದರಿಂದ-ಸತ್ತ್ವಾದಿ ಪ್ರಾಕೃತ ಗುಣಗಳಿಲ್ಲದಿರುವುದರಿಂದ, ಕ್ಲೇಶವಿಲ್ಲದೆ (ಲೀಲಾಮಾತ್ರದಿಂದ) ಕಾರ್ಯಕರ್ತೃಕಾರಕನಾದುದರಿಂದ, ಹಾಗೂ ನಿತ್ಯನಾದುದರಿಂದ, ಶುಕ್ಲ-ಭಾಸ್ವರ-ವರ್ಣ (ಗುಣ)ಗಳಿಂದ ಕಟ್ಟಿಗೆಯಲ್ಲಿ ವ್ಯಕ್ತವಾಗುವ ಜನ್ಮಗಳಿಂದ ದಹನ (ಸುಡುವಿಕೆ) ಕ್ರಿಯೆಯಿಂದ ಅಗ್ನಿಯನ್ನು ನಿರೂಪಿಸಬರುವಂತೆ ಪರಮಾತ್ಮನನ್ನು ನಿರೂಪಿಸಬರುವಂತೆ ಇಲ್ಲ. ಆದರೂ, ರೂಪ ನಾಮಗಳು ಇಲ್ಲವೆಂದಾಗಲೀ, ಇದ್ದರೂ ಸುಳ್ಳು (ಆರೋಪಿತ) ಎಂದು ಮುಂತಾಗಿಯಾಗಲೀ ಹೇಳಲು ಬರುವುದಿಲ್ಲ. ಯಾಕೆಂದರೆ, ಅವುಗಳು ಸಾಕ್ಷಿಯಿಂದ ಸಾಕ್ಷಿನಾಮಕ ಪರಮಾತ್ಮನ ದಿವ್ಯದೃಷ್ಟಿಯಲ್ಲಿ ಸಿದ್ಧವಾಗಿರುತ್ತವೆ. ಆದರೆ, "ಲೋಕಸಿದ್ಧಾರ್ಥನಾಮ್ನಃ"- ಎಂದು ಮುಂತಾಗಿ ಪ್ರಾರಂಭಿಸಿ, "ಜಾನಂತಿ ಪರಮರ್ಷಯಃ"- ಎಂಬಲ್ಲಿಯವರೆಗೆ- ಶ್ರೀಮದಾನಂದತೀರ್ಥಭಗವತ್ಪಾದರ ತಾತ್ಪರ್ಯೋಕ್ತಿಯಂತೆ, ಅಲೌಕಿಕಾರ್ಥವುಳ್ಳ ಸನ್ನಾಮಗಳೂ, ಅವುಗಳಿಂದ ವಾಚ್ಯಗಳಾದ ರೂಪಗಳೂ ಅನಂತಗಳಾದುದರಿಂದ. "ಅನಾಮಾ- ಅರೂಪಾ"- ಎಂದು ಮುಂತಾಗಿ ಪುರಾಣಾದಿಗಳಲ್ಲಿ ಹೇಳಲಾಗುತ್ತದೆ.

ಜ್ಞಾನಿಗಳ ಮನಸ್ಸಿನಲ್ಲಿ ಮನನ-ಧ್ಯಾನಾದಿಗಳಿಗೆ ಗೋಚರವಾಗುವ, ಶಾಸ್ತ್ರಯುಕ್ತಿಗಳಿಂದ ನಿರ್ಣಯಿಸಲ್ಪಡುವ ರೂಪ ನಾಮಗಳೂ ಇರುವುವು. "ಸರ್ವನಾಮಾ" "ಸರ್ವಕರ್ಮಾ" "ರುಕ್ಮವರ್ಣಂ" (ಬಂಗಾರದ ಬಣ್ಣವುಳ್ಳವನು) "ಕರ್ತಾರಂ"- ಎಂದು ಮುಂತಾದ ಶ್ರುತಿಗಳು ಈ ಅರ್ಥದಲ್ಲಿ ಹೇಳುವುವು.

ತಮಗೆ ಸಾಮರ್ಥ್ಯವಿಲ್ಲದಿದ್ದರೂ, (ಸ್ವಯಂ ತಿಳಿಯಲು ಸಮರ್ಥರಲ್ಲದಿದ್ದರೂ) ಪರಮಾತ್ಮನ-ನಾರಾಯಣನ ಮಹಾಪ್ರಸಾದದಿಂದ ತಿಳಿಯಲಶಕ್ಯವಾದವುಗಳನ್ನೂ, ಜ್ಞಾನಿಗಳು ತಿಳಿದುಕೊಳ್ಳುತ್ತಾರೆ-ಎಂಬ ಅರ್ಥವನ್ನು ಈ ಶ್ಲೋಕದ ಉತ್ತರಾರ್ಧದಲ್ಲಿ ಹೇಳಲಾಗಿದೆ.

ಇದೇ ಅಭಿಪ್ರಾಯದ ಶ್ಲೋಕವು, ಷಷ್ಠಸ್ಕಂಧ ಭಾಗವತದಲ್ಲಿಯೂ ಇರುತ್ತದೆ. "ಯೋಽನುಗ್ರಹಾರ್ಥಂ" ಎಂಬುದಾಗಿ ॥ ಭಾ. ೬-೪-೩೩ ॥ ಮೂಲರೂಪದಲ್ಲಿ ಅನಾಮರೂಪನೆಂದು ಪ್ರಾರ್ಥಿಸಬೇಕು. ಮೂಲರೂಪವು ಅವನ ಕರ್ಮಗಳನ್ನು ತಿಳಿಯಲು ನೋಡಲು ಅಶಕ್ಯವಾದುದರಿಂದಲೇ 'ಅರೂಪ'ವೆನಿಸಿಕೊಳ್ಳುತ್ತದೆ. ಆದುದರಿಂದ, ಕೃಷ್ಣಾವತಾರದಲ್ಲಿ ಗರ್ಗಾಚಾರ್ಯರಿಟ್ಟ ನಾಮ ರೂಪಗಳಿರುತ್ತವೆ.

ಷಷ್ಠತಾತ್ಪರ್ಯದಲ್ಲಿ, ಮೂಲರೂಪದಲ್ಲಿ ಅವನ ಕರ್ಮಗಳು ಅದೃಷ್ಟ (ತಿಳಿಯಲ್ಪಡದವುಗಳು) ಆದುದರಿಂದ, ಅನಾಮನೆನ್ನುತ್ತಾರೆ. ಮತ್ತು ಅವನನ್ನು ಯಾರೂ ನೋಡಿರುವುದಿಲ್ಲವಾದ್ದರಿಂದ, ಅರೂಪನೆನಿಸುತ್ತಾನೆ. ಆದರೆ ಅವತಾರಗಳಲ್ಲಿ ರೂಪ ಹಾಗೂ ಕರ್ಮಗಳನ್ನು ತೋರಿಸಿಕೊಡುತ್ತಾನೆ. (ಅವತಾರಗಳಲ್ಲಿ) ನಿತ್ಯರೂಪ ಉಳ್ಳವನಾದರೂ, ನಿತ್ಯಕರ್ಮ (ಮಹಿಮಾ) ಉಳ್ಳವನಾದರೂ, ಮೂಲದಲ್ಲಿ ಅವ್ಯಕ್ತನಾದುದರಿಂದ, 'ಅರೂಪ', 'ಅಕರ್ಮ' ನೆನಿಸುತ್ತಾನೆಂಬೇ ಹೊರತು, ರೂಪಕರ್ಮಗಳೇ ಪರಮಾತ್ಮನಿಗೆ ಇರುವುದಿಲ್ಲವೆಂದಲ್ಲ.

ಅಥವಾ, 'ಹರಿಯನ್ನು ಬಿಟ್ಟು ಇತರರಲ್ಲಿ ಅನ್ವಿತವಾಗದ ಅರ್ಥಗಳನ್ನು ಹೇಳುವ ನಾಮಗಳುಳ್ಳವನು'-ಎಂದೇ-'ಅನಾಮಾ' ಎಂಬ ಶ್ರುತಿಯಲ್ಲಿಯ ಶಬ್ದಕ್ಕೆ ಅರ್ಥ. "ಮುಕ್ತಾನಾಂ ಪರಮಾಗತಿಃ." — 'ಕಮಲಾನಾಥ' ಮುಂತಾದ ನಾಮಗಳು ಇದಕ್ಕೆ ಉದಾಹರಣೆಗಳು. ಮೂಲರೂಪವು ಅವ್ಯಕ್ತವಾದುದರಿಂದ, 'ಅರೂಪ' ಎಂದು ತಿಳಿಯಬೇಕು.

ಲೋಕದೃಷ್ಟಿಯಿಂದ ಪ್ರಸಿದ್ಧವಾದ 'ಕಂಸಾರಿತ್ವ, ಮುರಮಥನತ್ವ' 'ಕಂಸನ ವೈರಿ', 'ಮುರಮಥನ'-ಎಂದು ಮುಂತಾದ ಅರ್ಥಗಳನ್ನು ಹೇಳುವ ನಾಮಗಳೂ, ಕೃಷ್ಣ ಮುಂತಾದ ರೂಪಗಳೂ ಇರುವವು.

ಇದನ್ನೇ ಪ್ರಮಾಣಾದಿಗಳಲ್ಲಿ ಹೇಳಲಾಗಿರುತ್ತದೆ. "ಅಧಿಕವಾದ ಅರ್ಥಗಳುಳ್ಳವನು." ಈ ಕಾರಣದಿಂದ, 'ಅನಾಮನು'. ಮೂಲದಲ್ಲಿ ಅವ್ಯಕ್ತನಾದುದರಿಂದ, 'ಅರೂಪ'. ಅವತಾರಗಳಲ್ಲಿ ಕಂಸಾರಿತ್ವ-ಮುಂತಾದ ಮಹಿಮೆಯೂ, ಕೃಷ್ಣಾದಿ ರೂಪಗಳೂ ಇರುವುವು. ಲೋಕದೃಷ್ಟಿಯಿಂದ ಅಧಿಕವಾದ ಅರ್ಥಗಳನ್ನು ಮೂಲನಾಮಗಳು ನಾರಾಯಣನಲ್ಲಿ ಹೇಳುತ್ತವೆ. 'ದಾಮೋದರ'-ಮುಂತಾದವುಗಳು ಲೋಕದೃಷ್ಟಿಯಿಂದ ಸಮಾನಾರ್ಥಕಗಳು. ಮೂಲರೂಪವು ಅವ್ಯಕ್ತವೂ-ಆನಂದಾತ್ಮಕವೂ ಆಗಿದೆ. ಅದೇ ಆನಂದಾತ್ಮಕ ಮೂಲರೂಪವೇ ವ್ಯಕ್ತರೂಪವನ್ನು ಹೊಂದುವುದೇ-ಪ್ರಾದುರ್ಭಾವವೆನಿಸುತ್ತದೆ ಎಂದು.

ಆದುದರಿಂದ 'ರೂಪನಾಮವಿಹೀನ'-ಎಂದು ಹೇಳಿದುದು ಬಹಳ ಸಮಂಜಸ. ॥೯॥

## ಇ. ಭಾವಪ್ರಕಾಶಿಕೆ

ಪರಮಾತ್ಮನಿಗೆ ಸಾಮಾನ್ಯಮನುಷ್ಯರಂತೆ ಚಕ್ಷುರಾದಿ ಇಂದ್ರಿಯಗಳಿಂದ ಕೂಡಿದ ಪ್ರಾಕೃತವಾವ ಪಾಂಚಭೌತಿಕ ಶರೀರವಿಲ್ಲ. ಅಪ್ರಾಕೃತವಾದ ಆನಂದಮಯವಾದ ಕರಚರಣಾದ್ಯವಯವಗಳಿಂದ ಕೂಡಿದ ಶರೀರ ಉಳ್ಳವನು. ಆನಂದಜ್ಞಾನಾದಿ ಸೂಚಕವಾದ ನಾಮಉಳ್ಳವನು. ಆದರೂ, ದೇವಕಾರ್ಯಕ್ಕಾಗಿ ಮನುಷ್ಯರಂತೆ ಅವತರಿಸಿ, ಆಯಾ ಕುಲಾಚಾರ ಪ್ರಾಪ್ತಿಯಾದ ಹೆಸರನ್ನು ಪಡೆಯುವನು. ಅದರಂತೆಯೇ ಕೃಷ್ಣಾವತಾರದಲ್ಲಿ ಗರ್ಗಾಚಾರ್ಯರು ಮಾಡಿದನಾಮಕರಣದಿಂದ**ಕೃಷ್ಣನೆಂದು** ಖ್ಯಾತಿಪಡೆದನು. ಆ ಕೃಷ್ಣರೂಪವಾದರೂ, ಅಪ್ರಾಕೃತವಾದುದೇ ಕೃಷ್ಣನೆಂಬ ಹೆಸರಾದರೂ,

ಅಪ್ರಾಕೃತನಾದ ನಾರಾಯಣನ ನಾಮವೇ ಆಗಿರುವುದು. ಭಾರತದ ಆದಿ ಮಂಗಳಾಚರಣದಲ್ಲಿ "ಕೃಷ್ಣೋಪಾಂಕೈರಿಶ್ಯತವೀತವೋಹ್ಯೈಃ". ಮುಕ್ತರಿಂದಲೂ ಕೃಷ್ಣನು ಪೂಜಿತನಾಮವನೆಂಬ ವಾಕ್ಯದಿಂದ ನಾರಾಯಣನಿಗೆ ಕೃಷ್ಣನೆಂದು "ಕೃಷ್ಣ!ದಾರಯತಿ ಪಾಪಾನೀತಿ ಕೃಷ್ಣ!" ಪಾಪಗಳನ್ನು ಸೀಳಿ ಬಿಡುವವನಾದ್ದರಿಂದ, ಕೃಷ್ಣನೆಂದು ನಾರಾಯಣನಿಗೆ ಹೆಸರು. ಅದನ್ನೇ ಗರ್ಗಾಚಾರ್ಯರು ನಾಮಕರಣ ಮಾಡಿದರು. ಆದ್ದರಿಂದ, ಪ್ರಾಕೃತರೂಪನಾಮಗಳಿಂದ ತೋರಿದನು–ಎಂಬ ತಾತ್ಪರ್ಯ. ಸರ್ವತ್ರವ್ಯಾಪ್ತನಾದರೂ, ಮನುಷ್ಯಾದಿ ಅವತಾರಗಳಲ್ಲಿ ಪರಿಚ್ಛಿನ್ನನಾಗಿ ನಾಲ್ವರೊಳಗೆ ಒಬ್ಬನಾಗಿ ತೋರುವನು. ದ್ವಾಪರಾಂತ್ಯದಲ್ಲಿ ದೈತ್ಯರೆಲ್ಲರೂ ರಾಜರಾಗಿ ಹುಟ್ಟಿ, ಭೂಮಿಗೆ ಭಾರವಾಗಿರಲು, ಶ್ರೀಹರಿಯು ಬ್ರಹ್ಮಾದಿಗಳಿಂದ ಪ್ರಾರ್ಥಿತನಾಗಿ ದೈತ್ಯರ ಸಂಹಾರಕ್ಕೋಸ್ಕರ, ಭೂಮಿಯಲ್ಲಿ ಕೃಷ್ಣಾವತಾರಮಾಡಿ, ಕಂಸಾದಿಗಳನ್ನು ಸಂಹರಿಸಿ, ದೇವಪಕ್ಷದವರನ್ನು ಸಂರಕ್ಷಿಸಿದನು. ॥೯॥

**೫. ಶ್ರೀ ಗುರುಹೃದಯಪ್ರಕಾಶಿಕೆ**

ಪ್ರಾಕೃತನಾಮ ರೂಪವಿಲ್ಲದವನು ದೇವರು. ಆದಾಗ್ಯೂ, ಗರ್ಗಾಚಾರ್ಯರು ಇಟ್ಟ ಕೃಷ್ಣಾದಿ ನಾಮದಿಂದ ಕರೆಸಿದನು. ಗೋಪೀದೇವಿಗೆ ತನ್ನ ಬಾಯಲ್ಲೇ ಜಗತ್ತನೆಲ್ಲಾ ತೋರಿಸಿ, ವ್ಯಾಪ್ತನಾದಾಗ್ಯೂ, ಪರಿಚ್ಛಿನ್ನಎಂದರೆ, ಯದುಪುರಿಯಲ್ಲಿ ಇದ್ದಾಗ, ಪಾಂಡವರಲ್ಲಿ ಇಲ್ಲದಂತೆ, ಪರಿಮಿತರೂಪದಿಂದ ಅಜ್ಞಜನರಿಗೆ ಕಾಣಿಸಿಕೊಂಡನು. ಶ್ವೇತದ್ವೀಪವೇ ಮನೆಯಾಗಿ ಉಳ್ಳ ಸ್ವಾಮಿಯು ದ್ವಾಪರಾಂತ್ಯದಲ್ಲಿ ದೈತ್ಯರನ್ನು ಸಂಹಾರಾದಿ ಸಂತಾಪಗೊಳಿಸಬೇಕೆಂದು ಭೂಮಿಯಲ್ಲಿ ಅವತರಿಸಿ, ತನ್ನ ಭಕ್ತರನ್ನು ರಕ್ಷಿಸಿದನು. ಆದ್ದರಿಂದ ಸುಲಭನೆಂದರ್ಥ. ॥೯॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಶ್ರೀಹರಿಯ ರೂಪಗಳು ಅನಂತಾನಂತ. ಅವನ ನಾಮಗಳೂ ಸಹ ಅಗಣಿತ. ಅವನಿಗೆ ಇಂತಹುದೇ ರೂಪವಾಗಲೀ, ಇಂತಹುದೇ ನಾಮವಾ

ಗಳೇ ಇಲ್ಲ. ಸರ್ವಶಬ್ದ ಪೂರ್ಣವಾಚ್ಯನಾದ್ದರಿಂದ, ಸಕಲಶಬ್ದಗಳೂ ಅವನಲ್ಲಿಯೇ ಮುಖ್ಯತಾತ್ಪರ್ಯವು. ಶ್ರೀಹರಿಗೆ ಇತರರಂತೆ ಪ್ರಾಕೃತ ರೂಪಾದಿಗಳಿಲ್ಲ. ಇದರಿಂದ, **ರೂಪನಾಮವಿಹೀನ** ನೆಂದಿದ್ದಾರೆ ದಾಸವರ್ಯರು. "ಅನಾಮರೂಪಂ"- ಎಂಬ ಶ್ರುತ್ಯರ್ಥವನ್ನು "ರೂಪನಾಮ ವಿಹೀನ"- ಎಂಬ ಪದವು ತಿಳಿಸುತ್ತದೆ.

೨. ಇಂತಹ ಪ್ರಾಕೃತ ರೂಪ, ನಾಮ, ಗುಣಗಳಿಂದ ದೂರನಾದ ಆ ಅಪ್ರಾಕೃತಪರಮಪುರುಷನಿಗೆ ಗರ್ಗಾಚಾರ್ಯರು "**ಶ್ರೀಕೃಷ್ಣ**" ನೆಂದು ಹೆಸರಿಟ್ಟರು. **ಗರ್ಗಾಚಾರ್ಯರು** ಯಾದವರ ಪುರೋಹಿತರು. ದಿವೋದಾಸನ ಮಗನಾದ ಪ್ರತರ್ದನನ ಪುತ್ರರು. ವತ್ಸಮುನಿ ಈತನ ಸಹೋದರನು. ಗರ್ಗೋದಿತ- ಎಂದರೆ, ಗರ್ಗಾಚಾರ್ಯರಿಂದ ನಾಮಕರಣ ಮಾಡಲ್ಪಟ್ಟ- ಎಂದರ್ಥ. 'ಶ್ರೀಕೃಷ್ಣ-' ಎಂಬುದು ಸಮೀಚೀನವಾದ ಶ್ರೀಹರಿಯ ನಾಮವು. (ಸುನಾಮದಲಿ ಕರೆಸಿದ).

೩. ಶ್ರೀಹರಿಯು ಸರ್ವತ್ರವ್ಯಾಪಕನು. ಅಣುರೇಣುತೃಣಕಾಷ್ಠಾದಿಗಳಲ್ಲಿ ಪರಿಪೂರ್ಣವ್ಯಾಪ್ತನು.

೪. ಆದರೆ, ಈ ಲೋಕದ ಜನರಿಗೆ (ಲೋಗರಿಗೆ) ಸಾಮಾನ್ಯಪುರುಷನಂತೆ ಪರಿಚ್ಛಿನ್ನರೂಪದಿಂದ (ಖಂಡ ರೂಪಗಳಿಂದ, ರಾಮ, ಕೃಷ್ಣ, ವೇದವ್ಯಾಸ-ಇತ್ಯಾದಿ ರೂಪ ನಾಮಗಳಿಂದ) ತೋರಿದನು. ಶ್ರೀಹರಿಯ ಖಂಡ ರೂಪಗಳಿಗೂ ಮೂಲರೂಪಕ್ಕೂ ಅತ್ಯಂತ ಅಭೇದ.

೫. ದ್ವಾಪರಯುಗದ ಕೊನೆಯಲ್ಲಿ ಲೋಕಕಂಟಕರಾಗಿದ್ದ ದೈತ್ಯರನ್ನು ಸಂಹರಿಸಲೋಸುಗ, ಆ ಧರ್ಮಸ್ವರೂಪನು ತನ್ನ ಮಂದಿರವಾದ ಶ್ವೇತದ್ವೀಪವನ್ನು ಬಿಟ್ಟು, ಅವತಾರತ್ವೇನ ಭೂಲೋಕದಲ್ಲಿ ಪ್ರಕಟನಾಗಿ, ನಿಜ ಭಕ್ತರನ್ನು ದುಷ್ಟಸಂಹಾರದ್ವಾರಾ ಸಂರಕ್ಷಿಸಿದನು. ಶಿಷ್ಟಪರಿಪಾಲನೆ ಮತ್ತು ದುಷ್ಟಶಿಕ್ಷಣವೇ ಆ ಧರ್ಮಸಂಸ್ಥಾಪಕನಾದ, ಸತ್ಯಸಂಕಲ್ಪನ ಇಚ್ಛೆ. ॥೬॥

## ಪದ್ಯ-೧೦

**ಮೂಲ:-**

ಶ್ರೀ ವಿರಿಂಚಾದ್ಯಮರನುತ ನಾ ।
ನಾವತಾರವ ಮಾಡಿ ಸಲಹಿದ ।
ದೇವತೆಗಳನು ಋಷಿಗಳನು ಕ್ಷಿತಿಪರನು ಮಾನವರ ॥
ಸೇವೆಗಳ ಕೈಕೊಂಡು ಫಲಗಳ ।
ನೀವ ನಿತ್ಯಾನಂದಮಯ ಸು ।
ಗ್ರೀವ ಧ್ರುವ ಮೊದಲಾದ ಭಕ್ತರಿಗಿತ್ತ ಪುರುಷಾರ್ಥ ॥೧೦॥

**ಅವತರಣಿಕೆ :**

ರಮಾಬ್ರಹ್ಮಾದಿ ವಂದಿತ ಪಾದಪದ್ಮನಾದ ಆ ಪಾವನ್ನಮೂರುತಿಯು, ನಿತ್ಯಾನಂದಮಯನಾದ್ದಾಗ್ಯೂ, ತನ್ನ ಭಕ್ತರು ಮಾಡುವ ಸೇವೆಗಳನ್ನು ಸ್ವೀಕರಿಸಿ, ಅವರಿಗೆ ಪರಮ ಪುರುಷಾರ್ಥರೂಪವಾದ ಫಲಗಳನ್ನಿತ್ತು, ಸಂರಕ್ಷಿಸುವನು- ಎಂದು ತಿಳಿಸುತ್ತಾರೆ. ॥೧೦॥

**ಪ್ರತಿಪದಾರ್ಥ :**

**ಶ್ರೀ** = ಶುಭಮಂಗಳಪ್ರದಳಾದ ರಮಾದೇವಿ. **ವಿರಿಂಚಿ** = ಚತುರ್ಮುಖ ಬ್ರಹ್ಮದೇವರು, **ಆದಿ ಅಮರನುತ** = ಇವರೇ ಮೊದಲಾದ ಸಕಲ ದೇವತೆಗಳಿಂದ ಸ್ತುತ್ಯಮಾನನಾಗಿ, **ನಾನಾ ಅವತಾರವ ಮಾಡಿ** = ಮತ್ಸ್ಯಾದಿ ಅನೇಕ ಅವತಾರಗಳನ್ನು ಎತ್ತಿ. **ದೇವತೆಗಳನು** = ದೇವತಾವರ್ಗವನ್ನೂ, **ಋಷಿಗಳನು** = ವಾಲ ಖಿಲ್ಯಾದಿ ಋಷಿಗಣವನ್ನೂ, **ಕ್ಷಿತಿಪರನು** = ಪರೀಕ್ಷಿದ್ರಾಜಾದಿ ಅರಸರುಗಳನ್ನೂ, **ಮಾನವರ** = ಸಾಧಾರಣಭಕ್ತರನ್ನೂ, **ಸಲಹಿದ** = ಆಪತ್ತುಗಳಿಂದ ಸಂರಕ್ಷಿಸಿದನು. **ಸೇವೆಗಳ** = ಅವರು ಮಾಡುವ

ಪೂಜಾದಿ ಸೇವೆಗಳಿಂದ. **ಕೈಕೊಂಡು** = ಸಂತುಷ್ಟನಾಗಿ, ಆಸೇವಾದಿಗಳನ್ನು ತಾನು ಸ್ವೀಕರಿಸಿ, **ಫಲಗಳನು ಈವ** = ಅವರವರ ಯೋಗ್ಯತೆಗೆ ತಕ್ಕಂತೆ ಫಲಗಳನ್ನು ಕೊಡುತ್ತಾನೆ. **ನಿತ್ಯಾನಂದಮಯ** = ಸದಾ ಆನಂದಪರಿಪೂರ್ಣನಾದ ಶ್ರೀಪರಮಾತ್ಮನು, **ಸುಗ್ರೀವ** = ಸುಗ್ರೀವ, **ಧ್ರುವ** = ಧ್ರುವ, ರಾಯ, **ಮೊದಲಾದ** = ಇವರೇ ಮುಂತಾದ, **ಭಕ್ತರಿಗೆ** = ನಿಜಭಕ್ತರಿಗೆ, **ಪುರುಷಾರ್ಥ** = ಇಹದಲ್ಲಿ ಲೌಕಿಕಸುಖ ಮತ್ತು ಪಾರತ್ರಿಕದಲ್ಲಿ ನಿತ್ಯಾನಂದ ಶಾಶ್ವತಮುಕ್ತಿಸುಖಗಳನ್ನು, **ಇತ್ತ** = ಕೊಟ್ಟವನಾಗಿದ್ದಾನೆ. ॥೧೦॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ಪರಮಾತ್ಮನ ಮಹಿಮೆ ಹೇಳುತಾರೆ, ರಮಾ-ಬ್ರಹ್ಮಾದಿ ದೇವತೆಗಳಿಂದ ಸ್ತೋತ್ರಮಾಡಿಕೊಳ್ಳಲ್ಪಟ್ಟವನಾಗಿ, ಮತ್ಸ್ಯಾದಿ ಅವತಾರಗಳ ಮಾಡಿ, ಬ್ರಹ್ಮಾದಿದೇವತೆಗಳನ್ನು, ವಾಲ್ಮೀಕ್ಯಾದಿ ಋಷಿಗಳನ್ನೂ, ಜನಮೇಜಯಾದಿ ಅರಸರುಗಳನ್ನು, ಸಾಧಾರಣರಾದ ಭಕ್ತರಾದ ಜನರುಗಳನ್ನೂ ಸಂರಕ್ಷಣೆ ಮಾಡೋವನಾಗಿದ್ದಾನೆ. ತನಗೆ ಸೇವಾಮಾಡತಕ್ಕ ಜನಗಳ ಪೂಜಾದಿ ಸೇವಾದಿಂದ ಸಂತುಷ್ಟನಾಗಿ, ಅವರುಗಳಿಗೆ ಯೋಗ್ಯಫಲಗಳ ಕೊಡುತಾನೆ. ಸದಾಪೂರ್ಣವಾದ ಸುಖಪೂರ್ಣನಾದ ಪರಮಾತ್ಮ ಸೂರ್ಯಪುತ್ರನಾದ ಸುಗ್ರೀವನೇನು, ಉತ್ತಾನಪಾದರಾಯನ ಪುತ್ರ ಧ್ರುವರಾಯನೇನು, ಇನ್ನೂ ಅನೇಕರಾದ ತನ್ನ ನಂಬಿದ ದೃಢಭಕ್ತರಿಗೆ, ಮನುಷ್ಯಗೆ. ಇಹದಲ್ಲಿ ಬೇಕಾದ ಮಹಾಸುಖವನ್ನು. ಪಾರತ್ರಿಕದಲ್ಲಿ ಮೋಕ್ಷಾಖ್ಯಮಹಾಸುಖವನ್ನೂ ಕೊಡೋವನಾದ. ಭಕ್ತರಿಗೆ ಇಹದಲ್ಲಿ ಮಹಾಸುಖ ಎಂದರೆ, ಸದಾ ತನ್ನಲ್ಲಿ ಸ್ಮೃತಿಯುಕ್ತವಾದ ಜ್ಞಾನದಿಂದಲೂ, ರಾಜ್ಯೈಶ್ವರ್ಯದಿಂದಲೂ ಪಾಲನ ಮಾಡಿಸೋವನಾಗಿದ್ದಾನೆಂತ ತಾತ್ಪರ್ಯ. ॥೧೦॥

## ೨. ಭಾವದರ್ಪಣ

ತ್ರಿಃಪಿಠಿಂಚಾದ್ಯ ॥೧೦॥

## ೩. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ

"ತ್ರಿಃ" ಇತಿ। 'ನಾನಾ' ಇತಿ। "ಮತ್ಸ್ಯಾಶ್ವ (ಕ್ವ) ಕಚ್ಛಪ ನೃಸಿಂಹ ವರಾಹ ಹಂಸ ರಾಜನ್ಯ ವಿಪ್ರ ವಿಬುಧೇಷು ಕೃತಾವತಾರಃ। ತ್ವಂ ಪಾಸಿ ನಸ್ತ್ರಿಭುವನಂ ಚ ಯಥಾಧುನೇಶ ಭಾರಂ ಭುವೋ ಹರ ಯದೂತ್ತಮ ವಂದನಂ ತೇ॥" ಇತಿ ಗರ್ಭಸ್ತುತೌ. ॥೧೦॥

### ಕನ್ನಡಾರ್ಥ

ತಾನೇ ಅವತಾರಗಳನ್ನು ಮಾಡಿ, ದೇವ, ಋಷಿ ಕ್ಷಿತಿಪ ಮಾನವರನ್ನು ಸಂರಕ್ಷಿಸಿ, ಅವರ ಸೇವಾನುಸಾರವಾಗಿ, ಫಲವನ್ನು ಕೊಟ್ಟನೆಂಬಲ್ಲಿ ಭಾಗವತ ವಚನಗಳು ಆಧಾರವಾಗಿರುತ್ತವೆ. 'ಮತ್ಸ್ಯ, ಕೂರ್ಮ, ವರಾಹ, ನೃಸಿಂಹ, ಹಂಸ, ರಾಜ, ವಿಪ್ರ, ದೇವ-ಮುಂತಾದ ರೂಪಗಳಿಂದ ಅವತರಿಸಿ, ಮೂರು ಲೋಕಗಳನ್ನೂ ಸಂರಕ್ಷಿಸುತ್ತೀ! ಆದುದರಿಂದ ಹೇ ದೇವನೇ! ಈಗಾದರೂ ಅವತರಿಸಿ, ಭೂಭಾರವನ್ನು ಪರಿಹರಿಸು! ಯದೂತ್ತಮ! ನಿನಗೆ ನಮಸ್ಕಾರವಿರಲಿ"। ಎಂದು ಗರ್ಭಸ್ತುತಿಯಲ್ಲಿ ಪ್ರಾರ್ಥಿಸಿರುತ್ತದೆ. ॥೧೦॥

### ಭಾವಪ್ರಕಾಶಿಕೆ

ಲಕ್ಷ್ಮೀ ಬ್ರಹ್ಮಾದಿವಂದ್ಯನಾದ ಶ್ರೀಮನ್ನಾರಾಯಣನು ಮತ್ಸ್ಯಾದ್ಯನಂತಾವತಾರ ಮಾಡಿ, ಅಜಿತ್, ವಾಮನ-ಮೊದಲಾದ ಅವತಾರಗಳಿಂದ ದೇವತೆಗಳನ್ನೂ, ಋಷಭಾದಿ ಅವತಾರಗಳಿಂದ ರಾಜರುಗಳನ್ನೂ, ರಾಮಕೃಷ್ಣಾದಿ ರೂಪಗಳಿಂದ ಮನುಷ್ಯರನ್ನೂ, ಸಲಹಿದನೆಂಬ ತಾತ್ಪರ್ಯ.

ಆಯಾ ಕಾಲೀನರಾದ ಜನರಿಂದ ಸಾಕ್ಷಾತ್ತಾಗಿಯೂ, ಇತರ ಕಾಲದಲ್ಲಿ ಪ್ರತಿಮಾದಿರೂಪಗಳಿಂದ, ಇತರ ಜನರಿಂದಲೂ ಸೇವೆಗಳನ್ನು ಸ್ವೀಕರಿಸಿ, ಅವರವರಿಗೆ ಸುಗ್ರೀವ, ಧ್ರುವ ಮೊದಲಾದವರಿಗೆ ಕೊಟ್ಟಂತೆ, ಪುರುಷಾರ್ಥಗಳನ್ನು ಕೊಡುವನೆಂಬ ತಾತ್ಪರ್ಯ. ॥೧೧॥

## ೪. ಶ್ರೀ ಗುರುಹೃದಯ ಪ್ರಕಾಶಿಕೆ

ಶ್ರೀಬ್ರಹ್ಮಾದಿಸಂಸ್ತುತನಾದ ದೇವರು ಮತ್ಸ್ಯಾದಿ ನಾನಾವತಾರ ಮಾಡಿ, ದೇವತೆಗಳನ್ನೂ, ಋಷಿಗಳನ್ನೂ, ಮನ್ವಾದಿ ಕ್ಷಿತಿಪನೆಂಬ ದೊರೆಗಳನ್ನೂ, ಸಜ್ಜನರನ್ನೂ ಸಲಹಿದನು. ಮತ್ತು ಅವರವರ ಸೇವೆಗಳನ್ನು ಅಂಗೀಕರಿಸಿ, ತಾನು ನಿತ್ಯಾನಂದಸ್ವರೂಪನಾದಾಗ್ಯೂ ಸೇವಾನುಸಾರ ಫಲವನ್ನು ಕೊಡುವನು. ಸುಗ್ರೀವ, ಧ್ರುವ-ಮೊದಲಾದ ದೃಢಭಕ್ತರಿಗೆ ಅವರಿದ್ದಲ್ಲೇ ಹೋಗಿ, ಪುರುಷಾರ್ಥಗಳನ್ನು ಕೊಟ್ಟನು. ॥೧೧॥

# ಸರ್ವವ್ಯಾಖ್ಯಾನಸಾರ ಸಂಗ್ರಹ

೧. **ಶ್ರೀ**- ಸದಾಕಾಂತಿಸಂಪನ್ನಳೂ, ನಿತ್ಯಮುಕ್ತಳೂ, ನಿರ್ವಿಕಾರಳೂ ಆದ ಶ್ರೀಲಕ್ಷ್ಮೀದೇವಿಯು ಪರಮಮಂಗಳ ಪ್ರದಳು. "ಚಿತ್ತದಲಿ ಆನಂದ ಸೂಸುವ ಸಿರಿವಳು ರಮಾ"- ಎಂಬ **ಶ್ರೀಪುರಂದರದಾಸರ** ಉಕ್ತಿಯಂತೆ, ಸತ್ವಗುಣಾಭಿಮಾನಿಯಾದ ಶ್ರೀನಾಮಕಳಾದ ರಮಾ, ಜೀವರಿಗೆ ಶ್ರೀಹರಿಯ ಆಜ್ಞಾನುಸಾರ ನಿತ್ಯಾನಂದರೂಪವಾದ ಮುಕ್ತಿಪ್ರದಳು.

೨. **ವಿರಂಚಿ**- ಮಾಯಾದೇವಿಯ ದೆಸೆಯಿಂದ ಶ್ರೀವಾಸುದೇವನಾಮಕ ಶ್ರೀಪರಮಾತ್ಮನಿಂದ ಸೂಕ್ಷ್ಮಸೃಷ್ಟಿಯಲ್ಲಿ ಜನಿಸಿದ ಶ್ರೀಲಕ್ಷ್ಮೀನಾರಾಯಣರ ಜ್ಯೇಷ್ಠಪುತ್ರರಾದ ಚತುರ್ಮುಖ ಬ್ರಹ್ಮದೇವರಿಗೆ **ವಿರಂಚಿ**-ಎಂದು ಹೆಸರು.

೩. ಶ್ರೀ ವಿರಿಂಚಿ ಇತ್ಯಾದಿ ಸಕಲದೇವತಾಸಮೂಹದಿಂದ ಸಂಸ್ತುತ್ಯಮಾನನಾದವನು ಶ್ರೀಹರಿ. ಇಂತಹ, ರಮಾಬ್ರಹ್ಮಾದಿ ಸಕಲಅಮರನುತನಾದ ಆ ಅಪರಿಮಿತ ಮಹಾ ಮಹಿಮಾ ಸಂಪನ್ನನು. ಯುಗ ಯುಗಗಳಲ್ಲಿ ಧರ್ಮಸಂಸ್ಥಾಪನೆಗಾಗಿ, ಮತ್ಸ್ಯಾದಿ ನಾನಾ ಅವತಾರಗಳನ್ನು ಮಾಡಿದನು. ವೇದವ್ಯಾಸ, ದತ್ತ, ಕಪಿಲ, ಮಹಿದಾಸಾದಿ ಅನೇಕ ಅವತಾರಿಯಾದ ಶ್ರೀಹರಿಯು ಇಂದ್ರಾದಿ ಸಕಲದೇವತೆಗಳನ್ನೂ, ವಾಲಖಿಲ್ಯಾದಿ ಋಷಿಗಣವನ್ನೂ, ಜನಮೇಜಯಾದಿ ರಾಜರುಗಳನ್ನೂ ಮತ್ತು ಮಾನುಷೋತ್ತಮರಾದ ಏಕಾಂತಭಕ್ತರುಗಳನ್ನೂ ಸಂರಕ್ಷಿಸಿದನು. ದುಷ್ಟ ಶಿಕ್ಷಣ, ತದ್ದ್ವಾರಾ ಶಿಷ್ಟ ಪರಿಪಾಲನೆ. ತನ್ಮೂಲಕ ಧರ್ಮಸಂಸ್ಥಾಪನಾಕಾರ್ಯ- ಇವೇ ಧರ್ಮ ಸ್ವರೂಪಿಯಾದ ಆ ದಯಾಮಯನ ಕ್ರಿಯಾವಿಶೇಷಗಳು.

೪. ಶ್ರೀಹರಿಯು **ನಿತ್ಯಾನಂದಮಯನು**- ಅವನ ಆನಂದವು ನಿತ್ಯ ಹಾಗೂ ಪರಿಪೂರ್ಣವು. ಅಪರಿಚ್ಛಿನ್ನ ಗುಣಪೂರ್ಣನಾದ ಆ ಅಪ್ರಮೇಯನು ನಿತ್ಯಾನಂದಯುಕ್ತನು. ತಾನು ಸ್ವರಮಣನು, ಪರಾಪೇಕ್ಷರಹಿತನು- ಆದಾಗ್ಯೂ, ಭಕ್ತರನ್ನು ಅನುಗ್ರಹಿಸಲೋಸುಗ, ಅವರ ಸೇವೆಗಳನ್ನು ತಾನು ಸ್ವೀಕರಿಸಿ, ಅವರವರ ಯೋಗ್ಯತಾನುಸಾರ ಫಲಪ್ರದನಾಗುವನು. ಇದಲ್ಲವೇ ಆ ಕಂಜನಾಭನ ಕಾರುಣ್ಯಾತಿಶಯವು !

೫. ಸೂರ್ಯಪುತ್ರನಾದ ಸುಗ್ರೀವನ ಸಖ್ಯವನ್ನು ಅಗ್ನಿಸಾಕ್ಷಿಯಾಗಿ ಶ್ರೀಮದಾಂಜನೇಯನ ದ್ವಾರಾ ಮಾಡಿ. ವಾಲಿಭಂಜನನಾದ ಶ್ರೀರಾಮಚಂದ್ರಮೂರ್ತಿ,ಸುಗ್ರೀವನಿಗೆ ಕಿಷ್ಕಿಂಧಾನಗರದಲ್ಲಿ ರಾಜ್ಯಾಭಿಷೇಕ ಮಾಡಿ, ಅವನನ್ನು ಉದ್ಧರಿಸಿದನು. ಉತ್ತಾನಪಾದರಾಯನ ಸುಪುತ್ರನಾದ ಧ್ರುವಬಾಲಕನಿಗೆ ತನ್ನ ದಿವ್ಯದರ್ಶನವನ್ನು ಕೊಟ್ಟು, ಅವನಿಗೆ ಅನುಗ್ರಹಿಸಿದ ಧ್ರುವವರದನಾದ ಶ್ರೀಮನ್ನಾರಾಯಣನು, ಇಂತು ಸುಗ್ರೀವ, ಧ್ರುವ- ಇತ್ಯಾದಿ ಅನೇಕ ಭಕ್ತರನ್ನು ಸಂರಕ್ಷಿಸಿ, ಕೊನೆಯಲ್ಲಿ ಪರಮಪುರುಷಾರ್ಥರೂಪನಾದ ಮೋಕ್ಷವನ್ನೇ ಅನುಗ್ರಹಿಸಿದ ಆ ಮುಕುಂದನ ಮಹಾಕಾರುಣ್ಯಾತಿಶಯವು ಅನುಪಮವಲ್ಲವೇ ! ॥೧೧॥

## ಪದ್ಯ-೧೧

**ಮೂಲ :**

**ದುಷ್ಟದಾನವಹರಣ ಸರ್ವೋ ।**
**ತ್ಕೃಷ್ಟ ಸದ್ಗುಣಭರಿತ ಭಕ್ತಾ ।**
**ಭೀಷ್ಟದಾಯಕ ಭವವಿನಾಶಕ ವಿಗತಭಯಶೋಕ ॥**
**ನಷ್ಟತುಷ್ಟಿಗಳಲ್ಲ ಸೃಷ್ಟ್ಯಾ ।**
**ದ್ಯಷ್ಟಕರ್ತನಿಗಾವ ಕಾಲದಿ ।**
**ಹೃಷ್ಟನಾಗುವ ಸ್ಮರಣೆಮಾತ್ರದಿ ಹೃದ್ಗುಹಾವಾಸಿ ॥೧೧॥**

**ಅವತರಣಿಕೆ :**

ದುಷ್ಟಜನಶಿಕ್ಷಕನು, ಉತ್ಕೃಷ್ಟ ಶುಭಗುಣಗಣಭರಿತನು, ಭಕ್ತರ ಮನೋಭೀಷ್ಟಪ್ರದನು, ಸಂಸಾರದಿಂದ ಜೀವರನ್ನು ಮುಕ್ತಗೊಳಿಸುವವನು, ಭಯಶೋಕಾದಿ ಸಮಸ್ತದೋಷವಿದೂರನು, ಸೃಷ್ಟ್ಯಾದಿ ಅಷ್ಟಕರ್ತನು, ಹೃದ್ಗುಹಾನಿವಾಸಿಯಾದ ಆ ಹೃತ್ತಾಪಹಾರಕನು, ಸ್ಮರಣೆಮಾತ್ರದಿಂದ ಸಂತುಷ್ಟನಾಗುವನೆಂದು ತಿಳಿಸುತ್ತಾರೆ. ॥೧೧॥

**ಪ್ರತಿಪದಾರ್ಥ :**

**ದುಷ್ಟದಾನವ ಹರಣ** = ಭಗವದ್ದ್ವೇಷಿಗಳೂ, ದುರುಳರೂ, ತಮೋಯೋಗ್ಯರೂ ಆದ ದೈತ್ಯರನ್ನು ವಿನಾಶಗೊಳಿಸುವವನು. **ಸರ್ವೋತ್ಕೃಷ್ಟ** = ಸಕಲಚರಾಚರ ಪ್ರಾಣಿಗಳಿಗಿಂತ ಅತ್ಯಂತ ಶ್ರೇಷ್ಠನಾದ, **ಸದ್ಗುಣಭರಿತ** = ಮಂಗಳಕರವಾದ ಗುಣರಾಶಿಗಳಿಂದ ಪರಿಪೂರ್ಣನಾದವನು, **ಭಕ್ತಾಭೀಷ್ಟ ದಾಯಕ** = ತನ್ನ ಭಕ್ತರಿಗೆ ಅವರವರ ಯೋಗ್ಯತಾನುಸಾರ ಇಷ್ಟಗಳನ್ನು

ಪೂರ್ತಿಗೊಳಿಸುವವನು. **ಭವವಿನಾಶಕ** = ಜನನ ಮರಣಾಬ್ಧಿಯಾದ ಸಂಸಾರ ಸಾಗರದಿಂದ ಭಕ್ತರನ್ನು ವಿಮೋಚನಗೊಳಿಸುವವನು. **ವೀತಭಯಶೋಕ** = ಸಕಲವಿಧವಾದ ಭಯಗಳು, ಕ್ಲೇಶಾದಿಗಳಿಂದ ವಿದೂರನು, **ಸೃಷ್ಟ್ಯಾದ್ಯಷ್ಟ ಕರ್ತನಿಗೆ** = ಸೃಷ್ಟಿ, ಸ್ಥಿತಿ, ಸಂಹಾರ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷ-ಇತ್ಯಾದಿ ಅಷ್ಟಕಾರ್ಯ ನಿರ್ವಾಹಕನಾದವನಿಗೆ, **ನಷ್ಟತುಷ್ಟಗಳಿಲ್ಲ** = ಯಾರಿಂದಲೂ, ಯಾವ ಕಾರಣದಿಂದಲೂ, ನಾಶವಾಗಲೀ, ತೃಪ್ತಿಯಾಗಲಿ ಯಾವ ಕಾಲಕ್ಕೂ ಇಲ್ಲವೇ ಇಲ್ಲ. **ಆವಕಾಲದಿ** = ಅನಾದ್ಯನಂತ ಕಾಲದಿಂದಲೂ ಶಾಶ್ವತವಾದ ಸ್ವಾನಂದಪರಿಪೂರ್ಣನಾಗಿದ್ದಾನೆ. **ಹುದ್ಗುಹಾವಾಸಿ** = ಸಕಲ ಜೀವರಹೃದಯವೆಂಬ ಗುಹಾದಲ್ಲಿ (ಹೃತ್ಪದ್ಮವೆಂಬ ಮಂದಿರದಲ್ಲಿ) ಬಿಂಬರೂಪನಾಗಿ ಆವಾಸವಾಗಿರುವ ಶ್ರೀಪರಮಾತ್ಮನು. **ಸ್ಮರಣೆಮಾತ್ರದಿ** = ಧ್ಯಾನಪೂರ್ವಕ ಚಿಂತನೆ ಮಾಡುವ ಮಾತ್ರದಿಂದಲೇ, **ಹೃಷ್ಟನಾಗುವ** = ಪ್ರಸನ್ನನಾಗಿ, ಪ್ರತ್ಯಕ್ಷ ಗೋಚರನಾಗುವನು ॥೧೧॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಇನ್ನೂ ಪರಮಾತ್ಮನ ಮಹಿಮೆ ಹೇಳುತ್ತಾರೆ. ಭಗವದ್ದ್ವೇಷಿಗಳಾದ ಮಹಾದುಷ್ಟರಾದ ದೈತ್ಯರನ್ನು ಸಂಹಾರ ಮಾಡಿದವ. ಸರ್ವ ಚರಾಚರ ಪ್ರಾಣಿಗಳಿಗಿಂತಲೂ ಸದೃಶರಹಿತವಾದ ಶ್ರೇಷ್ಠನಾದವ, ಮಂಗಳಕರಗಳಾದ ಗುಣಗಳಿಂದ ಪೂರ್ಣನಾದವ, ಯೋಗ್ಯತಾನುಸಾರ ಭಕ್ತರ ಅಭೀಷ್ಟಗಳ ಕೊಡತಕ್ಕವ, ಭಕ್ತರ ಸಂಸಾರಾಬ್ಧಿದುಃಖವನ್ನು ನಾಶಮಾಡತಕ್ಕವ, ಹೋಗಲ್ಪಟ್ಟ ಭಯವೇನು, ದುಃಖವೇನು ಉಳ್ಳವ, ಸೃಷ್ಟಿ, ಸ್ಥಿತಿ ಸಂಹಾರ ನಿಯಮನ ಜ್ಞಾನ ಅಜ್ಞಾನ ಬಂಧ ಮೋಕ್ಷಪ್ರದಾತೃವಾದ ಪರಮಾತ್ಮನು ದಾವದರಿಂದಲೂ, ದಾರಿಂದಲೂ ನಾಶಹೊಂದತಕ್ಕವನಲ್ಲ. ದಾವ ಪದಾರ್ಥ

ವಿಂದಲೂ, ತೃಪ್ತಿ ಹೊಂದತಕ್ಕವನಲ್ಲ. ಶಾಶ್ವತವಾದ ಸ್ವಾನಂದದಿಂದ ಪೂರ್ಣನಾಗಿದ್ದಾನೆ. ಹೃದಯಾಕಾಶದಲ್ಲಿ ಆವಾಸನಾಗಿರುತ್ತ, ಪೂರ್ಣೈಶ್ವರ್ಯಗುಣೋಪೇತನಾದ ಶ್ರೀ ಪರಮಾತ್ಮ ಸದಾ ಸರ್ವ ಕಾಲದಲ್ಲೂ ಧ್ಯಾನಪೂರ್ವಕ ಸ್ಮರಣೆಮಾಡುವ ಮಾತ್ರದಿಂದ ಸಂತುಷ್ಟನಾಗಿ ಪ್ರತ್ಯಕ್ಷನಾಗುವನು. ॥೧೧॥

## ೨. ಭಾವದರ್ಪಣ

ದುಷ್ಟ ॥೧೧॥

## ೩. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

'ದುಷ್ಟ' ಇತಿ ॥ 'ನಷ್ಟ' ನಾಶಭಾವೇ ಪ್ರತ್ಯಯಃ ॥ 'ತುಷ್ಟಿ' ಆಗಂತುಕೀ ॥ ॥(೬೨)॥ 'ಸ್ಮರಣ' ಇತಿ॥ ಸ್ವಸುರಾಗೇತಿ ಶ್ರುತಿಗೀತಾಯಾಮ್ ॥೧೧॥

## ಕನ್ನಡಾರ್ಥ

'ನಷ್ಟ'-ಎಂಬ ಶಬ್ದಕ್ಕೆ ನಾಶವೆಂದು ಅರ್ಥ. ಇಲ್ಲಿರುವ ಪ್ರತ್ಯಯವು ಭಾವಾರ್ಥದಲ್ಲಿದೆ. 'ತುಷ್ಟಿ'-ಎಂದರೆ ಆಗಂತುಕವಾದ ತೃಪ್ತಿ-ಎಂದು ತಿಳಿಯಬೇಕು. ಪರಮಾತ್ಮನಿಗೆ ವಿಷಯಗಳಿಂದ ನೂತನವಾದ ತೃಪ್ತಿಯುಂಟಾಗುವುದಿಲ್ಲ, 'ಸ್ಮರಣಮಾತ್ರದಿ'-ಎಂದು ದಾಸರಾಯರು ಹೇಳಿದ್ದು. 'ಸ್ಮರಣಾತ್'-ಸ್ವಸುರಾಗ ತದ್ಭವಾನ್ ಭವ ಉರಗದಂಡವಿಕ್ಷತ್ತ್ಯಯೋಃ" ಎಂದು ಹೇಳುತ್ತಿರುವ ಶ್ರುತಿಗೀತೆಯು ಅರ್ಥವನ್ನೇ ಸಂಗ್ರಹಿಸುತ್ತದೆ ॥೧೧॥

## ೪. ಭಾವಪ್ರಕಾಶಿಕೆ

ಶ್ರೀಪರಮಾತ್ಮನು ನಾನಾವತಾರ ಮಾಡಿದನೆಂದು ಪೂರ್ವಪದ್ಯದಲ್ಲಿ ಹೇಳಿದರು. ಇದರಿಂದ, ನಮ್ಮಂತೆ ಪರಮಾತ್ಮನಿಗೂ ಬಲವಂತವಾಗಿ ಜನ್ಮ

ಗಳು ಬರುವವೊ ಏನೋ ಎಂಬ ಸಂಶಯವನ್ನು ಪರಿಹರಿಸುವುದಕ್ಕಾಗಿ ದುಷ್ಟದಾನವಹರಣನೆಂದರು. ಒಂದೊಂದು ಅವತಾರದಲ್ಲೂ, ಕೇವಲ ತನ್ನ ಪ್ರಯೋಜನಕ್ಕಾಗಿ. ಕರ್ಮಾನುಸಾರವಾಗಿ ಹುಟ್ಟಿದನಂತಲ್ಲ. ಬ್ರಹ್ಮಾದಿಗಳಿಂದ ಪ್ರಾರ್ಥನೆ ಮಾಡಿಸಿಕೊಂಡು, ದುಷ್ಟರಾದ ರಾವಣ. ಕಂಸ-ಮೊದಲಾದವರ ನಿಗ್ರಹಕ್ಕಾಗಿ. ತನ್ನ ಇಚ್ಛೆಯಿಂದ ಅವತಾರ ಮಾಡಿರುವನೆಂಬ ತಾತ್ಪರ್ಯ. ದೈತ್ಯರ ಸಂಹಾರ ದೇವತೆಗಳ ರಕ್ಷಣೆ ಮಾಡಿದುದರಿಂದ ಪರಮಾತ್ಮನಿಗೆ ಮನುಷ್ಯರಂತೆ ವೈಷಮ್ಯಾದಿಗಳುಂಟೆಂಬ ಸಂಶಯವನ್ನು ಪರಿಹರಿಸುತ್ತಾ, ಸರ್ವೋತ್ಕೃಷ್ಟಸದ್ಗುಣ ಭರಿತನೆಂದರು. ಸರ್ವೋತ್ತಮವಾದ ಗುಣಪೂರ್ಣನೆಂದ ಮೇಲೆ, ವೈಷಮ್ಯಾದಿ ದೋಷಗಳಿಲ್ಲವೆಂದು ಪ್ರತ್ಯೇಕ ಹೇಳಬೇಕಾಗಿಲ್ಲವೆಂಬ ತಾತ್ಪರ್ಯ. ಹಾಗಾದರೆ ದೈತ್ಯರನ್ನೇಕೆ ಕೊಂದನೆಂದರೆ-ಭಕ್ತಾಭೀಷ್ಟದಾಯಕನೆಂದರು. ಭಕ್ತರ ಕಷ್ಟನಿವಾರಣಪೂರ್ವಕ ಇಷ್ಟಾರ್ಥ ಸಿದ್ಧಿಗೋಸ್ಕರ. ಕೊಂದನೆಂದು ತಾತ್ಪರ್ಯ, ಅಷ್ಟು ಮಾತ್ರವಲ್ಲದೆ ಸಂಸಾರದಿಂದಲೂ ಸಹ ಉದ್ಧಾರ ಮಾಡುವನು. ದೈತ್ಯರ ಭಯದಿಂದಾಗಲಿ, ಅವರು ತನ್ನ ಮೇಲೆ ದ್ವೇಷ ಮಾಡುವುದರಿಂದ. ಪರಮಾತ್ಮನಿಗೆ ಅವರಲ್ಲಿ ಅಸೂಯೆ ಉಂಟಾಗಿ, ಆ ಕಾರಣದಿಂದಾಗಲೀ, ಅಥವಾ ತನ್ನ ನಷ್ಟ ಲಾಭಗಳ ಉದ್ದೇಶದಿಂದಾಗಲಿ ದೈತ್ಯರನ್ನು ಕೊಲ್ಲಲಿಲ್ಲ. ಅವರವರ ಕರ್ಮಾನುಸಾರವಾಗಿ, ಅವರವರಿಗೆ ಫಲವನ್ನು ಕೊಡುವವನಾದುದರಿಂದ. ದೇವತೆಗಳ ರಕ್ಷಣೆಗಾಗಿ, ದೈತ್ಯರನ್ನು ಕೊಲ್ಲುವನೇ ಹೊರತು ತನ್ನ ಪ್ರಯೋಜನಕ್ಕಲ್ಲವೆಂಬುದನ್ನು ವಿಗತಭಯ ಶೋಕ- ಸಷ್ಟತುಷ್ಟಿಗಳಿಲ್ಲ ಎಂಬ ಪದಗಳಿಂದ ಹೇಳಿದರು. ಇಂತಹಾ ಸರ್ವಜೀವರ ಹೃದಯಾಕಾಶನಿವಾಸಿಯಾದ ಶ್ರೀಪರಮಾತ್ಮನು ತನ್ನನ್ನು ಸ್ಮರಣೆ ಮಾಡುವ ಮಾತ್ರದಿಂದಲೇ, ಪ್ರಸನ್ನನಾಗುವನು. ಭಕ್ತಿಯಿಂದ ಮಾತ್ರ ಸ್ಮರಣೆ ಮಾಡಬೇಕು ಅಭಕ್ತರು ಮಾಡುವ ಸ್ಮರಣೆಗೆ ಫಲವಿಲ್ಲವೆಂದು "ಅಭಕ್ತ್ಯೋದಾಹೃತಂ ನೈವ ಫಲದಾತೃ ಭವಿಷ್ಯತಿ"- ಎಂಬ ಶ್ರೀ ಮದಾಚಾರ್ಯರ ವಾಕ್ಯದಿಂದ ಸಿದ್ಧವಾಗುವುದು. ॥೧೧॥

## ೫. ಶ್ರೀಗುರುಹೃದಯ ಪ್ರಕಾಶಿಕೆ

ಸೃಷ್ಟಿ, ಸ್ಥಿತಿ, ಸಂಹಾರ, ನಿಯಮನ, ಜ್ಞಾನಾಜ್ಞಾನ, ಬಂಧ ಮೋಕ್ಷ ವೆಂಬ ಎಂಟನ್ನು ಜಗತ್ತಿಗೆ ಉಂಟುಮಾಡುವ ದೇವರಿಗೆ ಈ ಸೃಷ್ಟ್ಯಾದಿಗಳಿಂದ ನಷ್ಟವೆಂಬ ಹಾನಿಯಿಲ್ಲ. ವೃದ್ಧಿ-ಎಂಬ ಲಾಭವೂ ಇಲ್ಲ. ಸರ್ವೋತ್ತಮನು, ಜ್ಞಾನಾನಂದಾದಿ ಸದ್ಗುಣಭರಿತನಾದಾಗ್ಯೂ, ತತ್ತತ್ಕರ್ಮ ಫಲ ಕೊಡುವುದಕ್ಕೆ ದುಷ್ಟ ದಾನವರನ್ನು ಕೊಂದು, ಭಕ್ತರ ಅಭೀಷ್ಟದಾಯಕನಾಗುವನು. ಭವ ನಾಶಕ-ಎಂದರೆ, ತತ್ತದ್ಯೋಗ್ಯಗತಿ ಎಲ್ಲರಿಗೂ ಕೊಡುವನು. ಭಯ-ಶೋಕಾದಿ ಮೋಹಹರನು. ಹೃದಯದೊಳು ಗುಹಾನಾಮಕ ದಹರಾಕಾಶ ದಲ್ಲಿದ್ದು, ತನ್ನ ಸ್ಮರಣೆಮಾತ್ರದಿಂದ ಭಕ್ತರಿಗೆ ಸಂತುಷ್ಟನಾಗುವನು, ಆದರಿಂದ, ಸದಾ ಸುಲಭ. ॥೧೦॥

# ಸರ್ವವ್ಯಾಖ್ಯಾನಸಾರಸಂಗ್ರಹ

**೧. ದುಷ್ಟ ದಾನವಹರಣ-**

ದೈತ್ಯರು ತಮೋಯೋಗ್ಯರು. ಭಗವದ್ದ್ವೇಷಿಗಳು, ಭಗವದ್ಭಕ್ತರ ದ್ವೇಷಿಗಳು ಮತ್ತು ಸಜ್ಜನರಿಗೆ ಸದಾ ಪೀಡೆ ಹಿಂಸಾದಿಗಳನ್ನು ಕೊಡುವವರು. ಸ್ವಭಾವತಃ ದುರುಳರಾದದ್ದರಿಂದ, **ದುಷ್ಟದಾನವರು-** ಎಂದಿದ್ದಾರೆ. ಇಂತಹ ದುಷ್ಟದಾನವರನ್ನು ಶಿಕ್ಷಿಸಿ, ಅವರನ್ನು ನಾಶಗೊಳಿಸಿ, ತದ್ದ್ವಾರಾ ಸಜ್ಜನರ ರಕ್ಷಕನಾಗಿರುವುದರಿಂದ, ಭಕ್ತವತ್ಸಲನಾದ ಭಗವಂತನು **ದುಷ್ಟದಾನವಹರಣನು.**

೨. **ಸರ್ವ-** ಎಂದರೆ, ಸಕಲವಾದ ವಸ್ತುಗಳು. **ಉತ್ಕೃಷ್ಟ-** ಎಂದರೆ, ಅತ್ಯಂತಶ್ರೇಷ್ಠ. ( ಶಿರೋಽಭ್ಯನ್ನೇದರ್ಥ ). ಪರಮಮಂಗಳಕರವಾದ ಅಪ್ರಾಕೃತ ಗುಣರಾಶಿಗಳಿಂದ ಪರಿಪೂರ್ಣನಾದ್ದರಿಂದ, **ಸದ್ಗುಣಭರಿತನು.** ಜಗತ್ತಿನಲ್ಲಿ ವಿದ್ಯಮಾನವಾಗಿರುವ ಸಮಸ್ತಚರಾಚರಾತ್ಮಕವಾದ ಜೀವರಾಶಿಗಳಲ್ಲಿ ಇಲ್ಲದಿರುವ ಅತ್ಯಂತಶ್ರೇಷ್ಠಗಳಾದ ಶುಭಗುಣಗಣ ಧಾತುನಾಗಿ.

ಜ್ಞಾನಾನಂದಾದಿ ಗುಣಗಳಿಂದ ಪರಿಪೂರ್ಣನಾಗಿದ್ದಾನೆ ಪರಮಪುರುಷನಾಮಕನಾ ಶ್ರೀ ಪರಮಾತ್ಮನು. ಇದರಿಂದ **ಸರ್ವೋತ್ಕೃಷ್ಟ ಸದ್ಗುಣಭರಿತನು.**

೩. ತನ್ನನ್ನು ಶುದ್ಧವಾದ ಅಂತಃಕರಣಪೂರಿತವಾದ ಭಕ್ತಿಭಾವದಿಂದ ನಿರಂತರವೂ ಭಜಿಸುತ್ತಿರುವ ಏಕಾಂತಭಕ್ತರ ಸಕಲಮನೋಭೀಷ್ಟಗಳನ್ನು ಇಹದಲ್ಲಿ ಪೂರೈಸಿ. ಪರದಲ್ಲಿ ನಿತ್ಯಾನಂದರೂಪವಾದ ಮುಕ್ತಿಪ್ರದನಾದ ಆ ಮುಕುಂದ ನಾಮಕನಾದ ಶ್ರೀಹರಿಯು **ಭಕ್ತಾಭೀಷ್ಟದಾಯನು.**

**೪. ಭವವಿನಾಶಕ-**

ಅನಾದಿಲಿಂಗದೇಹಸಂಬಂಧದಿಂದ ಕರ್ಮವಶರಾಗಿ, ಜನನ ಮರಣಾದಿರೂಪವಾದ, ದುಸ್ತರವಾದ ಈ ಸಂಸಾರವೆಂಬ ಮಹಾಸಾಗರದಲ್ಲಿ ಬಸವಳಿದು. ಬಂದಾದ ಭಕ್ತಜನರನ್ನು ಭವಸಾಗರದಿಂದ ಉತ್ತರಿಸಿ, ಲಿಂಗಭಂಗದ್ವಾರಾ ಕರ್ಮಬಂಧವಿಮೋಚನೆಗೈದು, ಜೀವರ ಸ್ವರೂಪಗತ ಸ್ವಾನಂದಾವಿರ್ಭಾವರೂಪವಾದ ಶಾಶ್ವತಮುಕ್ತಿಸುಖವನ್ನು ಅನುಗ್ರಹಿಸುವ ಆ ಭಕ್ತವತ್ಸಲನು **ಭವವಿನಾಶಕನು.** **(ಭವ-ಸಂಸಾರ-ಕರ್ಮ** ಬಂಧನರೂಪ- ವಿನಾಶಕ- ನಾಶಗೊಳಿಸುವವನು**).**

**೫. ವೀತಭಯಶೋಕ-**

ಸ್ವರೂಪತಃ ನಿರ್ಭೀತನಾದ ಆ ನಿರಂಜನ ಸ್ವರೂಪಿಗೆ ಯಾರಿಂದಲೂ, ಯಾವಕಾಲಕ್ಕೂ, ಯಾವ ಕಾರಣದಿಂದಲೂ ಭಯವಿಲ್ಲ. ಇದರಿಂದಭಯ ರಹಿತನು. ಸ್ವಾನಂದಪರಿಪೂರ್ಣನಾದ್ದರಿಂದ, ಅವನ ಅಖಂಡರೂಪವಾದ ಆನಂದಕ್ಕೆ ಎಂದೆಂದಿಗೂ ಬಾಧಕವಿಲ್ಲ, ಆನಂದಪೂರ್ಣನಾದ ಆ ಸುಖ ಸ್ವರೂಪನಿಗೆ ಕ್ಲೇಶಾದಿಗಳ ರೂಪವಾದ ದುಃಖವೆಲ್ಲಿಂದ ಬರಬೇಕು? ಅವನ ಸ್ಮರಣಮಾತ್ರದಿಂದ ಜೀವರ ದುಃಖನಾಶವು, ಇದರಿಂದ. **ವೀತಭಯ ಶೋಕನು** (ವೀತ-ಹೋಗಲ್ಪಟ್ಟ).

**೬. ನಷ್ಟ ತುಷ್ಟಗಳಿಲ್ಲ**

ಶ್ರೀಹರಿಯು ಅಚ್ಯುತನು, ಚತುರ್ವಿಧನಾಶರಹಿತನು. ಅನಾದಿ ನಿತ್ಯನು. ಶಶ್ವದೇಕಪ್ರಕಾರನಾದ ಆ ಸರ್ವೇಶ್ವರನಿಗೆ **ನಷ್ಟ** ಎಂದರೆ. ನಾಶ

ವಿಲ್ಲ. ಅಂದರೆ, ಅನಾದ್ಯನಂತಕಾಲದಿಂದಲೂ ನಿತ್ಯಸ್ವರೂಪನು. ನಾಶದೂರನು. **ತುಷ್ಟಿ**-ಎಂದರೆ, ಸಂತೃಪ್ತಿ. ಶ್ರೀಹರಿಯು ಸ್ವಾನಂದಪರಮಾಣನು. ಸ್ವರಮಣನಾದ ಅವನು ಆಪ್ತಕಾಮನು. ಪರಾಪೇಕ್ಷರಹಿತನು. ಸ್ವಾನಂದ ಪರಿಪೂರ್ಣನಿಗೆ ಇನ್ನ್ಯಾರಿಂದಲೂ ತೃಪ್ತಿ ಉಂಟಾಗಬೇಕಾಗಿಲ್ಲ. ಅವನಿಗೆ **ನಷ್ಟ**"-ನೆಂಬ ಹಾನಿಯಾಗಲೀ, '**ತುಷ್ಟಿ**'-ಎಂಬ ಲಾಭವಾಗಲೀ ಎಂದೆಂದಿಗೂ" ಇಲ್ಲ.

**೭. ಸೃಷ್ಟ್ಯಾದಿ ಅಷ್ಟಕರ್ತನಿಗೆ-**

ಸೃಷ್ಟಿ-ಸ್ಥಿತಿ-ಲಯ-ನಿಯಮನ-ಜ್ಞಾನ-ಅಜ್ಞಾನ-ಬಂಧ-ಮೋಕ್ಷ-ಎಂಬ ಈ ಎಂಟು ವಿಧವಾದ ಕ್ರಿಯಾವಿಶೇಷಗಳಿಗೆ ತಾನೇ ಕರ್ತನು. ಸರ್ವಚೇಷ್ಟಾನಿಯಾಮಕನು. ತ್ರಿಗುಣಗಳ ವೈಷಮ್ಯದಿಂದ ಜಗತ್ತಿನ ಸೃಷ್ಟಿ-ಸೃಷ್ಟವಾದ ಜಗತ್ತಿನ ಪರಿಪಾಲನೆ-ಕೊನೆಯಲ್ಲಿ ಗುಣಸಾಮ್ಯದಿಂದ ಜಗತ್ತಿನ ಲಯಕಾರ್ಯ- ಚರಾಚರಾತ್ಮಕವಾದ ಅಖಿಳಜಗತ್ತಿಗೆ ತಾನೇ ಪ್ರಭುವು ಮತ್ತು ಸ್ವಯಂನಿಯಾಮಕನು. (ಈಶನು) ಭಕ್ತರಿಗೆ ಸಮೀಚೀನವಾದ ಜ್ಞಾನಪ್ರದನು. ರಜೋಜೀವರಿಗೆ ಭ್ರಾಂತಿರೂಪವಾದ ಅಜ್ಞಾನಪ್ರದನು-ತಮೋಜೀವರಿಗೆ ನಿತ್ಯದುಃಖಕ್ಕೆ ಹೇತುವಾದ ಅಜ್ಞಾನಪ್ರದನು. ಸಕಲ ಜೀವರನ್ನೂ ಲಿಂಗದೇಹವೆಂಬ ಉಪಾಧಿಯಿಂದ ಬಂಧಿಸಿ, ಭವಕ್ಕೆ ಕಾರಣನು. ಭವವಿಮೋಚನಾದ್ವಾರಾ ಕರ್ಮಕ್ಷಯಗೈದು. ಸಜ್ಜನರಿಗೆ ಸ್ವರೂಪಾನಂದಾವಿರ್ಭಾವರೂಪವಾದ ಮೋಕ್ಷಾನಂದಪ್ರದನು. ಹೀಗೆ ಸೃಷ್ಟ್ಯಾದಿ ಅಷ್ಟಕರ್ತನಾಗಿದ್ದಾನೆ ಆ ಸರ್ವೋತ್ತಮನು.

**೮. ಹೃದ್ಗುಹಾವಾಸಿ-**

ಸಕಲಜೀವರ ಹೃದ್ಗುಹಾ-ಎಂಬ ದಹರಾಕಾಶದಲ್ಲಿ ಬಿಂಬರೂಪದಿಂದ ನಿತ್ಯನಿವಾಸನಾಗಿದ್ದಾನೆ. ಹೃದ್ಗುಹಾಗತ ಹೃತ್ಪದ್ಮವೆಂಬ ಮಂದಿರವೇ ಅವನ ನಿವಾಸಸ್ಥಾನವು. ಇದರಿಂದ **ಹೃದ್ಗುಹಾವಾಸಿಯು.**

೯. ಅಂತಹ ಹೃದ್ಗುಹಾವಾಸಿಯಾದ ಹೃತ್ಪದ್ಮಮಾನಸಮಂದಿರನಾದ ಪರಮಾಪ್ತಬಂಧುವೆನಿಸಿದ ಬಿಂಬರೂಪೀ ಶ್ರೀಹರಿಯು ಅತ್ಯಂತ ಕರುಣಾ

ಮಾಯನು. ತನ್ನನ್ನು ನಿರಂತರ ನಂಬಿ ಭರಿಸುತ್ತಿರುವ ಭಕ್ತಾವಳಿಗೆ ಕೇವಲ ಧ್ಯಾನದಿಂದ ಸಂತುಷ್ಟನಾಗಿ. ಹೃದ್ಗೋಚರನಾಗಿ, ತನ್ನ ಸಂದರ್ಶನಭಾಗ್ಯ ವನಿತ್ತು, ಸಂರಕ್ಷಿಸುವ ದಯಾಸಂಪನ್ನನೆಂದು ಕೊಂಡಾಡುತ್ತಾರೆ.-ಅವನ ಮಹಿಮಾತಿಶಯಗಳನ್ನರಿತ ದಾಸವರ್ಯರು. ॥೧೧॥

## ಪದ್ಯ-೧೨

**ಮೂಲ :**

**ಹಿಂದೆ ಪ್ರಳಯೋದಕದಿ ತಾವರೆ ।**
**ಕಂದನಂಜಿಸಿ ಕಾಯ್ದ ತಲೆಯೊಳು ।**
**ಬಾಂಸೊರೆಯ ಪೊತ್ತವಗಲಿದು ಪರಿಯಂಕ ಪದವಿತ್ತು ॥**
**ವಂದಿಸಿದ ವೃಂದಾರಕರ ಸ ।**
**ದ್ವೃಂದಕುಣಿಸಿದ ಸುಧೆಯ ಕರುಣಾ ।**
**ಸಿಂಧು ಕಮಲಾಕಾಂತ ಬಹುನಿಶ್ಚಿಂತ ಜಯವಂತ ॥೧೨॥**

**ಅವತರಣಿಕೆ :**

ಪದ್ಮಸೃಷ್ಟಿಗೆ ಪೂರ್ವದಲ್ಲಿ, ಪ್ರಳಯೋದಕದಲ್ಲಿ ಬ್ರಹ್ಮದೇವರನ್ನು ಅಂಜಿಸಿ, ತದನಂತರ, ಅವರ ಅಜ್ಞಾನ ಮತ್ತು ಭಯಗಳನ್ನು ನಿವಾರಿಸಿ, ಸಂರಕ್ಷಿಸಿದ ಶ್ರೀಹರಿಯ ಮಹಿಮಾತಿಶಯಗಳನ್ನು ಇಲ್ಲಿ ಕೊಂಡಾಡು ತ್ತಾರೆ. ॥೧೨॥

**ಪ್ರತಿಪದಾರ್ಥ :**

**ಹಿಂದೆ**— ಪದ್ಮ ಸೃಷ್ಟಿಗೆ ಪೂರ್ವದಲ್ಲಿ. **ಪ್ರಳಯೋದಕದಿ** = ಪ್ರಳಯ ಜಲರಾಶಿಯಲ್ಲಿ, **ತಾವರೆಕಂದನ** = ಶ್ರೀಹರಿಯನಾಭೀ ಕಮಲದಲ್ಲಿ

ಉತ್ಪನ್ನರಾದ ಪರಮಾತ್ಮನ ಜ್ಯೇಷ್ಠಪುತ್ರರೆನಿಸಿದ ಬ್ರಹ್ಮದೇವರನ್ನು. **ಅಂಜಿಸಿ** = ಹೆದರಿಸಿ. **ಕಾಯ್ದ** = ಸಂರಕ್ಷಣೆಮಾಡಿದ ಶ್ರೀಹರಿಯು. **ತಲೆಯೊಳು** = ತನ್ನ ಶಿರಸ್ಸಿನಲ್ಲಿ. **ಬಾಂದೊರೆಯ** = ಗಂಗಾನದಿಯನ್ನು (ಬಾನಿನ ತೊರೆ). **ಪೊತ್ತವಗೆ** = ಧರಿಸಿದಂಥ ಮಹಾರುದ್ರದೇವರಿಗೆ **ಒಲಿದು** = ಅನುಗ್ರಹಿಸಿ. **ಪರಿಯಂಕ ಪದವಿ ಇತ್ತ** = ತನ್ನ ಹಾಸಿಗೆಯಾದ ಶೇಷ ಪದವಿಯನ್ನು ನೀಡಿದನು. **ವಂದಿಸಿದ** = ತನಗೆ ಶರಣಾಗತರಾದ. **ವೃಂದಾರಕರ** = ದೇವತೆಗಳ. **ಸದ್ವೃಂದಕೆ** = ಸಜ್ಜನಸಮೂಹಕ್ಕೆ. **ಸುಧೆಯ** = ಅಮೃತವನ್ನು. **ಉಣಿಸಿದ** = ಪಾನಮಾಡಿಸಿದ. **ಕರುಣಾಸಿಂಧು** = ದಯಾಸಮುದ್ರನಾದ. **ಕಮಲಾಕಾಂತ** = ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನು. **ಬಹುನಿಶ್ಚಿಂತ** = ಅತ್ಯಂತ ಚಿಂತಾರಹಿತನಾದವನು. **ಜಯವಂತ** = ಸರ್ವವಿಷಯಗಳಲ್ಲಿಯೂ ಜಯಶೀಲನಾದವನು. ॥೧॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ಪರಮಾತ್ಮ ಎಂಥವನೆಂದರೆ-ಹೇಳುತ್ತಾರೆ, ಇದಕ್ಕೆ ಪೂರ್ವದಲ್ಲಿ. ಎಂದರೆ, ಮಹತ್ಸೃಷ್ಟಿಗೆ ಪೂರ್ವದಲ್ಲಿ ಪ್ರಳಯೋದಕದಲ್ಲಿ. ಕಮಲದಲ್ಲಿ ಉತ್ಪನ್ನನಾದ, ಶ್ರೀಪರಮಾತ್ಮಗೆ ಪುತ್ರನಾದ ಬಾಲಕನಾದ ಬ್ರಹ್ಮದೇವರನ್ನ ಅಂಜಿಸಿ, ಸಂರಕ್ಷಣೆ ಮಾಡಿದವ.

**ಪ್ರಮಾಣ ಪುರಂದರದಾಸರಾಯರ ಉಕ್ತಿ—**

ಪ್ರಳಯೋದಕದಲ್ಲಿ ವಟಪತ್ರಶಯನನಾಗಿದ್ದ ಕಾಲದಲ್ಲಿ। ಶ್ರೀದೇವಿಯರು ಶ್ರೀ ಭೂ ದುರ್ಗಾರೂಪದಿಂದ ನಿಂದು। ದಕ್ಷಿಣಾಯುಜ್ಞನಾಮದಿಂದ ವೇದಂಗಳಿಂದ। ಕೊಂಡಾಡುವ ಮಹಾಭಿಮಾನಿಯಾಗಿ। ವರ್ಣಾತ್ಮಕದಿಂದ ನಿತ್ಯಾಗಮಾರ್ಥಗಳಿಂದನುಕೂಲವಾಗಿ ಅ ಆ ಅ ತ್ರಿಪ್ರಕಾರ। ಮಹಿಯೊಂದು

ಬೊಮ್ಮನ ನೂರಾರೊಳೆಂಟು ಭಾಗ। ದೊಳೊಂದು ಭಾಗವು ಲಕುಮೀ ದೇವಿಗೆ। ತಾ ಪ್ರೇರಿಸಲಾಗಿ। ತಾತಿಸುವಂದಾಗಿ ಪ್ರೇರಕನಾಗಿ ಪ್ರಾರ್ಥನೆ ಕೈಗೊಂಡು। ತಮ್ಮ ತಮ್ಮ ಸಾಧನಗಳು ಮಾಡಿಕೊಂಬಲ್ಲಿ ನಿರೂಪಿಸಿದನು ಪುರಂದರವಿಠ್ಠಲ ॥೧॥

ನೂರು ವರುಷವು ಇಂದಾಯಿತೆನಲು। ಉದಯಕಾಲದಿ ಚತುರ್ದಶ ಭುವನಾತ್ಮಕವಾದ ಚತುರ್ಮುಖಬ್ರಹ್ಮನ ಪಡೆದೆ ನೀನು। ಒಮ್ಮೆ ಬಂದು ನಿನ್ನ ಪ್ರಳಯೋದಕವನು। ತೆರೆಗಳ ನೋಡಿ ಏನು ಕಾಣದೆ ಪೊಕ್ಕು ನಾಳದಲ್ಲಿ। ಮತ್ತೊಮ್ಮೆ ಬರಲು ಘೋರವಾದ। ನಿನ್ನ ರೂಪವ ಕಂಡು ಅಂಜಿ ಮತ್ತೆ। ನಿನ್ನ ನಾಮವೇನೆಂದು ಬಂದಾದ ಕಂಡು। ಉದರ ಪ್ರವೇಶವ ಮಾಡಿದ। ಒಂದು ಭಯ ಎರಡು ಅಜ್ಞಾನವು। ನಿನ್ನ ವಿಷಯವಾದಲ್ಲಿ ಉಂಟಾದಡಾಗಲಿ। ಕಂತುಜನಕ ನೀನೇ 'ತಪ ತಪ' ವೆನಲಾಗ। ತಪವನು ಮಾಡಿದ ಪುರಂದರವಿಠಲನ್ನ। ಬಳಿ ಸೃಷ್ಟಿಯು ಮಾಡಿದ ಸರಸೀಜಸಂಭವನು. ॥೨॥

ಸೂಕ್ಷ್ಮರೂಪವಾದ ಇಪ್ಪತ್ತನಾಲ್ಕು ತತ್ತ್ವಗಳ ತೋರಗೆ। ಪಂಚಭೂತಂಗಳಿಗೆ ಅಭಿಮಾನಿಯಾದ। ಗಣೇಶ ಮೊದಲಾದ ಪಂಚಭೂತಂಪಕ ಸೃಜಿಸಿದನಾಗ। ಒಂದೊಂದಾವರ್ಣಾದ ಅಭಿಮಾನಿಗಳಿಂದ। ಮಹತ್ತತ್ತ್ವ ಕೇಶ ಅಹಂಕಾರಾಧೀಶನೆಂದು। ಬ್ರಹ್ಮಾಂಡವ ನಿರ್ಮಾಣವ ಮಾಡಿ ಪೂರ್ವ ದಂತೆ ಆ ದೇವತೆಗಳ ಸೃಜಿಸಿ। ಬ್ರಹ್ಮಾಂಡವಾಧಾರವಾಗಿ ತನ್ನಾದೇಹಾವ। ಬೆಳೆಸಿದ ಚತುರ್ಮುಖನಾಗ। ಮೂಲರೂಪದಿಂದ ಪುರಂದರವಿಠಲ। ವಿರಾಟದಲ್ಲಿ ವಾಸವಾಗಿ ನಿಂದ ಜಗದಾಧಾರ. ॥೩॥

ಈ ವಚನಾನುಸಾರ-ಬ್ರಹ್ಮದೇವರಿಗೆ ಅಜ್ಞಾನ ನಾಲ್ಕು ಬಾರಿ, ಎರಡಾವರ್ತಿ ಭಯ ಎಂಬುದು, ಅಂಡದ ಹೊರಗೆ ಎರಡಾವರ್ತಿ ಅಜ್ಞಾನ, ಒಂದಾವರ್ತಿ ಭಯ-ಎಂತ ಅಂತು ನಾಲ್ಕುಬಾರಿ ಅಜ್ಞಾನ, ಎರಡಾವರ್ತಿ ಭಯ ಎಂತ ನಿರ್ಧಾರವಾಗತದೆ, ಪ್ರಕಾರಾಂತರ ಪದ್ಮಸೃಷ್ಟಿಯಲ್ಲಿ ಸಮನ್ವಯ.

೧. ಅಜ್ಞಾನ- ನಾಭಿಕಮಲದಿಂದ ಹೊರಗೆ ಬಂದು, ದಾರನ್ನೂ ಕಾಣದ್ದು ಒಂದು, ಕಮಲನಾಳದಲ್ಲಿ ಪ್ರವೇಶಮಾಡಿ, ಅಲ್ಲಿ ದಾರನ್ನೂ

ಕಾಣದ್ದು ಎರಡು. ಏನೂ ಕಾಣದೆ ಪುನಃ ಹೊರಗೆ ಬಂದದ್ದು-ಮೂರು. ತಾನು ಮಾಡತಕ್ಕ ಕಾರ್ಯ ತಿಳಿಯದೇ ಇದ್ದದ್ದು-ಅಂತು ನಾಲ್ಕು ಸಾರಿ ಅಜ್ಞಾನ.

೨. ಭಯ- ಉದಕ-ವಾಯುಗಳ ಕಂಡು ಅಂಜಿದ್ದು ಒಂದು. ಘೋರ ರೂಪ ನೋಡಿ ಅಂಜಿದ್ದು- ಎರಡು. ಇವುಗಳು ದೈತ್ಯಮೋಹನಾರ್ಥ ಪ್ರದರ್ಶನ. ಬ್ರಹ್ಮದೇವರಿಗೆ ಅಜ್ಞಾನಾದಿ ದೋಷಗಳು ಇಲ್ಲ ಎಂತ ತಾತ್ಪರ್ಯ.

ಶಿರಸ್ಸಿನಲ್ಲಿ ಭಾಗೀರಥಿಯನ್ನು ಹೊತ್ತಂಥಾ ರುದ್ರದೇವರಿಗೆ ಒಲಿದು ಅವಗೆ ಶೇಷಪದವಿಯಕೊಟ್ಟು. ತನಗೆ ಶರಣಾಗತರಾದ ದೇವತೆಗಳ ನಿರ್ದುಷ್ಟವಾದ ಸಮೂಹಕ್ಕೆ ಅಮೃತವನ್ನ ಪಾನಮಾಡಿಸೋವನಾದ. ಕರುಣಾಸಮುದ್ರನಾದ ಲಕ್ಷ್ಮೀಪತಿಯಾದ ಶ್ರೀಪರಮಾತ್ಮ ಅತ್ಯಂತವಾಗಿ ಚಿಂತಾಶೂನ್ಯನಾದವ. ಸರ್ವವಿಷಯದಿಂದಲೂ ಜಯಶೀಲನಾದವ ಪರಮಾತ್ಮ- ಎಂತ ತಾತ್ಪರ್ಯ. ॥೧೨॥

### ೨. ಭಾವದರ್ಪಣ

ಓಂದೆ, ತಾವರೆಕಂದ = ತಾವರೆಕಮಲಕ್ಕೆ ಮಗ ಎಂಬರ್ಥ । ಬಾಂದೊರೆ । ಬಾನ=ಆಕಾಶ, ತೊರೆ=ನದಿ. ಎಂದರೆ ಆಕಾಶಗಂಗಾ-ಎಂಬ ಭಾವ । ಇಂಥಾದ್ದರನ್ನ ಪೊತ್ತವ = ಪೊತ್ತರುದ್ರ. ಎಂಬರ್ಥ । ಸದ್ವೃಂದ = ಸತ್ಸಮೂಹ. ದೇವತೆಗಳಿಗೆ. ಅಹಿಲೋಕಪದ= ಶೇಷಪದ ಎಂಬರ್ಥ. ॥೧೨॥

### ೨. ಶ್ರೀವ್ಯಾಸದಾಸ ಸಿದ್ಧಾಂತಕೌಮುದೀ

'ಓಂದೆ' ಇತಿ॥ "ತಮುತ್ತ್ವಂ"- ಇತಿ ಶ್ರುತೇಃ ॥ "ದೊರೆ" ಹೊಳೆ ॥ "ವೃಂದಾರಕ"- ದೇವ. ॥೧೨॥

## ಕನ್ನಡಾರ್ಥ

"ಪ್ರಳಯಕಾಲದಲ್ಲಿ ಮೃತ್ಯುನಾಮಕನಾದ ಶ್ರೀಹರಿಯೊಬ್ಬನೇ ಸರ್ವ ಜಡಜೀವರಿಗೆ ಆವರಕನಾಗಿದ್ದನು. ಅವನು ಆವರಕನಾದುದರಿಂದ, ಜೀವ ಜಡಾದಿಗಳು ಇದ್ದರೂ ಇಲ್ಲದಂತೆಯೇ ಇದ್ದುವು. ಆ ಹರಿಯು ಸ್ವೇಚ್ಛೆಯಿಂದ ನೀರನ್ನು ಸೃಷ್ಟಿಸಿದನು. ನೀರಲ್ಲಿ ಮಲಗಿ, ಮಹತ್ತರವಾದ ಬ್ರಹಾಂಡವನ್ನು ನಿರ್ಮಿಸಿದನು. ಮತ್ತು ಬ್ರಹ್ಮಾಂಡದಲ್ಲಿ "ಸಾವತ್ಸರನಾಮಕ" ನಾದ ಚತುರ್ಮುಖಬ್ರಹ್ಮದೇವನನ್ನು ಸೃಷ್ಟಿಸಿ, ಅವನನ್ನು ಭಕ್ಷಿಸಲು (ನುಂಗಲು) ಬಾಯಿಯನ್ನು ತೆರೆದನು. ಆಗ ಬ್ರಹ್ಮದೇವರು ರೋದನ ಮಾಡಿದರು. ಅನಂತರ, ಹರಿಯು ಕೃಪೆಯಿಂದ ಬ್ರಹ್ಮದೇವನನ್ನು ಸೃಷ್ಟಿಕರ್ಮದಲ್ಲಿ ನಿಯೋಜಿಸಿದನು,"-ಎಂಬ ಕಥೆಯನು ಇಲ್ಲಿ ಸಂಗ್ರಹಿಸಿ ತಿಳಿಸುತ್ತಾರೆ. ॥೧೨॥

### ೪. ಭಾವಪ್ರಕಾಶಿಕೆ

ಹಿಂದೆ, ಬ್ರಹ್ಮಕಲ್ಪಾವಸಾನದಲ್ಲಿ, ಪರಮಾತ್ಮನ ನಾಭಿಯ ಕಮಲದಿಂದ ಹುಟ್ಟಿದ ಬ್ರಹ್ಮದೇವರನ್ನು ಅಂಜಿಸಿ, ಕಾಯ್ದನು. ವಿಷ್ಣುರಹಸ್ಯ ೨೪ನೆಯ ಅಧ್ಯಾಯದಲ್ಲಿ-'ಸವಿಷ್ಣುಃ': ಪದ್ಮನಾಭಾಖ್ಯಃ ತನ್ನಾಭಿ ಕಮಲಾದಭೂತ್ ॥ ಹಿರಣ್ಯಗರ್ಭ ನಾಮಾಸೌ ಸಜಾತೋಽದದೃಶೇಽದಿಶಃ ॥೩೯॥ ಚತುರ್ದಿಕ್ಷು ಚತ್ವಾರಿ ಮುಖಾನ್ಯಾಸನ್ ಮಹಾತ್ಮನಃ ॥ ಪದ್ಮಸ್ಯ ಕರ್ಣಿಕಾ ಮಧ್ಯೇಽಪಿ ಕ್ಷಣ್ಣಃ ಸ್ವಸ್ತಿಕಾಸನೇ॥ ತದಾ ವಿಷ್ಣ್ವಾಜ್ಞಯಾ ದುರ್ಗಾಜಲ ಬಿಂದುಭಿರನ್ವಿತಂ॥ ವಿಸಸರ್ಜಮಹಾವಾತಂ ತೇನಾಭೂತ್ಕ್ಷೋಭಿತೋ ವಿಧಿಃ ॥೪೦॥ ತದಾಗಾಧಾಂಧ ಕಾರೇಸ್ವಮಸಹಾಯಂ ವಿಲೋಕ್ಯಸಃ ॥ ಪೀಡ್ಯಮಾನೋ ವರ್ಷವಾತೈಃ ಕ್ಷಣ ಭೀತೋಽಸ್ವರದ್ಧರಿಂ ॥೪೧॥ ತತಸ್ತ್ವಪ ಸ್ತ್ವಪೇತ್ಯಾಸೀದಶರೀರೈವ ಭಾರತೀ ॥ ಸಮಾಧಿ ಯೋಗಮಾಸ್ಥಾಯ ನಿರುಚ್ಛ್ವಾಸೋಽಭವತ್ತತಃ ॥೪೨॥ ಧಧ್ಯಾ ವಾಂತರ ಮಾತ್ಮಾಗಂ ಬ್ರಹ್ಮರೂಪಂ ಸದಾಶಿವಂ ॥ ದಿವ್ಯವರ್ಷಾಯುತಂ ಪಶ್ಚಾದುತ್ಥಿತಃ ಸ ಸಮಾಧಿತಃ ॥೪೩॥ ಪ್ರೀತೋಽಥ ತಪಸಾ ತೇನ ಪದ್ಮನಾ

ಘೋಷಹರಿಃಸ್ಮೃತಃ ॥ ಕೌಮಾರಂ ರೂಪಮಾಸ್ಥಾಯ ನಿಜರೂಪಪ್ರದರ್ಶಯತ್ ॥೪೪॥ ನಾಭಿಯಲ್ಲಿ ಕಮಲವಿದ್ದುದರಿಂದ ಆ ವಿಷ್ಣುವಿಗೆ ಪದ್ಮನಾಭನೆಂದು ಹೆಸರಾಯಿತು. ಆ ನಾಭಿಯ ಕಮಲದಿಂದ, ಹಿರಣ್ಯಗರ್ಭನೆಂಬ ಹೆಸರುಳ್ಳ ಬ್ರಹ್ಮದೇವರು ಜನಿಸಿದರು. ಅವರು ನಾಲ್ಕುದಿಕ್ಕುಗಳನ್ನು ನೋಡುವಾಗ, ನಾಲ್ಕುಮುಖಗಳಾದವು. ಪದ್ಮದ ಕರ್ಣಿಕೆಯ ಮಧ್ಯದಲ್ಲಿ ಪದ್ಮಾಸನದಿಂದ (ಸ್ವಸ್ತಿಕಾಸನ) ಕೂತಿದ್ದ ತನ್ನನ್ನು ತಾನು ನೋಡಿಕೊಂಡನು. ಆಸಮಯದಲ್ಲಿ ದುರ್ಗಾದೇವಿಯರು ಶ್ರೀವಿಷ್ಣುವಿನ ಆಜ್ಞಾಪ್ರಕಾರ ಉದಕ ಬಿಂದುಗಳಿಂದ ಕೂಡಿದ ಮಹತ್ತರವಾದ ಗಾಳಿಯನ್ನು ಸೃಷ್ಟಿಸಲು. ಬ್ರಹ್ಮದೇವರು ಅದರಿಂದ ಬಹಳ ವ್ಯಥೆಗೊಂಡರು. ಮಹತ್ತರವಾದ ಗಾಢಾಂಧಕಾರವಾಗಿದ್ದಿತು. ಮತ್ತೊಬ್ಬರ ಸಹಾಯವಿಲ್ಲದೆ, ಉದಕಬಿಂದುಗಳಿಂದ ಕೂಡಿದ ಮಹಾವಾತಪೀಡಿತರಾಗಿ. ಒಂದು ಕ್ಷಣ ಭಯಪಟ್ಟರು-ತದನಂತರದಲ್ಲಿ, "ತಪ ! ತಪ !"-ಎಂದು ಎರಡುಸಲ ಶಬ್ದವು ಅಶರೀರವಾಕ್ಯಾಗಿ ಕೇಳಬಂದಿತು. ಆಗ ಬ್ರಹ್ಮದೇವರು ಸಮಾಧಿ ಯೋಗದಿಂದ ಶ್ವಾಸವನ್ನು ನಿರೋಧಿಸಿ, ಹೃದಯಾಕಾಶದಲ್ಲಿ ಸದಾಮಂಗಳಮೂರ್ತಿಯಾದ ಶ್ರೀಪರಮಾತ್ಮನನ್ನು ಧ್ಯಾನಮಾಡುತ್ತಾ, ದೇವತಾಮಾನದಿಂದ ೧೦ ಸಹಸ್ರ ವರ್ಷಗಳವರೆಗೂ ಇದ್ದು, ಸಮಾಧಿಯಿಂದ ಎದ್ದರು. ಆಗ, ಪರಮಾತ್ಮನು ಪ್ರೀತನಾಗಿ ಅವರ ತಪಸ್ಸಿಗೆ ಮೆಚ್ಚಿ, ದಿವ್ಯವಾದ ಕೌಮಾರ ರೂಪವನ್ನು ಧರಿಸಿ ಆ ರೂಪವನ್ನು ಬ್ರಹ್ಮದೇವರಿಗೆ ತೋರಿಸಿದನು-ಎಂದು ಹೇಳಿರುವರು. ಆ ಅಭಿಪ್ರಾಯವನ್ನೇ ದಾಸಾರ್ಯರು ಇಲ್ಲಿ ತಾವರೆಕಂದನಂಜಿಸಿ ಕಾಯ್ದನೆಂದು ಹೇಳಿರುವರು. ರುದ್ರದೇವರ ತಪಸ್ಸಿಗೆ ಮೆಚ್ಚಿ, ಶೇಷಪದವಿಯನ್ನಿತ್ತನು. ದೂರ್ವಾಸರ ಶಾಪದಿಂದ ರಾಜ್ಯಭ್ರಷ್ಟರಾಗಿ ದೇವತೆಗಳು ರಾಜ್ಯವನ್ನು ಕಳೆದುಕೊಂಡರು. ಪರಮಾತ್ಮನನ್ನು ಮೊರೆ ಹೋಗಲು, ಪರಮಾತ್ಮನು ದೇವದೈತ್ಯರ ಸಂಧಿಯನ್ನು ಮಾಡಿಸಿ, ಕ್ಷೀರಸಮುದ್ರವನ್ನು ಮಥನ ಮಾಡಲು, ಅದರಿಂದ ಅಮೃತ ಹುಟ್ಟಿತು. ದೈತ್ಯರು ಆ ಅಮೃತ ಕಲಶವನ್ನು ಅಪಹರಿಸಿದರು. ಪರಮಾತ್ಮನು ಮೋಹಿನೀರೂಪವನ್ನು ಧರಿಸಿ,

ದೈತ್ಯರನ್ನು ವಂಚಿಸಿ, ದೇವತೆಗಳಿಗೆ ಅಮೃತವನ್ನುಣಿಸಿದನು. ಈ ಕಥೆಯನ್ನು ಭಾಗವತ ಅಷ್ಟಮಸ್ಕಂಧದಲ್ಲೂ, ಮಹಾಭಾರತ ತಾತ್ಪರ್ಯ ನಿರ್ಣಯ ೧೦ನೇ ಅಧ್ಯಾಯದಲ್ಲೂ, ಹೇಳಿರುವರು. ಪರಮಾತ್ಮನಿಗೆ ಯಾವ ವಿಧವಾದ ಉಪಯೋಗವೂ ಇದರಿಂದಿಲ್ಲ. ನಿತ್ಯಜಯಶೀಲನು, ಬಹುನಿಶ್ಚಿಂತನು, ಸಾಕ್ಷಾತ್ ಲಕ್ಷ್ಮೀಪತಿಯು. ಹೀಗಿರುವಾಗ, ದೇವತೆಗಳಿಂದಿವನಿಗಾಗುವುದೇನು? ದೈತ್ಯರಿಂದ ಹಾನಿಯಾಗುವುದೇನು? ಏನೂಇಲ್ಲ. ಆದರೂ, ಕರುಣಾಸಮುದ್ರನಾದುದರಿಂದ, ಭಕ್ತರಿಗಾಗಿ ತನ್ನನ್ನು ಮೊರೆಹೊಕ್ಕ ದೇವತೆಗಳ ರಕ್ಷಣೆಗಾಗಿ ಅಮೃತವನ್ನುಣಿಸಿದನೆಂಬ ತಾತ್ಪರ್ಯ. ॥೧೨॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ

ಹಿಂದೆ-ಅಂದರೆ, ಸೃಷ್ಟಿಯ ಅವಿಭಾಗದಲ್ಲಿ ದೇವರು ಪ್ರಳಯೋದಕಾದಿ ನಿಮಿತ್ತದಿಂದ, ತಾಪಗೆಕಂಪನೆಂಬ ತನ್ನ ನಾಭೀಕಮಲದ ಮಗನಾದ ಬ್ರಹ್ಮನನ್ನು ಅಂಜಿಸಿ, ಮತ್ತು ತಪ-ಎಂಬ ಶಬ್ದದಿಂದ ಅಭಯವನ್ನು ಕೊಟ್ಟನು. ಜಾಂದೊರೆ ಎಂಬ ತನ್ನ ಪಾದೋದಕ ಜನ್ಯ ಆಕಾಶಗಂಗೆಯನ್ನು ತಲೆಯಲ್ಲಿ ಧರಿಸಿದ ಈಶ್ವರನಿಗೆ ಪರ್ಯಂಕಪದವೆಂಬ ಶೇಷಪದವಿಯನ್ನು ಕೊಟ್ಟನು. ನೀನೇ ಗತಿ ಎಂದು ನಮಸ್ಕರಿಸಿದ ವೃಂದಾರಕರೆಂಬ ದೇವತೆಗಳ ಸತ್ಸಮೂಹಕ್ಕೆ ಸುಧೆ ಎಂಬ ಅಮೃತವನ್ನ ಉಣಿಸಿದ. ಆದರಿಂದ, ಕಮಲಾಕಾಂತನಾದ ದೇವರು ಚಿಂತಾದಿ ಬಹು ದೋಷವರ್ಜಿತ, ಸದಾಜಯವಂತ, ಕರುಣಾ ಸಮುದ್ರನು. ॥೧೨॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಹಿಂದೆ-

ಪದ್ಮಸೃಷ್ಟಿಗಿಂತ ಪೂರ್ವದಲ್ಲಿ, ಪ್ರಳಯಕಾಲದಲ್ಲಿ ಮೃತ್ಯುನಾಮಕವಾದ (ಲಯಕರ್ತನಾದ) ಶ್ರೀಹರಿಯೊಬ್ಬನೇ ಸರ್ವಜಡ ಜೀವರಿಗೆ

ಆವರಕನಾಗಿದ್ದನು. ಅವನ ಆವರ್ಣದಿಂದ ಜೀವ ಜಡಾದಿಗಳು ಇದ್ದರೂ, ಇಲ್ಲದಂತೆಯೇ ಇದ್ದವು. ಏಕಮೇವಾದ್ವಿತೀಯನಾಗಿದ್ದನು.

**೨. ಪ್ರಳಯೋದಕದಿ–**

ಏಕಮೇವಾದ್ವಿತೀಯನಾದ ಆಕಾಶಾತ್ಮರೂಪಿಯು ಸ್ವೇಚ್ಛೆಯಿಂದ ನೀರನ್ನು ಸೃಷ್ಟಿಸಿದನು. ಅದೇ ಪ್ರಳಯೋದಕವು. ಅಂತಹ ಪ್ರಳಯಜಲ ರಾಶಿಯಲ್ಲಿ ವಟಪತ್ರಶಾಯಿಯಾಗಿ ಪವಡಿಸಿದನು. ಶ್ರೀನಾಮಕಳಾದ ಲಕ್ಷ್ಮೀದೇವಿಯು ಪ್ರಳಯೋದಕರೂಪದಲ್ಲಿ ಶ್ರೀಹರಿಯನ್ನು ಸೇವಿಸುತ್ತಿದ್ದಳು. ಭೂನಾಮಕಳಾಗಿ ವಟಪತ್ರರೂಪದಲ್ಲಿಯೂ ಮತ್ತು ದುರ್ಗಾ ರೂಪದಿಂದ ಸುತ್ತಲೂ ವ್ಯಾಪಕವಾಗಿದ್ದ ಅಂಧಕಾರರೂಪದಲ್ಲಿಯೂ ವಿದ್ಯಮಾನಳಾಗಿದ್ದು, ಶ್ರೀಹರಿಯ ಸೇವೆಯನ್ನು ಎಡಬಿಡದೆ ನಿರ್ವಹಿಸುತ್ತಿದ್ದಳು. ಆ ನಿತ್ಯಾವಿಯೋಗಿನಿಯು.

**೩. ತಾವರೆಕಂದನನು-**

ಶ್ರೀಹರಿಯು ಪದ್ಮನಾಭರೂಪದಿಂದ ಶಯನಮಾಡಿದಾಗ, ಆತನ ನಾಭೀಪ್ರದೇಶದಿಂದ ಅಪ್ರಾಕೃತವಾದ ಕಮಲವು ಉತ್ಪನ್ನವಾಯಿತು. ಆ ನಾಭೀಕಮಲದಲ್ಲಿ ಶ್ರೀಹರಿಯು ಬ್ರಹ್ಮದೇವರನ್ನು ಸೃಷ್ಟಿಸಿದನು. ಆ ಬ್ರಹ್ಮದೇವರೇ **ತಾವರೆಕಂದರು**. ತಾವರೆ-ಎಂದರೆ ಕಮಲಪುಷ್ಪ. ಕಮಲಜರಾದ ಬ್ರಹ್ಮದೇವರು ತಾವರೆಕಂದರೆನಿಸಿದರು.

**೪. ಅಂಜಿಸಿ–**

ಸಹಸ್ರರವಾದ ಬ್ರಹ್ಮಾಂಡವು ನಿರ್ಮಾಣವಾಯಿತು. ಆ ಬ್ರಹ್ಮಾಂಡದಲ್ಲಿ ಸಂವತ್ಸರನಾಮಕ ಬ್ರಹ್ಮನನ್ನು ಸೃಷ್ಟಿಸಿದನು. ಅವನನ್ನು ನುಂಗಲು ಶ್ರೀಹರಿಯು ಅಗಲವಾಗಿ ಬಾಯಿ ತೆರೆದನು. ಆಗ ಬ್ರಹ್ಮದೇವರು ಹೆದರಿ, ರೋದನಮಾಡಲಾರಂಭಿಸಿದರು.

ಬ್ರಹ್ಮದೇವರಿಗೆ ಅಜ್ಞಾನರೂಪವಾದ ಪ್ರಭಾವ-ನಾಲ್ಕು ಜಾವ ಮತ್ತು ಭಯ ಎರಡಾವರ್ತಿ- ಎಂದು ಶಾಸ್ತ್ರೋಕ್ತಿ. ಶ್ರೀಹರಿಯ ನಾಭೀಕಮಲಸಂಜಾತರಾದ ಚತುರ್ಮುಖ ಬ್ರಹ್ಮದೇವರು ನಾಭೀಕಮಲದಿಂದ

ಹೊರಗೆ ಬಂದರು. ಅಲ್ಲಿ ಯಾರನ್ನೂ ಕಾಣದೆ ದಿಗ್ಭ್ರಾಂತರಾದರು. ಇದು ಒಂದು ರೀತಿಯ ಅಜ್ಞಾನ. ನಂತರ, ಬ್ರಹ್ಮದೇವರು ಕಮಲನಾಳವನ್ನು ಪ್ರವೇಶಿಸಿ, ಅದರ ಬುಡಕ್ಕೆ ಬಂದರು. ಅಲ್ಲಿಯೂ ಯಾರನ್ನೂ ಕಾಣದೆ, ದಿಕ್ಕು ತೋಚದಂತಾದರು. ಇದು ಎರಡನೆಯ ಆವರ್ತಿ ಒದಗಿದ ಅಜ್ಞಾನ ಪುನಃ, ನಾಳದಿಂದ ಹೊರಗೆ ಬಂದದ್ದು. ಇದು ಮೂರನೆಯ ಆವರ್ತಿ. ತಾನು ಮಾಡತಕ್ಕ ಕಾರ್ಯ ತಿಳಿಯದೇ ಇದದ್ದು - ನಾಲ್ಕನೆಯ ಅಜ್ಞಾನ.

ಪರಶುಕ್ಲತ್ರಯರ ವರ್ಗದಲ್ಲಿ ಸೇರಿದ ಬ್ರಹ್ಮದೇವರಿಗೆ ಅವಕಾಲಕ್ಕೂ ಅಜ್ಞಾನವಿಲ್ಲ. ಅವರು ಅತಿರೋಹಿತವಿಮಲ ವಿಜ್ಞಾನಿಗಳು. ಆದರೆ, ಶ್ರೀಹರಿಯ ಇಚ್ಛಾರೂಪವಾದ ಅಸಾಧಾರಣಮಹಿಮೆಯಿಂದ ಕಿಂ ಕರ್ತವ್ಯ ಮೂಢರಾದರು, ಸರ್ವತ್ರವ್ಯಾಪ್ತವಾಗಿದ್ದ ವಿಸ್ತಾರವಾದ ಪ್ರಳಯೋದಕದ ದರ್ಶನದಿಂದ ಅಂಜಿದರು. ಶ್ರೀಹರಿಯ ಘೋರರೂಪವನ್ನು ಕಂಡು ಹೆದರಿದ್ದು. ಹೀಗೆ ಎರಡಾವರ್ತಿ ಬಂದ ಭಯ. ಬ್ರಹ್ಮ ದೇವರಿಗೆ ಪ್ರಾಪ್ತವಾದ ಈ ಅಜ್ಞಾನ ಮತ್ತು ಭಯ ಕೇವಲ ದೈತ್ಯಮೋಹನಾರ್ಥವಾದ ಪ್ರದರ್ಶನವೇ ಹೊರತು. ಸಹಜವಾದುದಲ್ಲ.

**೫ ಕಾಯ್ದ —**

ಹಾಗೆ ಅಜ್ಞಾನ ಮತ್ತು ಭಯಗಳನ್ನು ಪ್ರದರ್ಶಿಸಿದ ಬ್ರಹ್ಮದೇವರಿಗೆ "ತಪ-ತಪ" – ಎಂಬ ಶಬ್ದದಿಂದ ಅಭಯಪ್ರದಾನ ಮಾಡಿ. ಭಯ ನಿವಾರಣೆ ಮಾಡಿದನು. ನಂತರ, ಹಯಗ್ರೀವರೂಪದಿಂದ ಬ್ರಹ್ಮನಿಗೆ ವೇದೋಪದೇಶ ಮಾಡಿದನು. ಈ ರೀತಿಯಲ್ಲಿ ಕಾಯ್ದನು.

**೬ ಬಾಂಬೊರೆ—**

ವಾಮನರೂಪದಿಂದ ಬಲಿಚಕ್ರವರ್ತಿಯ ಯಜ್ಞಶಾಲೆಗೆ ಆಗಮಿಸಿದ ಶ್ರೀಹರಿ, ಬಲಿಯಿಂದ ತನ್ನ ಪಾದದಿಂದ ಅಳೆಯಲ್ಪಡುವ ತ್ರಿಪಾದ ಪ್ರಮಾಣವಾದ ದಾನವನ್ನು ಸ್ವೀಕರಿಸಿ, ತನ್ನ ವಾಮಚರಣವನ್ನು ಮೇಲಕೆತ್ತಿ, ಸಮಸ್ತಊರ್ಧ್ವಲೋಕಗಳನ್ನು ಅಳೆದು ಪಡೆದನು. ಆಗ, ಶ್ರೀಹರಿಯ ತ್ರಿವಿಕ್ರಮಮೂರ್ತಿಯ ವಾಮಪಾದಾಂಗುಷ್ಠದ ನಖಾಗ್ರದಿಂದ ಬ್ರಹ್ಮಾಂಡ

ಖರ್ಪರವು ಸೀಳಿ, ಬಾಹ್ಯೋದಕವು ಬ್ರಹ್ಮಾಂಡವನ್ನು ಪ್ರವೇಶಿಸಿತು. ಅದೇ ಗಂಗಾನದಿ ಎಂದು ಖ್ಯಾತವಾದ ಶ್ರೀಹರಿಯ ಪಾದೋದ್ಭವೆಯಾದ ಅಮರ ತರಂಗಿಣಿ. ಬಾನು-ಎಂದರೆ, ಆಕಾಶ. ತೊರೆ-ಎಂದರೆ ನದಿ. ಅಂದರೆ, ಬಾನಿನ ತೊರೆ-ಬ್ರಾಂದೊರೆಯೇ ಆಕಾಶಗಂಗೆಯು.

**೬. ತಲೆಯೊಳು ಪೊತ್ತವನ-**

ಶ್ರೀಹರಿಯ ಪಾದೋದ್ಭವೆಯಾದ ಗಂಗೆಯ ಉದಕವನ್ನು (ಪಾದೋದಕ) ಬ್ರಹ್ಮದೇವರು ಶಿರಸಾವಹಿಸಿಕೊಂಡು, ಹರಿಯ ಪಾದವನ್ನು ತೊಳೆದು ಪೂಜಿಸಿದರು. ಅನಂತರ, ಮಹಾರುದ್ರದೇವರು ಆ ಗಂಗೆಯನ್ನು ತಮ್ಮ ಶಿರಸ್ಸಿನಲ್ಲಿ ಹೊತ್ತು, **ಗಂಗಾಧರನೆಂದು** ಖ್ಯಾತನಾಮರಾದರು. ಬಾಂದೊರೆಯ ತಲೆಯೊಳು ಪೊತ್ತವರೇ ಮಹಾರುದ್ರದೇವರು.

**೮. ಒಲಿದು ಪರ್ಯಂಕ ಪದವಿತ್ತನು.**

ಗಂಗಾಧರರಾದ ಮಹಾರುದ್ರದೇವರಿಗೆ ಒಲಿದು, ಶ್ರೀಹರಿಯು ಮುಂದಿನ ಬ್ರಹ್ಮಕಲ್ಪದಲ್ಲಿ ತಾನು ಶಯನಿಸುವ ಪದವಿಯನ್ನು ಅನುಗ್ರಹಿಸಿದನು. ಪ್ರಸಕ್ತಕಲ್ಪದ ರುದ್ರರೇ ಭಾವೀಶೇಷರು. ಅವರಿಗೆ ಶೇಷ ಪದವಿಯಿಂದ ಮುಕ್ತಿ.

೯. ತನಗೆ ಶರಣಾಗತರಾದ ಇಂದ್ರಾದಿ ಸಕಲದೇವತಾಸಮೂಹಕ್ಕೆ ಅಭಯ ಪ್ರದಾನಗೈದು, ಸಮುದ್ರಮಥನಕಾಲದಲ್ಲಿ ಧನ್ವಂತ್ರೀರೂಪದಿಂದ ಅಮೃತ ಕಳಸವನ್ನು ಹಿಡಿದುಕೊಂಡು ಕ್ಷೀರಸಮುದ್ರದ ಮೇಲಿನಿಂದ ಎದ್ದು, ಮೋಹಿನೀ ರೂಪ ತಾಳಿ, ಅಮೃತವನ್ನು ದೇವತೆಗಳಿಗೆ ಹಂಚಿದ ಕರುಣಾಮಯನು. ವೃಂದಾರಕರು-ಎಂದರೆ ಸ್ವರ್ಗಲೋಕವಾಸಿಗಳಾದ ದೇವತೆಗಳು ಸದ್ವೃಂದ-ಎಂದರೆ, ಸಜ್ಜನರಾದ ದೇವತಾವರ್ಗ. ಸುಧೆಯ-ಸಮುದ್ರಮಥನ ಕಾಲದಲ್ಲಿ ಉತ್ಪತ್ತಿಯಾದ ಅಮೃತವನ್ನು, ಉಣಿಸಿದ-ದೇವತೆಗಳಿಗೆ ಹಂಚಿದನು. ಇದರಿಂದ, ಸಮಸ್ತದೋಷವಿದೂರನಾದ ಶ್ರೀಹರಿಗೆ ಪಕ್ಷಪಾತವೆಂಬ ದೋಷವಿಲ್ಲ. ದೇವತೆಗಳು ಸ್ವರೂಪತಃ ಸಜ್ಜನರು, ದಾನವರು ಸ್ವರೂಪತಃ ದುಷ್ಟರು, ತಮೋಯೋಗ್ಯಜೀವರು. ದಾನವರಿಗೆ ಅಮೃತಪ್ರಾಪ್ತಿಯಾದರೆ,

ಅವರು ಅಮರರಾಗಿ, ಅವಧ್ಯರಾಗುವರು. ಇದರಿಂದ, ಅವರ ಶಕ್ತಿ ಪ್ರಾಬಲ್ಯಗಳು ವರ್ಧಿಸಿ, ಇಡೀ ಜಗತ್ತಿನ ವಿನಾಶಕ್ಕೇ ಕಾರಣರಾಗುವರು. ಇದನ್ನರಿತ ಸರ್ವಜ್ಞನು ಅಮೃತವು ದೈತ್ಯರಿಗೆ ದಕ್ಕದಂತೆ ಮಾಡಿ, ದೇವತೆಗಳನ್ನು ಅವರ ಪೀಡೆಯಿಂದ ಸಂರಕ್ಷಿಸಿದನು.

೧೦. ಶ್ರೀಹರಿಯು ದಯಾಸಾಗರನು. ಇದರಿಂದ **ಕರುಣಾಸಿಂಧು**-ಎಂದಿದ್ದಾರೆ. ಲಕ್ಷ್ಮೀರಮಣನಾದ್ದರಿಂದ, **ಕಮಲಾಕಾಂತನು.**

೧೧. ಕರುಣಾಸಿಂಧುವಾದ ಕಮಲಾಕಾಂತನಿಗೆ ಯಾರಿಂದಲೂ ಯಾವ ಕಾಲಕ್ಕೂ, ಯಾವ ಕಾರಣದಿಂದಾಗಲೀ, ಚಿಂತಾರೂಪವಾದ ದುಃಖಗಳಿಲ್ಲ. ಕ್ಲೇಶಭಯವಿದೂರನು. ಇದರಿಂದ **ನಿಶ್ಚಿಂತನು**. ದಾನವಾರಿಯಾದ ದಾಮೋದರನಿಗೆ ಯಾರಿಂದಲೂ ಸೋಲಿಲ್ಲ. ಪರಾಭವದೂರನು. ಸದಾಜಯಶೀಲನಾದ ಆ ಜಯಾಪತಿಯು **ಜಯವಂತನು.** ॥೧೩॥

## ಪದ್ಯ-೧೪

**ಮೂಲ:-**

**ಸತ್ಯಸಂಕಲ್ಪಾನುಸಾರ ಪ್ರ ।**
**ವರ್ತಿಸುವ ಪ್ರಭು ತನಗೆ ತಾನೇ ।**
**ಭೃತ್ಯನೆನಿಸುವ ಭೋಕ್ತೃಭೋಗ್ಯ ಪದಾರ್ಥದೊಳಗಿದ್ದು ॥**
**ತತ್ತದಾಹ್ವಯನಾಗಿ ತರ್ಪಕ ।**
**ತೃಪ್ತಿಪಡಿಸುವ ತತ್ತ್ವಪತಿಗಳ ।**
**ಮತ್ತರಾದಸುರರ್ಗೆ ಅಸಮೀಚೀನ ಫಲವೀವ ॥೧೪॥**

**ಅವತರಣಿಕೆ** :

ಸತ್ಯಸಂಕಲ್ಪನಾದ ಶ್ರೀಪರಮಾತ್ಮನು ಸರ್ವತಂತ್ರ ಸ್ವಯಂಪ್ರಭುವು ಸರ್ವಾಧಿಷ್ಠಾನಗಳಲ್ಲಿ ತತ್ತಚ್ಛಬ್ದವಾಚ್ಯನಾಗಿ, ಅದೇ ಹೆಸರಿನಿಂದ ಕರೆಯಿಸಿ

ಕೊಳ್ಳುತ್ತಾ, ತತ್ತ್ವೇಶರಾದ ದೇವತೆಗಳಿಗೆ ತರ್ಪಕನಾಗಿದ್ದು, ಮದೋನ್ಮತ್ತರಾದ ದಾನವರಿಗೆ ಅಸಮೀಚೀನವಾದ ಮಹಾದುಃಖರೂಪವಾದ ಫಲಗಳನ್ನು ನೀಡುವನೆಂದು ತಿಳಿಸುತ್ತಾರೆ. ॥೧೩॥

**ಪ್ರತಿಪದಾರ್ಥ :**

**ಸತ್ಯಸಂಕಲ್ಪಾನುಸಾರ**—ನಿತ್ಯವೂ ಸತ್ಯವೂ ಆದ ಸ್ವೇಚ್ಛಾರೂಪವಾದ ತನ್ನ ಅನಾದಿ ಸಂಕಲ್ಪದಂತೆ. **ಪ್ರವರ್ತಿಸುವ**—ಜಗತ್ಸಂಬಂಧವಾದ ಸಕಲ ವ್ಯಾಪಾರಗಳನ್ನು ತಾನೇ ಸ್ವತಂತ್ರದಿಂದ ಮಾಡುವನು (ಪರಾಪೇಕ್ಷಾರಹಿತನು) **ಪ್ರಭು**—ಪರಾಧೀನನಲ್ಲದೆ, ಸರ್ವತಂತ್ರಸ್ವತಂತ್ರನಾದ ಶ್ರೀಪರಮಾತ್ಮನು. **ತನಗೆ ತಾನೇ ಭೃತ್ಯನೆನಿಸುವ**—ತನಗೆ ಭೃತ್ಯರಾದ ರಮಾಬ್ರಹ್ಮಾದಿಗಳಲ್ಲಿ ಅಂತರ್ಯಾಮಿಯಾಗಿದ್ದು, ಅವರವರ ಬಿಂಬರೂಪದಿಂದ ಭೃತ್ಯನೆಂದು ಕರೆಯಿಸಿಕೊಳ್ಳುತ್ತಾನೆ. ಪ್ರಭುಗಳಲ್ಲಿ ಪ್ರಭುನಾಮಕನಾಗಿ, ಭೃತ್ಯರಲ್ಲಿ ಭೃತ್ಯನಾಮಕನಾಗಿ, ಸ್ವಾಮಿ-ಭೃತ್ಯವಾಚ್ಯನಾಗಿದ್ದಾನೆ. ತನಗೆ ತಾನೇ ಪ್ರಭು-ತನಗೆ ತಾನೇ ಭೃತ್ಯ. **ಭೋಕ್ತೃ** — ವಿಷಯಗಳನ್ನು ಅನುಭವಿಸು ಭೋಕ್ತೃ ಶಬ್ದವಾಚ್ಯನಾಗಿ, ಭೋಕ್ತೃನಾಮಕನಾಗಿದ್ದಾನೆ. **ಭೋಗ್ಯ ಪದಾರ್ಥದೊಳಗಿದ್ದು** — ಭೋಕ್ತೃಗಳು ಅನುಭವಿಸುವ ಸಕಲ ವಿಷಯ ಪದಾರ್ಥಗಳಲ್ಲಿ ವಿದ್ಯಮಾನನಾಗಿದ್ದು, **ತತ್ತದಾಹ್ವಯನಾಗಿ**—ಭೋಕ್ತೃ-ಭೋಗ್ಯನಾಮಗಳಿಂದಲೇ ಕರೆಯಿಸಿಕೊಳ್ಳುತ್ತಾ, **ತರ್ಪಕ** — ತೃಪ್ತಿಪಡಿಸುವ ಪದಾರ್ಥಗಳಂತರ್ಗತನಾಗಿದ್ದು, **ತತ್ತ್ವಪತಿಗಳ** — ದೇಹಗತ ತತ್ತ್ವಾಭಿಮಾನಿದೇವತೆಗಳಿಗೆ, **ತೃಪ್ತಿಪಡಿಸುವ** — ತೃಪ್ತಿಯನ್ನುಂಟು ಮಾಡುವನು (ತೃಪ್ತಿಪ್ರದನು). **ಮತ್ತರಾದ**—ಮದದಿಂದ ಕೊಬ್ಬಿದ, **ಅಸುರರ್ಗೆ**—ದೇಹಗತತತ್ತ್ವಾಭಿಮಾನಿದೈತ್ಯರಿಗೆ, **ಅಸಮೀಚೀನ**—ಸಮೀಚೀನವಲ್ಲದ, ಅಂದರೆ, ಆನಂದಕ್ಕೆ ಹೇತುವಲ್ಲದ, **ಫಲವ**—ಮಹಾದುಃಖರೂಪವಾದ ಫಲಗಳನ್ನು **ಈವ**—ಕೊಡುತ್ತಾನೆ. ॥೧೩॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ:-

ಸರ್ವಾಧಿಷ್ಠಾನದಲ್ಲಿ ಸ್ವರಮಣನಾಗಿ ಇರತಕ್ಕಂಥವನೂ, ಇಷ್ಟಾನಿಷ್ಟ ಫಲಗಳ ಕೊಡತಕ್ಕಂಥವನೂ ಹೇಳುತ್ತಾರೆ. ಶ್ರೀಪರಮಾತ್ಮ ಸತ್ಯವಾದ ತನ್ನ ಅನಾದಿಸಂಕಲ್ಪಾನುಸಾರ ಸೃಷ್ಟ್ಯಾದಿ ವ್ಯಾಪಾರಗಳಲ್ಲಿ ಪ್ರವರ್ತಿಸಿ, ಕಾರ್ಯಗಳ ಮಾಡುವ, ಪರಾಧೀನನಲ್ಲದ, ಸ್ವತಂತ್ರನಾದ, ರಾಜನಾದವ-ಶ್ರೀಪರಮಾತ್ಮ ರಮಾ-ಬ್ರಹ್ಮಾದಿ ಭೃತ್ಯರಿಗೆ ತನಗೆ ಆಗಬೇಕಾದ ಪ್ರಯೋಜನವೇನೂ ಇಲ್ಲದವನಾದ್ದರಿಂದ, ತನಗೆ ತಾನೇ ಭೃತ್ಯನೆನಿಸುತ್ತಾನೆ. ಎಂದರೆ, ಲೋಕದಲ್ಲಿ ಪ್ರಭುತ್ವ ಎನತಕ್ಕ ಅಧಿಷ್ಠಾನದಲ್ಲಿದ್ದು, ಪ್ರಭು ಎಂತಲೂ, ಭೃತ್ಯ ಎನತಕ್ಕ ಅಧಿಷ್ಠಾನದಲ್ಲಿದ್ದು ಭೃತ್ಯ ಎಂತಲೂ, ಈ ರೀತ್ಯಾ ತನಗೆ ತಾನೇ ಸ್ವಾಮಿ. ಭೃತ್ಯ-ಎಂತಲೂ ಜನಿಸೋವನಾಗುತ್ತಾನೆ. ಮತ್ತು ಭೋಕ್ತೃಗಳೊಳು ಭೋಕ್ತೃಶಬ್ದವಾಚ್ಯನಾಗಿ ತದಾಕಾರದಿಂದಲೂ, ಭೋಕ್ತೃಗಳು ಭೋಜನಮಾಡತಕ್ಕ ಪದಾರ್ಥಗಳೊಳು ತದಾಕಾರನಾಗಿ, ತದ್ವಾಚ್ಯನಾಗಿ ಇದ್ದವನಾಗಿ, ಪೂರ್ವೋಕ್ತ ಪ್ರಕಾರ ಚರಾಚರ, ತ್ರಿವಿಧರಾದ ಸರ್ವಪ್ರಾಣಿಗಳಲ್ಲಿ, ಅವರವರ ಭೋಜ್ಯವಸ್ತುಗಳಲ್ಲಿ ಆಯಾ ನಾಮಗಳಿಂದ ಕರೆಸಿದವನಾಗಿ, ದೇಹಗತ ತತ್ವಾಭಿಮಾನಿದೇವತೆಗಳ, ಹಾಗೆ ದೇಹಗತ ತತ್ವಾಭಿಮಾನಿದೈತ್ಯರಿಗೆ, ಆಯಾ ಪ್ರಾಣಿಗಳ ಸ್ಥೂಲದೇಹಗಳಿಗೆ, ತೃಪ್ತಿಪಡಿಸತಕ್ಕ ಪದಾರ್ಥಕ್ಕೆ ತರ್ಪಕ-ಎಂದೇ ಸಾಂಕೇತ, ಈ ತರ್ಪಕ ಪದಾರ್ಥಗಳ, ಜೀವನದ್ವಾರ ದೇಹದಿಂದ ಭೋಜನಮಾಡಿಸಿ, ಜೀವನ ಸ್ಥೂಲದೇಹಕ್ಕೆ ಉಪಚಯವಾಗತಕ್ಕ ರಸದಿಂದ ಸ್ಥೂಲದೇಹಕ್ಕೆ ಉಪಚಯಮಾಡಿ, ತದ್ದ್ವಾರ ಸ್ಥೂಲದೇಹಗತ ತತ್ವಾಭಿಮಾನಿಗಳಾದ ದೇವದೈತ್ಯರಿಗೆ ಸೇರತಕ್ಕ ಜೀವಭುಕ್ತ ಪದಾರ್ಥಗತ ರಸಗಳ ದೇವದೈತ್ಯರಿಗೂ, ಅವರವರ ರಸ ಅವರವರಿಗೆ ಸೇರಿಸಿ, ತೃಪ್ತಿಪಡಿಸುವ, ಅದೇ ಪ್ರಕಾರ, ತನ್ನ ಸ್ವಾಖ್ಯರಸಗಳ ತಾನು ಸ್ವೀಕರಿಸುವ

ಸ್ವೀಕಾರ ಮಾಡಿ. ಈ ಪ್ರಕಾರ, ಅನುಸಂಧಾನಮಾಡಿ, ಭೋಜನಮಾಡುವ ತಕ್ಕವರಿಗೆ ಅಶ್ವಮೇಧಾದಿ ಯಜ್ಞಗಳು ಮಾಡಿದ ಪುಣ್ಯಸದೃಶಫಲಗಳ ಕೊಡುತಾನೆ. ತದನ್ಯರಾದ, ಅನುಸಂಧಾನರಹಿತರಾಗಿ, ಭೋಜನ ಮಾಡುವರಿಗೆ, ಅಸಮೀಚೀನವಾದ ಮಹಾಮುಷಿಫಲವನ್ನು ಕೊಡತಾನೆಂತ ತಾತ್ಪರ್ಯ ॥೧೩॥.

## ೨. ಭಾವದರ್ಪಣ

ಈ ಪದ್ಯದ ತಾತ್ಪರ್ಯ ಹಿಂದೆ ಬರೆದಿರತದೆ। ಸತ್ಯ ಸಂಕಲ್ಪ ॥೧೩॥

## ೩. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

'ಸತ್ಯ' ಇತಿ ॥೧೩॥

## ಕನ್ನಡಾರ್ಥ

ಭೋಕ್ತೃಭೋಗ್ಯಗಳಲ್ಲಿದ್ದು, ತತ್ತನ್ನಾಮಗಳಿಂದ ವಾಚ್ಯನಾಗಿ, ತನಗೆ ತಾನೇ ಸೇವ್ಯನಾಗಿ, ತತ್ತಾಭಿಮಾನಿಗಳಿಗೆ ತೃಪ್ತಿಯನ್ನೂ, ಅಸುರರಿಗೆ ಅಸಮೀಚೀನ ಫಲವನ್ನೂ ಕೊಡುವನು. ॥೧೩॥

## ೪. ಭಾವಪ್ರಕಾಶಿಕೆ

"ಸತ್ಯ ಸಂಕಲ್ಪಿತೋ ವಿಷ್ಣುರ್ನಾನ್ಯಥಾತು ಕರಿಷ್ಯತಿ"- ಎಂಬ ವಾಕ್ಯದಂತೆ, ಪರಮಾತ್ಮನು ಸತ್ಯಸಂಕಲ್ಪನು. ಅದಕ್ಕನ್ಯಥಾ ಎಂದಿಗೂ ಮಾಡುವದಿಲ್ಲ. ಸರ್ವಪ್ರಕಾರದಿಂದಲೂ, ತನ್ನ ಭಕ್ತರಿಗೆ ಬರುವ ಕಷ್ಟಗಳನ್ನು ಪರಿಹರಿಸಿ, ಅವರ ಇಷ್ಟಾರ್ಥಗಳನ್ನು ಪೂರೈಸುವುದೇ- ಇವನ ಸಂಕಲ್ಪವು. ಆದುದರಿಂದ, ದೇವತೆಗಳಿಗೆ ಅನುಕೂಲನಾಗಿಯೂ, ದೈತ್ಯರಿಗೆ ಪ್ರತಿಕೂಲ

ನಾಗಿದ್ದೂ, ಇರುವನೇ ಹೊರತು ತನಗೆ ಯಾರಿಂದಾದರೂ ಆಗುವುದೇನು? ಪ್ರಭುವಿನಲ್ಲಿದ್ದು, ಪ್ರಭುವೆನಿಸುವವನೂ, ತಾನೇ ಭೃತ್ಯನಲ್ಲಿದ್ದು, ಭೃತ್ಯ ಕಾರ್ಯಗಳನ್ನು ಮಾಡಿಸಿ, ಭೃತ್ಯನೆನಿಸುವವನೂ ತಾನೇ, ಸುಖಾದಿಗಳನ್ನು ಭೋಗಿಸುವ ಜನರಲ್ಲೂ ಅವರು ಭೋಗಿಸಲು ಯೋಗ್ಯವಾದ ಪದಾರ್ಥಗಳಲ್ಲೂ ತಾನೇ ಇದ್ದು, ಆಯಾ ಹೆಸರುಗಳಿಂದ ತರ್ಪಕನೆನಿಸಿ, ತತ್ತ್ವಾಭಿಮಾನಿದೇವತೆಗಳನ್ನು ತೃಪ್ತಿಪಡಿಸುವನು. ದೈತ್ಯರಿಗೆ ಪಾಪಫಲಗಳನ್ನು ಕೊಡುವನು. ॥೧೩॥

## ೫. ಶ್ರೀಗುರುಹೃದಯ ಪ್ರಕಾಶಿಕೆ

ಚ್ಯುತಿಲ್ಲದ ಸಂಕಲ್ಪವೆಂಬ ಅಭಿಪ್ರಾಯವುಳ್ಳ ದೇವರು ಸ್ವೇಚ್ಛಾನುಸಾರ ನಡೆಯುವ ಪ್ರಭು. ತನಗೆತಾನೇ ಭೃತ್ಯನೆನಿಸುವ- ಅಂದರೆ, ಉತ್ತಮರಲ್ಲಿದ್ದ ಸ್ವಾಮಿ-ಎಂಬ ತನ್ನ ರೂಪಕ್ಕೆ ಭೃತ್ಯರಲ್ಲಿದ್ದ ತನ್ನ ರೂಪದಿಂದ, ಉಪಚಾರ ಮಾತ್ರ ಭೃತ್ಯನೆನಿಸಿಕೊಂಡು, ಅವರ ಕಾರ್ಯವನ್ನು ನಡೆಸುವನು, ಭೋಜ್ಯವೆಂಬ ಅನ್ನಾದಿಗಳಲ್ಲೂ, ಭೋಕ್ತೃಗಳೆಂಬ ಮನುಷ್ಯಾದಿಗಳಲ್ಲಿಯೂ ಇದ್ದು, ತತ್ತ್ವದಾಪ್ಯಾಯನನಾಗಿ. ಅಂದರೆ, ಅನ್ನವಂತಲೂ, ಅನ್ನವನ್ನು ತಿಂಬುವರೆಂಬ ನಾಮವನ್ನು ಸಹ ತಾನೇ ಸ್ವತಂತ್ರವಾಗಿ ಧರಿಸಿ, ತರ್ಪಕನೆಂಬ ಭೋಗಪ್ರದನಾಗಿ ಸರ್ವರನ್ನೂ ತೃಪ್ತಿಪಡಿಸುವನು. ತತ್ತ್ವಪತಿಗಳಿಗೆ ಅಧಿಕ ತೃಪ್ತಿಪಡಿಸುವನು. ಸ್ವಭಾವದಿಂದ ಮತ್ತರಾದ ಅಸುರರ ಯೋಗ್ಯತೆ ವ್ಯಕ್ತಿಮಾಡಿ, ಅಸಮೀಚೀನವೆಂಬ ದುಃಖಫಲವನ್ನು ಕೊಡುವನು. ಕರ್ತೃತ್ವ ಭೋಕ್ತೃತ್ವಶಕ್ತಿಗಳನ್ನು ಜೀವರಿಗೆ ವ್ಯಕ್ತಿಮಾಡಿ, ಪರಮಕರುಣಾಳುವೆನಿಸಿಕೊಳ್ಳುವನೆಂದರ್ಥ. ॥೧೩॥

# ಸರ್ವವ್ಯಾಖ್ಯಾನಸಾರಸಂಗ್ರಹ

೧. ಸತ್ಯಸಂಕಲ್ಪ-

ಶ್ರೀಪರಮಾತ್ಮನ ಇಚ್ಛಾರೂಪವಾದ ಸಂಕಲ್ಪವು ನಿತ್ಯವೂ ಸತ್ಯವೂ

ಆಗಿರುವುದು. ಅವನ ಸಂಕಲ್ಪವು ವಿಕಾರರಹಿತವಾದುದು. ಅದು ಶಾಶ್ವತರೂಪವುಳ್ಳದ್ದು. ಶ್ರೀಪರಮಾತ್ಮನು ಚೇತನರಲ್ಲಿ ಬಿಂಬರೂಪನಾಗಿದ್ದು, ಅವರವರ ಅನಾದಿಸ್ವರೂಪಗತಸ್ವಭಾವಗೆ ಅನುಗುಣವಾಗಿ, ಸ್ವಭಾವ ಮತ್ತು ಗುಣಧರ್ಮಗಳನ್ನು ಸಹಜವಾಗಿಯೇ ಅಭಿವ್ಯಕ್ತಿಗೊಳಿಸುವನು. ಸಹಜವಾದ ಸ್ವರೂಪಹಾನಿಯನ್ನು ಉಂಟುಮಾಡುವುದಿಲ್ಲ. (ಸರ್ವಶಕ್ತನಾಗಿದ್ದರೂ) ಇದೇ ಶ್ರೀಪರಮಾತ್ಮನ ಸ್ವರೂಪಲಕ್ಷಣವಾದ ಸತ್ಯಸಂಕಲ್ಪರೂಪವು.

**೨. ಪ್ರವರ್ತಿಸುವ-**

ಸತ್ಯಸಂಕಲ್ಪನಾದ ಶ್ರೀಪರಮಾತ್ಮನು ಸಕಲಜಗದ್ವ್ಯಾಪಾರಗಳನ್ನೂ ನಿರಾಯಾಸವಾಗಿ ಬಿಂಬಕ್ರಿಯಾದ್ವಾರಾ ನಿರ್ವಹಿಸುವನು. ಚೇತನರ ಮತ್ತು ಜಡವಸ್ತುಗಳ ಸ್ವಾಭಾವಿಕವಾದ ಗುಣಲಕ್ಷಣಗಳ ಅಭಿವ್ಯಕ್ತಿಯು ಸತ್ಯಸಂಕಲ್ಪನ ಇಚ್ಛಾನುಸಾರ ಉಂಟಾಗುವುದು. "ಯಥಾಪೂರ್ವಂ ಅಕಲ್ಪಯತ್"- ಎಂಬುದೇ ಸತ್ಯಸಂಕಲ್ಪಾನುಸಾರ ಪ್ರವರ್ತನ ಧರ್ಮವು.

**೩. ಪ್ರಭು-**

ಶ್ರೀಹರಿಯು ಸರ್ವನಿಯಾಮಕನು. ಅಂದರೆ, ಸರ್ವೇಶನು. ಅವನ ಸರ್ವತಂತ್ರ ಸ್ವಾತಂತ್ರ್ಯಕ್ಕೆ ಅನಾದ್ಯನಂತಕಾಲದಿಂದಲೂ, ಯಾವ ಬಾಧಕವೂ ಇಲ್ಲ. ಪರಾಪೇಕ್ಷರಹಿತವಾದ ಪರಮಾತ್ಮನು ಸ್ವೇಚ್ಛಾನುಸಾರ ಪ್ರವರ್ತಿಸುವ ಮಹಾಪ್ರಭುವು.

**೪. ತನಗೆ ತಾನೇ ಭೃತ್ಯನೆನಿಸುವ-**

ರಮಾಬ್ರಹ್ಮಾದಿ ಸಕಲತೃಣಾಂತ ಜೀವರುಗಳು ಆ ಜಗದೀಶನ ಭೃತ್ಯರು. ಅವನ ಸತ್ಯಸಂಕಲ್ಪರೂಪವಾದ ಆಣತಿಯಂತೆ, ಚರಾಚರಾತ್ಮಕವಾದ ಜಗತ್ತಿನ ಸಮಸ್ತ ಕ್ರಿಯಾವಿಶೇಷಗಳೂ ನಡೆಯುತ್ತಿರುವುವು. ಭೃತ್ಯರಲ್ಲಿ ಅಂತರ್ಯಾಮಿಯಾಗಿದ್ದು, ಭೃತ್ಯನಾಮಕನಾಗಿದ್ದಾನೆ. ತನಗೆ ತಾನೇ

ಭೃತ್ಯನು. ಅಂದರೆ, ಸ್ವಾಮಿತ್ವ ಮತ್ತು ಭೃತ್ಯತ್ವ ಎರಡು ಧರ್ಮಗಳುಳ್ಳ ಜೀವರಲ್ಲಿ ಅಂತರ್ಯಾಮಿಯಾಗಿರುವ ಬಿಂಬನು ಒಬ್ಬನೇ. ಅಪ್ಪಣೆಮಾಡುವ ಜೀವರಲ್ಲಿದ್ದು, "ಸ್ವಾಮಿ" ಎಂದೆನಿಸುವನು. ಆವರ ಅಪ್ಪಣೆಯನ್ನೇ ಪರಿ ಪಾಲಿಸುವ ಭೃತ್ಯವರ್ಗದವರಲ್ಲಿದ್ದು, "ಭೃತ್ಯ" ನೆಂದೆನಿಸುವನು. ಇದೇ ಸ್ವಾಮಿ-ಭೃತ್ಯ ನ್ಯಾಯರೂಪವಾದ ಅವನ ಬಿಂಬಕ್ರಿಯಾವಿಶೇಷವು.

## ೫. ಭೋಕ್ತೃ-

ಇಂದ್ರಿಯಗಳದ್ವಾರಾ, ವಿಷಯಗಳನ್ನು ಅನುಭವಿಸುವ ಸಕಲಜೀವರೂ "ಭೋಕ್ತೃ" ಎನಿಸುವರು. ಶಬ್ದವು ಶ್ರವಣೇಂದ್ರಿಯಕ್ಕೆ ವಿಷಯವು. ಸ್ಪರ್ಶವು ತ್ವಗಿಂದ್ರಿಯಕ್ಕೆ ವಿಷಯವು. ನೇತ್ರೇಂದ್ರಿಯಕ್ಕೆ ವಿಷಯವು ರೂಪ. ರಸಾಸ್ವಾದವು ಜಿಹ್ವೇಂದ್ರಿಯಕ್ಕೆ ವಿಷಯವು. ಗಂಧವು ನಾಸಿಕೇಂದ್ರಿಯದ ವಿಷಯವು. ಮನಸ್ಸಿಂದ್ರಿಯವು ಸಕಲ ವಿಷಯಗಳನ್ನು ಗ್ರಹಿಸುವ ಇಂದ್ರಿಯವು. ಹೀಗೆ, ಸಕಲವಿಷಯಗಳಲ್ಲಿ ಅಂತಸ್ಥರೂಪದಿಂದ ಇದ್ದು, ಇಂದ್ರಿಯಾಭಿಮಾನಿದೇವತೆಗಳಲ್ಲಿ ಅಂತರ್ಯಾಮಿಯಾಗಿದ್ದು, ಇಂದ್ರಿಯಗಳ ದ್ವಾರಾ, ದೇಹಗತಸಕಲೇಂದ್ರಿಯಗಳಲ್ಲಿ ಪ್ರಕಾಶತೋವ್ಯಾಪ್ತನಾಗಿರುವ ಜೀವರ ಅನುಭವಕ್ಕೆ ತಂದೀಯುವನು. ಇದೇ ಅವನ ಬಿಂಬಕ್ರಿಯಾ ಸರಣಿಯ ವೈಶಿಷ್ಟ್ಯವು. ಇದರಿಂದ, ಭೋಕ್ತೃಗಳಲ್ಲಿದ್ದು, ವಿಷಯಗಳನ್ನು ಉಂಡು, ತತ್ತ್ವಾಭಿಮಾನಿದೇವತೆಗಳು, ಅಸುರರದ್ವಾರಾ ಉಣಿಸಿ, ಜೀವನ ದ್ವಾರಾ ಉಂಡು ಉಣಿಸುವನು.

## ೬. ಭೋಗ್ಯ ಪದಾರ್ಥದೊಳಗಿದ್ದು-

ಜೀವರು ಭೋಗಿಸುವ ವಿಷಯ ಪದಾರ್ಥಗಳಲ್ಲಿ ಅಂತರ್ಯಾಮಿರೂಪ ದಿಂದ ಇದ್ದು, ಇಂದ್ರಿಯಗಳಿಗೆ ವಿಷಯಸನ್ನಿಕರ್ಷಕ್ರಿಯಾದ್ವಾರಾ, ಜೀವರ ಭೋಗಕ್ಕೆ ತಂದು, ಅವರಿಗೆ ತೃಪ್ತಿಪ್ರದನಾಗಿರುವನು. ಶಬ್ದಾದಿ ಸಕಲ ವಿಷಯಗಳಲ್ಲಿದ್ದು, "ಭೋಗ್ಯ" ನೆನಿಸುವನು, ಭೋಕ್ತೃ ಮತ್ತು ಭೋಜ್ಯ

ವಸ್ತುಗಳಲ್ಲಿದ್ದರೂ, ತಾನು ಮಾತ್ರ ಅವುಗಳಿಂದ ಪರಮವಿಲಕ್ಷಣನಾಗಿದ್ದಾನೆ. ಆ ವಸ್ತುಗಳ ಸಂಬಂಧವಾದ ಲೇಪ ಬಿಂಬನಿಗಿಲ್ಲ. ಭೋಕ್ತೃಗಳಿಗೆ ಮಾತ್ರ ಅನುಭವ.

**೭. ತತ್ತದಾಹ್ವಯನಾಗಿ-**

ಭೋಕ್ತೃಗಳಲ್ಲಿದ್ದು, "ಭೋಕ್ತೃ" ಎಂದೆನಿಸುವನು. ಭೋಜ್ಯವಸ್ತುಗಳಲ್ಲಿದ್ದು, 'ಭೋಜ್ಯ' ಶಬ್ದವಾಚ್ಯನಾಗಿದ್ದು, ಭೋಜ್ಯನಾಮಕನಾಗಿದ್ದಾನೆ. ಅಂದರೆ, ಆಯಾಯಾ ವಸ್ತುಗಳ ಹೆಸರುಗಳಿಂದಲೇ ಕರೆಸುವನು. (ತತ್ತತ್-ಆಯಾಯಾ ವಸ್ತುಗಳ, ಆಹ್ವಯನಾಗಿ-ನಾಮವಾಚಕನಾಗಿ).

**೮. ತರ್ಪಕ-**

ಜೀವರಿಗೆ ವಿಷಯಾನುಭವದ್ವಾರಾ, ತೃಪ್ತಿಯನ್ನುಂಟುಮಾಡುವುದರಿಂದ, ಶ್ರೀಪರಮಾತ್ಮನಿಗೆ- "**ತರ್ಪಕ**"- ಎಂತ ನಾಮ.

**೯. ತತ್ತ್ವಪತಿಗಳ ತೃಪ್ತಿಪಡಿಸುವ-**

ಸಕಲಚೇತನರ ಸ್ಥೂಲದೇಹಗತರಾಗಿ ವ್ಯಾಪಾರಮಾಡುವ ಸಕಲ ತತ್ತ್ವಾಭಿಮಾನಿಗಳಲ್ಲಿ ಅಂತರ್ಯಾಮಿಯಾಗಿದ್ದು, ಭೋಜನವಸ್ತುಗಳ ರಸವಿಭಾಗ ಮಾಡಿ, ಜಡರಸವನ್ನು ದೇಹದ ಉಪಚಯಕ್ಕೂ, ಸಮೀಚೀನವಾದ ಆನಂದ ರಸವನ್ನು ತತ್ತ್ವಪತಿ ದೇವತೆಗಳಿಗೂ ಹಂಚಿ, ಅವರನ್ನು ತೃಪ್ತಿಪಡಿಸುವನು. ಬಿಂಬನ ಪ್ರೇರಣೆಯಿಂದಲೇ ಸಕಲತತ್ತ್ವದೇವತೆಗಳ ವ್ಯಾಪಾರ, ಅವರ ದ್ವಾರಾ ಜೀವನ ಕ್ರಿಯಾಭಿವ್ಯಕ್ತಿ.

**೯. ಮತ್ತರಾದ ಅಸುರರ್ಗೆ-**

ಸ್ಥೂಲದೇಹದವರಾದ ತತ್ತ್ವಾಭಿಮಾನಿ ಅಸುರರು ಮದೋನ್ಮತ್ತರು. ಅಹಂಕರ್ತೃತ್ವಜ್ಞಾನವುಳ್ಳವರು. ಅವರಿಗೆ ಸಮೀಚೀನವಾದ ಮಹಾದುಃಖರೂಪವಾದ ಫಲಗಳನ್ನು ಕೊಡುವನು. ॥೧೩॥

## ಪದ್ಯ-೧೪

**ಮೂಲ :**

> **ಬಿಟ್ಟಿಗಳ ನೆವದಿಂದಲಾಗಲೀ ।**
> **ಹೊಟ್ಟೆಗೋಸುಗವಾದಡಾಗಲಿ ।**
> **ಕೆಟ್ಟರೋಗ ಪ್ರಯುಕ್ತವಾಗಲಿ ಅಣಕದಿಂದೊಮ್ಮೆ ॥**
> **ನಿಟ್ಟುಸಿರಿನಿಂ ಬಾಯ್ದೆರೆದು ಹರಿ ।**
> **ವಿಠ್ಠಲಾ ಸಲಹೆಂದೆನಲು ಕೈ ।**
> **ಗೊಟ್ಟು ಕಾವ ಕೃಪಾಳು ಸಂತತ ತನ್ನ ಭಕುತರನು ॥೧೪॥**

**ಅವತರಣಿಕೆ :**

ಯಾವ ಕಾರಣದಿಂದಲಾಗಲೀ, ಶ್ರೀಪರಮಾತ್ಮನನ್ನು ಸದಾ ಸ್ಮರಿಸುತ್ತಿರಬೇಕೆಂದು ತಿಳಿಸುತ್ತಾರೆ. ॥೧೪॥

**ಪ್ರತಿಪದಾರ್ಥ :**

**ಬಿಟ್ಟಿಗಳ ನೆವದಿಂದಲಾಗಲೀ** = ಯಾವ ನೆಪವೂ ಇಲ್ಲದೇ. ಸುಮ್ಮನೆ ವಿನೋದಕ್ಕಾಗಿ. **ಹೊಟ್ಟೆಗೋಸುಗವಾದಡಾಗಲಿ** = ಉದರಪೋಷಣೆಯ ಕಾರಣದಿಂದಲಾಗಲೀ. **ಕೆಟ್ಟರೋಗಪ್ರಯುಕ್ತವಾಗಲಿ** = ದಾರುಣವಾದ ರೋಗದ ನೆಪದಿಂದಲಾಗಲೀ, **ಅಣಕದಿಂದೊಮ್ಮೆ** = ಹಾಸ್ಯಕ್ಕಾಗಲೀ ಒಂದು ಸಾರಿಯಾದರೂ, **ನಿಟ್ಟುಸಿರಿನಿಂ** = ನಿಟ್ಟುಸಿರುಬಿಡುತ್ತಾ, **ಬಾಯ್ದೆರೆದು** = ಬಾಯಿ ತೆರೆದವನಾಗಿ. (ಮುಕ್ತಕಂಠದಿಂದ). **ಹರಿವಿಠ್ಠಲಾ** = ಹೇ ಜ್ಞಾನಾನಂದ ಸ್ವರೂಪಿಯಾದ ಹರಿಯೇ, **ಸಲಹೆಂದೆನಲು** = ನನ್ನನ್ನು ಸಂರಕ್ಷಿಸು-ಎಂದು ಕೂಗಲು, **ಕೃಪಾಳು** = ದಯಾಮಯನಾದ ಶ್ರೀಹರಿಯು,

**ಕೈಗೊಟ್ಟು** = ಕರಾವಲಂಬನ ನೀಡಿ. **ತನ್ನ ಭಕುತರನು** = ಏಕಾಂತ ಭಕ್ತರುಗಳನ್ನು, **ಸಂತತ** = ಯಾವಾಗಲೂ, **ಕಾವ** = ಸಂರಕ್ಷಿಸುವನು. ॥೧೪॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮನನ್ನ ಸದಾ ಸ್ಮರಿಸಬೇಕೆಂತ ಹೇಳುತಾರೆ. ಶ್ರೀಪರಮಾತ್ಮನ ಮಹಾತ್ಮ್ಯ ತಿಳಿದ, ಅನುಸಂಧಾನಯುಕ್ತವಾದ ನೇಮದಿಂದಾಗಲೀ, ಅನ್ನ ದರಿದ್ರನಾಗಿ ಮಹಾಕ್ಷುತ್ತಿನಿಂದ ಯುಕ್ತನಾಗಿ, ಅದರನ್ನ ಸಹಿಸೋದಕ್ಕೆ ಶಕ್ತಿ ಸಾಲದೇ, ಅಂಥಾ ಕಾಲದಲ್ಲಿ ತನ್ನ ಉದರಪೋಷಣೆಗೇ ಆಗಲೀ, ದಾವ ವ್ಯಧ್ಯನಿಂದಲೂ ನಿವಾರಣವಾಗದೆ ಅನುಭವಿಸತಕ್ಕ ಶಕ್ತಿ ಇಲ್ಲದೆ ರೋಗ ಬಂದಾಗಾಗಲೀ, ಮಹಾದೀನನಾಗಿ ಮನಮುಟ್ಟಿ. ಅನ್ಯರಕ್ಷಕರು ದಾರೂ ಇಲ್ಲ- ಪರಮಾತ್ಮನೇ ರಕ್ಷಕನಾಗಬೇಕೆಂಬ ಅನುಭವ ಬರತಕ್ಕ ಕಾಲವಾದ್ದರಿಂದ. ಅಂಥಾ ಕಾಲದಲ್ಲಿ ಮನಸಾ ಆಲೋಚನೆ ಮಾಡಿ, ಒಂದು ಸಾರಿ ಭಕ್ತಿಪೂರ್ವಕವಾಗಿ, ನಿಟ್ಟುಸಿರು ಬಿಡುತಾ ಬಾಯಿ ತೆರೆದವನಾಗಿ, ಅನ್ಯರಾದ ಮನುಷ್ಯರಿಗೆ ಮೊರೆ ಇಡದೆ, ದುರಿತಪರಿಹಾರಕನಾಗಿರತಕ್ಕ ಶ್ರೀನಾರಾಯಣ ಎಂತ ಉಚ್ಚಾರಮಾಡಿ, ನನ್ನ ಕಾಪಾಡಬೇಕೆಂತ ತ್ರಿಕರಣಶುದ್ಧಿಪೂರ್ವಕ ಅಂದರೆ, ಶ್ರೀಪರಮಾತ್ಮ ತನ್ನ ಭಕ್ತರಾದವರನ್ನ ದಯಾಳುವಾದ ದೇವರು ಕೇವಲ ಆದರದಿಂದ ಪ್ರತಿದಿನದಲ್ಲೂ, ಜ್ಞಾನಭಕ್ತಿ ವೈರಾಗ್ಯಗಳೆಂದೋ ಕೈಗಳ ಕೊಟ್ಟು, ತದ್ವಾರಾ ಸಂಸಾರಸಮುದ್ರ ದಾಟಿಸುತಾನೆ- ಇಂಥಾ ಭಕ್ತರನ್ನ ಬಿಟ್ಟುಹೋಗದೆ ಸದಾ ಅಪರೋಕ್ಷಿತನಾಗಿ ಇರತಾನೆ ಎಂತ ತಾತ್ಪರ್ಯ. ॥೧೪॥

### ೨. ಭಾವದರ್ಪಣ

ದಾವ ಬಗೆಯಿಂದಾಲಾದರೂ, ಭಗವನ್ನಾಮಸ್ಮರಣೆ ಮಾಡುತ್ತಾರೆ

ಟಿಪ್ಪಣಿ: ಪೊಟ್ಟೆ = ಹೊಟ್ಟೆ, ಅಣಕ = ಅಣಗಿಸೋಣ. ॥೧೪॥

## ৯. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ

"ಸರ್ವಥಾऽಘಹರಂ ವಿಷ್ಣೋಃನಾಮ ಶ್ರದ್ಧಕ್ತಿಪೂರ್ವಕಮ್॥ ಅಭಕ್ತ್ಯೋಪಾತ್ತಮಾ ನೈವ ಫಲದಾತೃ-ಭವಿಷ್ಯತಿ"॥ ಇತ್ಯಭಿಪ್ರೇತ್ಯ ಅರ್ಥ ವಾದ ಮಾಹ- 'ಬಿಟ್ಟಿ' ಇತಿ॥ 'ಆಣಕ' ಪರಿಹಾಸ॥ 'ನಿಟ್ಟುಸಿರು'- ಗಟ್ಟಿಯಾಗಿ ॥೧೪॥

## ಕನ್ನಡಾರ್ಥ

"ವಿಷ್ಣುಭಕ್ತಿಪುರಃಸರವಾಗಿ ಉಚ್ಚರಿಸಲ್ಪಡುವ ಶ್ರೀಹರಿನಾಮವು ಎಲ್ಲ ಪಾಪಗಳನ್ನು ಅಪಹರಿಸುತ್ತದೆ. ಭಕ್ತಿಯಿಲ್ಲದೇ ಉಚ್ಚರಿಸಲ್ಪಡುವ ಆ ಹರಿ ನಾಮವು ಫಲಕಾರಿಯಾಗುವುದೇ ಇಲ್ಲ"- ಎಂಬ ಅಭಿಪ್ರಾಯದಿಂದ ಅರ್ಥ ವಾದವನ್ನು ಹೇಳುತ್ತಾರೆ- 'ಬಿಟ್ಟಿ'- ಎಂಬ ಪದ್ಯದಿಂದ. ॥೧೪॥

## ೪. ಭಾವಪ್ರಕಾಶಿಕೆ

ಬಿಟ್ಟಿಕೆಲಸಗಳನ್ನು ಮಾಡುವಾಗ, ಆ ಸಂಕಟಕಾಲದಲ್ಲಾಗಲೀ, ಹೊಟ್ಟೆ ಗಿಲ್ಲದೆ ಕಷ್ಟಪಡುವಾಗ ಒಬ್ಬರಿಗೋಸ್ಕರವಾಗಲೀ, ಕೆಟ್ಟರೋಗವನ್ನನುಭವಿಸು ವಾಗಲೀ, ಭಕ್ತಿವೈರಾಗ್ಯದಿಂದ ಏಕಾಗ್ರಚಿತ್ತನಾಗಿ ನಿಟ್ಟುಸಿರು ಬಿಡುತ್ತಾ, ಬಾಯಿತೆರೆದು, ಅಯ್ಯೋ, ಅಪ್ಪಾ ಏನ್ನದೇ, ಹರೇ! ವಿಠ್ಠಲಾ! ಸಲಹು- ಎಂದು ಸ್ಮರಿಸಿದರೆ ಸಾಕು, ಕರುಣಾಳುವಾದ ಶ್ರೀಹರಿಯು ತನ್ನ ಭಕ್ತರ ಸ್ಮರಣೆಗೆ ಮೆಚ್ಚಿ, ಅವರನ್ನ ಕೈಕೊಟ್ಟು ರಕ್ಷಿಸುವನು. ॥೧೪॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ

ಬಿಟ್ಟಿ- ಎಂದರೆ, ಸಂಬಳವಿಲ್ಲದ ಚಾಕರೀ ಮಾಡಲಾರದನಿಮಿತ್ತದಿಂದ ಲಾಗಲೀ, ಹೊಟ್ಟೆಗೋಸ್ಕರ ಭಿಕ್ಷಬೇಡುವ ನಿಮಿತ್ತವಾಗಲೀ, ಕೆಟ್ಟರೋಗ

ಅನುಭವಿಸದ ಆಯಾಸ ನಿಮಿತ್ತವಾಗಲೀ, ಸ್ಮರಣೆ ಮಾಡುವವರನ್ನು, ಹಾಸ್ಯ ಮಾಡೋ ನಿಮಿತ್ತವಾಗಲೀ, ಒಂದು ಭಾರಿ ನಿಟ್ಟುಸಿರಿಟ್ಟ ದೀರ್ಘಶ್ವಾಸದಿಂದ ಬಾಯ್ ತೆರೆದು, ಶ್ರೀಹರೇ ವಿಠಲನೆಂಬ ಅಜ್ಞಜನೋದ್ಧಾರಕನೇ- ಸಂರಕ್ಷಿಸೆಂದು ಬಹ್ವಭ್ಯಾಸಬಲದಿಂದ ಭಕ್ತಿಪರವಶನಾಗಿ ನುಡಿಯುತ್ತಿರಲು, ಕೈ ಕೊಟ್ಟು, ತನ್ನ ಭಕ್ತರನ್ನು ಉದ್ಧರಿಸುವನು. ಆದ್ದರಿಂದಲೂ, ಕೃಪಾಳು. ವಿಷ್ಣು- ಎಂಬ ಸಂಸ್ಕೃತ ಶಬ್ದದ ತದ್ಭವವು ಬಿಟ್ಟ. ವಿಠ್ಠಲ- ಎಂದರೆ ಜ್ಞಾನ ಶೂನ್ಯರ ರಕ್ಷಕನೆಂದರ್ಥ. ॥೧೪॥

## ಸರ್ವವ್ಯಾಖ್ಯಾನಸಾರ ಸಂಗ್ರಹ

**೧. ಬಿಟ್ಟಿಗಳ-**

ಸಂಬಳವನ್ನು ತೆಗೆದುಕೊಳ್ಳದೆ ಚಾಕರಿಮಾಡಿದರೆ, ಅದನ್ನು ಬಿಟ್ಟಿ ಚಾಕರಿ-ಎನ್ನುತ್ತಾರೆ. ಇಲ್ಲಿ ಸುಮ್ಮನೆ, ಅಂದರೆ, ಯಾವ ಉದ್ದೇಶ್ಯವೂ ಇಲ್ಲದೆ-ಎಂದರ್ಥ. ವಿನೋದಕ್ಕಾದರೂ, ಶ್ರೀಹರಿಸ್ಮರಣೆ ಮಾಡಿದರೆ, ಅದರಿಂದಲೂ ಸತ್ಫಲವಾಗುವುದು. ಮಹಾತ್ಮ್ಯಜ್ಞಾನಪೂರ್ವಕವಾದ ಶ್ರೀಹರಿ ಸ್ಮರಣೆ ಅತ್ಯಂತ ಉತ್ತಮಪಕ್ಷವು.

**೨. ಹೊಟ್ಟೆಗೋಸುಗವಾದಡಾಗಲೀ-**

ಹಸಿವಿನಿಂದ ಬಳಲುತ್ತಿರುವಾಗ, ಅನ್ನೋದಕಗಳಿಗಾಗಿ ಯೋಚಿಸುವ ಪ್ರಸಂಗ ಬಂದಾಗ, ಕೇವಲ ಉದರಪೋಷಣೆಯ ಕಾರಣದಿಂದಲಾಗಲೀ, ಶ್ರೀಹರಿ ಸ್ಮರಣೆ ಮಾಡಬಹುದು.

**೩. ಕೆಟ್ಟರೋಗ ಪ್ರಯುಕ್ತವಾಗಲೀ-**

ಸಹಿಸಲು ಅಸಾಧ್ಯವಾದ ಬೇನೆಯಿಂದ ಬಳಲುತ್ತಿರುವಾಗಲೀ, ಅಪರಿಹಾರ್ಯವಾದ ರೋಗದಿಂದ ಗ್ರಸ್ತನಾದಾಗನಾಗಲೀ, ಆ ಬಾಧೆಯನ್ನು ನಿವಾರಿಸೆಂದು- ಶ್ರೀಹರಿಯಲ್ಲಿ ಸ್ಮರಣಪೂರ್ವಕ ಮೊರೆಯಿಡಬಹುದು.

**೪. ಅಣಕದಿಂದೊಮ್ಮೆ-**

ಅಣಕ-ಎಂದರೆ ಪರಿಹಾಸ್ಯ "ಏನೋ ನೋಡೋಣ! ಶ್ರೀಹರಿಸ್ಮರಣೆ ಮಾಡಿದರೆ, ಏನಾಗುವುದೋ ನೋಡೋಣ ! - ಎಂದು ಪರಿಹಾಸ್ಯದಿಂದ ಲಾಗಲೀ ಶ್ರೀಹರಿಸ್ಮರಣೆ ಮಾಡಬಹುದು.

**೫. ನಿಟ್ಟುಸುರಿನಿಂ-**

ಉಶ್-ಎಂದು ನಿಟ್ಟುಸಿರು ಬಿಡುತ್ತ, ಆಯಾಸದಿಂದ ಬಸವಳಿದು ಬಳಲಿದಾಗ ಶ್ರೀಹರಿಸ್ಮರಣೆ ಬರುವುದು ಸ್ವಾಭಾವಿಕ.

**೬. ಬಾಯ್ದೆರೆದು-**

ಮುಕ್ತಕಂಠದಿಂದ ಹೇ ಹರೇ, ಕೃಷ್ಣಾ, ಗೋವಿಂದಾ-ಎಂದು ಗಟ್ಟಿಯಾಗಿ ಉಚ್ಚರಿಸುತ್ತಾ, ಹರಿನಾಮವನ್ನು ಹೇಳಬಹುದು.

**೭. ಹರಿವಿಠಲಾ ಸಲಹೆಂದು-**

ಸಕಲಪಾಪಪರಿಹಾರಕನಾದ ಹೇ ಹರಿಯೇ, ಜ್ಞಾನಶೂನ್ಯರ ರಕ್ಷಕನಾದ್ದರಿಂದ ಶ್ರೀಪರಮಾತ್ಮನಿಗೆ- "ವಿಠಲ-" ಹೆಸರು ಎಂದು "ನಾನು ಜ್ಞಾನಶೂನ್ಯನು, ದೃಢವಾದ ಭಕ್ತಿ ನನಗಿಲ್ಲ. ಹೇ ವಿಠಲಾ-ನನ್ನನ್ನು ಸಂರಕ್ಷಿಸು"-ಎಂದು ಅವನಿಗೆ ಮೊರೆಯಿಡಲು. ದಯಾಸಾಗರನಾದ ಶ್ರೀಹರಿಯು (ಕೃಪಾಳು). ಅಂತಹ ಭಕ್ತಜನರಿಗೆ ತನ್ನ ಕರಾವಲಂಬನ ನೀಡಿ, (ಕೈಗೊಟ್ಟು) ಅವರನ್ನು ಸದಾ ಸಂರಕ್ಷಿಸುವನು-ಎಂದು ಶ್ರೀಹರಿಯ ನಾಮಮಹಿಮೆಯನ್ನು ತಿಳಿಸುತ್ತಾರೆ. ಹೇಗೆ, ಯಾವ ರೀತಿಯಲ್ಲಿ ಅವನನ್ನು ಸ್ಮರಿಸಿದರೂ ಸರಿಯೆ, ಅವರಿಗೆ ಒಲಿದು, ಶ್ರೀಹರಿಯು ಸಂರಕ್ಷಿಸುವನು-ಎಂತತಾತ್ಪರ್ಯ.

॥೧೪॥

## ಪದ್ಯ-೧೫

**ಮೂಲ :**

**ಈ ವಸುಂಧರೆಯೊಳಗೆ ಶ್ರೀ ಭೂ ।**
**ದೇವಿಯರಸನ ಸುಗುಣ ಕರ್ಮಗ ।**
**ಳಾವ ಬಗೆಯಿಂದಾದಡಾಗಲಿ ಕೀರ್ತಿಸುವ ನರರ ॥**
**ಠಾವ ಕಮಲದಳಾಯತಾಕ್ಷ ಕೃ ।**
**ಪಾವಲೋಕನದಿಂದ ಕಪಿ ಸು ।**
**ಗ್ರೀವಗೊಲಿದಂದದಲಿ ಒಲಿದಭಿಲಾಷೆ ಪೂರೈಪ ॥೧೫॥**

**ಅವತರಣಿಕೆ :**

ಶ್ರೀಹರಿಯನ್ನು ಯಾವ ರೀತಿಯಲ್ಲಿ ಕೊಂಡಾಡಿದರೂ ಸರಿಯೇ. ಆ ಕೃಪಾಳು ಅಂತಹ ಭಜಕರನ್ನು ಸಂರಕ್ಷಿಸಿ, ಒಲಿವನೆಂದು ತಿಳಿಸುತ್ತಾರೆ. ॥೧೫॥

**ಪ್ರತಿಪದಾರ್ಥ :**

**ಈ ವಸುಂಧರೆಯೊಳಗೆ**= ಈ ಭೂಮಿಯ ಮೇಲೆ, **ಶ್ರೀ ಭೂದೇವಿಯರಸನ** = ಶ್ರೀಭೂದೇವಿಯರಿಗೆ ಪತಿಯಾದ ಶ್ರೀಪರಮಾತ್ಮನನ್ನು, **ಸು** = ಸಮೀಚೀನವಾದ (ಪರಮ ಮಂಗಳಕರವಾದ), **ಗುಣ** = ಜ್ಞಾನಾನಂದಾದಿ ಗುಣ ಸಮೂಹಗಳನ್ನು, **ಕರ್ಮಗಳ** ಅವನ ಸೃಷ್ಟ್ಯಾದಿ ಸಕಲ ವ್ಯಾಪಾರವಿಶೇಷಗಳನ್ನೂ, **ಆವ ಬಗೆಯಿಂದಾದಡಾಗಲಿ** = ಯಾವ ಕಾರಣದಿಂದಾಗಲೀ, ಯಾವ ಕ್ರಮದಿಂದಾಗಲೀ, **ಕೀರ್ತಿಸುವ** = ಸ್ತೋತ್ರರೂಪದಲ್ಲಿ ಕೊಂಡಾಡುವ, **ನರರ** = ಮಾನವರನ್ನು, **ಕಮಲದಳಾಯತಾಕ್ಷ** = ಕಮಲಪುಷ್ಪದ ದಳಗಳಂತೆ ವಿಶಾಲವಾದ ಕಣ್ಣುಗಳುಳ್ಳ ಶ್ರೀಹರಿಯು, **ಕೃಪಾವಲೋಕನದಿಂದ**- ಕರುಣಾಕಟಾಕ್ಷವೀಕ್ಷಣದಿಂದ, **ಒಲಿದು**

= ಒಲಿದವನಾಗಿ. **ಕಪಿ ಸುಗ್ರೀವಗೊಲಿದಂದದಲಿ** = ಕಪಿವೀರನಾದ ಸುಗ್ರೀವನಿಗೆ ಸಖ್ಯಭಾವದಿಂದ ಒಲಿದಂತೆ, **ಅಭಿಲಾಷೆ ಪೂರೈಸ** = ತನ್ನ ಸಂಬಿದ ಭಕ್ತರ ಮನೋಭೀಷ್ಟಗಳನ್ನು ಪೂರ್ಣಮಾಡುವನು ಮತ್ತು **ಕಾವ** = ದುರ್ಜನರ ಬಾಧೆಯಿಂದ ಸಂರಕ್ಷಿಸಿ, ಕಾಪಾಡುವನು. ॥೧೫॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ದಾವ ಬಗೆಯಿಂದಾಗಲೀ, ಶ್ರೀಪರಮಾತ್ಮ ಭಜನೆ ಮಾಡಬೇಕೆಂತ ಹೇಳುತ್ತಾರೆ. ಈ ಭರತಖಂಡಭೂಮಿಯೊಳಗೆ, ಶ್ರೀಭೂದೇವೇರಿಗೆ ಪತಿಯಾದ ಶ್ರೀಪರಮಾತ್ಮನ್ನ ಸಮೀಚೀನವಾದ ನಿರ್ಮಲಚಿತ್ತದಿಂದ, ನಿರ್ದೋಷ ಗುಣಪೂರ್ಣ ಸರ್ವೋತ್ತಮನೆಂಬೋ ಗುಣಗಳ, ಸೃಷ್ಟ್ಯಾದಿ ವ್ಯಾಪಾರವಾದ ಕರ್ಮಗಳ. ದಾವ ಕಾರಣವನ್ನು ಅನುಸ್ಮರಿಸಾಗಲೀ, ಸ್ತೋತ್ರ ಮಾಡತಕ್ಕ ಮನುಷ್ಯರನ್ನ ಕಮಲದಳಗಳೋಪಾದಿಯಲ್ಲಿ ವಿಸ್ತಾರವಾದ ನೇತ್ರಗಳುಳ್ಳ ಶ್ರೀಪರಮಾತ್ಮ ಕರುಣಾಕಟಾಕ್ಷವೀಕ್ಷಣದಿಂದ ಒಲಿದವನಾಗಿ, ಕೋತಿರೂಪನಾದ ಸುಗ್ರೀವಗೆ ಶ್ರೀರಾಮಚಂದ್ರದೇವರು ಒಲಿದು, ಆವನ ಅಭಿಲಾಷಾ ಪೂರೈಸಿದೋಪಾದಿಯಲ್ಲಿ. ತನ್ನ ಸಂಬಿದ ಭಕ್ತರ ಇಷ್ಟಾರ್ಥವನ್ನ ಪೂರ್ಣಮಾಡುವ, ದುರ್ಜನರ ಬಾಧಾ ಇಲ್ಲದಂತೆ ಸಂರಕ್ಷಣ ಮಾಡತಾನೆಂತ ತಾತ್ಪರ್ಯ. ॥೧೫॥

### ೨. ಭಾವದರ್ಪಣ

ಈ ವಸುಂಧರೆ ॥೧೫॥

### ೩. ಶ್ರೀವ್ಯಾಸದಾಸ ಸಿದ್ಧಾಂತಕೌಮುದೀ

"ಈ" ಇತಿ । "ಸುಗ್ರೀವ" ಇತಿ ಸ್ಫುಟಮ್. ॥೧೫॥

## ಕನ್ನಡಾರ್ಥ

ಸುಗ್ರೀವನಿಗೆ ಶ್ರೀರಾಮನು ಒಲಿದು ಅನುಗ್ರಹಿಸಿದ ಕಥೆಯು ಸುಪ್ರಸಿದ್ಧವೇ ಆಗಿರುತ್ತದೆ. ||೧೫||

### ೪. ಭಾವಪ್ರಕಾಶಿಕೆ

ಈ ಭೂಮಿಯಲ್ಲಿ ಶ್ರೀದೇವಿ ಭೂದೇವಿಯರ ಅರಸನಾದ ಶ್ರೀಮನ್ನಾರಾಯಣನ ಗುಣ ಕರ್ಮಗಳನ್ನು ಯಾವುದಾದರೂ ಒಂದು ಬಗೆಯಿಂದ ಕೀರ್ತಿಸುತ್ತಿದ್ದರೆ, ಕಮಲದಳದಂತೆ ವಿಸ್ತಾರವಾದ ನೇತ್ರಗಳುಳ್ಳ ಶ್ರೀಹರಿಯು ಪ್ರಸನ್ನನಾಗಿ, ತನ್ನ ಕೃಪಾಕಟಾಕ್ಷದಿಂದ ಅವರನ್ನು ರಕ್ಷಿಸುತ್ತಾ, ಕಪಿಯಾದ ಸುಗ್ರೀವನಿಗೆ ಪ್ರಸನ್ನನಾದಂತೆ, ಪ್ರಸನ್ನನಾಗಿ ಅವರ ಮನೋಭೀಷ್ಟವನ್ನು ಪೂರೈಸುವನು. ||೧೫||

### ೪. ಶ್ರೀ ಗುರುಹೃದಯ ಪ್ರಕಾಶಿಕೆ :

ವಸುಂಧರೆ-ಎಂಬ ಭೂಮಿಯಲ್ಲಿ ಶ್ರೀ-ಭೂದೇವಿಯರಸನಾದ ದೇವರ ಸದ್ಗುಣ ಕರ್ಮಗಳನ್ನು ಭಯಕಾಮ್ಯಾದ್ಯುಪಸರ್ಜನವೆಂಬ ಸಹಾಯ ಮಾತ್ರ ಉಳ್ಳ ಯಾವ ವಿಧ ಭಕ್ತಿಯಿಂದಾಗಲೀ, ಕೀರ್ತಿಸುವ ಜನರನ್ನು, ಕಮಲದಳದಂತೆ ವಿಶಾಲನೇತ್ರ ದೇವರು, ಕೃಪಾಕಟಾಕ್ಷದಿಂದ ಕಪಿಸುಗ್ರೀವಗೊಲಿದಂತೆ ಒಲಿದು, ಯಥಾಯೋಗ್ಯ ಇಷ್ಟಾರ್ಥವನ್ನು ಕೊಡುವನು. ||೧೫||

## ಸರ್ವವ್ಯಾಖ್ಯಾನಸಾರಸಂಗ್ರಹ

### ೧. ವಸುಂಧರೆ-

ವಸು-ಎಂದರೆ ಅಮೂಲ್ಯವಾದ ಧಾತುರೂಪದಲ್ಲಿರುವ ಭಂಗಾರ

ವೆಂದರ್ಥ. ಅದು ಭೂಮಿಯಲ್ಲಿ ವಿಶಿಷ್ಟವಾದ ಶಿಲೆಗಳಲ್ಲಿ ರೇಖಾರೂಪದಿಂದ ದೊರೆಯುವುದು ಈ ಕಾರಣದಿಂದ ಭೂಮಿಗೆ-"ವಸುಂಧರಾ"-ಎಂತ ನಾಮ. ವಸುಂಧರೆಯೊಳಗೆ-ಎಂದರೆ ಈ ಭೂಮಿಯ ಮೇಲೆ.

**೨. ಶ್ರೀಭೂದೇವಿಯರಸ-**

ಚಿತ್ಪ್ರಕೃತಿರೂಪಳಾದ ಶ್ರೀಲಕ್ಷ್ಮೀದೇವಿಯು ತ್ರಿಗುಣಾಭಿಮಾನಿಗಳೆನಿಸಿದ್ದಾರೆ, ಶ್ರೀರೂಪದಿಂದ ಸತ್ವಗುಣಕ್ಕೆ. ಭೂರೂಪದಿಂದ ರಜೋಗುಣಕ್ಕೆ. ಮತ್ತು ದುರ್ಗಾರೂಪದಿಂದ ತಮೋಗುಣಕ್ಕೂ ಅಭಿಮಾನಿಗಳು, ಅಂತಹ ಶ್ರೀ ಮತ್ತು ಭೂನಾಮಕಳಾದ ಶ್ರೀಇಂದಿರೆಯರಸನು ಶ್ರೀಭೂದೇವಿಯರಸನು.

**೩. ಸುಗುಣ**

ಅಂತಹ ಶ್ರೀಭೂದುರ್ಗಾರಮಣನಾದ ಶ್ರೀಪರಮೇಶ್ವರನು ಸಮೀಚೀನವಾದ, ಪರಮಮಂಗಳಕರಗಳಾದ ಗುಣಗಳ ಧಾಮನು. ಅನಂತ ಕಲ್ಯಾಣಗುಣಗಣಪರಿಪೂರ್ಣನಾದ ಶ್ರೀಹರಿಯು "**ಸುಗುಣನು**".

**೪. ಕರ್ಮಗಳ-**

ಸಮೀಚೀನ ಗುಣಗಣಭರಿತನಾದ ಆ ಮಂಗಳಗುಣಾತ್ಮಕನ ಸ್ವಪ್ರಾಪ್ಯಾದಿ ವ್ಯಾಪಾರವಿಶೇಷಗಳು. ಸಕಲಜೀವರಲ್ಲಿ ಅಂತರ್ಯಾಮಿರೂಪದಿಂದಿದ್ದು. ಬಿಂಬಕ್ರಿಯಾರೂಪವಾದ ಸಕಲಕಾರ್ಯಗಳಿಗೂ ಆತನೇ ಮುಖ್ಯ ಪ್ರವರ್ತಕನು. ಅವನ ಅನಂತಅವತಾರಗಳಲ್ಲಿ ಎಸಗಿದ, ಅಪಾರಕ್ರಿಯಾವಿಶೇಷಗಳೆಲ್ಲವನ್ನೂ -"**ಕರ್ಮಗಳ**"- ಎಂಬ ತದದಿಂದ ನಿರ್ದೇಶಿಸುತ್ತಾರೆ.

**೫. ಅವಬಗೆಯಿಂದಾಡಲಾಗಲೀ-**

ಆ ಪರಮಮಂಗಳಾತ್ಮನ ಸುಗುಣಗಳನ್ನೂ ಮತ್ತು ಕ್ರಿಯಾವಿಶೇಷರೂಪವಾದ ಸಕಲಕರ್ಮಗಳನ್ನೂ, ಯಾವ ರೀತಿಯಿಂದಲಾಗಲೀ ನಿರತ ಭಜಿಸಿ, ಕೊಂಡಾಡಿ ಹಿಗ್ಗುತ್ತಿರುವ ಮಾನವರನ್ನು, ಶ್ರೀಹರಿಯು ಸಂರಕ್ಷಿಸುವನು (ಕಾಯ್ವ), ಇಲ್ಲಿ ಭಜನಾಕ್ರಮಮುಖ್ಯವಲ್ಲ. ಅವನೇ ತಾರಕನೆಂದರಿದು ಭಕ್ತಿಯಿಂದ ಭಜಿಸುವುದು-ಅವನ ಪ್ರಸಾರಕ್ಕೆ ಕಾರಣವಾಗುವುದು.

**೬. ಕಮಲದಳಾಯತಾಕ್ಷ-**

ಕಮಲಪುಷ್ಪದ ದಳಗಳು, ಅಗಲವಾಗಿ, ಕೋಮಲವಾಗಿ, ಸುಂದರವಾಗಿರುವವು. ಅಂತಹ ಕಮಲದಳದಂತೆ ವಿಶಾಲವಾದ ನೇತ್ರಗಳುಳ್ಳವನು, ಆ ಕಮಲಾರಮಣನು, ಆಕಮಲದಳಾಯತಾಕ್ಷಯು ಬಂದು, ತನ್ನ ದಯದಿಂದ ಪೂರ್ಣವಾದ ದೃಷ್ಟಿಯಿಂದ ಭಕ್ತರನ್ನು ನೋಡಿದರೇ ಸಾಕು-ಅವರ ದುಃಖಗಳೆಲ್ಲವೂ ತಕ್ಷಣದಲ್ಲಿ ಪರಿಹಾರವಾಗುವವು. ಅವರನ್ನು ಪಾಪವಿದೂರರನ್ನಾಗಿ ಮಾಡಿ, ಅಂತರಂಗ ಶುದ್ಧಿಯನ್ನಿತ್ತು, ಅವರ ಹೃತ್ಕಂಜದಲ್ಲಿ ತನ್ನ ದರ್ಶನಭಾಗ್ಯವನ್ನಿತ್ತು, ಸಂರಕ್ಷಿಸುವನು ಆ ಸರ್ವೇಶನು ಶ್ರೀಹರಿಯು ಈ ಕರುಣಾತಿಶಯವನ್ನು ಸುಂದರವಾದ ದೃಷ್ಟಾಂತದಿಂದ ತಿಳಿಸುತ್ತಾರೆ. ಸುಗ್ರೀವನು ಸೂರ್ಯಪುತ್ರನು. ಶ್ರೀರಾಮಚಂದ್ರಮೂರ್ತಿ ಶ್ರೀಹನುಮಂತದೇವರ ಸಮಕ್ಷಮದಲ್ಲಿ, ಅಗ್ನಿಸಾಕ್ಷಿಯಾಗಿ ಸುಗ್ರೀವನ ಸಖ್ಯವನ್ನು ಮಾಡಿ, ದುಷ್ಟನಾಗಿದ್ದ ವಾಲಿಯನ್ನು ಸಂಹರಿಸಿ, ಆ ಸುಗ್ರೀವನಿಗೆ ಕಿಷ್ಕಂಧಾರಾಜ್ಯದಲ್ಲಿ ಅಭಿಷೇಕಗೈದು, ಅವನನ್ನು ಸಂರಕ್ಷಿಸಿ, ಅವನ ಅಭಿಲಾಷೆಗಳನ್ನು ಪೂರೈಸಿ, ಉದ್ಧರಿಸಿದನು.

ಅಂತೆಯೇ, ಪರಮದಯಾಸಾಗರನಾದ ಶ್ರೀಪರಮಾತ್ಮನು ತನ್ನನ್ನು ನಂಬಿದ ಭಕ್ತಜನರನ್ನು ಎಂದೆಂದಿಗೂ ಬಿಡನು. ಅವರ ಆಪತ್ತುಗಳನ್ನು ನಿವಾರಿಸಿ, ಅವರವರ ಮನೋಭೀಷ್ಟಗಳನ್ನನುಸರಿಸಿ, ಅವರಿಗೆ ಒಲಿದು, ಸದಾ ಸಂರಕ್ಷಿಸುವನೆಂದು ತಿಳಿಸುತ್ತಾರೆ. ॥೧೫॥

## ಪದ್ಯ-೧೬

**ಮೂಲ :**

**ಚೇತನಾಂತರ್ಯಾಮಿ ಲಕುಮೀ ।**
**ನಾಥ ಕರ್ಮಗಳನುಸರಿಸಿ ಜನಿ ।**
**ತೋಥ ವಿಷ್ಣೋ ಎಂಬ ಶ್ರುತಿಪ್ರತಿಪಾದ್ಯ ನಮ್ಮೊಡನೆ ॥**
**ಜಾತನಾಗುವ ಜನ್ಮರಹಿತಾ ।**
**ಕೂತಿನಂದನ ಭಕ್ತರಿಂದಾ ।**
**ಹೂತನಾಗಿ ಮನೋರಥವ ಬೇಡಿಸಿಕೊಳದಲೀವ ॥೧೬॥**

**ಅವತರಣಿಕೆ :**

ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನು ಸಕಲಜೀವರಂತರ್ಯಾಮಿಯಾಗಿದ್ದು, ಅವರವರ ಅನಾದಿ ಕರ್ಮಗಳಾನುಸಾರ ಸಕಲಕರ್ಮಗಳನ್ನು ತಾನೇ ಬಿಂಬಕ್ರಿಯಾದ್ವಾರಾ ಮಾಡಿ ಮಾಡಿಸುತ್ತಾ, ತನ್ನ ಭಕ್ತರಿಗೆ ಒಲಿದು ಅವರವರ ಮನೋರಥಗಳನ್ನು ಸಲ್ಲಿಸುತ್ತಾನೆಂದು- ತಿಳಿಸುತ್ತಾರೆ. ॥೧೮॥

**ಪ್ರತಿಪದಾರ್ಥ :**

**ಜನಿತೋಥವಿಷ್ಣೋ** = "ಜನಿತೋಥ ವಿಷ್ಣು" **ಎಂಬ** = ಎಂಬ ಶ್ರುತಿವಾಕ್ಯದಲ್ಲಿ ಉಕ್ತನಾದ, **ಶ್ರುತಿಶ್ರುತಿಪಾದ್ಯನು** = ವೇದಗಳಿಂದ ಪ್ರತಿಪಾದ್ಯನಾದ ಆ ವೇದಪುರುಷನು, **ಚೇತನಾಂತರ್ಯಾಮಿ** = ಸಕಲಜೀವರ ಸ್ವರೂಪದೇಹಗತ ಅಂತರ್ಯಾಮಿರೂಪದಿಂದ ವಿದ್ಯಮಾನನಾಗಿದ್ದು, **ಲಕುಮೀನಾಥ** = ಲಕ್ಷ್ಮೀರಮಣನಾದ, **ಆಕೂತಿನಂದನ** = ಆಕೂತಿದೇವಿಯಲ್ಲಿ ಪುತ್ರತ್ವೇನ ಅವತರಿಸಿದ ಯಜ್ಞನಾಮಕ ಶ್ರೀಹರಿಯು. **ಕರ್ಮಗಳನನುಸರಿಸಿ** = ಆಯಾಯಾ ಜೀವರ ಅನಾದಿಕರ್ಮಗಳನುಗುಣವಾಗಿ. **ಜನ್ಮರಹಿತಾ** = ಜನನಮರಣವಿದೂರನಾದ ಜನಾರ್ದನನು. **ಎನ್ನೊಡನೆ** = ಜೀವರುಗಳೊಡನೆ. **ಜಾತನಾಗುವ** = ತಾನೂ ಜನಿಸುತ್ತಾನೆ. **ಭಕ್ತರಿಂದ** = ತನ್ನ ಭಕ್ತಜನರುಗಳಿಂದ. **ಆಹೂತನಾಗಿ** = ಆಹ್ವಾನಿಸಲ್ಪಟ್ಟು, ಅವರ ಹೃದಯಾಕಾಶದಲ್ಲಿ ಪ್ರತ್ಯಕ್ಷನಾಗಿ, **ಮನೋರಥವ** = ಆ ಭಕ್ತರ ಮನೋಭಿಲಾಷೆಗಳನ್ನು, **ಬೇಡಿಸಿಕೊಳದೆ** = ಅವರು ಕೇಳದಿದ್ದರೂ ಸಹ. (ಅಪ್ರಾರ್ಥಿತನಾಗಿ). **ಈವ** = ಕೊಡುವನು. ॥೧೯॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮನ ಮಹಾತ್ಮ್ಯವನ್ನೇ ಹೇಳುತಾರೆ. **ಜನಿತೋಥ**

**ವಿಷ್ಣುಃ**-ಎನತಕ್ಕ ವೇದಶ್ರುತಿಯಿಂದ ಪ್ರತಿಪಾದ್ಯನಾದವ. ಜನನರಹಿತನಾದ ಲಕ್ಷ್ಮೀಪತಿಯಾದ, ಆಕೂತಿದೇವಿಯ ಪುತ್ರನಾದ ಯಜ್ಞನಾಮಕ ಶ್ರೀಪರಮಾತ್ಮ ಸಂಚಾರಮಾಡತಕ್ಕ ಜೀವರಲ್ಲೇನು, ಅಚೇತನರಾದ ಜಡಗಳಲ್ಲೇನು, ಸ್ವರೂಪದಲ್ಲಿ, ಬಾಹ್ಯ ಸ್ಥೂಲದೇಹದಲ್ಲಿ ಅಂತರ್ಯಾಮಿಯಾಗಿದ್ದು, ಆಯಾ ಜೀವರ ಅನಾದಿಕರ್ಮಗಳನುಸರಿಸಿ ಬಾಧ, ಆಗಾಮಿ-ಸಂಚಿತ ಕರ್ಮಗಳನುಸರಿಸಿ, ಜೀವರನ್ನ ಸ್ಥೂಲದೇಹದಿಂದ ಸಹಿತರನ್ನಾಗಿ ಮಾಡಿ, ಸೃಷ್ಟಿಸೋ ಕಾಲದಲ್ಲಿ, ಆಯಾ ಸ್ಥೂಲದೇಹ ಧರಿಸಿದ ನಮ್ಮಂಥ ಜೀವರುಗಳ ಸಂಗಾತಿ ತಾನೂನೂ ಹುಟ್ಟುತಾನೆ. ತನ್ನ ಭಕ್ತರಿಂದ ಕರೆಸಿಕೊಂಡು ಹೃದಯಾಕಾಶದಲ್ಲಿ ಪ್ರತ್ಯಕ್ಷನಾಗಿ ಮನೋರಥವನ್ನು ಅವರು ಕೇಳದೆ ಇದ್ದ ಕಾಲಕ್ಕೂ, ಕೊಡೋವನಾಗ ತಾನೆ. ॥೧೬॥

## ೩. ಭಾವದರ್ಪಣ

ಚೇತನಾ-ಜಾತನಾಗುವ ಎಂದರೆ, ಜೀವಾಂತರ್ಯಾಮಿಯಾಗಿ, ಜೀವನ ಸಂಗಾತಲೇ ಬರುವ ಎಂಬರ್ಥ । ಆಕೂತಿನಂದನ - ಯಜ್ಞನಾಮಕ ಪರಮಾತ್ಮ. ॥೧೬॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ

'ಚೇತನ' ಇತಿ॥ 'ಹರೇಃ' 'ಜನಿತಾ'-'ಜನಿತಃ' ಇತ್ಯುಚ್ಯತೇ ಇತಿ ಸಮಾಶಂಕ್ಯ, 'ವಿಷ್ಣು' ಇತಿ ಯಜ್ಞಸ್ಯ ಯಜಮಾನಸ್ಯ ವಾ ನಾಮ"- ಇತಿ ಸಂಘೋಕ್ತ್ಯಾ ತದರ್ಥಸ್ಯ ಪ್ರಕೃತೇಽಯೋಗಾತ್ "ಕಥಮೇತತ್ ಪ್ರಥಮಂ ಜನ್ಮ ದ್ವಿತೀಯಂ ಜನ್ಮ ತದ್ಧರೇಃ- ಇತಿ ಮಹಿದಾಸಭಾಷ್ಯಂ ಅಭಿಪ್ರೇತಿ॥ ಇಯಂ ಅಪರಾವೃತ್ತಿಃ॥ 'ನಂದನಃ' ಯಜ್ಞಃ॥ 'ಈವ' ಧ್ರುವಾದೇಃ. ॥೧೯॥

# ಕನ್ನಡಾರ್ಥ

'ಜನಿತೋಥ ವಿಷ್ಣೋಃ'-ಎಂಬ ಶ್ರುತಿಯಲ್ಲಿ, 'ವಿಷ್ಣುವಿಗೂ ಸಹ ಜನನವಿದೆಯೆಂದು ಹೇಳಿದೆಯಲ್ಲ? – ಎಂದು ಆಶಂಕಿಸಿ, ಶ್ರೀಮನ್ನ್ಯಾಯಸುಧಯಲ್ಲಿ- 'ವಿಷ್ಣುಶಬ್ದಕ್ಕೆ ನಾರಾಯಣನೆಂದು ಅರ್ಥವಲ್ಲ'. ಯಜಮಾನ ಅಥವಾ ಯಜ್ಞವೆಂದು ಅರ್ಥ. ಆದುದರಿಂದ ನಾರಾಯಣನಿಗೆ ರುದ್ರಾದಿಗಳಿಂದ ಜನನವಿಲ್ಲ – ಎಂದು ಮುಂತಾಗಿ ಹೇಳಿರುತ್ತಾರೆ. ಸುಧೆಯಲ್ಲಿ ನಿರೂಪಿಸಿದಂತೆ ವಿಷ್ಣುವಿಗೆ ಜನ್ಮವಿಲ್ಲ. ಆದುದರಿಂದ ಐತರೇಯಭಾಷ್ಯದಲ್ಲಿ 'ತದಸ್ಯ ಪ್ರಥಮಂ ಜನ್ಮ' -ಎಂದು ಮುಂತಾಗಿ ಪರಮಾತ್ಮನಿಗೆ ಜನ್ಮವನ್ನು ಹೇಳಿದುದು ಹೇಗೆ ಯುಕ್ತವಾಗುತ್ತದೆ.?' - ಎಂದು ಸಂಶಯವು ಮೂಡುತ್ತದೆ. ಆದರೆ, 'ಜಾತೋಜಾತಃ' 'ಬಹುಧಾ ವಿಜಾಯತೇ' - ಇತ್ಯಾದಿ ವಾಕ್ಯಗಳಲ್ಲಿ ಜನನವನ್ನೂ ಹೇಳಿರುತ್ತಾರೆ. ಆದುದರಿಂದ "ಜನಿತೋಥ ವಿಷ್ಣೋಃ"-ಎಂಬ ಶ್ರುತಿಯಲ್ಲಿ ಹೇಳುವ ಜನ್ಮಶಬ್ದಕ್ಕೆ ದೇಹಸಂಯೋಗ, ಅಭಿಮಾನ, ವಿಕಾರ.- ಈ ಮುಂತಾದ ರೂಪವಾದ ಉತ್ಪತ್ತಿ ಎಂದು ಅರ್ಥ. ಇಂಥ ಜನ್ಮವು ನಾರಾಯಣನಿಗೆ ಇರುವುದಿಲ್ಲ. ಶುಕ್ಲಶೋಣಿತ ಸಂಪರ್ಕ- ಮುಂತಾದವು ಜನ್ಮವಿಲ್ಲವೆಂದು ಈ ಶ್ರುತಿಯ ಅಜಾಯಮಾನ- ಎಂದು ಮುಂತಾದ ವಾಕ್ಯಗಳಿಗೆ ಅರ್ಥ. ಇಂಥ ಜನ್ಮವಿಲ್ಲವೆಂದು ಹೇಳಲು ವಿರೋಧಬಾರದಂತೆ "ಬಹುಧಾ ವಿಜಾಯತೇ, ಜಾತಃ, ತದಸ್ಯ ಪ್ರಥಮಂ ಜನ್ಮ"- ಎಂದು ಮುಂತಾದ ವಾಕ್ಯಗಳಲ್ಲಿ ಜನ್ಮ ಶಬ್ದಕ್ಕೆ "ಪ್ರಾದುರ್ಭಾವ," "ಅವತಾರ" ವೆಂದು ಅರ್ಥಮಾಡಬೇಕು. "ಪ್ರಾದುರ್ಭಾವೋ ಹರೇರ್ಜನಿಃ" ಎಂದು ಶ್ರೀಮದಾಚಾರ್ಯವಚನವಿದೆ. ಆದುದರಿಂದ 'ಜಾತನಾಗುವ' 'ಜನ್ಮರಹಿತ'- ಈ ಎರಡು ವಾಕ್ಯಗಳಲ್ಲಿ ಪರಸ್ಪರ ವಿರೋಧವಿಲ್ಲ. "ಆಕೂತಿನಂದನ" ಯಜ್ಞ. 'ಬೇಡಿಸಿಕೊಳ್ಳದೆ ಈವ' - ಎಂಬ ಮಾತು ಧ್ರುವ - ಮುಂತಾದವರಲ್ಲಿ ಕಂಡುಬಂದ ಸಂಗತಿಯಾಗಿರುತ್ತದೆ. ॥೧೯॥

## ೪. ಭಾವಪ್ರಕಾಶಿಕೆ

ಸಕಲಪ್ರಾಣಿಗಳ ಅಂತರ್ಯಾಮಿಯಾದ ಶ್ರೀಪರಮಾತ್ಮನು, ಜೀವನ ಕರ್ಮಾನುಸಾರವಾಗಿ, ಭೂಮಿಯಲ್ಲಿ ಹುಟ್ಟುವಾಗ, ಜೀವನೊಂದಿಗೆ ಪರಮಾತ್ಮನು ತಾನೂ ಜನಿಸುವನು. "ಜನಿತೋಽಥವಿಷ್ಣೋ"- "ಅಜಾಯಮಾನೋ ಬಹುಧಾವ್ಯಜಾಯತ"- ಇತ್ಯಾದಿ ಶ್ರುತಿಗಳಲ್ಲಿ ಹೇಳಿರಂತೆ ತಾನು ಜನನ ರಹಿತನಾದರೂ, ಜೀವರಿಗೆ, ತಾವಾಗಿ ಕರ್ಮಗಳನ್ನು ಮಾಡುವ ಶಕ್ತಿ ಇಲ್ಲದುದರಿಂದ, ಅವರಿಂದ ಕರ್ಮಗಳನ್ನು ಮಾಡಿಸುವುದಕ್ಕಾಗಿ, ತದ್ರೂಪನಾಗಿ ಜನಿಸುವನು, ಭಕ್ತರು ತನ್ನ ನಾಮವನ್ನುಚ್ಚರಿಸಿ ಕರೆಯಲು. ಅಷ್ಟಕ್ಕೆ ಪ್ರೀತನಾಗಿ, ಅವರು ಯಾವುದನ್ನೂ ಕೇಳದೇ ಇದ್ದರೂ ತಾನೇ ಅವರ ಮನೋಭೀಷ್ಟವನ್ನು ತಿಳಿದು, ಅದನ್ನು ಪೂರೈಸುವನು. ॥೧೬॥

## ೫. ಶ್ರೀ ಗುರುಹೃದಯಪ್ರಕಾಶಿಕೆ

ಚೇತನರೆಂಬ ಜೀವರ ಅಂತರ್ಯಾಮಿಯಾದ, ಲಕ್ಷ್ಮೀಪತಿಯಾದ ಶ್ರೀಹರಿಯು ಅವರ ಕರ್ಮಾನುಸಾರ **ಜನಿತೋಥವಿಷ್ಣೋ** -ಎಂಬ ಶ್ರುತಿಪ್ರತಿಪಾದ್ಯನಾಗಿ, ಪ್ರಾಕೃತದೇಹರಹಿತನಾದಾಗ್ಯೂ ಜೀವರ ಸಂಗಡ ಇದ್ದು ಪ್ರಾದುರ್ಭವಿಸಿ ರಕ್ಷಿಸುವನು.' ಆಕೂತಿ ಎಂಬ ರುಚಿ ಪ್ರಜೇಶ್ವರನ ಪತ್ನಿಯಲ್ಲಿ ಅವತರಿಸಿದ ಯಜ್ಞನಾಮಕ ದೇವರು ಭಕ್ತರಿಂದ ಕರೆಸಿಕೊಂಡು, ಬೇಡದಿದ್ದರೂ, ಮನೋರಥಗಳೆಂಬ ಇಷ್ಟಾರ್ಥಗಳನ್ನು ಕೊಡುವನಾದ್ದರಿಂದಲೂ ಕರುಣಾಳು. ॥೧೬॥

# ಸರ್ವವ್ಯಾಖ್ಯಾನಸಾರ ಸಂಗ್ರಹ

## ೧. ಚೇತನಾಂತರ್ಯಾಮಿ-

ಸಕಲತ್ರಿವಿಧ ಜೀವರ ಸ್ವರೂಪದೇಹದಲ್ಲಿ ಅಂತರ್ಗತನಾಗಿ, ಅಂತರ್ಯಾಮಿರೂಪದಲ್ಲಿರುವ ಬಿಂಬರೂಪೀ ಶ್ರೀಪರಮಾತ್ಮನು ಜೀವರ ಸ್ಥೂಲ

ದೇಹದಲ್ಲಿ ಸಮಗ್ರವಾಗಿ ವ್ಯಾಪ್ತನಾಗಿದ್ದಾನೆ. ದೇಹಗತಸಕಲೇಂದ್ರಿಯಗಳ ೨ ವ್ಯಾಪ್ತರೂಪಗಳಿಂದ ವಿದ್ಯಮಾನನಾಗಿದ್ದಾನೆ.

**೨. ಕರ್ಮಗಳನುಸರಿಸಿ-**

ಜಗಜ್ಜನನಿಯಾದ ಶ್ರೀಲಕ್ಷ್ಮೀದೇವಿಗೆ ರಮಣನಾದ ಶ್ರೀಪರಮಾತ್ಮನು ಜೀವರ ಅನಾದಿಕರ್ಮವನ್ನು ಅನುಸರಿಸಿ, ಅದರಿಂದ ಜನ್ಯನಾದ ಸಂಚಿತ, ಆಗಾಮಿ ಕರ್ಮಗಳನುಗುಣವಾಗಿ, ಬಿಂಬರೂಪೀ ಶ್ರೀಹರಿಯು ಬಿಂಬಕ್ರಿಯಾ ದ್ವಾರಾ, ಆ ಸಕಲ ಕರ್ಮಗಳನ್ನೂ ತಾನೇ ಮಾಡಿಸಿ, ದೇಹಗತ ತತ್ತ್ವಾಭಿಮಾನಿ ದೇವತೆಗಳ ದ್ವಾರಾ ಹಾಗೂ ಅಸುರರ ದ್ವಾರಾ ಮಾಡಿಸಿ, ದೇಹಗಳ ಇಂದ್ರಿಯಗಳಲ್ಲಿ ಪ್ರಕಾಶತೋವ್ಯಾಪ್ತನಾಗಿರುವ ಜೀವನ ದ್ವಾರಾ ಮಾಡಿ ಮಾಡಿಸುತ್ತಾ, ಆ ಕರ್ಮಫಲಗಳನ್ನು ಜೀವರಿಗೆ ಉಣಿಸುವನು.

**೩. ಜನಿತೋಥವಿಷ್ಣು-**

"ಜನಿತೋಥವಿಷ್ಣು"- ಎಂಬದು ಶ್ರುತಿವಾಕ್ಯವು. "ವಿಷ್ಣು"-ಶಬ್ದಕ್ಕೆ **ಶ್ರೀಮನ್ಯಾಯ ಸುಧೆಯಲ್ಲಿ**, ಯಜಮಾನ ಅಥವಾ ಯಜ್ಞ ನಾಮಕನೆಂದು ಅರ್ಥೈಸಿದೆ. ನಾರಾಯಣನಿಗೆ ರುದ್ರಾದಿಗಳಂತೆ ಜನನವಿಲ್ಲ ಎಂದು ತಾತ್ಪರ್ಯ. **ಐತರೇಯಭಾಷ್ಯದಲ್ಲಿ** "ತದಸ್ಯ ಪ್ರಥಮಂ ಜನ್ಮ"- ಎಂದು ಉಕ್ತವಾಗಿದೆ. "ಜನಿತೋಥವಿಷ್ಣೋ"- ಎಂಬ ಶ್ರುತಿವಾಕ್ಯದಲ್ಲಿ ಹೇಳಿರುವ "ಜನ್ಮ"- ಶಬ್ದಕ್ಕೆ ದೇಹಸಂಯೋಗ-ಅಭಿಮಾನ-ವಿಕಾರ- ಇತ್ಯಾದಿ ಉತ್ಪತ್ತಿಯ ಶ್ರೀಪರಮಾತ್ಮನಿಗಿಲ್ಲ, ಶುಕ್ಲಶೋಣಿತ ಸಂಪರ್ಕವು ಅವನಿಗಿಲ್ಲ. ಶ್ರುತ್ಯರ್ಥರೂಪವಾದ "ಅಜಾಯಮಾನ"- ಎಂದು ಶ್ರೀಮನ್ನಾರಾಯಣನಿಗೆ ಜನನ ಮರಣಾದಿಗಳಿಲ್ಲ, ಅವನು ನಿತ್ಯನು ಮತ್ತು ಶಾಶ್ವತನು. "ಬಹುಧಾವಿಜಾಯತೇ- ಜಾತೋಜಾತಃ - ತದಸ್ಯ ಪ್ರಥಮಂ 'ಜನ್ಮ' ಮುಂತಾದಿ ಶ್ರುತಿವಾಕ್ಯಗಳಲ್ಲಿ ಜನ್ಮಶಬ್ದಕ್ಕೆ "ಪ್ರಾದುರ್ಭಾವ" ಅಥವಾ "ಅವತಾರ"-ವೆಂದು ತಾತ್ಪರ್ಯ. 'ಜಾತನಾಗುವ'-ಎಂದರೆ ಅನಾದಿನಿತ್ಯನಾದ ಜೀವನು ಸ್ಥೂಲ ದೇಹವನ್ನು ಹೊಂದಿ ಜನಿಸಿದಾಗ, ತದಂತರ್ಯಾಮಿಯಾಗಿ, ತಾನು ಪ್ರಕಟ

ವಾಗುತ್ತಾನೆಂದರ್ಥ. ಹೀಗೆ, ಜನ್ಮರಹಿತನಾದ ಜಗತ್ಪತಿಯು ಜೀವರೂಪನೆ ಜಾತನಾಗುವನು.

**೪. ಆಕೂತಿನಂದನ-**

ಆಕೂತಿಯು ಸ್ವಾಯಂಭುವಮನುವಿನ ಮೂವರು ಪುತ್ರಿಯರಲ್ಲಿ ಹಿರಿಯಳು. ಈಕೆ ರುಚಿ ಎಂಬ ಬ್ರಹ್ಮನನ್ನು ಲಗ್ನವಾದಳು. ರುಚಿಯು ದೆಸೆಯಿಂದ, ಆಕೂತಿಯಲ್ಲಿ ಶ್ರೀಪರಮಾತ್ಮನೇ **ಯಜ್ಞನಾಮಕನಾಗಿ** ಪುತ್ರತ್ವೇನ ಅವತರಿಸಿದನು. ಅಂತಹ ಮಹಾಮಹಿಮನಾದ ಮಾರಮಣನು ತನ್ನ ಭಕ್ತರಿಗೆ ಒಲಿದು ಅಪ್ರಾರ್ಥಿತನಾಗಿ, ಅವರ ಮನೋರಥಗಳನ್ನು ಪೂರೈಸುವನು. ||೧೬||

## ಪದ್ಯ-೧೭

**ಮೂಲ:-**

**ನೃಪಶು ಎನಿಸುವ ಮನುಜರೊಳು ಸುರ ।**
**ವೃಷಭನಿಂದ್ರಿಯಗಳೊಳು ತತ್ತ ।**
**ದ್ವಿಷಯಗಳ ಭುಂಜಿಸುವ ಹೋತಾಹ್ವಯನು ತಾನಾಗಿ ॥**
**ವೃಷರಹಿತ ವೇದದೊಳು ಋತು ಸತು ।**
**ಪೆಸರಿನಿಂದಲಿ ಕರೆಸುತ ಜಗ ।**
**ತ್ತ್ರಸವಿತ ನಿರಂತರದಿ ಸಂತೈಸುವನು ಭಕುತರನು ॥೧೭॥**

**ಅವತರಣಿಕೆ:-**

ಶ್ರೀಪರಮಾತ್ಮನ ಹಂಸಾದಿ ಹದಿನೆಂಟು ರೂಪಗಳು, ಯಾವ ಯಾವ ರೂಪದಿಂದ ಯಾವ ಯಾವ ಸ್ಥಾನಗಳಲ್ಲಿದ್ದು, ರಕ್ಷಿಸುತ್ತಾನೆಂಬ ವಿಷಯವನ್ನು ತಿಳಿಸುತ್ತಾರೆ. ||೧೭||

**ಪ್ರತಿಪದಾರ್ಥ:-**

**ಮನುಜರೊಳು** = ಮಾನವರಲ್ಲಿ, **ನೃಷತು ಎನಿಸುವ** = ಶ್ರೀಪರಮಾತ್ಮನು "ನೃಷತು"- ಎಂಬ ಹೆಸರಿನಿಂದ ವಿದ್ಯಮಾನನಾಗಿದ್ದಾನೆ. **ಇಂದ್ರಿಯಗಳೋಳು** = ಮನಾದಿ ಏಕಾದಶೇಂದ್ರಿಯಗಳಲ್ಲಿ, **ಸುರವೃಷಭನು** = ದೇವತಾಶ್ರೇಷ್ಠನಾದ ಶ್ರೀಪರಮಾತ್ಮನು. **ತತ್ತದ್ವಿಷಯಗಳ** = ಆಯಾಯಾ ಇಂದ್ರಿಯಗಳಿಗೆ ಸಂಬಂಧಿಸಿದ ವಿಷಯಗಳನ್ನು, **ಹೋತಾಹ್ವಯನು** = "ಹೋತಾ"- ಎಂಬ ಹೆಸರಿನಿಂದ ಇದ್ದವನಾಗಿ, **ಭುಂಜಿಸುವ** = ಸ್ವೀಕರಿಸುವನು. (ವಿಷಯಗತ ಸ್ವಾಬ್ಧಿರಸಸ್ವೀಕಾರದ್ವಾರಾ) **ವ್ಯಷರಹಿತ** = ಅಸತ್ಯರಹಿತವಾದ, ಅಂದರೆ, ಸತ್ಯಭೂತವಾದ, **ವೇದದೊಳು** = ವೇದಗಳಲ್ಲಿ, **ಋತು ಸತು ಹೆಸರಿನಿಂದಲಿ** = ಋತು, ಸತು - ಎಂಬ ಹೆಸರಿನಿಂದ, **ಕರೆಸುತ** = ಕರೆಯಿಸಿಕೊಳ್ಳುತ್ತಾ, **ಜಗತ್ಪ್ರಸವಿತ** = ಜಗತ್ಸೃಷ್ಟಿಕರ್ತನಾದ ಶ್ರೀಪರಮಾತ್ಮನು, **ಭಕುತರನು** = ತನ್ನ ಭಕ್ತಜನರನ್ನು, **ನಿರಂತರದಿ** = ಸರ್ವಕಾಲಗಳಲ್ಲಿ, **ಸಂತೈಸುವನು** = ಕಾಪಾಡುವನು. ॥೧೭॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ.

ಶ್ರೀಪರಮಾತ್ಮ ಹಂಸಾದಿ ಹದಿನೆಂಟುರೂಪಗಳೊಳಗೆ ದಾವ ದಾವ ರೂಪದಿಂದ, ಎಲ್ಲೆಲ್ಲಿದ್ದು ಸಂರಕ್ಷಿಸುತ್ತಾನೆಂದರೆ ಹೇಳುತಾರೆ.
ಮನುಷ್ಯರೊಳು ಪರಮಾತ್ಮ ಇದ್ದು, ನೃಷತು ಎಂತ ಕರಸೋವನಾಗುತಾನೆ. ಏಕಾದಶೇಂದ್ರಿಯಗಳೊಳು ದೇವತಾಶ್ರೇಷ್ಠನಾದ ಪರಮಾತ್ಮ ಸುರವೃಷಭ ನಾಮದಿಂದ ಇರೋವನಾಗಿದ್ದಾನೆ. ಆಯಾ ಇಂದ್ರಿಯ ವಿಷಯಗಳ ಹೋತಾ-ಎಂತನಾಮ ಪಡೆದವನಾಗಿ, ಭೋಜನ ಮಾಡುವನು. ಜೀವಭುಕ್ತ ವಿಷಯಗಳ ಅವನ ಇಂದ್ರಿಯಗಳ ದ್ವಾರಾ ಸ್ವೀಕರಿಸಿ, ತದ್ಗತ ತನ್ನ ಸ್ವಾಖ್ಯ

ತಾನು ಭುಂಜಿಸಿ, ತದನ್ನ, ಜೀವರಿಗೆ ಭೋಜನ ಮಾಡಿಸುವ. ಆ ಪದ್ದದಿಂದ ರಹಿತವಾದ ವೇದಗಳಲ್ಲಿ ಋತು, ಸತು- ಎಂಬ ನಾಮದಿಂದ ಕರೆಸಿದವನಾಗಿ ಇದ್ದಾನೆ. ಜಗತ್‌ಸೃಷ್ಟಿಕರ್ತನಾದ ಶ್ರೀಪರಮಾತ್ಮ ತನಗೆ ತಾನೇ ಪೂರ್ವೋಕ್ತ ಪ್ರಕಾರ, ನಾಮಗಳಿಂದ ತತ್ತತ್ಸ್ಥಳಗಳಲ್ಲಿ ಇದ್ದವನಾಗಿ, ಸರ್ವಕಾಲದಲ್ಲೂ ತನ್ನ ಭಕ್ತರನ್ನು ಈ ಪ್ರಕಾರ ಅನುಸಂಧಾನ ಮಾಡತಕ್ಕವರನ್ನ ಕಾಪಾಡುವನು ಎಂತ ತಾತ್ಪರ್ಯ. ॥೧೭॥

**೩. ಭಾವದರ್ಪಣ.**

ನೃಷತು। ನೃಷತು ಮನುಷ್ಯಗತರೂಪ ಎಂಬರ್ಥ। 'ನೃಷುಸ್ಥಿತ ಶ್ಚೇತಿ' ಕಾಟಕ ಭಾಷ್ಯೋಕ್ತೇಃ। ಹೋತೇತಿ ಸರ್ವೇಂದ್ರಿಯಸ್ಥ ಎಂಬರ್ಥ। ''ಹೋತಾ ಸರ್ವೇಂದ್ರಿಯಸ್ಥೋ'' ಇತಿ ಕಾಟಕಭಾಷ್ಯೇ। ಮೃಷೇತಿ। ಮೃಷಾ ಸುಳ್ಳು ಇದೇ ರಹಿತವಾದ್ದೇ ಸತ್ಯ. ಅಂಥ ಸತ್ಯವಾದದ್ದು ವೇದ. ಇಂಥ ವೇದ ದಲ್ಲಿ ಋತುಸತು ಎಂಬೋ ರೂಪದಿಂದ ಇದ್ದಾನೆ। ''ಋತರೂಪೇತಥಾ ವೇದೇ'' ಇತಿ ಕಾಟಕ ಭಾಷ್ಯೋಕ್ತೇಃ.। ॥೧೭॥

**೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ**

''ಹಂಸಮೊದಲು''ಇತಿ ಸಂಕ್ಷಿಪ್ತೋಕ್ತ್ಯಂವ್ಯಸಕ್ತ'ನೃಷತು' ಇತಿ॥'ಜಗತ್ಸ ಸವಿತ''ಸವಿತಾ'' *ಓಂ* ಪತ್ಯತೇ ಗೀರ್ವಾಣಸ್ತೋಮೋ ಅಧ್ರಿಗುಃ ಸನೋ ಸಿಯದ್ಭಿರಾಪೃಣ ಕಾಮಂ ವಾಜೇಭಿರಶ್ವಿಭಿಃ ಗೋಮದ್ಭಿರ್ಗೋಪತೇ ಧೃಷತ್ ॥ಓಂ*॥ ಕಾಮ್ಯಾಪತ್ಯಾದಿ ಪ್ರಸವಿತೃತ್ವಾತ್ ಸಃ॥ ಸ 'ಮನುಜ ರೊಳು' ಇದ್ದು॥ ಮೃಷ ಇತಿ ಋತ ಪದಾರ್ಥಃ॥ 'ಜಗತ್'. ಇತಿ॥ ಸ್ತ್ರೀ ರೂಪಃ ಹಯಶೀರ್ಷಃ ಗಾಯತ್ರೀ ಪ್ರತಿಪಾದ್ಯಃ ಇತ್ಯನೇನ ತಂ ಮೂಲಂ ತದಭಿವ್ಯಕ್ತ ಸಪ್ತದಶಮೇಲನೇ ಅಷ್ಟಾದಶೇತಿ॥ ಬೃಹತಾಷ್ಟಾದಶೇತಿ ಕೇಚಿತ್. ॥೧೭॥

## ಕನ್ನಡಾರ್ಥ

"ಹಂಸ ಮೊದಲು ಹದಿನೆಂಟು ರೂಪಗಳ" -ಎಂಬುದಾಗಿ "ಫಲವಿದು ಬಾಳ್ದುದಕೆ"-ಎಂಬ ಪದದಲ್ಲಿ ಸಂಕ್ಷಿಪ್ತವಾಗಿ ಹೇಳಿದುದನ್ನು ವಿವರಿಸುತ್ತಾರೆ, 'ನೃಷತು' – ಎಂಬ ಪದ್ಯದಿಂದ.

"ಸವಿತ"- ಕಾಮ್ಯ ಪುತ್ರ ಮುಂತಾದವರನ್ನು ಹುಟ್ಟಿಸುವುದರಿಂದ 'ಸವಿತೃ' -ಎನಿಸುತ್ತಾನೆ.

'ಮೃಷರಹಿತ'-ಎಂಬ ಪದವು 'ಹಂಸಃಶುಚಾಂ'-ಮಂತ್ರದಲ್ಲಿರುವ ಋತ ಎಂಬ ಪದದ ಅರ್ಥವನ್ನು ಹೇಳುತ್ತದೆ.

"ಗಾಯತ್ರೀಪ್ರತಿಪಾದ್ಯನಾದ ಸ್ತ್ರೀರೂಪ ಹಯಶೀರ್ಷನು"-ಇದರಿಂದ ಅಭಿವ್ಯಕ್ತವಾದ ೧೭ ರೂಪಗಳನ್ನು ಸೇರಿಸಿದರೆ, ಹದಿನೆಂಟು ರೂಪಗಳಾಗುವುವು. 'ಬೃಹತ್'-ಎಂಬುದನ್ನು ಸೇರಿಸಿದರೆ, ಹದಿನೆಂಟು ರೂಪಗಳೆಂದೂ ಕೆಲವರು ಹೇಳುತ್ತಾರೆ. ॥೧೭॥

### ೪. ಭಾವಪ್ರಕಾಶಿಕೆ.

ದೇವೋತ್ತಮನಾದ ಶ್ರೀಪರಮಾತ್ಮನು, ಮನುಷ್ಯರಲ್ಲಿದ್ದು ನೃಷತು ಎಂದು ಕರೆಸುವನು. ಇಂದ್ರಿಯಗಳಲ್ಲಿದ್ದು ಹೋತ -ಎಂಬ ಹೆಸರಿನಿಂದ ಆಯಾ ವಿಷಯಗಳನ್ನು ಭುಂಜಿಸುವನು. ಸತ್ಯಭೂತವಾದ ವೇದಗಳಲ್ಲಿದ್ದು ಋತುಸತು-ಎಂದು ಕರೆಸುವನು. ಸೃಷ್ಟಿಕರ್ತನಾದ ಹರಿಯು, ಭಕ್ತರನ್ನು ನಿತ್ಯದಲ್ಲೂ ಸಮಾಧಾನ ಪಡಿಸಿ, ಇಷ್ಟಾರ್ಥವನ್ನು ಪೂರೈಸುವನು. ॥೧೭॥

### ೫. ಶ್ರೀಗುರುಹೃದಯ ಪ್ರಕಾಶಿಕೆ.

ಶ್ರೀಹರಿ ಹಂಸಶ್ಶುಚಿಷತ್- ಮೊದಲಾದ ಹದಿನೆಂಟು ರೂಪಗಳಿಂದ ಸರ್ವರಕ್ಷಕ, ಕರುಣಾನಿಧಿ- ಎಂದು ಎರಡು ಪದ್ಯದಿಂದ ತಿಳಿಸುತ್ತಾರೆ, ನೃಷತು

ಎಂದು. ಮನುಷ್ಯರಲ್ಲಿ ನೃಷತು ಎಂಬ ರೂಪದಿಂದಿರುವನು. ಸುರಶ್ರೇಷ್ಠನಾದ ಸ್ವಾಮಿ ಇಂದ್ರಿಯಗಳಲ್ಲಿದ್ದ ದುರೋಣಸತ್ ಎಂಬ ರೂಪದಿಂದಿರುವನು. ಶ್ರೋತ್ರಾದೀಂದ್ರಿಯಗಳಿಂದ ಶಬ್ದಾದಿ ವಿಷಯ ಗ್ರಹಿಸುವ ಶಕ್ತಿಯನ್ನು ಜೀವನಲ್ಲಿ ಉದ್ಬೋಧನೆ ಮಾಡಿ, ತತ್ತ್ವೇಶರಲ್ಲಿದ್ದು, ಹೋತೃನಾಮಕನಾಗಿ ಸ್ವರಸಗಳನ್ನು ತಾನು ಸ್ವೀಕರಿಸಿ, ಇತರ ಯೋಗ್ಯರಸಗಳನ್ನು ಇತರರಿಗೆ ಕೊಡುವನು. ಮೃಷವೆಂಬ ಅನೃತಾದಿ ದೋಷದೂರ ಶ್ರೀಹರಿ. ಏಕಪ್ರಕಾರ ಸದಾ ಇರುವುದರಿಂದ ಋತು ಎಂಬ ನಾಮದಿಂದಲೂ, ನಿರ್ದೋಷನಾದ್ದರಿಂದ ಸತು, ಎಂಬ ನಾಮದಿಂದಲೂ ಸಹ ವೇದಗಳಲ್ಲಿರುವನು. ಹೀಗೆ, ಜಗತ್ಸೃಷ್ಟಿ ಕರ್ತನು ಸದಾ ಭಕ್ತರನ್ನು ಸಂರಕ್ಷಿಸುವನು. ॥೧೭॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಪ್ರಸಕ್ತಪದ್ಯದಲ್ಲಿ ಸ್ವಪತ ಆದಿ ಶ್ರೀಪರಮಾತ್ಮನ ೧೫ ರೂಪಗಳನ್ನೂ, ಅವುಗಳ ಅಧಿಷ್ಠಾನಗಳನ್ನೂ ತಿಳಿಸುತ್ತಾರೆ.

೨. ಮಾನವರಲ್ಲಿ (ಮನುಜರೊಳು), **ನೃಷತು**-ಎಂಬ ಹೆಸರಿನಿಂದ ವಿದ್ಯಮಾನನಾಗಿದ್ದಾನೆ. ``ನೃಷುಸ್ಥಿತತ್ವೇತಿ``-**ಶಾಟಿಕಭಾಷ್ಯೋಕ್ತಿ**.

೩. **ಸುರಋಷಭ**- ದೇವತಾಶ್ರೇಷ್ಠನಾದ ಶ್ರೀಪರಮಾತ್ಮ (ಸುರ-ದೇವತೆಗಳು. ಋಷಭ-ಪ್ರಧಾನ-ಶ್ರೇಷ್ಠ). ಸುರಋಷಭನಾದ ಶ್ರೀಪರಮಾತ್ಮನು ಮನಾದಿ ಏಕಾದಶೇಂದ್ರಿಯಗಳಲ್ಲಿ **ದ್ರೋಣಸತ್**- ಎಂಬ ಹೆಸರಿನಿಂದ ಇದ್ದಾನೆ.

೪. **ತತ್ತದ್ವಿಷಯಗಳು**-

ಏಕಾದಶೇಂದ್ರಿಯಗಳಿಗೆ ಸನ್ನಿಕರ್ಷವಾಗುವ ವಿಷಯಗಳಲ್ಲಿ, ಅಂದರೆ, ಶ್ರವಣೇಂದ್ರಿಯಕ್ಕೆ ಶಬ್ದವು ವಿಷಯವು. ಹೀಗೆ, ನೇತ್ರೇಂದಿಯ-ರೂಪ, ತ್ವಗಿಂದ್ರಿಯ-ಸ್ಪರ್ಶ, ರಸನೇಂದ್ರಿಯ-ರಸ ಮತ್ತು ನಾಸಿಕೇಂದ್ರಿಯಕ್ಕೆ ಗಂಧ, ಅಂತೆಯೇ ಹಸ್ತಾದಿ ಪಂಚಕರ್ಮೇಂದ್ರಿಯಗಳಿಗೆ ಅವುಗಳ ಕ್ರಿಯಾರೂಪವಾದ ವ್ಯಾಪಾರಗಳು. ಮನಸ್ಸಿಗೆ-ವಿಷಯಗ್ರಹಣಶಕ್ತಿ.

**೫. ಹೋತಾಹ್ವಯನು ತಾನಾಗಿ-**

ಆಯಾಯಾ ಇಂದ್ರಿಯಗಳಿಗೆ ಸಂಬಂಧಿಸಿದ ಆಯಾಯಾ ವಿಷಯಗಳಲ್ಲಿ ಶ್ರೀಹರಿಯ **ಹೋತಾ**-ಎಂಬ ಹೆಸರಿನಿಂದ ಇದ್ದು. ಆ ವಿಷಯಾಂತರ್ಗತ ಸ್ವಾಖ್ಯರಸಗಳನ್ನು ಸ್ವೀಕರಿಸುವನು. (ಅಂದರೆ ಆ ವಿಷಯಗಳಲ್ಲಿರುವ ಭಗವದ್ರೂಪಗಳಲ್ಲಿ ಸ್ವಕ್ರೀಡೆ ಮಾಡುವನು-ಸ್ವರಮಣರೂಪದಿಂದ). "ಹೋತಾಸ ವರೇಂದ್ರಿಯಸ್ಥೋ"- **ಇತಿಕಾಟಿಕಭಾಷ್ಯೇ.**

**೬. ಮೃಷರಹಿತ-**

ಮೃಷ-ಎಂದರೆ, ಸುಳ್ಳು ಎಂದರ್ಥ. ವೇದಗಳು ನಿತ್ಯ ಹಾಗೂ ಅಪೌರುಷೇಯವೇದೋಕ್ತಿಗಳು ಸದಾ ಸತ್ಯವನ್ನೇ ಪ್ರತಿಪಾದಿಸುವುವು. ಮಿಥ್ಯಾತ್ಮಕವಲ್ಲ. ಭ್ರಮಾತ್ಮಕವೂ ಅಲ್ಲ. ಇದರಿಂದ "ಮೃಷರಹಿತ ವೇದದೊಳು"-ಎಂದಿದ್ದಾರೆ.

**೭. ಋತು**-ಎಂಬ ನಾಮದಿಂದ ವೇದಗಳಲ್ಲಿ ಇದ್ದಾನೆ. ಏಕಪ್ರಕಾರವಾಗಿ ಸದಾ ಇರುವುದರಿಂದ ಶಶ್ವದೇಕಪ್ರಕಾರನಾದ ಶ್ರೀಪರಮಾತ್ಮನಿಗೆ **ಋತು-** ಎಂದು ಹೆಸರು.

**ಸತು**-ಎಂಬ ನಾಮಬಿಧನಾಗಿ, ವೇದಗಳಿಂದ **ಪ್ರತಿಪಾದ್ಯನಾಗಿದ್ದಾನೆ.** ನಿರ್ದೋಷನಾಗಿರುವುದರಿಂದ, **ಸತು**- ಎಂಬನಾಮ.

"ಋತುರೂಪೇತಥಾವೇದೇ"- **ಇತಿ ಕಾಟಿಕ ಭಾಷ್ಯೇ.**

**೮.** ಪೂರ್ವೋಕ್ತ ನಾಮಗಳಿಂದ ಶಬ್ದವಾಚ್ಯನಾಗಿ ಶ್ರೀಪರಮಾತ್ಮನು ಜಗತ್ತಿನ ಸೃಷ್ಟ್ಯಾದಿ ಕರ್ತನಾಗಿದ್ದು, ತನ್ನ ಭಕ್ತರನ್ನೂ ಸದಾ ಸಂರಕ್ಷಿಸುತ್ತಿರುವನು ಎಂದು ಪ್ರಸಕ್ತ ಪದ್ಯದ ತಾತ್ಪರ್ಯವು. ॥೧೭॥

## ಪದ್ಯ-೧೮

**ಮೂಲ :**

**ಅಬ್ಜಭವಪಿತ ಜಲಧರಾದ್ರಿಯೊ ।**
**ಳಬ್ಜ ಗೋಜಾದ್ರಿಜನೆನಿಸಿ ಜಲ ।**
**ದುಬ್ಬಳಿ ಪೀಯೂಷದಾವರೆ ಶ್ರೀಶಶಾಂಕರೊಳು ॥**
**ಕಬ್ಬು ಕದಳಿ ಲತಾ ತೃಣ ದ್ರುಮ ।**
**ಹಬ್ಬುಗೆಯ ಮಾಡುತಿಹ ಗೋಜನು ।**
**ಇಬ್ಬಗೆ ಪ್ರತೀಕ ಮಣಿ ಮೃಗ ಸೃಜಿಪನದ್ರಿಜನು ॥೧೮॥**

**ಅವತರಣಿಕೆ :**

ಇತರ ಸ್ಥಿರಾಧಿಷ್ಠಾನಗತಭಗವದ್ರೂಪಗಳ ನಾಮಗಳನ್ನು ತಿಳಿಸುತ್ತಾರೆ. ॥೧೮॥

**ಪ್ರತಿಪದಾರ್ಥ :**

**ಅಬ್ಜಭವ** — ಪದ್ಮನಾಭದೇವರ ನಾಭೀಕಮಲದಲ್ಲಿ ಉತ್ಪನ್ನರಾದ ಶ್ರೀಬ್ರಹ್ಮದೇವರ, **ಪಿತ** — ಜನಕನಾದ ಶ್ರೀಪರಮಾತ್ಮನು, **ಜಲ**—ನೀರು. **ಧರಾ**—ಭೂಮಿ ಮತ್ತು **ಅದ್ರಿಯೊಳು**—ಪರ್ವತಗಳಲ್ಲಿದ್ದು, **ಅಬ್ಜ**— ಅಬ್ಜನಾಮಕನಾಗಿ, **ಗೋಜ**—ಗೋಜನೆಂಬ ಹೆಸರಿನಿಂದ, **ಅದ್ರಿಜ** – ಅದ್ರಿಜ ಎಂಬ ಹೆಸರಿನಿಂದ, **ಎನಿಸಿ**—ಈ ಮೂರು ನಾಮಗಳಿಂದ ಕರೆಯಿಸಿಕೊಳ್ಳುವವನಾಗಿ. **ಜಲದುಬ್ಬಳಿ**—ನೀರಿನಲ್ಲಿ ಉತ್ಪನ್ನವಾಗುವ ಬುದ್ಬುದ (ಗುಳ್ಳಿಗಳು), **ಪೀಯೂಷ**—ಅಮೃತ, **ತಾವರೆ**—ಕಮಲಪುಷ್ಪ, **ಶ್ರೀ**—ಲಕ್ಷ್ಮೀದೇವಿ, **ಶಶಾಂಕನೊಳು**—ಚಂದ್ರ ಇವರುಗಳಲ್ಲಿ. **ಕಬ್ಬು**=ಕಬ್ಬು, **ಕದಳಿ** =ಬಾಳೇಗಿಡ, **ಲತಾ**=ನಾನಾಪಲಯ ಬಳ್ಳಿಗಳು, **ತೃಣ**=ಹುಲ್ಲು, **ದ್ರುಮ**

= ವೃಕ್ಷಗಳು ಇತ್ಯಾದಿ ಭೂಮಿಯಲ್ಲಿ ಉತ್ಪನ್ನವಾಗುವ ವೃಕ್ಷಜಾತಿಗಳಲ್ಲಿ (ಸ್ಥಾವರವರ್ಗ). **ಗೋಜನು** = ಗೋಜನಾಮಕನಾದ ಶ್ರೀಪರಮಾತ್ಮನು, **ಹೆಬ್ಬುಗೆಯ** = ಆಯಾಯಾ ವಸ್ತುಗಳ ಅಭಿವೃದ್ಧಿಯನ್ನು. **ಮಾಡುತಿಹ** = ಮಾಡುತ್ತಾನೆ. **ಇಬ್ಬಗೆ ಪ್ರತೀಕ** = ಪೂರ್ವೋಕ್ತ ಅಬ್ಜ ಮತ್ತು ಗೋಜ ನಾಮಕನಾಗಿ. ಎರಡು ಭಗವದ್ರೂಪಗಳಿಂದ ವಿದ್ಯಮಾನನಾಗಿರುವ ಶ್ರೀಪರಮಾತ್ಮನು, **ಮಣಿ** = ನಾನಾ ವಿಧವಾದ ರತ್ನವಿಶೇಷಗಳು, **ಮೃಗ** = ವನ್ಯ ಮತ್ತು ಇತರ ಪ್ರಾಣಿಗಳ ವರ್ಗ. **ಅದ್ರಿಜನು** = ಅದ್ರಿಜನಾಮಕನು. **ಸೃಜಿಪನು** = ಸೃಷ್ಟಿಸುತ್ತಾನೆ. ॥೧೮॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಇನ್ನೂ ಪೂರ್ವೋಕ್ತ ಪ್ರುತ್ಯರ್ಥವಾಚಾರವೇ ವಿಶೇಷಾಕಾರವಾಗಿ ಹೇಳತಾರೆ.

ಕಮಲದಲ್ಲಿ ಉತ್ಪನ್ನವಾದ, ಬ್ರಹ್ಮಗೆ ತಂದೆಯಾದ ಗುಣಪೂರ್ಣನಾದ ಶ್ರೀಪರಮಾತ್ಮ ಶುದ್ಧಜಲದಲ್ಲಿ ಅಬ್ಜನಾಮಕ ಪರಮಾತ್ಮ ಇದ್ದು. ಸಮುದ್ರೋದಕದಲ್ಲಿ ಉತ್ಪನ್ನವಾದ, ಸಾಧಾರಣಜಲಗಳಲ್ಲಿ ಉತ್ಪನ್ನವಾದ ಅಮೃತ, ಕಮಲಪುಷ್ಪಗಳು ಶ್ರೀಲಕ್ಷ್ಮೀದೇವೀರು, ಚಂದ್ರ ಇನ್ನೂ ಅನೇಕ ಜಲಚರಗಳು, ಅನೇಕ ಜಲಸಂಬಂಧಗಳು- ಈ ಯಾವತ್ತರೊಳು ಅಬ್ಜನಾಮಕ ಪರಮಾತ್ಮ ಇದ್ದಾನೆ. ಭೂಮಿಯಲ್ಲಿ ಗೋಜನಾಮಕ ಪರಮಾತ್ಮ ಇದ್ದು, ಇಕ್ಷುದಂಡ, ಬಾಳೇಗಿಡ, ಬಳ್ಳಿಗಳು, ಹುಲ್ಲು, ಮೊದಲಾದ ತೃಣಗಳು, ವೃಕ್ಷಗಳು ಇವೇ ಮೊದಲಾದ ಭೂಮಿಯೇ ಯೋನಿಯಾಗುಳ್ಳ ಯಾವತ್ತೂ ವೃಕ್ಷಜಾತಿಗಳು ಇವುಗಳಲ್ಲಿ ಗೋಜನಾಮಕ ಪರಮಾತ್ಮ ಇದ್ದಾನೆ. ಜಲವೊಂದು ಅಧಿಷ್ಠಾನ, ಭೂಮಿಯೊಂದು ಅಧಿಷ್ಠಾನ, ಈ ಉಭಯವಿಧ ಅಧಿಷ್ಠಾನಗಳಲ್ಲಿ ಇದ್ದವನಾಗಿ, ಪರ್ವತಗಳಲ್ಲಿ ಅದ್ರಿಜನಾಮದಿಂದ ಇದ್ದವ

ನಾಗಿ, ರತ್ನಗಳ, ಮೃಗಗಳ ಇನ್ನೂ ಪರ್ವತೋತ್ಪನ್ನ ಅನೇಕಗಳ ಸೃಷ್ಟಿ ಮಾಡುವನು. ಅದ್ರಿಜನಾಮಕ ಪರಮಾತ್ಮನು ಅವುಗಳಲ್ಲಿ ಇದ್ದಾನೆ. ಇದೊಂದು ಪ್ರತಿಮಾ. ಪೂರ್ವೋಕ್ತ ರೂಪಗಳಿಂದ, ಅಲ್ಲಲ್ಲಿ ಆಯಾಪದಾರ್ಥಗಳ ಅಭಿವೃದ್ಧಿ ಮಾಡತಾನೆಂದು -ತಾತ್ಪರ್ಯ. ॥೧೮॥

## ೨. ಭಾ. ವದರ್ಪಣ

ಅಬ್ಜ। ಜಲದಲ್ಲಿ ಅಬ್ಜಾಖ್ಯರೂಪ-ಭೂಮಿಯಲ್ಲಿ ಗೋಜಾಖ್ಯರೂಪ-ಪರ್ವತದಲ್ಲಿ ಅದ್ರಿಜಾಖ್ಯರೂಪ- ಎಂದು ಹೇಳುತ್ತದೆ। ತದುಕ್ತಂ। "ಅಬ್ಜಗೋಜಾದ್ರಿಜೇಷ್ವೇವಮಾಸ್ತೇ ಹ್ಯಬ್ಜಾದಿಕಸ್ತ್ವತ" ಇತಿಚ। ಜಲದ ಉಬ್ಬೆಳಿಗೆ. ಕರೆ. ಪೀಯೂಷ, ಅಮೃತ, ತಾವರೆ, ಕುಶೇಶಯಪುಷ್ಪ- ಎಂದರೆ ಶತಪತ್ರ ಕಮಲಾದಿ ಜಡದಲ್ಲಿ ಗೋಜಯನಿಸಿಕೊಂಡು ಹೆಬ್ಬುಗೆಯ ವೃದ್ಧಿ ಮಾಡುವ ಎಂಬರ್ಥ. ॥೧೮॥

## ೩. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

'ಅಬ್ಜ' ಇತಿ॥ 'ಉಬ್ಬೆಳ' ಗುಳ್ಳ(ಳ್ಳೆ) 'ಪೀಯೂಷ' ಅಮೃತಂ 'ತಾವರೆ'- ಕಮಲಂ ಏತೇಷಾಂ ಜಲೋತ್ಪತ್ತೇಃ ॥ ಹ್ಯಬ್ಬಗೆ- ಬಹುಪ್ರಕಾರಃ 'ಪ್ರತೀಕ' ತತ್ರ ಸಂಸ್ಥಿತಃ. ॥೧೮॥

## ಕನ್ನಡಾರ್ಥ

ಜಲದ ಗುಳ್ಳೆ, ಅಮೃತ, ಕಮಲ-ಮುಂತಾದವುಗಳು ಜಲದಲ್ಲಿ ಹುಟ್ಟುತ್ತವೆ. ಆದುದರಿಂದ ಪರಮಾತ್ಮನು ಅವುಗಳಲ್ಲಿ 'ಅಬ್ಜನಾಮದಿಂದ ಇರುತ್ತಾನೆ. ''ಹ್ಯಬ್ಬಗೆ-ಹಲವು ಪ್ರಕಾರಗಳು. ಪ್ರತೀಕ-ಎಂದರೆ, ಪ್ರತಿಮೆಗಳು. ಚೇತನಾ ಚೇತನಗಳೆಂಬ- ಎರಡು ತರಹದ ಪ್ರತೀಕದಲ್ಲಿ ಇರುವನೆಂದು ಅಭಿಪ್ರಾಯ. ॥೧೮॥

## ಅ. ಭಾವಪ್ರಕಾಶಿಕೆ

ಶ್ರೀಬ್ರಹ್ಮದೇವರ ತಂದೆಯಾದ ಶ್ರೀಪದ್ಮನಾಭನು, ಉದಕದಲ್ಲಿ ಅಬ್ಜನೆಂಬ ಹೆಸರಿನಿಂದಿದ್ದು ನೀರುಗುಳ್ಳೆ, ಅಮೃತ, ತಾವರೆ ಹೂವು, ಚಂದ್ರ ಮಂಡಲ-ಇವುಗಳ ಕಾಂತಿಯನ್ನು ವೃದ್ಧಿಪಡಿಸುವನು. ಭೂಮಿಯಲ್ಲಿ ಗೋಜ ನೆಂಬ ಹೆಸರಿನಿಂದಿದ್ದು, ಕಬ್ಬು, ಬಾಳೆ- ಮೊದಲಾದವುಗಳನ್ನೂ, ಬಳ್ಳಿ, ಹುಲ್ಲು, ಗಿಡ, ಮರ- ಮೊದಲಾದವುಗಳನ್ನು ವೃದ್ಧಿಗೊಳಿಸುವನು. ಅದ್ರಿಜ ನಾಮಕನು, ಬೆಟ್ಟಗಳಲ್ಲಿ ಹುಟ್ಟುವ ಮಾಣಿಕ್ಯ ಮೊದಲಾದವು ಜಡ ಪ್ರತಿಮೆ- ಎಂತಲೂ, ಮೃಗ ಮೊದಲಾದವು ಚೇತನಪ್ರತಿಮೆ ಎಂತಲೂ, ಹೀಗೆ ಎರಡೂ ವಿಧಪ್ರತಿಮೆಗಳನ್ನು ಸೃಷ್ಟಿಸಿ, ಅವುಗಳಲ್ಲಿ ವಾಸಮಾಡು ವನು. ಪರಮಾತ್ಮನು ವಾಸಮಾಡಲು ಯೋಗ್ಯವಾದ ಪದಾರ್ಥಗಳಿಗೆ ಪ್ರತಿಮೆ ಎಂದು ಹೆಸರು. ಅವನು ಸರ್ವತ್ರವಾಸಮಾಡುವುದರಿಂದ ಜಡ ಚೇತನಾತ್ಮಕವಾದ ಸಕಲವೂ ಪರಮಾತ್ಮನಿಗೆ ಪ್ರತಿಮೆಗಳೆಂಬ ತಾತ್ಪರ್ಯ. ॥೨೮॥

## ಆ. ಶ್ರೀ ಗುರುಹೃದಯ ಪ್ರಕಾಶಿಕೆ

ಅಪ್ಪುಭವನೆಂಬ ಬ್ರಹ್ಮನ ಜನಕನು ಜಲ, ಧರೆ-ಎಂಬ ಭೂಮಿ, ಅದ್ರಿ ಎಂಬ ಬೆಟ್ಟ ಈ ಮೂರುಸ್ಥಳಗಳಲ್ಲಿಯೂ ಅಬ್ಜ, ಗೋಜ, ಅದ್ರಿಜ-ಎಂಬ ಮೂರುರೂಪದಿಂದದ್ದು, ಜಲದುಬ್ಬುಳೆ ಎಂಬ ಉದಕರಸ, ಬುದ್ಬುದವೆಂಬ ನೀರುಗುಳ್ಳೆ, ಪೀಯೂಷವೆಂಬ ಅಮೃತ, ತಾವರೆ ಎಂಬ ಪದ್ಮ, ಶಶಾಂಕ ನೆಂಬ ಚಂದ್ರ -ಇವುಗಳಲ್ಲಿ ಅಬ್ಜನೆಂಬರೂಪದಿಂದ ಕರೆಸುವನು. ಕಬ್ಬು, ಕದಳಿ ಎಂಬ ಬಾಳೆ, ಲತೆ ಎಂಬ ಬಳ್ಳಿ, ತೃಣವೆಂಬ ಹುಲ್ಲು, ದ್ರುಮವೆಂಬ ವೃಕ್ಷ- ಇವುಗಳಲ್ಲಿದ್ದು ಇವುಗಳನ್ನು ವೃದ್ಧಿಮಾಡಿ, ಗೋಜನೆಂದು ಕರೆಸುವನು. ತನಗೆ ಜಡ, ಚೇತನ- ಎಂದು ಎರಡು ಬಗೆ ಪ್ರತಿಮೆಯಾದ ರತ್ನಾದಿ ಜಡ

ವನ್ನು, ಜಿಂಕೆ-ಮೊದಲಾದ ಚೇತನಗಳನ್ನು ಸೃಷ್ಟಿಸಿ, ಅಲ್ಲಿದ್ದು, ಅದ್ರಿಜನೆಂದು ಕರೆಸುವನು. ॥೧೮॥

## ಸರ್ವವ್ಯಾಖ್ಯಾನಸಾರ ಸಂಗ್ರಹ

೧. ಪ್ರಸಕ್ತಪದ್ಯದಿಂದ, ದಾಸವರ್ಯರು ಶ್ರೀಪರಮಾತ್ಮನ ಅಬ್ಜ-ಗೋಜ-ಅದ್ರಿಜ-ಎಂಬ ಮೂರು ಭಗವದ್ರೂಪಗಳು ಮತ್ತು ಅವುಗಳ ಅಧಿಷ್ಠಾನಗಳ ವಿವರಗಳನ್ನು ತಿಳಿಸುತ್ತಾರೆ.

**೨. ಅಬ್ಜಭವಪಿತ-**

ಅಬ್ಜ-ಎಂದರೆ, ನೀರಿನಲ್ಲಿ ಉತ್ಪನ್ನವಾಗುವ ಕಮಲವೆಂದರ್ಥ. (ಅಪ್ + ಜ). ಪದ್ಮನಾಭರೂಪೀ ಶ್ರೀಪರಮಾತ್ಮನ ನಾಭೀಕಮಲದಲ್ಲಿ ಸಂಜಾತರಾದ ಬ್ರಹ್ಮದೇವರಿಗೆ **ಅಬ್ಜಭವ**-ಎಂದು ಹೆಸರು. ಅವರ ತಂದೆ (ಪಿತ) ಶ್ರೀಮನ್ನಾರಾಯಣನು.

**೩. ಜಲ-**

ಜಲಾಶಯಗಳಾದ, ಸಾಗರ-ಹರಿಯುತ್ತಿರುವ ನದಿ-ಭಾವಿ-ಕೆರೆ-ಇತ್ಯಾದಿ ಅಧಿಷ್ಠಾನಗಳಲ್ಲಿ ಶ್ರೀಪರಮಾತ್ಮನು **ಅಬ್ಜ**-ನಾಮಕನಾಗಿ ವಿದ್ಯಮಾನನಾಗಿದ್ದಾನೆ.

೪. ಅಬ್ಜನಾಮಕನಾದ ಶ್ರೀಹರಿಯು, ನೀರಿನಲ್ಲಿ ಏಳುವ ಬುದ್ಬುದಗಳು (ನೀರಿನ ಮೇಲಿನ ಗುಳ್ಳೆಗಳು) (ಜಲದುಬ್ಬಳಿ)- ನೀರಿನಲ್ಲಿ ಉತ್ಪನ್ನವಾದ ಅಮೃತ (ಪೀಯೂಷ)- ನೀರಿನಲ್ಲಿ ಬೆಳೆಯುವ ಕಮಲಪುಷ್ಪಗಳು(ತಾವರೆ)- ಕ್ಷೀರಸಮುದ್ರದಲ್ಲಿ ಸಂಜಾತಳಾದ ಸಾಗರಕನ್ಯೆ ಶ್ರೀಲಕ್ಷ್ಮೀದೇವಿ (ಶ್ರೀ)- ಅದೇ ಕ್ಷೀರಸಾಗರ ಸಂಜಾತನಾದ ಚಂದ್ರ (ಶಶಾಂಕ)- ಈ ಅಧಿಷ್ಠಾನಗಳಲ್ಲಿ ವಿದ್ಯಮಾನನಾಗಿದ್ದಾನೆ.

**೫. ಗೋಜ-**

**ಗೋಜ** ನಾಮಕನಾದ ಶ್ರೀಪರಮಾತ್ಮನು,(ಗೋ-ಎಂದರೆ ಭೂಮಿ) ಭೂಮಿಯಲ್ಲಿ ಉತ್ಪನ್ನವಾಗುವ ಕಬ್ಬು-ಇದರಿಂದ ಭತ್ತ, ರಾಗಿ, ಜೋಳ, ಗೋಧಿ

ಇತ್ಯಾದಿ ಬೆಳೆಗಳೂ ಗ್ರಾಹ್ಯ, ಕದಳೀ-ಬಾಳೇಗಿಡ-ಇದರಿಂದ ಹಲಸು-ತೆಂಗು-ಮಾವು-ನೇರಳೆ- ಇತ್ಯಾದಿ ಫಲಪ್ರದ ಪದಾರ್ಥಗಳೂ ಗ್ರಾಹ್ಯ, ನಾನಾವಿಧಗಳಾದ ಲತಾ–ಅಂದರೆ, ಬಳ್ಳಿಗಳಲ್ಲಿ. ತೃಣ-ಎಂದರೆ ಹುಲ್ಲು, ಗರಿಕೆ, ಗುಲ್ಮ (ಪೊದೆ) ಇತ್ಯಾದಿಗಳಲ್ಲಿ- ದ್ರುಮ-ಎಂದರೆ ಎತ್ತರವಾಗಿ ಬೆಳೆಯುವ ನಾನಾ ಪ್ರಕಾರಗಳಾದ ವೃಕ್ಷವಿಶೇಷಗಳಲ್ಲಿ- ವಿದ್ಯಮಾನನಾಗಿದ್ದಾನೆ. ಸೋಮನಾಮಕನು ಭೂಮಿಯಲ್ಲಿರುವ ಮಣ್ಣಿನ ಕಣಕಣಗಳಲ್ಲಿ ವ್ಯಾಪ್ತನಾಗಿದ್ದು, ಪೋಷಕದ್ರವ್ಯಗಳಾದ ಗೊಬ್ಬರದಲ್ಲಿದ್ದು, ರಸಪುಷ್ಟಿಪ್ರದನಾಗಿದ್ದು, ಭೂಮಿಯಲ್ಲಿ ಬೆಳೆಯುವ ತರು-ಲತಾ-ಗುಲ್ಮಾದಿಗಳನ್ನು ಬೆಳೆಯಿಸುವನು. ಈ ಕಾರ್ಯವು ವೃಕ್ಷಗಳಿಗೆ ಉಪಚಯರೂಪವಾದ ಅಭಿವೃದ್ಧಿ ಕ್ರಿಯಾವಿಶೇಷವು. ಇದನ್ನು **ಹೆಬ್ಬುಗೆಯ ಮಾಡುತಿಹ**- ಎಂದಿದ್ದಾರೆ – ದಾಸರಾಯರು, ಹೆಬ್ಬುಗೆ-ಅಭಿವೃದ್ಧಿ-ಬೆಳವಣಿಗೆ.

೬. ಪರ್ವತಗಳಲ್ಲಿ ದೊರೆಯುವ ನಾನಾವಿಧವಾದ ರತ್ನವಿಶೇಷಗಳು-ಧಾತುಗೈರಿಕಾದಿಗಳು-ಹುಲಿ-ಕರಡಿ ಇತ್ಯಾದಿ ವನ್ಯಮೃಗಗಳು- ಗೋವು ಜಿಂಕೆ ಮುಂತಾದ ಸಸ್ಯಾಹಾರಿ ಪ್ರಾಣಿಗಳನ್ನು (ಮೃಗ). **ಅದ್ರಿಜನಾಮಕನು** ಸೃಷ್ಟಿಸಿ, ಪರಿಪಾಲಿಸುವನು. ||೧೮||

## ಪದ್ಯ-೧೯

**ಮೂಲ:-**

**ಕುತವಿನುತ ಸರ್ವತ್ರದಲಿ ಭಾ |**
**ರತಿರಮಣನೊಳಗಿದ್ದು ತಾ ಶುಚಿ |**
**ಪತುವೆನಿಸಿ ಜಡ ಚೇತನರನ ಪವಿತ್ರಮಾಡುತಿಹ ||**
**ಅತುಳಮಹಿಮಾನಂತ ರೂಪಾ |**
**ಚ್ಯುತನೆನಿಸಿ ಚಿದ್ದೇಹದೊಳು ಪ್ರಾ |**
**ಕೃತಪುರುಷನಂದದಲಿ ನಾನಾಚೇಷ್ಟೆಗಳ ಮಾಳ್ಪ ||೧೯||**

**ಅವತರಣಿಕೆ :**

ವೇದಪ್ರತಿಪಾದ್ಯನಾದ ವೇದಪುರುಷನು ವಾಯ್ವಂತರ್ಗತನಾಗಿದ್ದು, ಸರ್ವತ್ರವ್ಯಾಪ್ತನಾಗಿ, ನಾನಾವ್ಯಾಪಾರಗಳನ್ನು ಮಾಡುತ್ತಾನೆಂದು ತಿಳಿಸುತ್ತಾರೆ. ॥೧೯॥

**ಪ್ರತಿಪದಾರ್ಥ :**

**ಶ್ರುತಿವಿನುತ** – ಸಕಲವೇದಾಗಮಪ್ರತಿಪಾದ್ಯನಾದ ಶ್ರೀಪರಮಾತ್ಮನು. **ಸರ್ವತ್ರದಲಿ** – ಚೇತನಾತ್ಮಕನಾದ ಈ ಬ್ರಹ್ಮಾಂಡದ ಸರ್ವಾಧಿಷ್ಠಾನಗಳಲ್ಲಿ, **ಭಾರತಿರಮಣನೊಳಗಿದ್ದು** – ಭಾರತೀಪತಿಯಾದ ಶ್ರೀಮುಖ್ಯಪ್ರಾಣದೇವರಲ್ಲಿ ಅಂತರ್ಗತನಾಗಿದ್ದು, **ತಾ ಶುಚಿಷತುವೆನಿಸಿ** – ಗುಣಪೂರ್ಣನಾದ ಶ್ರೀಪರಮಾತ್ಮನು, **ಶುಚಿಷತ್** – ನಾಮಕನಾಗಿದ್ದು, **ಜಡ ಚೇತನರನ** – ಸಕಲ ಜಡವಸ್ತುಗಳನ್ನೂ, ಮತ್ತು ಜೀವರುಗಳನ್ನೂ **ಪವಿತ್ರಮಾಡುತಿಹ** – ಶುದ್ಧರನ್ನಾಗಿ ಮಾಡುತ್ತಾನೆ, (ಸತ್ಪಾತ್ರರಾದ ಜೀವರು ಎಂದರ್ಥ. ಗಂಗಾದಿ ತೀರ್ಥಕ್ಷೇತ್ರಗಳನ್ನು ಶುದ್ಧ ಜಡಾಧಿಷ್ಠಾನಗಳೆಂದು ತಿಳಿಯಬೇಕು). **ಅತುಳ ಮಹಿಮ** – ಅಪಾರಮಹಿಮಾಸಂಪನ್ನನಾದ ಅಪ್ರಮೇಯನು. **ಅನಂತ ರೂಪ** – ಅನಂತರೂಪಾತ್ಮಕನಾಗಿ, **ಅಚ್ಯುತನೆನಿಸಿ** – ನಾಶರಹಿತನೆಂದು ಕರೆಯಿಸಿ, (ಚತುರ್ವಿಧನಾಶರಹಿತನು). **ಚಿದ್ದೇಹದೊಳು** – ಜೀವರುಗಳ ಸ್ವರೂಪ ದೇಹಗಳಲ್ಲಿ ನಿತ್ಯವಿಯೋಗನಾಗಿ, ಬಿಂಬರೂಪದಿಂದ, **ಪ್ರಾಕೃತ ಪುರುಷನಂದದಲಿ** – ಸಾಮಾನ್ಯ ಮಾನವರಂತೆ, **ನಾನಾ ಚೇಷ್ಟೆಗಳ** – ನಾನಾ ಪ್ರಕಾರವಾದ ವ್ಯಾಪಾರವಿಶೇಷಗಳನ್ನು (ಕ್ರಿಯಾವಿಶೇಷಗಳು), **ಮಾಳ್ಪ** – ಬಿಂಬಕ್ರಿಯಾದ್ವಾರಾ ಮಾಡಿ ಮಾಡಿಸುತ್ತಾನೆ.॥೧೯॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ:-

ಪೂರ್ವೋಕ್ತ ಶ್ರುತ್ಯರ್ಥವನ್ನೇ ಹೇಳತಾರೆ.

ಪೂರ್ವೋಕ್ತ ಗುಣಪೂರ್ಣನಾದ ಪರಮಾತ್ಮ ಶುಚಿಷತ್ - ಎನಿಸಿದವನಾಗಿ, ಭಾರತೀದೇವೀರ ಪತಿಯಾದ ಶ್ರೀಮುಖ್ಯಪ್ರಾಣದೇವರಾಂತರ್ಗತನಾಗಿದ್ದು, ಜಡಜೀವರ, ಚೇತನಜೀವರನ್ನ, ಶುದ್ಧಜಡಗಳ ಶುದ್ಧರನ್ನಾಗಿ ಮಾಡತಾನೆ. ಎಂದರೆ, ಅಧಿಕಾರಿಯಾದವರಿಗೆ ಸರ್ವತ್ರದಲ್ಲೂ ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಬಿಂಬನ ಉಪಾಸನವೇ ಹೊರ್ತು, ಬ್ಯಾರೆ ಮಾರ್ಗದಲ್ಲಿ ಉಪಾಸನ ಕೂಡದು. ಅಂಥಾ ಉಪಾಸನಾ ಮಾಡಿದವರನ್ನ ಪುನೀತರನ್ನಾಗಿ ಮಾಡಿ, ಜ್ಞಾನ, ಭಕ್ತಿ ವೈರಾಗ್ಯ, ಐಶ್ವರ್ಯ ಕೊಟ್ಟು, ಸಂರಕ್ಷಣ ಮಾಡತಾನೆ. ಇದೇ ಪ್ರಕಾರ, ಗಂಗಾದಿ ತೀರ್ಥಕ್ಷೇತ್ರಗಳಲ್ಲಿ ಸ್ನಾನಾದ್ಯನುಷ್ಠಾನಗಳನ್ನು ಪೂರ್ವೋಕ್ತ ಅನುಸಂಧಾನದಿಂದ ಮಾಡಬೇಕು. ಶುದ್ಧ ಜಡಗಳಲ್ಲೂ, ಶ್ರೀಪರಮಾತ್ಮನ ಪೂಜಾನೂ ಇದೇ ಪ್ರಕಾರ ಮಾಡಬೇಕಂತ ತಾತ್ಪರ್ಯ. ವೇದದಿಂದವೇದ್ಯನಾದ ಶ್ರೀಹರಿ, ಸರ್ವಸ್ಥಳಗಳಲ್ಲಿ ಭಾರತೀರಮಣಮುಖ್ಯಪ್ರಾಣಾಂತರ್ಗತನಾಗಿ ಇದ್ದಾನೆಂತ ಅನುಸಂಧಾನವಿರಬೇಕು. ಅನಂತಾನಂತಜೀವರಲ್ಲಿ ಅಸದೃಶಮಹಿಮನಾದ ಶ್ರೀದೇವರು ಆಯಾ ಜೀವಾಕಾರರೂಪಗಳಿಂದ ಬಿಂಬನಾಗಿದ್ದು, ನಾಶರಹಿತನೆಂತ ಕರಸಿ. ಜೀವರ ಸ್ವರೂಪಗಳಲ್ಲಿ ಅವಿಯೋಗನಾಗಿ, ಸ್ಥೂಲದೇಹಯುಕ್ತ ಮನುಷ್ಯ ಹ್ಯಾಂಗೆ ದುರ್ಬಲನಾಗಿ ಇರ್ತಾನೋ ತದ್ವತ್. ಜೀವನ ಯೋಗ್ಯತಾ ಅನುಸರಿಸಿ ಇದ್ದು, ನಾನಾ ವ್ಯಾಪಾರಗಳ ಮಾಡೋವನಾಗತಾನೆಂತ ತಾತ್ಪರ್ಯ. ॥೧೯॥

## ೨. ಭಾವದರ್ಪಣ

ಶ್ರುತಿ। ವಾಯುದೇವರಲ್ಲಿ ಇರುವ ರೂಪ -ಶುಚಿಷತ್- ಎಂತ ಹೇಳುತ್ತಾರೆ । "ವಾಯುಸ್ಥೋ ಶುಚಿಷತ್ಸ್ಮೃತಃ"- ಇತಿ ಚ। ಸ್ವರೂಪದೇಹಾಂತರ್ಯಾಮಿಯಾಗಿ, ಮನುಷ್ಯವತ್ ಕ್ರೀಡಾಮಾಡುವನೆಂದು ಸೂಚಿಸುತ್ತಾರೆ.

॥೧೯॥

## ೩. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

'ಶ್ರುತಿ'– ಶ್ರೀ 'ಅತುಳ'.. ಅಸದೃಶ. ॥೧೯॥

# ಕನ್ನಡಾರ್ಥ

"ಶುಚಿಷತ್"- ಎಂಬ ಭಗವದ್ರೂಪವನ್ನು ವಿಶದೀಕರಿಸಿ ತಿಳಿಸುತ್ತಾರೆ- 'ಶ್ರುತಿವಿನುತ'- ಎಂಬ ಪದ್ಯದಿಂದ. 'ಅತುಲ'- ಅಸದೃಶ. ॥೧೯॥

## ೪. ಭಾವಪ್ರಕಾಶಿಕೆ

ವೇದಗಳಿಂದ ಸ್ತುತ್ಯನಾದ ಶ್ರೀಹರಿಯು, ಸರ್ವಪ್ರಾಣಿಗಳ ಅಂತರ್ಯಾಮಿಯಾಗಿರುವ, ಚಿತ್ತಾಭಿಮಾನಿಯಾದ, ಭಾರತೀರಮಣಮುಖ್ಯಪ್ರಾಣದೇವರಲ್ಲಿ **ಶುಚಿಷತು** - ಎಂಬ ಹೆಸರಿನಿಂದಿದ್ದು, ಜಡ ಚೇತನಾತ್ಮಕವಾದ ಈ ಪ್ರಪಂಚವನ್ನೇ ಪವಿತ್ರವನ್ನಾಗಿ ಮಾಡುವನು. ಮತ್ತೊಬ್ಬರಿಗೆ ಹೋಲಿಸಲು ಸಾಧ್ಯವಿಲ್ಲದ ಮಹಿಮೆಯುಳ್ಳ, ಅನಂತರೂಪಿಯಾದ ಶ್ರೀಹರಿಯು ನಾಶರಹಿತನಾದುದರಿಂದ, ಅಚ್ಯುತನೆಂಬ ಹೆಸರಿನಿಂದ ಕರೆಸುತ್ತಾ ಎಲ್ಲರ ಸ್ವರೂಪದೇಹಗಳಲ್ಲಿದ್ದು ಸಾಮಾನ್ಯರಾದ ಮನುಷ್ಯರಂತೆ, ನಾನಾ ವಿಧವಾದ ಕಾರ್ಯಗಳನ್ನು ಮಾಡುತ್ತಿರುವನೆಂಬ ತಾತ್ಪರ್ಯ. ॥೧೯॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ

ವೇದಸ್ತುತನಾದ ದೇವರು, ಶುದ್ಧಸ್ವರೂಪರಾದ ಭಾರತೀಪತಿ ಪ್ರಾಣದೇವರಲ್ಲಿದ್ದು, ಶುಚಿಷತು- ಎಂದ ಕರೆಸುತ್ತಾ, ಜಡ–ಚೇತನವನ್ನು ಪಾವನ ಮಾಡುವನು. ಅತುಳನೆಂಬ ಸಮಾನರಹಿತ ಮಹಿಮೆಯುಳ್ಳ, ಅನಂತರೂಪನಾದ, ಸದಾ ಏಕರೀತಿ ಇರುವಸ್ವಾಮಿ, ಚಿದ್ದೇಹವೆಂಬ ಜೀವಸ್ವರೂಪದಲ್ಲಿ ತದ್ಬಲಿಯುದಲಿ ಸದ್ವ್ಯೋಮನೆಂಬ ರೂಪದಿಂದ ಇದ್ದು, ಪ್ರಾಕೃತದೇಹದಲ್ಲಿ ಪ್ರಾಕೃತಪುರುಷನೆಂಬ ಜೀವನಂತೆ, ಚೇಷ್ಟೆಗಳ ಮಾಳ್ವ. ಎಂದರೆ-ತತ್ಕ್ರಿಯಾ,

ವ್ಯಕ್ತಿ ಮಾಡುವನೆಂದರ್ಥ. ಮನಸ್ಸಿನಲ್ಲೂ, ಸದ್ಗುರುಗಳಲ್ಲೂ, ಇದ್ದು, ಜ್ಞಾನಪ್ರದನಾಗಿ ವೇದಿಷತ್- ಎಂದು ಕರೆಸುವನು. ಸ್ವರ್ಣಾದಿ ವಸ್ತುಗಳಲ್ಲಿದ್ದು, ವಸುಸತ್-ಎಂದು ಕರೆಸುವನು. ಆಕಾಶದಲ್ಲಿದ್ದು, ಅವಕಾಶಪ್ರದನಾಗಿ ಅಂತರಿಕ್ಷಸತ್- ಎಂದು ಕರೆಸುವನು. ಯಜ್ಞಗಳಲ್ಲಿದ್ದು, ಪರಸತು- ಎಂದು ಇರುವನು. ಅನ್ನಾಕಾಂಕ್ಷಿಗಳಲ್ಲಿ ಅತಿಥಿ ಎನಿಸಿರುವನು. ಸೂರ್ಯನಲ್ಲಿ ಹಂಸನಾಮದಿಂದಿದ್ದು, ವೃಕ್ಷ್ಯಾದಿಗಳಿಂದ ರಕ್ಷಿಸುವ ಅಥವಾ ಶ್ವಾಸೋಚ್ಛ್ವಾಸ ನಿಯಾಮಕ ಪ್ರಾಣದೇವರಲ್ಲಿದ್ದು, ಹಂಸನಾಮದಿಂದ ಸರ್ವರನ್ನೂ, ರಕ್ಷಿಸುವನೆಂದು ತಿಳಿಯಬೇಕೆಂತ ಸೂಚಿಸಿದ್ದಾರೆ. ಸರ್ವತ್ರವ್ಯಾಪ್ತರೂಪ ಬೃಹತ್ರೇಮ ಸಹ ಆಗುವುದು. ॥೧೯॥

## ಸರ್ವವ್ಯಾಖ್ಯಾನಸಾರಸಂಗ್ರಹ

**೧. ಶ್ರುತಿವಿನುತ–**

ಶ್ರೀಹರಿಯು ಸದಾಗಮ್ಯೈಕವೇದ್ಯನು. ಅನಂತಸಂಖ್ಯಾಕವಾದ ಸಕಲ ಅಪೌರುಷೇಯವಾದ ವೇದಗಳೆಲ್ಲವೂ ಶ್ರೀವಿಷ್ಣುವನ್ನೇ ಮುಖ್ಯ ತಾತ್ಪರ್ಯವನ್ನಾಗಿ ಪ್ರತಿಪಾದಿಸುವುದು. ವೇದಪ್ರತಿಪಾದ್ಯನಾದ ಆ ವೇದಪುರುಷನೇ **ಶ್ರುತಿವಿನುತನು.**

**೨. ಸರ್ವತ್ರದಲಿ-**

ಆ ಶ್ರುತಿತತಿವಿನುತನು. ಚರಾಚರಾತ್ಮಕವಾದ ಈ ಜಗತ್ತಿನಲ್ಲಿ ಸರ್ವತ್ರ ವ್ಯಾಪ್ತನಾಗಿರುವನು. ಸರ್ವ ಕಾಲ-ದೇಶಾದಿಗಳಲ್ಲಿ ಪರಿಪೂರ್ಣನಾಗಿ ತುಂಬಿದ್ದಾನೆ.

**೩. ಭಾರತಿರಮಣನೊಳಗಿದ್ದು -**

ಸರ್ವತ್ರದಲ್ಲಿ ವ್ಯಾಪ್ತನಾಗಿರುವ ಶ್ರುತಿತತಿವಿನುತನು, ಭಾರತೀಪತಿಗಳಾದ ಮುಖ್ಯಪ್ರಾಣದೇವರಲ್ಲಿ ಅಂತರ್ಯಾಮಿಯಾಗಿರುವನು. ಶ್ರೀವಾಯುದೇವರು ಶ್ರೀಹರಿಯ ಮುಖ್ಯಪ್ರತೀಕರು, ಶ್ರೀಮನ್ನಾರಾಯಣನ ಪ್ರಥಮಾಂಗಭೂತರಾದ ಶ್ರೀಭಾರತೀರಮಣರು ಅತಿರೋಹಿತವಿಮಲ

ವಿಜ್ಞಾನಿಗಳು. ಅಜ್ಞಾನಾದಿ ಕಲಬಾಧೆಗಳು ಅವರಿಗೆ ಎಂದೆಂದಿಗೂ ಇಲ್ಲ. ಅಖಿಣಾಕ್ಷಸಮರಾದ ಆ ಭಾರತೀಧವರು ಪರಮಪಾವನರು. ಆದರಿಂದ ಪವಮಾನನಾಮಕರು.

**೪. ಶಾ ಶುಚಿಷತುವೆನಿಸಿ-**

ವಾಯ್ವಂತರ್ಗತ ಭಗವದ್ರೂಪವು **ಶುಚಿಷತ್**-ಎಂಬ ನಾಮದಿಂದ ಪ್ರಖ್ಯಾತವಾಗಿದೆ. ನಿಗಮಸಂಚಾರಿಗಳಾದ ಮುಖ್ಯಪ್ರಾಣದೇವರಲ್ಲಿ ಶ್ರೀಹರಿಯು ಶುಚಿಷತ್-ಎಂಬ ನಾಮದಿಂದ ಅಂತರ್ಯಾಮಿರೂಪದಿಂದ ಇರುವುದರಿಂದಲೇ, ಶ್ರೀವಾಯುದೇವರಲ್ಲಿ ಭಗವದ್ವಿಭೂತಿಸಾನ್ನಿಧ್ಯ ಇತರ ಎಲ್ಲಾ ದೇವತೆಗಳಿಗಿಂತಲೂ ಅತಿಶಯವಾಗಿರುವುದು. ಇದರಿಂದಲೇ, ಪಾವನ ಮೂರ್ತಿಗಳು- ಪವಮಾನಾಖ್ಯ ಪ್ರಾಣರಾಯರು.

ಸಕಲಜಡ ಮತ್ತು ಚೇತನಗಳಲ್ಲಿ ಭಗವದ್ರೂಪಗಳ ಚಿಂತನೆಯನ್ನು ಶ್ರೀವಾಯುಗೋಳಕದ ದ್ವಾರವೇ ಮಾಡಬೇಕು. ಗಂಗಾದಿ ಪವಿತ್ರನದಿಗಳು, ಉಡುಪಿ, ತಿರುಪತಿ- ಇತ್ಯಾದಿ ಪುಣ್ಯಕ್ಷೇತ್ರಗಳು, ತುಲಸೀ, ಅಶ್ವತ್ಥ- ಇತ್ಯಾದಿ ವಸ್ತುಗಳಲ್ಲಿ ವಾಯುದೇವರ, ದ್ವಾರಾ ಶುಚಿಷತ್ ಭಗವದ್ರೂಪದ ಉಪಾಸನೆ ಮಾಡಬೇಕು. ಅಂತೆಯೇ ಸತ್ಪಾತ್ರರಾದ ಚೇತನರು, ಅಧಿಕಾರಿಗಳಾದ ಉತ್ತಮಚೇತನರಲ್ಲಿ ಭಗವದುಪಾಸನಾಕ್ರಮ. ಸಕಲಜಡ ಮತ್ತು ಚೇತನಗಳಲ್ಲಿ ಶ್ರೀಮುಖ್ಯಪ್ರಾಣರಿದ್ದಾರೆ, ಅವರ ಅಂತರ್ಯಾಮಿಯಾಗಿ ಶ್ರೀಹರಿಯು "ಶುಚಿಷತ್"-ನಾಮಕನಾಗಿರುವುದರಿಂದ, ಜಡ- ಚೇತನರನ್ನು ಶ್ರೀಹರಿಯು ತನ್ನ ಸಾನ್ನಿಧ್ಯವಿಶೇಷದಿಂದ **ಪವಿತ್ರ ಮಾಡಿದ್ದಾನೆ**.

**೫. ಅತುಳಮಹಿಮಾನಂದರೂಪನು-**

ಶ್ರೀಹರಿಯ ಮಹಿಮಾವಿಶೇಷಗಳು ಅಪಾರ ಮತ್ತು ಅನಂತ. ಅಸದೃಶ ಮಹಿಮೋಪೇತನಾದ ಆ ಅಪ್ರಮೇಯನು ಅನಂತರೂಪಾತ್ಮಕನು. ಅನಂತ ಕೋಟಿಜೀವರಲ್ಲಿ ಅನಂತಾನಂತರೂಪಗಳಿಂದ ವಿದ್ಯಮಾನನಾಗಿದ್ದು, ಸಕಲವ್ಯಾಪಾರಗಳನ್ನು ಅವರವರ ದ್ವಾರಾ ಮಾಡಿ ಮಾಡಿಸುತ್ತಿರುವನು.

**೭. ಅಚ್ಯುತನೆನಿಸಿ–**

ಶ್ರೀಪರಮಾತ್ಮನು ನಾಶರಹಿತನು. ಶಶ್ವದೇಕಪ್ರಕಾರನು. ಚತುರ್ವಿಧನಾಶದೂರನಾದ್ದರಿಂದ. **ಅಚ್ಯುತನಾಮಕನು.**

**೮. ಪ್ರಾಕೃತಪುರುಷನಂದದಲಿ–**

ಸಕಲಜೀವರ ಸ್ವರೂಪದೇಹದಲ್ಲಿ ಸೂಕ್ಷ್ಮರೂಪದಿಂದ ಬಿಂಬನಾಗಿದ್ದಾನೆ. ಸ್ಥೂಲದೇಹಗತಸಕಲೇಂದ್ರಿಯಗಳಲ್ಲಿ ವ್ಯಾಪಕನಾಗಿದ್ದಾನೆ. ಪ್ರಕೃತಿಸಂಬಂಧವಾದ ಸ್ಥೂಲ ಮತ್ತು ಲಿಂಗಶರೀರವನ್ನುಳ್ಳವರು ಸಕಲ ಜೀವರು. ಅವರಿಗೆ ಪ್ರಾಕೃತಪುರುಷರೆಂದು ಹೆಸರು. ಚಿನ್ಮಯನಾದ ಚಿದಾನಂದಮೂರ್ತಿಯು ತಾನು ಅಪ್ರಾಕೃತನು. ರಜತಮೋಗುಣ ವಿದೂರನು. ತ್ರಿಗುಣಾತೀತನು. ಆದಾಗ್ಯೂ, ಜೀವರ ಚಿದ್ದೇಹದಲ್ಲಿ ಮತ್ತು ಸ್ಥೂಲ ಶರೀರಗಳಲ್ಲಿ ಇದ್ದು ಸಾಮಾನ್ಯಮಾನವರಂತೆ, ನಾನಾವಿಧವಾದ ದೈಹಿಕ-ಮಾನಸಿಕ-ಬೌದ್ಧಿಕ-ಐಂದ್ರಿಕ ವ್ಯಾಪಾರಗಳನ್ನು ಬಿಂಬಕ್ರಿಯಾದ್ವಾರಾ ತಾನೇ ಮಾಡಿ, ದೇವ ದಾನವರ ದ್ವಾರಾ ಮಾಡಿಸಿ, ದೇಹಗತೇಂದ್ರಿಯಗಳಲ್ಲಿ ಪ್ರಕಾಶತೋವ್ಯಾಪ್ತನಾಗಿರುವ ಜೀವನ ದ್ವಾರಾ, ಮಾಡಿ ಮಾಡಿಸುತ್ತಿರುವ ಆ ಅನಂತನಾಮರೂಪಗುಣಾತ್ಮಕನ ಮಹಿಮೆ ಅಸದೃಶ ಮತ್ತು ಅಪರಿಮಿತ. । ॥೧೯॥

## ಪದ್ಯ-೨೦

**ಮೂಲ :**

**ಅತಿಥಿಯೆನಿಸುವನನ್ನಮಯ ಭಾ ।**
**ರತಿರಮಣನೊಳು ಪ್ರಾಣಮಯ ಪ್ರಾ ।**
**ಕೃತ ವಿಷಯ ಚಿಂತನೆಯ ಮಾಡಿಸುವನು ಮನೋಮಯನು ॥**
**ಯತನ ವಿಜ್ಞಾನಮಯ ಬರಲದ ।**
**ಜತನ ಮಾಡಿಸಿ ಆತ್ಮಜಾಯಾ ।**
**ಸುತರ ಸಂಗದಿ ಸುಖವನೀವಾನಂದಮಯನೆನಿಸಿ ॥೨೦॥**

**ಅವತರಣಿಕೆ :**

ಅನ್ನಮಯಾದಿ ಪಂಚಕೋಶಗತಭಗವದ್ರೂಪಗಳ ಕಾರ್ಯವನ್ನು ತಿಳಿಸುತ್ತಾರೆ. ॥೨೦॥

**ಪ್ರತಿಪದಾರ್ಥ :**

**ಅನ್ನಮಯ** – ದೇಹಗತ ಅನ್ನಮಯಕೋಶಾಭಿಮಾನಿಯಾದ ಅನಿರುದ್ಧನು. **ಭಾರತಿರಮಣನೊಳು** – ಭಾರತೀಪತಿ ಮುಖ್ಯಪ್ರಾಣಾಂತರ್ಗತನಾಗಿದ್ದು, **ಅತಿಥಿಯೆನಿಸುವ** – "ಅತಿಥಿ"– ನಾಮಕನಾಗಿದ್ದು, ಕರೆಯಿಸಿಕೊಳ್ಳುತ್ತಾ ಜೀವರಿಗೆ ಕ್ಷುತ್ತನ್ನು (ಹಸಿವೆಯನ್ನು) ಉಂಟುಮಾಡುವನು. **ಪ್ರಾಣಮಯ** – ಪ್ರಾಣಕೋಶಾಂತರ್ಗತನಾದ ಪ್ರದ್ಯುಮ್ನನು ಅಪಾನವಾಯ್ವಂತರ್ಗತನಾಗಿ ಪ್ರಾಣಮಯನೆಂದೆನಿಸಿ, **ಪ್ರಾಕೃತವಿಷಯ** – ಪ್ರಾಕೃತಪದಾರ್ಥಗಳ. **ಚಿಂತನೆಯ ಮಾಡುವನು** – ಚಿಂತನೆಗೆ (ಆಲೋಚನೆಗೆ) ವಿಷಯವನ್ನಾಗಿ ಮಾಡಿಸುವನು. (ಪದಾರ್ಥಗಳ ಚಿಂತನಾರೂಪವಾದ ಕಾರ್ಯ). **ಮನೋಮಯನು** – ಮನೋಮಯ ಕೋಶಾಂತರ್ಗತನಾದ ಸಂಕರ್ಷಣನು ವ್ಯಾನಾಂತರ್ಗತನಾಗಿದ್ದುಕೊಂಡು **ಯತನ** – ಆಯಾಯಾ ವಿಷಯಗಳ ಭೋಗಕ್ಕಾಗಿ ಪ್ರಯತ್ನವನ್ನು ಜೀವರ ದ್ವಾರಾ ಮಾಡಿಸುವನು. **ವಿಜ್ಞಾನಮಯ** – ವಿಜ್ಞಾನಮಯಕೋಶಗತನಾದ ಶ್ರೀವಾಸುದೇವನು, ಉದಾನವಾಯ್ವಂತರ್ಗತನಾಗಿದ್ದು, **ಬರಲದ** – ಪ್ರಯತ್ನದಿಂದ ಲಭ್ಯವಾದ ವಿಷಯಗಳನ್ನು, **ಜತನ ಮಾಡಿಸಿ** = ಸಿದ್ಧಮಾಡಿಸುವನು. **ಆನಂದಮಯ ನೆನಿಸಿ** = ಆನಂದಮಯಕೋಶಾಂತರ್ಗನಾಗಿ. **ಆತ್ಮ ಜಾಯಾಸುತರ ಸಂಗದಿ** = ತಾನು-ತನ್ನ ಪತ್ನಿ-ತನ್ನ ಮಕ್ಕಳು ಇವರುಗಳ ಸಹಿತರಾಗಿ ಭೋಜನಮಾಡಿಸಿ, **ಸುಖವನೀವ** = ಆನಂದವನ್ನುಂಟುಮಾಡುವನು. ॥೯೨॥

# ವ್ಯಾಖ್ಯಾನಗಳು

## ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಅನ್ನಮಯಾದಿ ಕೋಶಗತ ಭಗವದ್ರೂಪದ ಕಾರ್ಯ ಹೇಳ್ತಾರೆ.

ಹಂಸಾದಿ ಹದಿನೆಂಟು ರೂಪಗಳಲ್ಲಿ ಅತಿಥಿರೂಪ ಅತಿಥಿಗಳಾದ ಭಗವದ್ಭಕ್ತರ ಅಂತರ್ಗತದಲ್ಲಿ ಇರೋದಾಗಿ ಅದೆ ಮತ್ತು ದೇಹಗತ ಅನ್ನಮಯ ಕೋಶದಲ್ಲಿ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಅನ್ನಮಯನಾಮಕ ಪರಮಾತ್ಮ ಕರ್ಮಫಲಭೋಗೇಚ್ಛಾ ಮಾಡಿ ಅತಿಥಿಯಂತ ಕರಸಿಕೊಂಡು ಕ್ಷುತ್ತು ಉಂಟುಮಾಡುವನು. ಪ್ರಾಣಮಯಕೋಶದಲ್ಲಿ, ಅಪಾನವಾಯ್ವಂತರ್ಗತ ಪರಮಾತ್ಮ ಕರ್ಮಫಲಭೋಗಕ್ಕೆ ಸಾನುಕೂಲನಾಗಿ ಪ್ರಾಣಮಯ ನಾಮಕವಾಗಿದ್ದು, ಪದಾರ್ಥಗಳ ಚಂದಾಗಿ ಆಲೋಚನೆಯು ಮಾಡಿಸುವನು. ಮನೋಮಯಕೋಶಾಂತರ್ಗತ ವ್ಯಾನಾಂತರ್ಗತ ಮನೋಮಯ ಶಬ್ದವಾಚ್ಯನಾದ ಪರಮಾತ್ಮ, ಆಯಾಭೋಜನದ್ರವ್ಯಗಳ ಸಂಪಾದನೆಗಾಗಿ ಯತ್ನ ಮಾಡಿಸತಾನೆ. ವಿಜ್ಞಾನಮಯಕೋಶಗತ ಉದಾನಾಂತರ್ಗತ ವಿಜ್ಞಾನ ನಾಮಕ ಪರಮಾತ್ಮ, ಯತ್ನದಿಂದ ಲಭ್ಯವಾಗಿ ಬಂದ, ಆ ಭೋಜನದ್ರವ್ಯಗಳ ಸಿದ್ಧಮಾಡಿಸಿ ನಂತರ, ಆನಂದಮಯಕೋಶಗತ ಸಮಾನ ಪ್ರಾಣಾಂತರ್ಗತನಾಗಿ, ಆನಂದಮಯನೆನಿಸಿದ, ಆನಂದಮಯನಾದ ಪರಮಾತ್ಮ, ಆಯಾ ಪದಾರ್ಥಗಳ, ತಾನು ತನ್ನ ಹೆಂಡತಿ ತನ್ನ ಮಕ್ಕಳು-ಇವರುಗಳ ಸಹಿತವಾಗಿ ಭೋಜನ ಮಾಡಿಸಿ, ಸುಪ್ರಸನ್ನ ಕೊಡೂವನಾಗತಾನೆ, ಅಂತು, ಪಂಚಕೋಶಗಳಲ್ಲಿ ಪಂಚಪ್ರಾಣಾಂತರ್ಗತ ಶ್ರೀಪರಮಾತ್ಮನ್ನ ಅನುಸಂಧಾನದಿಂದ ಸ್ಮರಣೆ ಪೂರ್ವಕ, ಭೋಜನಮಾಡಬೇಕಂತ ತಾತ್ಪರ್ಯ. ಈ ಹಂಸ ಮೊದಲು ಹದಿನೆಂಟು ಕಳಾಶ್ರುತ್ಯರ್ಥ ಈ ಸಂಧಿಅಂತ್ಯದಲ್ಲಿ ವಿವರವಾಗಿ ತಿಳಿಸಲ್ಪಟ್ಟಿದೆ. ॥೨೦॥

### ೩. ಭಾವದರ್ಪಣ

ಪಂಚಕೋಶಗತ ಅನ್ನಾದಿ ಭಗವದ್ರೂಪ ಮಾಡೋ ಕ್ರಮ ಪೇಳುತ್ತಾರೆ। ಅತಿಥಿ ॥೨೦॥

### ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ

'ಅತಿಥಿ' ಇತಿ॥ ವಾಯೌ ಪ್ರಾಣಮಯಃ ॥ 'ಯತನ'- ಯತ್ನಗಃ ॥ 'ಅದು'-ಪೂರ್ವವಿಷಯಾಃ॥ ಕಾಠಕೇ ಚ ಶ್ರೂಯತೇ ಹಿ॥ ಹಂಸಃ ಶುಚಿಷತ್ ವಸುರಂತರಿಕ್ಷಸದ್ಧೋತಾ ವೇದಿಷತ್ ಅತಿಥಿಃ ದುರೋಣಸತ್॥ ನೃಷದ್ವರಸದೃತಸದ್ವ್ಯೋಮಸದಬ್ಜಾ ಗೋಜಾ ಅದ್ರಿಜಾ ಋತಂ ಬೃಹತ್॥ ಇತಿ॥ ಪೂಜ್ಯಚರಣಾಬ್ಜ-"ನಿತ್ಯಂ ಹೀನೋಽಖಿಲೈಃ ದೋಷೈಃ ಸಾರರೂಪಃ ಯತೋ ಹರಿಃ॥ ಹಂಸ ಇತ್ಯುಚ್ಯತೇ ತಸ್ಮಾತ್ ವಾಯುಸ್ಥಃ ಶುಚಿಷತ್ ಸ್ಮೃತಃ ವರಸುವರ್ಣಸುರಿತ್ಯುಕ್ತಃ ಸ ಏವಾಪ್ಯಂತರಿಕ್ಷಗಃ॥ ಹೋತಾ ಸರ್ವೇಂದ್ರಿಯಾದಿಸ್ಥಃ ವೇದ್ಯಾಂ ಪೂಜ್ಯಶ್ಚ ವೇದಿಷತ್॥ ಅತ್ಯನ್ನಸ್ಯಾತಿಥಿಃ ಪ್ರೋಕ್ತಃ ಯಸ್ಮಾದನ್ನಂ ಭುನಕ್ತ್ಯತಃ॥ ಸದ್ರೋಣಕಲಶೇ ಸೋಮೇ ಸ್ಥಿತ ಉಕ್ತಃ ದುರೋಣಸತ್॥ ನೃಷು ಸ್ಥಿತಶ್ಚ ದೇವೇಷು ವರೇಷ್ವಪಿ ಸ ಏವ ತು॥ ಋತರೂಪೀ ತಥಾ ವೇದೇ ವ್ಯೋಮಾಖ್ಯಪ್ರಕೃತಾವಪಿ ॥ ವ್ಯೋಮಂ ಜಗದಿದಂ ಯಸ್ಮಾತ್ ಸದ್ವ್ಯೋಮ ಶ್ರೀರುದಾಹೃತಾ॥ ಅಬ್ಜಗೋಜಾದ್ರಿಜೇಷ್ವೇವ ವಾಸ್ತೇಽಬ್ಜಾದ್ಯಾಖ್ಯಸ್ತತಃ॥ ತದೈವ ತೇಷು ಮುಕ್ತೇಷು ಗತಾಸ್ತೇ ವಿಷ್ಣುಮಿತ್ಯತಃ॥ ವೇದ್ಯೈಃ ಮುಖ್ಯತಯಾ ಪ್ರೋಕ್ತಃ ಋತಮಿತ್ಯೇವ ಚೋಚ್ಯತೇ॥ ಬೃಹತ್- ಪೂರ್ಣಗುಣತ್ವಾಚ್ಚ ಸ ಏವ ಪುರುಷೋತ್ತಮಃ" ॥ ಇತಿ ॥೨೦॥

## ಕನ್ನಡಾರ್ಥ

ವಾಯುದೇವರಲ್ಲಿ ಪ್ರಾಣಮಯರೂಪ. ಯತ್ನದಲ್ಲಿ ವಿಜ್ಞಾನರೂಪ, 'ಅದು'- ಎಂದರೆ, ಪೂರ್ವದ ವಿಷಯಗಳೆಂದು ತಿಳಿಯಬೇಕು. ಕಾಠಕ ಉಪ

ನಿಷತ್ತಿನಲ್ಲಿ- "ಹಂಸಃ- ಶುಚಿಷತ್"- ಎಂಬುದಾಗಿ, ಈ ರೂಪಗಳನ್ನು ನಿರೂಪಿಸಲಾಗಿರುತ್ತದೆ.

ಶ್ರೀಮದಾನಂದತೀರ್ಥಭಗವತ್ಪಾದರು, ಆ ಭಾಷ್ಯದಲ್ಲಿ ಈ ರೀತಿಯಾಗಿ ನಿರೂಪಿಸಿರುತ್ತಾರೆ.

"ಹಂಸಃ"– ಸದಾ ದೋಷಗಳಿಂದ ವಿಹೀನನು ಹಾಗೂ ಸಾರ ಸ್ವರೂಪನು, ಆದರಂತೆ, ಶುಚಿ-ವಾಯು, ಇವರಲ್ಲಿ ಇರುವುದರಿಂದ, ಶ್ರೀ ಹರಿಯು 'ಶುಚಿಸತ್'- ಎಂದು ಹೇಳಿಸಿಕೊಳ್ಳುವನು, ಉತ್ತಮಸುಖ ರೂಪನಾದುದರಿಂದ, 'ವಸು'- ಎಂದು ಕರೆಯಲ್ಪಡುವನು. ಅಂತರಿಕ್ಷದಲ್ಲಿ ಇರುವುದರಿಂದ ಅಂತರಿಕ್ಷನಾಮಕನು. ಸರ್ವೇಂದ್ರಿಯಗಳಲ್ಲಿದ್ದು, ವಿಷಯ ಗಳನ್ನು ಹೋಮಿಸುವುದರಿಂದ, ಹೋತೃನಾಮಕನು. ಯಜ್ಞವೇದಿಗಳಲ್ಲಿ ಪೂಜಿತನಾದುದರಿಂದ,'ವೇದಿಷತ್'-ಎಂದು ಕರೆಯಿಸಿಕೊಳ್ಳುವನು. ಅತಿಶಯಿತ ವಾದ ಅನ್ನವುಳ್ಳವನಾದುದರಿಂದ 'ಅತಿಥಿ' ಎಂದು ಹರಿಯನ್ನು ಕರೆಯು ತ್ತಾರೆ. ಏಕೆಂದರೆ, ಛಂದೋಗ್ಯಶ್ರುತಿಯಲ್ಲಿ-'ಅನ್ನಂಥ'- ಎಂದು ಶ್ರೀಹರಿಗೆ ಕರೆಯುವರೆಂದು ಹೇಳಲಾಗಿರುತ್ತದೆ. ದ್ರೋಣಕಲಶಗಳಲ್ಲಿರುವ ಸೋಮ ದಲ್ಲಿ ಇರುವುದರಿಂದ, 'ದುರೋಣಸತ್'– ಎಂದು ಹರಿಯ ಹೆಸರು. ವರಿಷ್ಠ ರಾದ ದೇವತೆಗಳಲ್ಲಿ ಹಾಗೂ ನರರಲ್ಲಿ ಇರುವುದರಿಂದ, 'ನೃಷದ್ವರಸತ್',– ಎಂದು ಹೆಸರು. 'ಋತ' (ನಿಯಮೋಸತ್ಯಾರ್ಥಗಳಾದುದರಿಂದ), ನಾಮಕ ಗಳಾದ ವೇದಗಳಲ್ಲಿ ಇರುವುದರಿಂದ,'ಋತಸತ್'-ಎಂದು ಹೆಸರು. 'ವ್ಯೋಮ' ವೆಂಬ ಪ್ರಕೃತಿಯೆನಿಸಿದ ಲಕ್ಷ್ಮೀದೇವಿಯಲ್ಲಿ ಇರುವುದರಿಂದ,'ವ್ಯೋಮಸತ್' ವೆನ್ನುತ್ತಾರೆ. ಅಬ್ಜ-ಜಲದಲ್ಲಿ ಜನಿಸುವ ವಸ್ತು 'ಗೋಜ'-ಭೂಮಿಯಲ್ಲಿ ಹುಟ್ಟುವ ವಸ್ತು, 'ಅದ್ರಿಜ'– ಪರ್ವತಗಳಲ್ಲಿ ಹುಟ್ಟುವ ವಸ್ತುಗಳು. ಇವು ಗಳಲ್ಲಿ ಇರುವುದರಿಂದ, ಹರಿಯನ್ನು ಕ್ರಮವಾಗಿ 'ಅಬ್ಜ, ಗೋಜ, ಅದ್ರಿಜ'- ಎಂದು ಕರೆಯುತ್ತಾರೆ. ಅದರಂತೆಯೇ, ಋತ ಮುಕ್ತರಲ್ಲಿ ನಿಯಾಮಕನಾಗಿ ಜಾತನಾಗಿ ಇರುವುದರಿಂದ, 'ಋತಜಾ'- ಎನ್ನುತ್ತಾರೆ. 'ಋ-ಗತೌ'- ಎಂಬ ಧಾತುವಿನಿಂದ ಸಿದ್ಧವಾದ ಋತಶಬ್ದಕ್ಕೆ ಹೊಂದಿದವರು- ಎಂದು ಅರ್ಥ

ವಾಗುತ್ತದೆ. ಅಂದರೆ, ನಾರಾಯಣನನ್ನು ಹೊಂದಿದವರು-ಮುಕ್ತರು-ಎಂದು ಅಭಿಪ್ರಾಯ. ಆದುದರಿಂದ, ಮುಕ್ತರೆಂದೇ 'ಋತ'-ಶಬ್ದಾರ್ಥ. ಅವರಲ್ಲಿ ನಿಯಾಮಕನಾಗಿ ಪ್ರಾದುರ್ಭವಿಸುವುದರಿಂದ, 'ಋತಜಾ'- ಎಂದು ಹೆಸರು. ವೇದಗಳಿಗೆ ಋತಗಳೆಂದೂ ಕರೆಯುವುದುಂಟು. ಆದುದರಿಂದ, ವೇದಗಳಿಗೆ ಮುಖ್ಯಪ್ರತಿಪಾದ್ಯನಾದುದರಿಂದ, 'ಋತ'- ಎಂದು ಶ್ರೀಹರಿಯನ್ನು ಕರೆಯುತ್ತಾರೆ. ಗುಣಪರಿಪೂರ್ಣನಾದುದರಿಂದ, 'ಬೃಹತ್'- ಎಂದು ಹೇಳುತ್ತಾರೆ. ಆ ಪುರುಷೋತ್ತಮನೇ ತತ್ತದಂತರ್ಗತನಾದುದರಿಂದ, ತತ್ತನ್ನಾಮಕನು-ಎಂಬುದಾಗಿ ಕೂರ್ಮಪುರಾಣದ ವಚನಗಳಿವೆಯೆಂದು ನಿರೂಪಿಸಿರುತ್ತಾರೆ. ॥೨೦॥

**೪. ಭಾವಪ್ರಕಾಶಿಕೆ**

ಮಧ್ಯಾಹ್ನಕಾಲಕ್ಕೆ ಮನೆಗೆ ಬರುವ ಅತಿಥಿಗಳಲ್ಲಿದ್ದು, ಅನ್ನಮಯನೆನಿಸುವನು. ಭಾರತೀರಮಣರಾದ ಮುಖ್ಯಪ್ರಾಣದೇವರಲ್ಲಿದ್ದು, ಪ್ರಾಣಮಯನೆನಿಸುವನು. ಮನಸ್ಸಿನಲ್ಲಿ ಮನೋಮಯನೆಂಬ ಹೆಸರುಳ್ಳವನಾಗಿದ್ದು, ಪ್ರಕೃತಿಸಂಬಂಧವಾದ ವಿಷಯಚಿಂತನೆಯನ್ನು ಕೊಡಿಸುವನು. ವಿಜ್ಞಾನಮಯನೆಂದೆನಿಸಿ, ಪ್ರಯತ್ನವನ್ನು ಮಾಡಿಸುವನು. ಆನಂದಮಯನು-ತಾನು, ತನ್ನ ಹೆಂಡರು ಮಕ್ಕಳೆಂಬ ಅಭಿಮಾನವನ್ನು ಹುಟ್ಟಿಸಿ, ಅವರ ಸಂಗದ ಸುಖವನ್ನು ಕೊಡಿಸುವನು. ॥೨೦॥

**೫. ಶ್ರೀಗುರುಹೃದಯ ಪ್ರಕಾಶಿಕೆ**

ಅದನವೆಂಬ ಭಕ್ಷಣೆಗೆ ಯೋಗ್ಯವಾದ್ದರಿಂದ, ಅನ್ನದಲ್ಲಿದ್ದು, ಅತಿಥಿ ಎಂದು, ಪ್ರಚುರಾನ್ನರಸ ಉಳ್ಳವನಾದ್ದರಿಂದ, ಅನ್ನಮಯನೆಂದು ಕರೆಸುವನು. ಭಾರತೀಶ ಪ್ರಾಣದೇವರಲ್ಲಿದ್ದು, ಪ್ರಕೃಷ್ಟಚೇಷ್ಟಕ ಪ್ರಾಣಮಯನೆನಿಸುವನು. ಮನಸ್ಸಿನಲ್ಲಿದ್ದು, ಪ್ರಾಕೃತವಿಷಯಚಿಂತನೆಯನ್ನು ಪ್ರೇರಿಸಿ, ಪ್ರಕೃಷ್ಟಜ್ಞಾನಸ್ವರೂಪನಾದ್ದರಿಂದ, ಮನೋಮಯನೆನಿಸುವನು. ಯತ್ನವೆಂಬ ಪ್ರಾರಂಭಕಾರ್ಯದಲ್ಲಿದ್ದು, ಕಾರ್ಯಸಿದ್ಧಪಡಿಸಿ, ವಿಶಿಷ್ಟಜ್ಞಾನಸ್ವರೂಪ ವಿಜ್ಞಾನಮಯನೆನಿಸುವನು. ಆತ್ಮನೆಂಬ ದೇಹ, ಜಾಯಾ-ಎಂಬ ಪತ್ನೀ, ಸುತರೆಂಬ ಮಕ್ಕಳು-ಮುಂತಾದವರ ಸಂಬಂಧ ಮೂಲಕ ಬಾಹ್ಯಸುಖ ಕೊಟ್ಟು, ಆನಂದಮಯಕೋಶದಲ್ಲಿದ್ದು, ಸ್ವಾತ್ಮಕಾನಂದಾತಿಶಯ ಆನಂದಮಯನೆನಿಸುವನು. ॥೨೦॥

# ಸರ್ವವ್ಯಾಖ್ಯಾನಸಾರಸಂಗ್ರಹ

**೧. ಭಾರತೀರಮಣನೊಳು-**

ಪಂಚಕೋಶಗತ ಶ್ರೀವಾಯುದೇವರ ಪ್ರಾಣ-ಅಪಾನ-ವ್ಯಾನ-ಉದಾನ-ಸಮಾನ- ಎಂಬ ಪಂಚರೂಪಗಳಲ್ಲಿ ಶ್ರೀಹರಿಯು ಅಂತರ್ಗತನಾಗಿದ್ದು, ಕೋಶಗತವ್ಯಾಪಾರಗಳನ್ನು ನಡೆಯಿಸುವನು.

೨. ದೇಹಗತ ಪ್ರಥಮಕೋಶವು **ಅನ್ನಮಯಕೋಶವು.** ಇದು ಪೃಥ್ವೀಪ್ರಾಚುರ್ಯವಾದದ್ದು. ಕೋಶಗತ ಭಗವದ್ರೂಪ-**ಶಾಂತೀಪತಿ** ಅನಿರುದ್ಧ, ಅನ್ನಮಯಕೋಶದಲ್ಲಿ ಪ್ರಾಣಾಂತರ್ಗತನಾಗಿದ್ದು, **ಶಾಂತೀಪತಿ** ಅನಿರುದ್ಧನು, **ಅತಿಥಿ**-ಎಂಬ ನಾದುದಿಂದ, ಅನ್ನಮಯಶಬ್ದವಾಚ್ಯನಾಗಿದ್ದಾನೆ. ಕಾರ್ಯ-ಜೀವರಿಗೆ ಹಸಿವೆಯನ್ನುಂಟುಮಾಡುತ್ತಾನೆ.

**೩. ಪ್ರಾಣಮಯ-**

ಪ್ರಾಣಮಯಕೋಶವು ದ್ವಿತೀಯಕೋಶವು. ಇದು ಅಪ್‌ತತ್ತ್ವಪ್ರಾಚುರ್ಯವಾದದ್ದು. ಕೋಶಗತ ಭಗವದ್ರೂಪ-ಕೃತೀಪತಿ ಪ್ರದ್ಯುಮ್ನ. ಈ ಕೋಶದಲ್ಲಿ ಅಪಾನನಾಮಕ ವಾಯ್ವಂತರ್ಗತನಾಗಿ ಕೃತಿರಮಣ ಪ್ರದ್ಯುಮ್ನನು ಪ್ರಾಕೃತವಿಷಯಗಳ ಚಿಂತನಾರೂಪವಾದ ಕಾರ್ಯವನ್ನು ಮನಸ್ಸಿನಲ್ಲಿ ಉಂಟುಮಾಡುವನು. ಪ್ರಾಕೃತವಿಷಯಗಳಾದ ಶಬ್ದ-ಸ್ಪರ್ಶ-ರೂಪ-ರಸ-ಗಂಧ-ಇವುಗಳ ಚಿಂತನೆಯನ್ನು ಮನಸ್ಸಿನಲ್ಲಿ ಹುಟ್ಟಿಸುವನು.

**೪. ಮನೋಮಯನು–**

ತೃತೀಯಕೋಶವು ಮನೋಮಯಕೋಶವು. ಇದು ತೇಜೋಮಯವಾದದ್ದು. ಜಯಾರಮಣ ಸಂಕರ್ಷಣನು ಕೋಶಾಭಿಮಾನಿಯು. ವ್ಯಾನನಾಮಕ ವಾಯ್ವಂತರ್ಗತನಾಗಿ, ಯತ್ನರೂಪವಾದ ಕಾರ್ಯವನ್ನು ಪ್ರೇರಿಸುವನು. ಮನಸ್ಸಿನಲ್ಲಿ ಹುಟ್ಟಿದ ಪ್ರಾಕೃತವಿಷಯಗಳ ಚಿಂತನೆಯ ಪೂರ್ತಿಗಾಗಿ. ಅಂದರೆ, ಆ ವಿಷಯಗಳು ಲಭ್ಯವಾಗಲು, ಯತ್ನರೂಪವಾದ ಕ್ರಿಯೆಯನ್ನು ಜೀವರದ್ವಾರಾ ಮಾಡಿಸುವನು.

**೫. ವಿಜ್ಞಾನಮಯ-**

ವಿಜ್ಞಾನಮಯಕೋಶವು ಚತುರ್ಥಕೋಶವು. ವಾಯುತತ್ತ್ವಪ್ರಾಚು

ರ್ಯವಾದದ್ದು. ಉದಾನವಾಯ್ವಂತರ್ಗತನಾಗಿ, ಮಾಯಾಪತಿ ವಾಸುದೇವನು ಕೋಶಾಭಿಮಾನಿಯಾಗಿದ್ದು, ಯತ್ನದ್ವಾರಾ, ಅಭ್ಯವಾದ ಪ್ರಾಕೃತ ವಿಷಯಗಳನ್ನು ಸ್ಥಿರಗೊಳಿಸುವನು. (**ಬರಲದ ಜತನ ಮಾಡಿಸಿ**).

**೬. ಆನಂದಮಯನೆನಿಸಿ–**

ಆನಂದಮಯಕೋಶವು ಪಂಚಮಕೋಶವು. ಶ್ರೀಲಕ್ಷ್ಮೀಪತಿ ನಾರಾಯಣನು **ಕೋಶಾಭಿಮಾನಿಯು**. ಸಮಾನನಾಮಕ ವಾಯ್ವಂತರ್ಗತನಾಗಿ, ತನು (ಆತ್ಮ)-ಪತ್ನೀ (ಜಾಯಾ)-ಮಕ್ಕಳ (ಸುತರ) ಜೊತೆಯಲ್ಲಿ ಪ್ರಾಕೃತವಿಷಯಗಳನ್ನು ಭೋಗಕ್ಕೆ ತಂದು, ಉಂಡು ಉಣಿಸಿ, ಜೀವರನ್ನು ಆನಂದಪಡಿಸುವನು. (**ಸುಖವನೀವ**) ॥೨೦॥

## ಪದ್ಯ-೨೧

**ಮೂಲ :**

**ಇನಿತು ರೂಪಾತ್ಮನಿಗೆ ದೋಷಗ ।**
**ಳೆನಿತು ಬಪ್ಪವು ಪೇಳ್ವೆ ಬ್ರಾ ।**
**ಹ್ಮಣಕುಲೋತ್ತಮರಾದವರು ನಿಷ್ಕಪಟ ಬುದ್ಧಿಯಲಿ ॥**
**ಗುಣನಿಯಾಮಕ ತತ್ತ್ವದಾಹ್ವಯ ।**
**ನೆನಿಸಿ ಕಾರ್ಯವ ಮಾಳ್ಪ ದೇವನ ।**
**ನೆನೆದ ಮಾತ್ರದಿ ದೋಷರಾಶಿಗಳೆಲ್ಲ ಕೆಡುತಿಹವು ॥೨೧॥**

**ಅವತರಣಿಕೆ :**

ಇಂತು, ಅನಂತರೂಪಾತ್ಮಕನಾದ ಶ್ರೀಪರಮಾತ್ಮನಿಗೆ ದೋಷವೆಲ್ಲಿಂದ ಬರಬೇಕು ? ನಿರ್ದೋಷನಾದ ಆ ನಿರಂಜನನು ಸರ್ವತ್ರವ್ಯಾಪಕನಾಗಿದ್ದು, ಆಯಾಯಾ ವಸ್ತುಗಳ ಹೆಸರಿನಿಂದಲೇ ಕರೆಯಿಸಿಕೊಳ್ಳುತ್ತಾ, ಸರ್ವಕಾರ್ಯಗಳನ್ನೂ ತಾನೇ ಮಾಡುತ್ತಿರುವ ಆ ಅಪಾರಗುಣಗಣಸ್ತೋಮನನ ಸ್ಮರಣೆ ಮಾತ್ರದಿ, ಸಕಲದುರಿತಗಳ ಪರಿಹಾರ- ಎಂದು ತಿಳಿಸುತ್ತಾರೆ. ॥೨೧॥

**ಪ್ರತಿಪದಾರ್ಥ :**

**ಇನಿತು** = ಪೂರ್ವೋಕ್ತ ಪ್ರಕಾರ. ನಾನಾ ಅಧಿಷ್ಠಾನಗಳಲ್ಲಿ ವ್ಯಾಪ್ತನಾಗಿರುವ, **ರೂಪಾತ್ಮನಿಗೆ** = ನಾನಾರೂಪಗಳಿಂದ ವಿದ್ಯಮಾನನಾಗಿರುವ ಶ್ರೀಪರಮಾತ್ಮನಿಗೆ. **ದೋಷಗಳು ಎನಿತು ಬಪ್ಪವು** = ದೋಷಗಳು ಎಲ್ಲಿಂದ ಬರಬೇಕು? **ಬ್ರಾಹ್ಮಣಕುಲೋತ್ತಮರಾದವರು** = ಬ್ರಹ್ಮಜ್ಞಾನಿಗಳ ಸಮೂಹದಲ್ಲಿ ಶ್ರೇಷ್ಠರಾದವರು. **ನಿಷ್ಕಪಟ ಬುದ್ಧಿಯಲಿ** — ಕಪಟರಹಿತವಾದ ಕೇವಲ ಭಕ್ತಿಪೂರ್ವಕವಾದ ಬುದ್ಧಿಯಿಂದ, **ಹೇಳಿರೈ** = ಹೇಳುವವರಾಗಿರಿ. **ಗುಣ** = ಸ್ಥೂಲದೇಹಗತ ಮತ್ತು ಲಿಂಗದೇಹಗತ ಗುಣತ್ರಯಗಳಲ್ಲಿ. **ತತ್ತದಾಹ್ವಯನೆನಿಸಿ** = ಆಯಾಯಾ ಗುಣಗಳ ಹೆಸರಿನಿಂದಲೇ ಕರೆಯಿಸಿಕೊಳ್ಳುತ್ತಾ. **ಕಾರ್ಯವ ಮಾಳ್ಪ** = ಗುಣಜನ್ಯವಾದ ಸಕಲಕ್ರಿಯಾದಿಗಳನ್ನು ತಾನೇ ಮಾಡಿಸುತ್ತಿರುವ. **ದೇವನ** = ಸರ್ವೋತ್ತಮನನ್ನು, **ನೆನೆದ ಮಾತ್ರದಿ** = ಧ್ಯಾನಪೂರ್ವಕ ಸ್ಮರಣಮಾತ್ರದಿಂದ. **ದೋಷರಾಶಿಗಳೆಲ್ಲ** = ಪಾಪಸಮೂಹಗಳು. **ಕೆಡುತಿಹವು** = ನಾಶವಾಗುವುವು. ॥೨೦॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮನ ಸ್ಮರಣೆಮಾತ್ರದಿಂದ, ಸರ್ವದೋಷವೂ ಪರಿಹಾರವಾಗತಕ್ಕದೆಂದು ಹೇಳುತ್ತಾರೆ.

ಈ ಪೂರ್ವೋಕ್ತಪ್ರಕಾರ, ಅನ್ನಮಯಾದಿ ಕೋಶಗಳಲ್ಲಿ, ಏಕಾದಶೇಂದ್ರಿಯಗಳಲ್ಲಿ, ಸ್ಥೂಲದೇಹಗತ, ಲಿಂಗದೇಹಗತ ಗುಣತ್ರಯಗಳಲ್ಲಿ ಅದರದರಲ್ಲಿ ವಿದ್ಯಮಾನನಾಗಿ, ಅದರದರ ನಾಮವುಳ್ಳವನೆನಿಸಿ, ರೂಪವುಳ್ಳವನಾಗಿಯೂ, ಆಯಾ ಇಂದ್ರಿಯಗಳಿಗೆ ನಿಯಾಮಕನಾಗಿಯೂ, ಆಯಾ

ಇಂದ್ರಿಯಗಳ ಕಾರ್ಯಗಳ ಮಾಡತಾನೆ-ಎಂದರೆ, ಬಿಂಬಕ್ರಿಯಾದ್ವಾರಾ ಮಾಡಿ, ಜೀವನಿಂದ ಮಾಡಿಸತಕ್ಕ, ಕ್ರೀಡಾದಿ ಗುಣವಿಶಿಷ್ಟನಾದ ಶ್ರೀಪರಮಾತ್ಮನ್ನ, ಕಪಟರಹಿತನಾಗಿ, ಕೇವಲಭಕ್ತಿಯುಕ್ತವಾದ ಬುದ್ಧಿಯಿಂದ, ಹೃದಯಾಕಾಶದಲ್ಲಿ ಧ್ಯಾನಪೂರ್ವಕ ಸ್ಮರಣೆ ಮಾಡಿದ ಮಾತ್ರದಿಂದ, ಜೀವನಿಗೆ ಪಾಪಗಳು ಹ್ಯಾಂಗೆ ಬರೋವು- ಅಂದರೆ, ಬರಲಾರವು- ಎಂತ ಅರ್ಥ. ಜ್ಞಾನವೆಂಬೋ ಸೂರ್ಯ ಉದಯವಾದ ಮ್ಯಾಲೆ, ಅಜ್ಞಾನವೆಂಬ ಅಂಧಕಾರ ಆ ಸ್ಥಳಕ್ಕೆ ಬರೋದೆ- ಎಂದರೆ, ಬರಲಾರದು- ಎಂತ ತಾತ್ಪರ್ಯ. ಬ್ರಹ್ಮಜ್ಞಾನಿಗಳ ಸಮೂಹದಲ್ಲಿ, ಉತ್ತಮರಾದ ಜ್ಞಾನಿಗಳಾದವರು, ದೋಷಗಳು ಬರೋ ಹಾಂಗಿದ್ದರೆ ಹೇಳೋವರಾಗಿರಿ. ಪೂರ್ವೋಕ್ತಪ್ರಕಾರ, ನಿಷ್ಕಪಟಬುದ್ಧಿಯಲ್ಲಿ ಅನುಸಂಧಾನವುಳ್ಳ ಭಕ್ತರಿಗೆ ದೋಷಗಳೇ, ನಾಶವಾಗಿ, ದಿವ್ಯ ಜ್ಞಾನೋದಯವಾಗಿ, ಸುಖಿಸೋವರಾಗತಾರೆ. ಮುಖ್ಯ ಶ್ರೀಪರಮಾತ್ಮನ್ನ ಭಕ್ತಿಪುರಸ್ಸರವಾಗಿ ನೆನದವರಿಗೆ, ಪಾಪಗಳು ಲೇಪವಾಗೋದಿಲ್ಲ- ಎಂತ ತಾತ್ಪರ್ಯ. ॥೭೦॥

**೩. ಭಾವದರ್ಪಣ**

ಸತ್ವಾದಿ ಗುಣಗಳಾಂತರ್ಗತನಾಗಿ, ಕರ್ಮಾನುಸಾರ, ಕಾರ್ಯಮಾಡತಕ್ಕಂಥ ದೇವನಿಗೆ ದೋಷಗಳಿಲ್ಲೆಂತ ಹೇಳುತ್ತಾರೆ. ಇನಿತು। "ಅನಾದಿಯೋಗ್ಯತಾ ಕರ್ಮ ಸಾಪೇಕ್ಷ್ಯೋಹಿ ಕರೋತ್ಯಜಃ"- ಇತಿ ಸತ್ತತ್ತ್ವರತ್ನಮಾಲೋಕ್ತೇಃ ॥೭೦॥

**೪. ಶ್ರೀವ್ಯಾಸದಾಸ ಸಿದ್ಧಾಂತಕೌಮುದೀ**

'ಇನಿತು'- ಇತಿ॥ 'ನೆನದ'- ಇತಿ॥ "ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿ ತೇ"- ಇತಿ ಸ್ವಪ್ರಪನ್ನ ಮಾಯಾನಿರಸನ ಸಮರ್ಥಸ್ಯ ತದಸಂಭವ (ಏವ) ಇತಿ ಭಾವಃ. ॥೭೦॥

## ಕನ್ನಡಾರ್ಥ

"ನನ್ನನ್ನೇ ಯಾರು ಶರಣು ಬರುತ್ತಾರೋ, ಅವರೇ ನಾನು ಹಾಕಿದ ಈ ಮಾಯಾ (ಪ್ರಕೃತಿ ಬಂಧ)ವನ್ನು ದಾಟುತ್ತಾರೆ."- ಎಂದು ಹೇಳಿದಂತೆ, ತನ್ನನ್ನು ಶರಣು ಹೊಂದಿದವರ ಸಂಸಾರಬಂಧವನ್ನು ಕಳೆಯಲು ಸಮರ್ಥನಾದ ಶ್ರೀಹರಿಯು ಭಕ್ತರ ದೋಷರಾಶಿಗಳನ್ನು ನೆನೆದ ಮಾತ್ರದಿ ಇಲ್ಲದಂತೆ, ಅವುಗಳಿಂದ ಯಾವ ಪಾಪ ಮುಂತಾದ ಬಾಧಕಗಳಾಗದಂತೆ ಮಾಡುತ್ತಾನೆ."- ಎಂದು ಈ ಪದ್ಯದ ಭಾವವಿರುತ್ತದೆ. ॥೨೦॥

### ೪. ಭಾವಪ್ರಕಾಶಿಕೆ :

ಹೀಗೆ ಅನಂತಾನಂತರೂಪಗಳಿಂದ ಸಾತ್ವಿಕ ರಾಜಸ ತಾಮಸ ಜೀವರಲ್ಲಿದ್ದು, ಅವರವರ ಯೋಗ್ಯತಾನುಸಾರವಾಗಿ, ಕರ್ಮಗಳನ್ನು ಮಾಡಿಸಿ ಫಲವನ್ನು ಕೊಡುವ ಶ್ರೀಹರಿಗೆ, ವೈಷಮ್ಯಾದಿದೋಷಗಳೆಲ್ಲಿಯದು? ಉತ್ತಮವಾದ ಬ್ರಾಹ್ಮಣಕುಲದಲ್ಲಿ ಹುಟ್ಟಿರುವ ನೀವೆಲ್ಲರೂ ಯೋಚಿಸಿ ನೋಡಿರೆಂದು ದೃಢೀಕರಣ ಮಾಡಿರುವರು. ಆದರೆ ರುದ್ರಾದಿಗಳಲ್ಲಿ, ಅಥವಾ ಇತರ ಮತಗಳಲ್ಲಿ ಪಕ್ಷಪಾತವಿಟ್ಟುಕೊಂಡು ನೋಡಿದರೆ ಸರಿಯಾದ ನ್ಯಾಯವು ತೋರದು. ಆ ಪಕ್ಷಪಾತವನ್ನು ಬಿಟ್ಟು ಸಮಬುದ್ಧಿಯಿಂದ ನೋಡಿದರೆ ಗೊತ್ತಾಗುವುದೆಂಬ ತಾತ್ಪರ್ಯ. ಸತ್ವಾದಿಗುಣ ನಿಯಾಮಕನಾಗಿ, ಸಾತ್ವಿಕಾದಿ ಹೆಸರಿನಿಂದ ಕಾರ್ಯಗಳನ್ನು ಮಾಡಿ, ಮಾಡಿಸುತ್ತಿರುವ ಶ್ರೀಪರಮಾತ್ಮನ ಸ್ಮರಣೆಮಾತ್ರದಿಂದ ದೋಷರಾಶಿಗಳೆಲ್ಲವೂ ನಾಶಹೊಂದುವುವು. ॥೨೦॥

### ೫. ಶ್ರೀಗುರುಹೃದಯ ಪ್ರಕಾಶಿಕೆ

ತತ್ತದ್ಗುಣನಿಯಾಮಕನಾಗಿ, ತತ್ತನ್ನಾಮಕನಾಗಿ, ಸರ್ವಕಾರ್ಯ ವ್ಯಕ್ತಿ ಮಾಡುವ, ದೇವರನ್ನು ಸ್ಮರಿಸುವುದರಿಂದಲೇ- ತದ್ಭಕ್ತರಿಗೆ ದೋಷರಾಶಿ

ಪರಿಹಾರವಾಗುತ್ತಿರುವಲ್ಲಿ, ಹೀಗೆ, ಅಪ್ರಾಕೃತಜ್ಞಾನಾನಂದಾದ್ಯನಂತರೂಪನಿಗೆ ದುಃಖಾದಿ ದೋಷ ಎನಿತು ಬಪ್ಪವು- ಎಂದರೆ, ಹೇಗೆ ಬಂದೀತು? ಸರ್ವಥಾ ಬರಲಾರದೆಂದರ್ಥ. ಬ್ರಾಹ್ಮಣಕುಲೋತ್ತಮರಾದವರು ನಿಷ್ಕಪಟಬುದ್ಧಿಯಿಂದ ನೋಡಬೇಕೆಂದು ಜ್ಞಾನಿಗಳ ಸಾಕ್ಷಿಯನ್ನು ಈ ವಿಷಯದಲ್ಲಿ ಕೋರುತ್ತಾರೆ. ॥೭೧॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಪೂರ್ವೋಕ್ತಪದ್ಯಗಳಲ್ಲಿ ಶ್ರೀಹರಿಯು ನಾನಾ ಅಭಿಧಾನಗತ ಭಗವದ್ರೂಪಗಳು-ಅವುಗಳ ಕ್ರಿಯಾವಿಶೇಷಗಳನ್ನೂ ತಿಳಿಸುತ್ತಾರೆ.

೨. ಮೂಲಪ್ರಕೃತಿಯು ತ್ರಿಗುಣಾತ್ಮಕವಾದದ್ದು. ಆ ಗುಣತ್ರಯಗಳಲ್ಲಿ ಶ್ರೀಹರಿಯು ಇದ್ದು, ಅವುಗಳಿಂದ ನಿರ್ಲಿಪ್ತನಾಗಿ, ಆಯಾಯಾ ಗುಣಗಳ ನಾಮದಿಂದಲೇ ಕರೆಯಿಸಿಕೊಳ್ಳುತ್ತಾ, ಆ ಗುಣಜನ್ಯವಾದ ಕರ್ಮಗಳನ್ನು ಜೀವರದ್ವಾರಾ ಮಾಡಿ ಮಾಡಿಸುತ್ತಿರುವನು.

೩. ಸತ್ವಗುಣಾಂತರ್ಯಾಮಿಯಾಗಿದ್ದು, ಸತ್ವನಾಮಕನಾಗಿ, ಆ ಗುಣದ ಪ್ರಾಚುರ್ಯವನ್ನು ಅಭಿವ್ಯಕ್ತಿಗೊಳಿಸುವನು, ತತ್ಫಲವಾಗಿ ಪುಣ್ಯ ಕಾರ್ಯ ನಡೆಯುವುದು. ಸತ್ವಗುಣದ ಲೇಪವಾಗಲಿ, ತಜ್ಜನ್ಯವಾದ ಪುಣ್ಯ ಫಲಭೋಗವಾಗಲೀ, ಗುಣನಿಯಾಮಕನಾದ ಶ್ರೀಹರಿಗೆ ಇಲ್ಲ. ಅಂತೆಯೇ ರಜೋಗುಣದ ಕಾರ್ಯಾಭಿವ್ಯಕ್ತಿ. ತಜ್ಜನ್ಯಮಿಶ್ರಕರ್ಮ ಫಲಭೋಗ. ತಮೋಗುಣಜನ್ಯವಾದ ಪಾಪಕರ್ಮಗಳ ಭೋಗ ಗುಣಾಭಿವ್ಯಕ್ತಿ-ಕರ್ಮಾಚರಣೆ-ಜೀವರಿಂದ ತತ್ತತ್ಫಲಭೋಗ - ಇವುಗಳಿಗೆಲ್ಲ ತಾನು ನಿಯಾಮಕನಾಗಿದ್ದಾನೆ. ಅಂತಹ ಜಗದ್ವಿಲಕ್ಷಣನಿಗೆ, ತ್ರಿಗುಣಾತೀತನಿಗೆ ದೋಷಾದಿಗಳ ಸಂಪರ್ಕವೆಲ್ಲಿಂದ ಬರಬೇಕು? ನಿರ್ದೋಷನಾದ ನಿರಂಜನನ ಈ ವಿಚಿತ್ರ ಕ್ರಿಯಾ – ರೂಪ - ಗುಣಾದಿಗಳನ್ನು ಬ್ರಹ್ಮಜ್ಞಾನಿಗಳೆನಿಸಿದ ವಿಪ್ರೋತ್ತಮರು ಕಪಟರಹಿತಬುದ್ಧಿಯಿಂದ ಆಲೋಚಿಸಲಿ - ಎನ್ನುತ್ತಾರೆ ದಾಸರಾಯರು.

ಕಪಟಬುದ್ಧಿಯುಳ್ಳ ಕುಮಾನವರು ಈಶ್ವರನಲ್ಲಿಯೂ ಕಾಪಟ್ಯವನ್ನೇ ಕಾಣುತ್ತಾರೆ. ಅನಂತಕಲ್ಯಾಣಗುಣಗಣ ಪರಿಪೂರ್ಣನೂ, ಅತಏವ, ಸಮಸ್ತ ದೋಷವಿದೂರನೂ ಆದ ಆ ಅಪ್ರಮೇಯನು ಜೀವರ ಸರ್ವದುರಿತ ಪರಿಹಾರಕನು. ಸರ್ವೇಶನು. ಸರ್ವನಿಯಾಮಕನು, ಪ್ರೇರಕನು. ಅವನೇ ಸರ್ವೋತ್ತಮವಸ್ತು.- ಎಂಬ ಉತ್ತಮಜ್ಞಾನಾನುಸಂಧಾನದಿಂದ, ಅವನನ್ನು ಭಕ್ತಿಪೂರ್ವಕ ಸೇವಿಸಿದರೇ ಸಾಕು. ಆ ಭಜಕರ ಸಕಲದೋಷ ರಾಶಿಗಳೆಲ್ಲಾ ಪರಿಹಾರವಾಗುವುವು. ಗುಣಾಂತರ್ಗತ ಗುಣನಿಯಾಮಕನೂ. ಗುಣಶಬ್ದವಾಚ್ಯನೂ, ಗುಣನಾಮಕನೂ ಆದ ಆ ಮಂಗಳ ಗುಣಗಣಧಾಮನ ಸ್ಮರಣೆಯೇ ತಾರಕವು, ಭವಸಾಗರವನ್ನು ಉತ್ತರಿಸುವ ಏಕೈಕನಾವೆಯು.

೩. ಪೂರ್ವೋಕ್ತಪದ್ಯಗಳಲ್ಲಿ ವರ್ಣಿತವಾಗಿರುವ ಹಂಸಾದಿ ಹದಿನೆಂಟು ರೂಪಗಳು ಅನ್ನಮಯಾದಿ ಪಂಚಕೋಶಗತ ಭಗವದ್ರೂಪಗಳನ್ನು ಚಿಂತನೆಗಾಗಿ ಪ್ರಸಕ್ತ ಸಂಧಿಯ ಕೊನೆಯಲ್ಲಿ ಪಟ್ಟಿಯ ರೂಪದಲ್ಲಿ ಕೊಟ್ಟಿದೆ. ವಾಚಕರು ಅರಿತು ಉಪಾಸಿಸಬೇಕಾಗಿ ವಿನಂತಿ.॥೨೧॥

## ಪದ್ಯ-೨೨

ಮೂಲ:-

ಕುಸ್ಥನೆನಿಸುವ ಭೂಮಿಯೊಳು ಆ ।
ಕಸ್ಥನೆನಿಸುವ ದಿಗ್ವಲಯದೊಳು ।
ಸ್ವಸ್ಥನೆನಿಪಾಕಾಶದೊಳು ಒಬ್ಬೊಬ್ಬರೊಳಗಿದ್ದು ॥
ವ್ಯಸ್ತನೆನಿಸುವ ಸರ್ವರೊಳಗೆ ಸ ।
ಮಸ್ತನೆನಿಸುವ ಬಳಿಯಲಿದ್ದು ಉ ।
ಪಸ್ಥನೆನಿಪ ವಿಶೋಧನ ವಿಶುದ್ಧಾಖ್ಯಲೋಕದೊಳು ॥೨೨॥

**ಅವತರಣಿಕೆ:-**

ಇತರ ಅಧಿಷ್ಠಾನಗತ ಭಗವದ್ರೂಪಗಳ ನಾಮಗಳನ್ನು ತಿಳಿಸುತ್ತಾರೆ. ॥೨೨॥

**ಪ್ರತಿಪದಾರ್ಥ :**

**ಕುಸ್ಥನೆನಿಸುವ** = "ಕುಸ್ಥ"-ನಾಮಕನಾಗಿ. (ಕು-ಭೂಮಿ, ಸ್ಥ-ಇರುವ). **ಭೂಮಿಯೊಳು** = ಭೂಮಿಯಲ್ಲಿ ತದಾಕಾರ ತನ್ನಾಮದಿಂದ ಇದ್ದಾನೆ. **ದಿಗ್ವಲಯದೊಳು** = ಪೂರ್ವಾದಿ ಅಷ್ಟದಿಕ್ಕುಗಳಲ್ಲಿ, **ಆಶಸ್ಥನೆನಿಸುವ** = "ಆಶಸ್ಥ" ನಾಮಕನಾಗಿದ್ದಾನೆ. (ಆಶ-ದಿಕ್ಕು). **ಆಕಾಶದೊಳು** = ಅವಕಾಶ ಸಾಂಕೇತವಾದ ಆಕಾಶವೆಂಬ ಪ್ರದೇಶದಲ್ಲಿ, **ಸ್ವಸ್ಥನೆನಿಪ** = "ಸ್ವಸ್ಥ"-ನಾಮಕನಾಗಿದ್ದಾನೆ (ಚಲನರಹಿತನಾಗಿ ಸ್ವಸ್ಥಾನಗತ ಭಗವನ್ನಾಮ). **ಒಬ್ಬೊಬ್ಬರೊಳಗಿದ್ದು** = ಪ್ರತ್ಯೇಕ ಪ್ರತ್ಯೇಕವಾದ ಜೀವರುಗಳಲ್ಲಿ ಪೃಥಕ್‌ಪೃಥಕ್ ಬಿಂಬರೂಪಗಳಿಂದ ಇದ್ದವನಾಗಿ. **ವ್ಯಸ್ತನೆನಿಸುವ** = "ವ್ಯಸ್ತ" ನಾಮದಿಂದ ಇದ್ದಾನೆ (ಬ್ಯಾರೆಬ್ಯಾರೆ ನಾಮಗಳಿಂದ). **ಸರ್ವರೊಳಗೆ** = ಸರ್ವಜೀವರಲ್ಲಿ, (ಚರಾಚರ ಪ್ರಾಣಿಗಳ ಸಮೂಹ) ಸರ್ವತ್ರ ವ್ಯಾಪ್ತನಾಗಿದ್ದು. **ಸಮಸ್ತನೆನಿಸುವ** = "ಸಮಸ್ತ"ನೆಂಬ ಹೆಸರಿನಿಂದ ವಿದ್ಯಮಾನನಾಗಿದ್ದಾನೆ. **ಬಳಿಯಲ್ಲಿದ್ದು** = ಸರ್ವಜೀವರ ಜೀವಾಂತರ್ಗತನಾಗಿ, ಅವಿಯೋಗನಾಗಿ ಜೀವನನ್ನು ಬಿಡಬಿಡದೆ ಇದ್ದವನಾಗಿ, **ಉಪಸ್ಥನೆನಿಸುವ** = "ಉಪಸ್ಥ" ನಾಮಕನಾಗಿದ್ದಾನೆ (ಉಪ-ಸಮೀಪ, ಸ್ಥ- ಇರತಕ್ಕವನು). **ಲೋಕದೊಳು** = ಈ ಚರಾಚರಾತ್ಮಕವಾದ ಪ್ರಪಂಚದಲ್ಲಿ, **ವಿಶೋಧನ** = ಯಾರಿಂದಲೂ ಅಂತಃಶೋಧನ ಮಾಡೋದಕ್ಕೆ ಶಕ್ಯಲ್ಲದವನು. **ವಿಶುದ್ಧಾತ್ಮ** = ನಿರ್ದೋಷವಾದ ಸ್ವರೂಪವುಳ್ಳ ಶ್ರೀಪರಮಾತ್ಮನು, ಅನಂತ ಕಲ್ಯಾಣಗುಣಗಣ ಪರಿಪೂರ್ಣನಾಗಿದ್ದಾನೆ. ॥೨೨॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ.

ಶ್ರೀಪರಮಾತ್ಮನ ತದಾಕಾರ ತನ್ನಾಮಗಳ ಹೇಳತಾರೆ.

ಕು-ಎಂದರೆ ಭೂಮಿ, ಸ್ಥ-ಎಂದರೆ,ತದಂತರ್ವ್ಯಾಪಿಯಾಗಿ, ಭೂಮಿಯಲ್ಲಿ ತದಾಕಾರನಾಗಿ ತನ್ನಾಮದಿಂದ ಇರತಾನೆ. ಪೂರ್ವಾದಿ ಅಷ್ಟದಿಕ್ಕುಗಳಲ್ಲಿದ್ದು, ಆಶ-ಎಂದರೆ, ದಿಕ್ಕು, ಆಶಸ್ಥ-ಎಂತ ಎನಿಸೋವನಾಗತಾನೆ. ಆಕಾಶ ಸಾಂಕೇತವಾದ ಅವಕಾಶದೊಳಗಿದ್ದು, ಸ್ವಸ್ಥ-ಎಂದರೆ ಆಕಾಶಕ್ಕೆ ಸಾಂಕೇತವು, ಚಲನರಹಿತನಾಗಿ ಸ್ವಸ್ಥಾನದಲ್ಲಿ ಇರೋ ಪ್ರಯುಕ್ತ ಸ್ವಸ್ಥ-ಎಂತ ಎನಿಸತಾನೆ. ಪ್ರತ್ಯೇಕ ಪ್ರತ್ಯೇಕ ಜೀವರಲ್ಲಿ ಪ್ರತ್ಯೇಕ ಪ್ರತ್ಯೇಕ ಬಿಂಬರೂಪಗಳಿಂದ ಇದ್ದವನಾಗಿ, ವ್ಯಸ್ತ- ಎಂದರೆ, ಬ್ಯಾರೆ ಬ್ಯಾರೆ. ತತ್ತನ್ನಾಮದಿಂದ ಕರಸತಾನೆ. ಸರ್ವ ಚರಾಚರ ಪ್ರಾಣಿಗಳ ಸಮೂಹ ವಿವಕ್ಷಯಾ ಸರ್ವತ್ರವ್ಯಾಪ್ತನಾಗಿ ಇದ್ದಾನಾದ ಕಡಿಯಿಂದ, ಸಮಸ್ತ ಎಂತ ಕರಸೋವನಾಗತಾನೆ. ಜೀವಾಂತರ್ಗತನಾಗಿ ಅವಿಯೋಗನಾಗಿ, ಜೀವನ ಸಮೀಪದಲ್ಲಿ ಇದ್ದವನಾಗಿ, ಉಪ ಎಂದರೆ, ಸಮೀಪ, ಸ್ಥ-ಎಂದರೆ. ಇರತಕ್ಕವ ಎಂತ ಕರಸಿಕೊಳ್ಳುವ. ಚರಾಚರಾತ್ಮಕ ಪ್ರಪಂಚದೊಳು ತದಾಕಾರ ತನ್ನಾಮದಿಂದ ಪೂರ್ವೋಕ್ತ ಪ್ರಕಾರ ಇರತಕ್ಕ ಪರಮಾತ್ಮ ದಾರಿಂದಲೂ ಅಂತಃಶೋಧನ ಮಾಡೋದಕ್ಕೆ ಶಕ್ಯನಲ್ಲದವ. ನಿರ್ದೋಷವಾದ ಸ್ವರೂಪವುಳ್ಳ ಪರಮಾತ್ಮಗೆ. ಇಷ್ಟೊಬ್ಬರು ನಿಯಾಮಕರು ಆಗಲಿ. ಸಮರಾಗಲಿ ಇದ್ದಾರೆಂಬೋ ದೋಷದಿಂದ ರಹಿತನಾದ ಸ್ವಾಮಿ ಯಾದವ-ಎಂತ ತಾತ್ಪರ್ಯ. ॥೨೨॥

## ೨. ಭಾವದರ್ಪಣ.

ತತ್ತತ್ಸ್ಥಳಗಳಲ್ಲಿ ತತ್ತನ್ನಾಮದಿಂದ ಕರಿಸುತ್ತಾನೆಂದು ಹೇಳುತ್ತಾರೆ ಕುಸ್ಥ । ದಿಗ್ವಲಯ- ದಿಙ್ಮಂಡಲ ಬಳ-ಸಮೀಪ. ॥೨೨॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ

"ಕುಸ್ಥ"- ಇತಿ॥ 'ಕುಃ'- ಭೂಮಿಃ॥ 'ಆಶಾ'- ದಿಶಃ॥ ಅನೇನ 'ಕುಸ್ಥ ನಮೋ', ಆಶಾಸ್ಥನಮೋ, ಸ್ವಸ್ಥನಮೋ, ವ್ಯಸ್ತನಮೋ, ಸರ್ವಸ್ಥನಮೋ"- ಇತ್ಯಾದಿ ಸ್ತವನಾನಿ ವಿವೃತಾನಿ॥ 'ಬಳಿ'-ಸಮೀಪಃ-

"ವಿಶೋಧನ"- *ಓಂ* ವ್ರಸು ಗೋಪಾ ಯುಪಸಂ ಧೇನವೋ ಯಥಾಹ್ರದಂ ಕುಲ್ಯಾ ಇವಾಶತ॥ ಅನಸ್ಪೃಜಾ (ತಂ) ರಯಿಂ ಬರಾಂಶೂ ನ ಪ್ರತಿಜಾನತೇ ವೃಕ್ಷ ॥ ಓಂ ॥ (ಧನಪ್ರಾಪಕಃ).

"ವಿಶುದ್ಧಾತ್ಮಾ"- "ಓಂ" ಸ್ನಾತಾ ರಥಸ್ಯ ಹರ್ಯೋರಭಿಸ್ವರ ಇಂದ್ರೋದೃಹಳಾ ಚಿದಾರುಜಃ ಗಂಭೀರಾಂ ಉದಧೀಂರಿವ ಕ್ರತುಂ ಪುಷ್ಯಸಿಗಾ ಇವ॥ ॥*ಓಂ*॥ ವಿಶುದ್ಧಂ ಕ್ರತುಫಲಂ ದಾನೇನ ವಿಸ್ತಾರಯತಿ ಪೋಷಯತಿ ಇತಿ ವಿಶುದ್ಧಾತ್ಮಾ. ॥೨೨॥

## ಕನ್ನಡಾರ್ಥ

ಕುಃ-ಎಂದರೆ, ಭೂಮಿ, 'ಆಶಾ'-ಎಂದರೆ, ದಿಕ್ಕುಗಳು. ಇವುಗಳಲ್ಲಿ. ಇರುವವನು-ಎಂದು ಅರ್ಥ. "ಕುಸ್ಥ ಆಶಸ್ಥ"- ಎಂದು ಹೇಳುವುದರಿಂದ, "ಶ್ರೀವೇಂಕಟಶೈಲಾಧಿಪ"- ಎಂಬ ತಾವೇ ರಚಿಸಿದ ಪದ್ಯದಲ್ಲಿರುವ "ಕುಸ್ಥ ನಮೋ"- ಎಂದು ಮುಂತಾದ ನುಡಿಗಳನ್ನು ವಿವರಿಸಿರುತ್ತಾರೆ.

"ವಿಶೋಧನ"- ಧನಗಳನ್ನು ಹೊಂದಿಸುವವನು, ದೊರಕಿಸಿಕೊಡುವವನು.

"ವಿಶುದ್ಧಾತ್ಮ"-ವಿಶುದ್ಧವಾದ ಯಜ್ಞಫಲಗಳನ್ನು ಕೊಟ್ಟು, ವಿಸ್ತರಿಸುವವ. ॥೨೨॥

## ೪. ಭಾವಪ್ರಕಾಶಿಕೆ

ಭೂಮಿಯೊಳಗೆ ಇರುವ ಪರಮಾತ್ಮನಿಗೆ ಕುಸ್ಥನೆಂದು ಹೆಸರು. ಗೋತ್ರಾಕುಃ ಪೃಥಿವೀ- ಪೃಥ್ವೀ ಎಂಬ ಅಮರಕೋಶದಂತೆ ಕು-ಎಂದರೆ ಭೂಮಿಗೆ ಹೆಸರು. "ಕೌಸ್ಥೀಯತೆ ಇತಿ ಕುಸ್ಥಃ"- ಎಂಬ ನಿರ್ವಚನದಿಂದ ಭೂಮಿಯಲ್ಲಿದ್ದುದರಿಂದ ಕುಸ್ಥನೆಂದು ಹೆಸರು. ದಿಕ್ಕುಗಳಿಗೆ ಆಶಾ-ಎಂದು ಹೆಸರು. ಅಲ್ಲಿರುವುದರಿಂದ ಆಶಸ್ಥನೆಂದು ಹೆಸರು. ಆಕಾಶಕ್ಕೆ ಖಂ-ಎಂದು ಹೆಸರು. ಆಕಾಶದಲ್ಲಿರುವುದರಿಂದ ಖಸ್ಥನೆಂದು ಹೆಸರು. ಒಬ್ಬೊಬ್ಬರೊಳಗೂ ಪ್ರತ್ಯೇಕ ಪ್ರತ್ಯೇಕ ರೂಪನಾಗಿರುವುದರಿಂದ, ವ್ಯಸ್ತನೆಂದು ಹೆಸರು. ಸರ್ವತ್ರ ವ್ಯಾಪ್ತನಾದ ರೂಪಕ್ಕೆ ಸಮಸ್ತನೆಂದು ಹೆಸರು. ಸಮೀಪದಲ್ಲಿರುವುದರಿಂದ ಉಪಸ್ಥನೆಂದು ಹೆಸರು. ಹೀಗೆ ವಿಶೇಷ ಶೋಧಕನಾಗಿಯೂ, ವಿಶುದ್ಧವಾದ ಸ್ವರೂಪ ಉಳ್ಳವನಾಗಿಯೂ ಇರುವ ಶ್ರೀಹರಿಯು, ಲೋಕದಲ್ಲಿ ಇಂತಹಾ ಅನೇಕರೂಪಗಳಿಂದ, ಅನೇಕ ನಾಮಗಳಿಂದ ಕೂಡಿ, ವಾಸಮಾಡುವನೆಂದು ಚಿಂತಿಸಬೇಕೆಂಬ ತಾತ್ಪರ್ಯ. ॥೨೨॥

## ೫. ಶ್ರೀಗುರುಹೃದಯ ಪ್ರಕಾಶಿಕೆ.

ಭೂಮಿಯಲ್ಲಿದ್ದು, ದೇವರು ಕುಸ್ಥನೆನಿಸುವನು. ದಿಕ್ಕಿನ ಸುತ್ತಲೂ ಇದ್ದು, ಆಶಾಸ್ಥನೆನಿಸುವನು. ಆಕಾಶದಲ್ಲಿದ್ದು ಖಸ್ಥನೆನಿಸುವವನು. ಬೇರೆ ಬೇರೆ ಒಬ್ಬೊಬ್ಬರಲ್ಲಿದ್ದು, ವ್ಯಸ್ತನು ಎನಿಸುವನು. ಸರ್ವರಲ್ಲಿದ್ದು, ಸಮಸ್ತನೆಂದು ಕರೆಸುವನು. ಬಳಿಯಲ್ಲಿದ್ದು, ಉಪಸ್ಥನೆನಿಸುವನು. ಸ್ವಯಂವಿಶುದ್ಧ ಸ್ವರೂಪನು. ವಿಶೋಧನ- ಎಂದರೆ, ತತ್ತತ್ಸ್ವಭಾವ ಪರಿಶುದ್ಧಕರನಾಗಿ ಲೋಕದಲ್ಲೆಲ್ಲಾ ಇರುವನು. ತತ್ತತ್ಸ್ವಭಾವವ್ಯಕ್ತಿಗೋಸ್ಕರ ಸರ್ವತ್ರ ವಾಯು ಇರುವಂತೆ, ದೇವರು ಸರ್ವತ್ರ ತತ್ತನ್ನಾಮಕನಾಗಿರುವನೆಂದು ತಾತ್ಪರ್ಯ.

**ಯಥಾಕಾಶಸ್ಥಿತೋ ನಿತ್ಯಂ ವಾಯುಸ್ಸರ್ವತ್ರ ಗೋಮಹಾನ್।**
**ತಥಾ ಸರ್ವಾಣಿ ಭೂತಾನಿ ಮತ್‌ಸ್ಥಾನೀತ್ಯುಪಧಾರಯ ॥**

–ಎಂಬ ಗೀತಾರ್ಥವು ವಿವರಿಸಿತು. ॥೨೨॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. **ಕುಸ್ಥ** –

ಕು-ಎಂದರೆ, ಭೂಮಿ. ಸ್ಥ-ವಿದ್ಯಮಾನನಾಗಿರುವನು. ಪೃಥ್ವಿಯ ಕಣಕಣಗಳಲ್ಲಿ ವ್ಯಾಪ್ತನಾಗಿದ್ದು, ಭೂಮಿಯ ಧರ್ಮಲಕ್ಷಣಗಳನ್ನು ಅಭಿವ್ಯಕ್ತ ಮಾಡುವುದರಿಂದ. ಪೃಥ್ವ್ಯಂತರ್ಗತ ಶ್ರೀಹರಿಗೆ **ಕುಸ್ಥ**-ನೆಂದು ಹೆಸರು.

೨. **ಆಶಸ್ಥ** –

ಆಶಾ-ಎಂದರೆ ದಿಕ್ಕುಗಳು. ಪೂರ್ವ-ದಕ್ಷಿಣ-ಪಶ್ಚಿಮ-ಉತ್ತರ-ಇವು ಪ್ರಧಾನವಾದ ನಾಲ್ಕುದಿಕ್ಕುಗಳು. ಆಗ್ನೇಯ-ನೈರುತ್ಯ-ವಾಯುವ್ಯ-ಈಶಾನ್ಯ ಎಂಬ ಸಂಧಿಗತ ದಿಕ್ಕುಗಳು ವಿದಿಕ್ಕುಗಳು. ಈ ಅಷ್ಟದಿಕ್ಕುಗಳಲ್ಲಿ (**ದಿಗ್ವಲಯದೊಳು**. ದಿಕ್+ವಲಯ ವಲಯಾಕಾರದಲ್ಲಿರುವ ಪೂರ್ವಾದಿ ಅಷ್ಟದಿಕ್ಕುಗಳು) ವ್ಯಾಪ್ತನಾಗಿ. ದಿಕ್ಪಾಲಕರಲ್ಲಿ ಅಂತಸ್ಥಿತನಾಗಿರುವ ಈ ಶ್ರೀಹರಿಗೆ-**ಆಶಸ್ಥ**-ನೆಂಬ ನಾಮ.

೩. **ಸ್ವಸ್ಥ** –

ಸರ್ವತ್ರವ್ಯಾಪ್ತವಾದ ಆಕಾಶದಲ್ಲಿ **ಸ್ವಸ್ಥ**-ನಾಮವಾಚ್ಯನಾಗಿದ್ದಾನೆ. ಆಕಾಶವು ಅವಕಾಶಪ್ರದವು. ಸ್ವ-ಎಂದರೆ ತನ್ನಲ್ಲಿಯೇ, ಚಲಿಸದೇ ಇರುವ **ಧರ್ಮ**. ಭೂತಾಕಾಶದಲ್ಲಿ ವ್ಯಾಪ್ತನಾಗಿದ್ದು, ಸರ್ವವಸ್ತುಗಳಿಗೆ ಅವಕಾಶ ಪ್ರದನಾಗಿದ್ದಾನೆ ಸ್ವಸ್ಥನಾಮಕನಾದ ಶ್ರೀಪರಮಾತ್ಮನು. ಈ ನಾಮವನ್ನು **ಖಸ್ಥ**ನೆಂತಲೂ ತಿಳಿಯಬೇಕು. ಖಂ-ಎಂದರೆ, ಆಕಾಶ. ಆಕಾಶಸ್ಥಿತನಾದ ಶ್ರೀಹರಿಗೆ-**ಖಸ್ಥ**-ನೆಂತಲೂ ಹೆಸರು.

**೪. ವ್ಯಸ್ತನೆನಿಸುವ-**

ಪ್ರತಿಜೀವರಲ್ಲೂ ಪ್ರತ್ಯೇಕ ಪ್ರತ್ಯೇಕ ರೂಪಗಳಿಂದ ಬಿಂಬನಾಗಿದ್ದು, ವ್ಯಸ್ತ ನಾಮಕನಾಗಿರುವನು. ವ್ಯಸ್ತ-ಪೃಥಕ್ ಪೃಥಕ್.

**೫. ಸಮಸ್ತನೆನಿಸುವ-**

ಸಮಸ್ತಪ್ರಾಣಿಗಳಲ್ಲಿ ಅಂತರ್ಯಾಮಿರೂಪದಿಂದ ಇದ್ದು, ಸಮಗ್ರ ರೂಪದಿಂದ (ಸಪಿಂಡನಾಗಿ) **ಸಮಸ್ತ**-ನಾಮಕನಾಗಿದ್ದಾನೆ.

**೬. ಉಪಸ್ಥನೆನಿಸುವ-**

ಸಕಲಜೀವರ ಬಿಂಬನಾಗಿದ್ದು, ಪ್ರತಿಬಿಂಬಭೂತರಾದ ಜೀವರನ್ನು ಎಡಬಿಡದೆ ನಿತ್ಯಾವಿಯೋಗಿಯಾಗಿರುವುದರಿಂದ, **ಉಪಸ್ಥ**-ನಾಮಕನು. ಉಪ-ಎಂದರೆ ಸಮೀಪ. ಜೀವರ ಸಮೀಪದಲ್ಲಿ ಪರಮಾಪ್ತನಾಗಿರುವನು.

**೭. ವಿಶೋಧನ-**

ಅಂತಃ = ಶೋಧನ ಮಾಡಲಿಕ್ಕೆ ಯಾರಿಂದಲೂ ಶಕ್ಯನಲ್ಲ. ಧನಗಳನ್ನು ಪ್ರಾಪ್ತಿಸಿ ಕೊಡುವುದರಿಂದಲೂ- **ವಿಶೋಧನ** ನಾಮಕನು.

**೮. ವಿಶುದ್ಧಾತ್ಮ-**

ಅತ್ಯಂತ ಶುದ್ಧವಸ್ತು, ಸರ್ವದೋಷರಹಿತನು. ಅಪ್ರಾಕೃತ ಆನಂದ ಉದ್ರಿಕ್ತನಾಗಿರುವುದರಿಂದ, **ವಿಶುದ್ಧಾತ್ಮನು.**

**೯.** ಹೀಗೆ, ಕುಸ್ಥಾದಿ ನಾನಾ ನಾಮಗಳಿಂದ, ಸರ್ವಧಿಷ್ಠಾನಗಳಲ್ಲಿ ತತ್ತದಾಕಾರನಾಗಿ, ತತ್ತಚ್ಛಬ್ದವಾಚ್ಯನಾಗಿ, ನಿರ್ದೋಷನಾಗಿ, ಜಗದ್ವಿಲಕ್ಷಣನಾಗಿ ಆ ಜಗದೀಶನು ಲೋಕದಲ್ಲಿ ಎಲ್ಲೆಲ್ಲೂ ತುಂಬಿ ಹರಡಿದ್ದಾನೆ-ಎಂದು ಪ್ರಸಕ್ತ ಪದ್ಯದ ತಾತ್ಪರ್ಯ. ||೨೨||

## ಪದ್ಯ-೨೩

**ಮೂಲ :**

**ಜ್ಞಾನದನು ಎಂದೆನಿಪ ಶಾಸ್ತ್ರದಿ ।**
**ಮಾನದನು ಎಂದೆನಿಪ ವಸನದಿ ।**
**ದಾನಶೀಲ ಸುಬುದ್ಧಿಯೊಳಗವದಾನ್ಯನೆನಿಸುವನು ॥**
**ವೈನತೇಯವರೂಥ ತತ್ತ**
**ತ್ಸ್ಥಾನದಲಿ ತತ್ತ ತ್ಸ್ವಭಾವಗ ।**
**ಳಾನುಸಾರ ಚರಿತ್ರೆ ಮಾಡುತ ನಿತ್ಯನೆಲೆಸಿಪ್ಪ ॥೨೩॥**

**ಅವತರಣಿಕೆ :**

ಜ್ಞಾನದ- ಇತ್ಯಾದಿ ಇತರ ಭಗವನ್ನಾಮಗಳು, ಅವುಗಳ ಕ್ರಿಯಾ ವಿಶೇಷಗಳನ್ನು ತಿಳಿಸುತ್ತಾರೆ. ॥೨೩॥

**ಪ್ರತಿಪದಾರ್ಥ :**

**ಶಾಸ್ತ್ರದಿ** = ಭಗವದ್ಪ್ರಸಾದಕ್ಕೆ ಕಾರಣವಾದ ಜ್ಞಾನವನ್ನು ತಿಳಿಸಿ ಕೊಡುವ ಸಚ್ಛಾಸ್ತ್ರಗಳಲ್ಲಿ, **ಜ್ಞಾನದನು ಎಂದೆನಿಪ** = "ಜ್ಞಾನದ"-ನಾಮಕನಾಗಿದ್ದು, ಸತ್ಪಾತ್ರರಿಗೆ ಶಾಸ್ತ್ರದ್ವಾರಾ ಜ್ಞಾನಪ್ರದನಾಗಿದ್ದಾನೆ, **ವಸನದಿ** = ನಾವು ಧರಿಸುವ ಬಟ್ಟೆಗಳಲ್ಲಿ, **ಮಾನದನು ಎಂದೆನಿಪ** = "ಮಾನದ"-ನಾಮಕನಾಗಿದ್ದು, ಮಾನವನ್ನು ಸಂರಕ್ಷಣೆ ಮಾಡುತ್ತಾನೆ. **ದಾನಶೀಲ**= **ಸತ್ಪಾತ್ರರಲ್ಲಿ** ದಾನಮಾಡುವ ಸ್ವಭಾವವುಳ್ಳವರ, **ಸುಬುದ್ಧಿಯೊಳಗೆ**= ಸಮೀಚೀನವಾದ ಬುದ್ಧಿಯಲ್ಲಿ, **ಅವದಾನ್ಯನೆನಿಸುವನು** = "ಅವದಾನ್ಯ"-ನಾಮ ಹೆಸರಿನಿಂದ ಇದ್ದು, ದಾನವನ್ನು ಕೊಡಿಸುವವನಾಗುತ್ತಾನೆ. **ವೈನಥೇಯವರೂಥ**= ಗರುಡವಾಹನನಾದ ಶ್ರೀಹರಿಯು, **ತತ್ತತ್ಸ್ಥಾನ**

**ದಲಿ** = ಆಯಾಯಾ ಅಧಿಷ್ಠಾನಗಳಲ್ಲಿ ತದಾಕಾರ, ತನ್ನಾಮ, ತದ್ವ್ಯಾಪ್ತನಾಗಿದ್ದು, **ತತ್ತತ್ಸ್ವಭಾವಗಳನುಸಾರ** = ಆಯಾಯಾ ಅಧಿಷ್ಠಾನಗಳ (ಜೀವ ಜಡಾಧಿಷ್ಠಾನಗಳ) ನೈಜಸ್ವಭಾವಗಳಿಗನುಗುಣವಾಗಿ, **ಚರಿತ್ರ ಮಾಡುತ** = ವ್ಯಾಪಾರರೂಪವಾದ ಕ್ರಿಯೆಗಳನ್ನು ನಿರ್ವಹಿಸುತ್ತಾ, **ನಿತ್ಯ** = ನಿರಂತರದಲ್ಲಿ, **ನೆಲೆಸಿಪ್ಪ** - ಆವಾಸವಾಗಿದ್ದಾನೆ. ॥೨೬।

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ತತ್ತದಾಕಾರತನ್ನಾಮಗಳ ಹೇಳುತಾರೆ.

ಸಮೀಚೀನವಾದ ಜ್ಞಾನಕ್ಕೆ ಕಾರಣವಾದ ಜ್ಞಾನವನ್ನು ತಿಳಿಸಿಕೊಡತಕ್ಕ ಶಾಸ್ತ್ರದಲ್ಲಿ, ಶ್ರೀಪರಮಾತ್ಮ ಜ್ಞಾನಕೊಡತಕ್ಕವ- ಎಂತ ಕರಸತಾನೆ, ಮಾನವನ್ನು ಕಾಪಾಡಿ, ಮಾನವನ್ನು ಕೊಡತಕ್ಕ ವಸ್ತ್ರದಲ್ಲಿ ಇದ್ದು, ಮರ್ಯಾದಾವನ್ನು ಕೊಡೋವನಾಗತಾನೆ. ಸತ್ಪಾತ್ರರಲ್ಲಿ ದಾನಮಾಡತಕ್ಕ ಸಮೀಚೀನವಾದ ನೈಜವಾದ ಶೀಲಸ್ವಭಾವವುಳ್ಳವರ ಬುದ್ಧಿಯೊಳಗಿದ್ದು, ಕೊಡತಕ್ಕವನು- ಎಂತ ಎನಿಸತಾನೆ. ಗರುಡವಾಹನನಾದ ಶ್ರೀಪರಮಾತ್ಮ ಆಯಾ ಜೀವರ ಹೃದಯಸ್ಥಾನದಲ್ಲಿ ತದ್ವ್ಯತಿರಿಕ್ತ ಜಡಗಳಲ್ಲಿ ತದಾಕಾರ, ತನ್ನಾಮದಿಂದ ಆವಾಸನಾಗಿ ಇರತಕ್ಕವನಾಗಿ, ಪ್ರತಿನಿತ್ಯದಲ್ಲೂ ಆದರದರ ನೈಜ ಸ್ವಭಾವಗಳನುಸಾರ ವ್ಯಾಪಾರಗಳ ಅಭಿವ್ಯಕ್ತಿಮಾಡತಾ. ಆವಾಸನಾಗಿ ಇದ್ದಾನೆ. ॥೨೬॥

### ೨. ಭಾವದರ್ಪಣ

ಜ್ಞಾನ । ಶಾಸ್ತ್ರದಲ್ಲಿ ಜ್ಞಾನದ ಜ್ಞಾನವನ್ನು ಕೊಡತಕ್ಕವ-ಎಂಬರ್ಥ । ವಸನ-ವಸ್ತ್ರವದಾನ್ಯ-ದಾನಶೌಂಡ. ॥೨೬॥

## ೩. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ

'ಜ್ಞಾನದ ಇತಿ॥ 'ಶಾಸ್ತೃ'-ಇತಿ ವ್ಯುತ್ಪತ್ತೇಃ॥ ವದಾನ್ಯಃ-ದಾನ ಶೌಂಡಃ॥ ವರೂಥಃ-ಗುಪ್ತಃ ವಾಹನಂ ಇತಿ ಯಾವತ್. ॥೨೩॥

## ಕನ್ನಡಾರ್ಥ

'ವದಾನ್ಯ' - ಎಂದರೆ, ದಾನಶೌಂಡನೆಂದು ಅರ್ಥ. 'ವೈನತೇಯ ವರೂಥ'-ಎಂದರೆ, ಗರುಡವಾಹನನೆಂದು ಅರ್ಥ. 'ಶಾಸನ ಮಾಡುವವನು ಶಾಸ್ತೃ'-ಎಂಬ ವ್ಯುತ್ಪತ್ತಿಯಿದ್ದುದರಿಂದ, ಅಂತರ್ಯಾಮಿರೂಪದಿಂದ ಅಲ್ಲಲ್ಲಿ ಇದ್ದು, ಆ ಆ ಶಬ್ದಗಳಿಂದ ವಾಚ್ಯನಾಗಿರುತ್ತಾನೆ.'-ಎಂದು ತಾತ್ಪರ್ಯ. ॥೨೩॥

## ೪. ಭಾವಪ್ರಕಾಶಿಕೆ.

ಶಾಸ್ತ್ರದೊಳಗೆ, ಜ್ಞಾನವನ್ನು ಕೊಡುವವನಾದುದರಿಂದ, ಜ್ಞಾನದನೆಂದು ಕರೆಸುವನು. ವಸ್ತ್ರದಲ್ಲಿದ್ದು, ಮಾನವನ್ನುಳಿಸುವುದರಿಂದ, ಮಾನದನೆಂದು ಕರೆಸುವನು. ವದಾನ್ಯನೆಂದರೆ-ದಾನಶೂರನಿಗೆ ಹೆಸರು. ದಾನಶೀಲರಲ್ಲಿ ವದಾನ್ಯನೆಂದು ಕರೆಸುವನು. ಹೀಗೆ, ಗರುಡವಾಹನನಾದ ಶ್ರೀ ಪರಮಾತ್ಮನು ಆಯಾ ಸ್ಥಳಗಳಲ್ಲಿದ್ದು, ಆಯಾಸ್ವಭಾವಗಳನ್ನನುಸರಿಸಿ, ಕಾರ್ಯಗಳನ್ನು ಮಾಡುತ್ತಾ, ನಿತ್ಯದಲ್ಲೂ ವಾಸಮಾಡುತ್ತಿರುವನು. ॥೨೩॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ

ಶಾಸ್ತ್ರದಲ್ಲಿದ್ದು, ಜ್ಞಾನಕೊಡುವನೆಂದು ಕರೆಸುವನು. ವಸ್ತ್ರದಲ್ಲಿದ್ದು ಬಹುಮಾನವನ್ನು ಕೊಡುವನು. ದಾನಶೀಲ ಸುಬುದ್ಧಿಯಲ್ಲಿದ್ದು, ವದಾನ್ಯ

ಎಂದರೆ, ಮಹಾದಾನ್ಯ-ಎನಿಸುವನು. ವೈನತೇಯನೆಂಬ ಗರುಡನೇ ರಥವಾಗಿ ಉಳ್ಳ ಸ್ವಾಮಿ. ಆಯಾಯಾ ವಸ್ತುಗಳಲ್ಲಿ, ತಯಾಯಾ ಸ್ವಭಾವ ವ್ಯಕ್ತಿ ಮಾಡುತ್ತಾ, ತದನುಸಾರ ಚರಿತ್ರೆ ತೋರಿಸುತ್ತಾ ಇರುವನು. ॥೨೩॥

## ಸರ್ವವ್ಯಾಖ್ಯಾನಸಾರ ಸಂಗ್ರಹ

೧. ಭಗವಂತನ ಪ್ರಸಾದಕ್ಕೆ ಮುಖ್ಯ ಸಾಧನವು"-ಸುಜ್ಞಾನವು." ಜ್ಞಾನಗಮ್ಯನಾದ ಶ್ರೀಪರಮಾತ್ಮನನ್ನು ಹೊಂದುವುದಕ್ಕೆ, ಜ್ಞಾನಮಾರ್ಗವೇ ಮುಖ್ಯಕಾರಣವು. ಸಚ್ಛಾಸ್ತ್ರಗಳಲ್ಲಿ ತಾನಿದ್ದು, **ಜ್ಞಾನದ** ನಾಮಕನಾಗಿದ್ದು, ಜ್ಞಾನಾರ್ಥಿಗಳಿಗೆ ಜ್ಞಾನಪ್ರದನಾಗಿದ್ದಾನೆ.

೨. ನಾವು ಧರಿಸುವ ವಸ್ತ್ರಗಳಲ್ಲಿ (ವಸನದಿ) ಜಿತಪ್ರೀತನಾಗಿ ವ್ಯಾಪಿಸಿದ್ದು, **ಮಾನದನು**-ಎನಿಸಿದ್ದಾನೆ. ವಸ್ತ್ರದಿಂದ ಮಾನಸಂರಕ್ಷಣೆ ಹಾಗೂ ಗೌರವ ಪ್ರಾಪ್ತಿ-ಮಾನದ ನಾಮಕನು ಇವೆರಡು ಕಾರ್ಯಗಳನ್ನು ಮಾಡುವನು.

೩. ದಾನ ಮಾಡುವುದು- ಎಂಬುದು ಸಜ್ಜನರ ಲಕ್ಷಣ. ಸತ್ಪಾತ್ರರಿಗೆ ಮಾತ್ರ ದಾನ ಮಾಡಬೇಕೆಂದು-ಶಾಸ್ತ್ರನಿಯಮ. ಅಂತಹ ದಾನಶೀಲರಾದ ಜೀವರ ಸುಬುದ್ಧಿಯಲ್ಲಿ ತಾನು ನೆಲೆಸಿದ್ದು, **ಅವದಾನ್ಯ**-ನೆಂಬ ಹೆಸರಿನಿಂದ ಖ್ಯಾತನಾಗಿದ್ದಾನೆ. "ವದಾನ್ಯ"- ಎಂದರೆ, "ದಾನಶೌಂಡ್ಯ"- ನೆಂದರ್ಥ. ದಾನದ ಬುದ್ಧಿಯನ್ನು ಪ್ರೇರಿಸುವ ಭಗವದ್ರೂಪದ ಹೆಸರು.

೪. ವಿನುತಾ- ಕಶ್ಯಪರ ಪತ್ನಿ. ಅವಳಿಗೆ ಗರುಡ ಮತ್ತು ಅರುಣ-ಎಂಬ ಇಬ್ಬರು ಪುತ್ರರು, ಗರುಡನು ಅರುಣನ ತಮ್ಮನು. ಶ್ರೀಹರಿಯು ಗರುಡ ವಾಹನನು. ಇದರಿಂದ. **ವೈನತೇಯ ವರೂಥ**-ಎಂದಿದ್ದಾರೆ. ವೈನತೇಯ-ವಿನುತಾಸುತನಾದ ಗರುಡ, ವರೂಥ-ಅವನ ಮೇಲೆ ಸಂಚರಿಸುವವನು. ಅಂದರೆ, ಗರುಡವಾಹನನಾದ ಶ್ರೀಹರಿ.

೫. ವೈನತೇಯವರೂಥನು ಸಕಲಾಧಿಷ್ಠಾನಗಳಲ್ಲಿ ವ್ಯಾಪ್ತನಾಗಿದ್ದು, ತತ್ತದಾಕಾರನಾಗಿ, ತನ್ನಾಮಕನಾಗಿ, ತತ್ತಚ್ಛಬ್ದವಾಚ್ಯನಾಗಿದ್ದುಕೊಂಡು,

ಆಯಾಯಾ ವಸ್ತುಗಳ ನೈಜವಾದ ಸ್ವಭಾವಗಳನ್ನು (ಲಕ್ಷಣಗಳನ್ನು) ಅಭಿವ್ಯಕ್ತಿಗೊಳಿಸುವನು. (ಚರಿತ್ರ ಮಾಡುತ) ಜಡಚೇತನರಲ್ಲಿ ನಿತ್ಯದಲ್ಲಿ ನೆಲೆಸಿರುವನು. ಅವನ ನಿತ್ಯಸಂಬಂಧದಿಂದಲೇ, ಜಡಚೇತನರ ಸ್ವಭಾವ ಧರ್ಮಗಳು ಅಭಿವ್ಯಕ್ತವಾಗುವುವು.

**ಪ್ರಮಾಣ:-**

'ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ ।
ಯದನುಗ್ರಹತಃ ಸಂತಿ ನ ಸಂತಿ ಯದುಪೇಕ್ಷಯಾ ॥ ॥೨೬॥

## ಪದ್ಯ-೨೪

**ಮೂಲ:-**

**ಗ್ರಾಮಪನೊಳಗ್ರಣಿಯೆನಿಸುವನು ।**
**ಗ್ರಾಮಣಿಯೆನಿಸುವನು ಜನರೊಳ್ ।**
**ಗ್ರಾಮಪಗ್ರಾಮಗಳೊಳಗೆ ಶ್ರೀಮಾನ್ಯನೆನಿಸುತಿಪ್ಪ ॥**
**ಶ್ರೀಮನೋರಮ ತಾನೇ ಯೋಗ ।**
**ಕ್ಷೇಮನಾಮಕನಾಗಿ ಸಲಹುವ ।**
**ಈ ಮಹಿಮೆ ಮಿಕ್ಕಾದ ದೇವರಿಗುಂಟೆ ಲೋಕದೊಳು ॥೨೪॥**

**ಅವತರಣಿಕೆ :**

ಇನ್ನೂ ಇನ್ನಿತರ ಅಧಿಷ್ಠಾನಗತ ಭಗವನ್ನಾಮಗಳನ್ನು ತಿಳಿಸುತ್ತಾರೆ.
॥೨೪॥

**ಪ್ರತಿಪದಾರ್ಥ:-**

**ಗ್ರಾಮಪನೊಳು** = ಗ್ರಾಮಕ್ಕೆ ಅಧಿಕಾರಿಯಾದವನಲ್ಲಿ. **ಅಗ್ರಣಿಯೆನಿಸುವನು** = "ಅಗ್ರಣಿ"- ನಾಮಕನಾಗಿದ್ದಾನೆ. ಅಗ್ರಣಿ-ಎಂದರೆ.

"ಶ್ರೇಷ್ಠ"-ನೆಂದರ್ಥ, **ಜನರೊಳ್** = ಗ್ರಾಮಸ್ಥ ಜನರಲ್ಲಿ, **ಗ್ರಾಮಣಿಯನಿಸುವನು** = "ಗ್ರಾಮಣಿ"- ಎಂದು ಕರೆಯಿಸುವನು, ಅಂದರೆ, ಗ್ರಾಮಸ್ಥ ಜನರೆಂದರ್ಥ, **ಗ್ರಾಮ ಉಪಗ್ರಾಮಗಳೊಳಗೆ** = ದೊಡ್ಡ ಮತ್ತು ಚಿಕ್ಕ ಚಿಕ್ಕ ಗ್ರಾಮಗಳಲ್ಲಿ, **ಶ್ರೀಮಾನ್ಯನೆನಿಸುತಿಪ್ಪ** = "ಶ್ರೀಮಾನ್ಯ"-ನಾಮಕನಾಗಿದ್ದಾನೆ, ಶ್ರೀಮಾನ್ಯನೆಂದರೆ - ಐಶ್ವರ್ಯವಂತನೆಂದರ್ಥ, **ಶ್ರೀಮನೋರಮ** = ಶ್ರೀಲಕ್ಷ್ಮೀದೇವಿಗೆ ಹರುಷಪ್ರದನಾದ ಶ್ರೀಪರಮಾತ್ಮನು. **ತಾನೇ** = ಸ್ವಯಂ. **ಯೋಗಕ್ಷೇಮನಾಮಕನಾಗಿ** = "ಯೋಗಕ್ಷೇಮ" ನೆಂಬ ಹೆಸರಿನಿಂದ, ಅಂದರೆ, ಜನರಿಗೆ ಯೋಗಕ್ಷೇಮ ಕಾರಕನಾಗಿರುವನು. **ಸಲಹುವ** = ಸಮಸ್ತರನ್ನೂ ಸಂರಕ್ಷಿಸುವನು. **ಲೋಕದೊಳು** = ಹದಿನಾಲ್ಕು ಲೋಕಗಳಿಂದ ಯುಕ್ತವಾದ ಬ್ರಹ್ಮಾಂಡದಲ್ಲಿ, **ಈ ಮಹಿಮೆ** ಪೂರ್ವೋಕ್ತ ಮಹಾಮಹಿಮೆಗಳು. **ಮಿಕ್ಕಾದ ದೇವರಿಗುಂಟೆ** = ಶ್ರೀಹರಿಯನ್ನು ಬಿಟ್ಟು, ಉಳಿದ ಇತರ ದೇವತೆಗಳಿಗೆ ಇಲ್ಲವೆಂದು ತಾತ್ಪರ್ಯ. ॥೨೪॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಇನ್ನು, ತದಾಕಾರ, ತದ್ರೂಪ ವಿಚಾರ ಹೇಳುತಾರೆ, ಗ್ರಾಮಾಧಿಕಾರಿಯಾದ, ಗ್ರಾಮಜನರಿಂದ ಶ್ರೇಷ್ಠ-ಎಂತ ಕರೆಸಿಕೊಳ್ಳುವನೊಳಗಿದ್ದು, ಶ್ರೇಷ್ಠ ಎಂತ ಕರಸೋವನಾಗುತಾನೆ, ಗ್ರಾಮಪತಿ ವ್ಯತಿರಿಕ್ತ ಸಾಧಾರಣ ಮನುಷ್ಯರೊಳು ಇದ್ದು, ಗ್ರಾಮಸ್ಥ ಜನರು- ಎಂತ ಕರೆಸುವನು, ದೊಡ್ಡ ಗ್ರಾಮಕ್ಕ ಸೇರಿದ್ದು, ಅಪ್ರಸಿದ್ಧವಾದ ಚಿಕ್ಕ-ಚಿಕ್ಕ ಹಳ್ಳಿ ಗ್ರಾಮಗೊಳಗಿದ್ದು, ತಥಾ ದೊಡ್ಡದಾದ ಗ್ರಾಮದಲ್ಲಿದ್ದು, ಐಶ್ವರ್ಯವಂತನು- ಎಂತ ಎನಿಸುತಾ ಇರೋವನಾಗುತಾನೆ, ಲಕ್ಷ್ಮೀದೇವೀರಿಗೆ ಹರುಷಪ್ರದನಾದ ಶ್ರೀಪರಮಾತ್ಮ ತನಗೆ ತಾನೇ ಪೂರ್ವೋಕ್ತ ಪ್ರಕಾರ ರೂಪಗಳಿಂದ ಇದ್ದು, ಹದಿನಾಲ್ಕು ಲೋಕ

ಅಸ್ಯ ಅಸ್ತಿ ಇತಿ ಶ್ರೀಮಾನ್॥ ಅಪ್ರಾಪ್ತಲಾಭೋ ಯೋಗಃ॥ ಪ್ರಾಪ್ತರಕ್ಷಣಂ ಕ್ಷೇಮಃ. ॥೨೪॥

## ಕನ್ನಡಾರ್ಥ

ಕ್ಷೇಮ (ಕ್ಷೇಮಕೃತ್) ಸುಖದಿಂದ ಇರಿಸುವವನು. "ಅಗ್ರಣೀಃ"-ಶುಭಾಶುಭರೂಪಗಳಾದ ಅಗ್ರಗಳನ್ನು, ಕರ್ಮಗಳನ್ನು ಮಾಡಲು ಪ್ರೇರಿಸುವವನು॥ (ಹೊಂದಿಸುವವನು), "ಗ್ರಾಮಣೀ"-ಮನೋಹರವಾದ ಅಭೀಷ್ಟಗಳ ಸಮೂಹವನ್ನು ತಂದುಕೊಡುವವನು. "ಶ್ರೀಮಾನ್"-ಶ್ರೀಮಂತರಲ್ಲಿ ಇರುವುದು. ಶ್ರೀ-ಎಂದರೆ. ಕಾಂತಿ॥ ವರ್ಷ, ಮಾಸ, ದಿವಸಗಳು, ಕಳೆದುಹೋದರೂ, ಅವುಗಳಿಂದ ಕ್ಷೀಣವಾಗದೇ ಇರುವ ಕಾಂತಿಯುಳ್ಳವನು.

ಮೊದಲು ದೊರೆಯದಿರುವುದು, ಅನಂತರದಲ್ಲಿ ದೊರೆತರ, ಅದಕ್ಕೆ ಯೋಗವೆನ್ನುತಾರೆ, ಪ್ರಾಪ್ತವಾದ ವಸ್ತುವು ಉಳಿಯುದಾತೆ, ರಕ್ಷಿಸುವುದಕ್ಕೆ ಕ್ಷೇಮವೆನ್ನುತ್ತಾರೆ. ॥೨೪॥

### ೪. ಭಾವಪ್ರಕಾಶಿಕೆ

ಗ್ರಾಮಾಧಿಪತಿ- ಶಬ್ದದಿಂದ, ದೇಶಾಧಿಪತಿ, ಮಹಾರಾಜ ಮತ್ತು ಚಕ್ರವರ್ತಿಗಳು; ಇವರುಗಳಲ್ಲಿದ್ದು. ಅಗ್ರಣಿ-ಎಂದೆನಿಸುವನು. ಪ್ರಭುವೆಂದೆನಿಸುವಸಂದರ್ಭ, ಪ್ರಜೆಗಳಲ್ಲಿದ್ದು, ಗ್ರಾಮಿಣ ಎನಿಸುವನು. ಗ್ರಾಮಗಳಲ್ಲೂ ಉಪಗ್ರಾಮಗಳಲ್ಲೂ ಇದ್ದು, ಶ್ರೀಮಂತನೆನಿಸುವನು. ಇದರ ಅಭಿಪ್ರಾಯವೇನೆಂದರೆ.- ವಿಭೂತಿಯನ್ನು ಚಿಂತಿಸುವಂತೆ, ಗ್ರಾಮಗಳಲ್ಲಿ ಗ್ರಾಮಾಧಿಪತಿಯಲ್ಲಿದ್ದು, ಪ್ರಭು- ಎನಿಸುವನು. ಸಾಮಾನ್ಯಪ್ರಜೆಯಲ್ಲಿ ರಾಜನಲ್ಲಿದ್ದು ಪ್ರಭುವೆನಿಸುವನು, ರಾಜರುಗಳ ಮಧ್ಯದಲ್ಲಿ ಚಕ್ರವರ್ತಿ

ದೊಳು. ಪರಸ್ಪರ ಜನರು ಯೋಗಕ್ಷೇಮ ವಿಚಾರ ಮಾಡತಕ್ಕ ವ್ಯಾಪಾರದಲ್ಲಿ ಯೋಗಕ್ಷೇಮನಾದುದಿಂದ ಇದ್ದು. ಈ ಪ್ರಕಾರ ಸಂರಕ್ಷಣೆ ಮಾಡುತ್ತಾನೆ. ಈ ಪೂರ್ವೋಕ್ತ ಮಹಾಮಹಿಮಾಗಳು ಇತರಾದಿ ದೇವತೆಗಳಿಗೆ ಉಂಟೆ ಎಂದರೆ, ಇಲ್ಲ ಎಂತ ತಾತ್ಪರ್ಯ ॥೨೪॥

## ೩. ಭಾವದರ್ಪಣ

ಗ್ರಾಮಣೀ । ಗ್ರಾಮಪರಿಪಾಲನ ಮಾಡತಕ್ಕ ಗೌಡ ಶಾನಭೋಗಾದಿ ರಾಜರ ಪರ್ಯಂತ ಅಧಿಕಾರಿಗಳಲ್ಲಿದ್ದು. ತತ್ತನ್ನಾಮದಿಂದ ಕರಿಸಿಕೊಳ್ಳುತ್ತಾನೆ-ಎಂಬರ್ಥ. ॥೧೪॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

"ಕ್ಷೇಮ"-ಓಂ ಅಮೃತಂ ದಿವಿ ಯಸ್ಮೈ ತ್ವಂ ಮಘವನ್ನಿಂದ್ರಗಿರ್ವಣಃ॥ ಶಿಕ್ಷೋ ಶಿಕ್ಷಸಿ ದಾಶುಷೇ ಅಸ್ಮಾಕಂ ಗಿರ ಉತ ಸುಷ್ಟುತಿಂ ವಸೋ ॥ ಓಂ ಕ್ಷಿಣೋತಿ ವಾಸಯಾತಿ ಸುಖಂ ನಿವಸನ್ ಇತಿ ಕ್ಷೇಮಃ॥ "ಅಗ್ರಣೀ"-ಓಂ ಅಸ್ಮದದ್ಯ (ಕರ್ಮ) ಮನ್ಯದುಲ್ಬೋ ಸತ್ರಷ್ಟ ಸನ್ ಮಹುರಾಚಕ್ರಿರಿಂದ್ರಃ॥ ಮಿತ್ರೋ ನೋ ಅತ್ರ ವರುಣಶ್ಚ ಪೂಷಾರ್ಯಃ ॥ಓಂ॥ ಅಗ್ರಾಣಿ ಶುಭಾಶುಭ ರೂಪಾಣಿ ಕರ್ಮಾಣಿ ನಯತಿ ಇತಿ ಅಗ್ರಣೀಃ॥

"ಗ್ರಾಮಣೀಃ" — ಓಂ ವನಸ್ಯ ಪರ್ಯಂತಾಸ್ತಿ ವಿ ಸ್ವದಾಪೋ ನ ಪರ್ವತಸ್ಯ ಪೃಷ್ಠ್ಯಾದುಕ್ತೇಭಿರಿಂದಾನಯಂತ ಯಜ್ಞೈಃ ತಂ ತ್ವಾಭಿಃ ಸುಷ್ಟುತಿಭಿರ್ವಾ ಜಯತಃ ಓಂ॥ ಕಮನೀಯಂ ಅಭೀಷ್ಟ ಗ್ರಾಮಂ ನಯತಿ ಇತಿ ಗ್ರಾಮಣೀಃ॥

"ಶ್ರೀಮಾನ್" — ಓಂ ಅಜಂ ನ ಜಗ್ಮುರ್ಗಿರವಾಹೋ ಅಶ್ವಾಃ ನಯುಂ ಜರಾತಿ ಶರದೋ ನ ಮಾಸಾ ನ ದ್ಯಾವ ಇಂದ್ರಮವಕರ್ಶಯಂತಿ ॥ಓಂ॥ ಶ್ರಯತೇ ಇತಿ ಶ್ರೀಃ ಕಾಂತಿಃ॥ ಶರನ್ಮಾಸದಿವಸಾದಿಭಿಃ ಅನಪಕ್ಷೀಣ ಕಾಂತಿಃ

ಯಲ್ಲಿದ್ದು ಪ್ರಭುವೆನಿಸುವನು. ಅಂತು ಆಯಾ ಗುಂಪುಗಳಿಗೆ ಅಧಿಪತಿ ಸ್ಥಾನದಲ್ಲಿದ್ದು, ಆ ಪ್ರಭು ಕಾರ್ಯವನ್ನು ತಾನು ಮಾಡುವನೆಂಬ ತಾತ್ಪರ್ಯ, ಲಕ್ಷ್ಮೀ ಮನೋಹರನಾದ ಶ್ರೀಮನ್ನಾರಾಯಣನು ಸಕಲ ಪ್ರಜೆಗಳಲ್ಲೂ ಯೋಗಕ್ಷೇಮವೆಂಬ ಹೆಸರಿನಿಂದ ತಾನಿದ್ದು. ಯೋಗಕ್ಷೇಮವನ್ನು ತಾನು ವಹಿಸಿ ಸಂರಕ್ಷಿಸುವನು, ಇಂತಹ ಮಹಿಮೆಯು ಮಿಕ್ಕ ಯಾವ ದೇವತೆಗಳಿಗಾದರೂ ಉಂಟೆ? ಎಂದಿಗೂ ಇಲ್ಲವೆಂಬ ತಾತ್ಪರ್ಯ ॥೨೬॥

**೫. ಶ್ರೀ ಗುರುಹೃದಪ್ರಯಕಾಶಿಕೆ**

ಗ್ರಾಮಪತಿಯಲ್ಲಿದ್ದು, ಅಗ್ರಣಿ- ಎಂದು ಕರೆಸುವನು. ಗ್ರಾಮಜನರಲ್ಲಿದ್ದು, ಗ್ರಾಮಣೀ-ಎನಿಸುವನು, ಗ್ರಾಮ ಉಪಗ್ರಾಮಕ್ಕೆ ಸಹ ಅಧಿಪತಿಗಳಲ್ಲಿದ್ದು, ಶ್ರೀಮಾನ್- ಎನಿಸುವನು. ಶ್ರೀದೇವಿ ಮನೋಹರ್ಷಕನಾದ ಸ್ವಾಮಿ, ಸರ್ವರ ಯೋಗವೆಂಬ ಲಾಭದಲ್ಲಿಯೂ, ಕ್ಷೇಮವೆಂಬ ಇದ್ದದ್ದನ್ನೇ ರಕ್ಷಿಸುವುದರಲ್ಲಿಯೂ ಇದ್ದು, ಯೋಗಕ್ಷೇಮನಾಮಕನಾಗಿ ಸಲಹುವನೆಂದು ಅರ್ಥ. ಪರಮಸ್ವತಂತ್ರಮಹಿಮೆ ವಿಷ್ಣುವಿತರ ದೇವತೆಗಳಿಗೆ ಲೋಕದಲ್ಲಿ ಉಂಟೆ- ಎಂದರೆ. ಇಲ್ಲಾ-ಎಂದರ್ಥ ॥೨೭॥

## ಸರ್ವವ್ಯಾಖ್ಯಾನಸಾರ ಸಂಗ್ರಹ

೧. ಗ್ರಾಮ-ಎಂದರೆ, ಪಟ್ಟಣಕ್ಕಿಂತ ಚಿಕ್ಕದಾದ ಹಳ್ಳಿ. ಆ ಗ್ರಾಮಾಧಿಕಾರಿಯಾದ ಶ್ಯಾನುಭೋಗನಿಗೆ **ಗ್ರಾಮಪ**-ನೆಂದು ಹೆಸರು. ಗ್ರಾಮಪನಲ್ಲಿದ್ದು, **ಅಗ್ರಣಿ**-ನಾಮಕನಾಗಿ. ಅವನ ದ್ವಾರಾ ಗ್ರಾಮಾಧಿಕಾರವನ್ನು ನಡೆಸಿ ನಡೆಯಿಸುವನು. **ಅಗ್ರಣಿ**-ಎಂದರೆ, ಮುಖಂಡ ಅಥವಾ ಶ್ರೇಷ್ಠನೆಂದರ್ಥ. ಗ್ರಾಮದ ಮುಖಂಡನೆನಿಸುತ್ತಾನೆ.

೨ ಗ್ರಾಮವಾಸಿಗಳಾದ ಜನರಲ್ಲಿ ವಿದ್ಯಮಾನನಾಗಿದ್ದು, **ಗ್ರಾಮಣಿ**-ಎನಿಸುವನು. ಅಂದರೆ, ಗ್ರಾಮಸ್ಥರು-ಎಂಬ ಶಬ್ದದಿಂದ ವಾಚ್ಯನಾಗಿದ್ದಾನೆ.

೩. ದೊಡ್ಡ ಹಳ್ಳಿಗಳಿಗೆ ಹೊಂದಿಕೊಂಡಿರುವ ಸಣ್ಣ ಸಣ್ಣ ಹಳ್ಳಿಗಳಿಗೆ- **ಉಪಗ್ರಾಮ** - ಗಳೆನ್ನುವರು. ಅಂತಹ ಉಪಗ್ರಾಮಾಸ್ಥನಾಗಿದ್ದು, **ಶ್ರೀಮಾನ,** - ನೆನಿಸುವನು. ರೂಢಿಯಲ್ಲಿ ಸಾಮಾನ್ಯ ಪ್ರಜೆಗಳನ್ನು- "ಶ್ರೀಮಾನ್- ಎಂದರೆ, ಶ್ರೀಮಂತನಲ್ಲಿರುವವನು ಎಂದರ್ಥ. ಅಂದರೆ, ಐಶ್ವರ್ಯವಂತನೆಂದು ಪ್ರಸಿದ್ಧ. ಇನ್ನೊಂದರ್ಥ- "ಶ್ರೀ"- ಎಂದರೆ, ಕಾಂತಿ ಅಥವಾ ಪ್ರಕಾಶ, ವರ್ಷ, ಮಾಸ. ದಿನಾದಿ ಕಾಲಪ್ರಮಾಣಗಳು ಗತಿಸಿದರೂ, ಕ್ಷೀಣವಾಗದೇ ಕಾಂತಿಸಂಪನ್ನನಾಗಿರುವನೆಂದರ್ಥ.

೪. ಶ್ರೀಲಕ್ಷ್ಮೀದೇವಿಯರ ಮನಸ್ಸನ್ನು ತನ್ನ **ಅಪಾರಸದ್ಗುಣ**ಗಳಿಂದ ಅಪಹಾರಮಾಡಿರುವುದರಿಂದ, ಶ್ರೀಹರಿಗೆ-**ಶ್ರೀಮನೋಹರ**-ನೆಂತ ನಾಮ. ಅಂತಹ ಶ್ರೀಮನೋಹರನು **ಯೋಗಕ್ಷೇಮ ನಾಮಕನಾಗಿದ್ದಾನೆ.**

'ಯೋಗ'-ಎಂದರೆ, ಸಂಬಂಧವನ್ನು ಕಲ್ಪಿಸುವುದು. ಪ್ರಾಪ್ತವಾಗದಿದ್ದ ವಸ್ತುವು ನಮಗೆ ಪ್ರಾಪ್ತವಾದರೆ, ಆ ಪ್ರಸಂಗವಿಶೇಷಣಕ್ಕೆ "ಯೋಗ"-ವೆಂದು ಹೆಸರು. ಪ್ರಾಪ್ತವಾದ ವಸ್ತುವು ಉಳಿಯುವಂತೆ ರಕ್ಷಿಸುವವನಾದ್ದರಿಂದ, **ಯೋಗಕ್ಷೇಮಕಾರಕನು.**

"ಅನನ್ಯಾಶ್ಚಿಂತಯಂತೋ ಮಾಂ ಯೇಜನಾಃ ಪರ್ಯುಪಾಸತೇ ।
ತೇಷಾಂ ನಿತ್ಯಾಭಿಯುಕ್ತಾನಾಂ **ಯೋಗಕ್ಷೇಮಂ** ವಹಾಮ್ಯಹಂ ॥

## -ಗೀತಾಶ್ಲೋಕ-

ನನ್ನನ್ನೇ ಯಾರು ಏಕಮನಸ್ಸಿನಿಂದ ಚಿಂತನೆ ಮಾಡುತ್ತಾರೋ, ಅಂತಹ ಏಕಾಂತಭಕ್ತರಲ್ಲಿ ಎಡಬಿಡದೆ ನಾನೇ ನಿಂತು, ಅವರ ಯೋಗಕ್ಷೇಮವನ್ನು ವಹಿಸುತ್ತೇನೆ-ಎಂದು ಗೀತಾಚಾರ್ಯನ ಅಭಯವಾಕ್ಯ. ಇಂತಹ ಅಪಾರ ಹಾಗೂ ಅನುಪಮ ಮಹಿಮೆಗಳು, ಶ್ರೀಹರಿಯಲ್ಲದೇ ಇತರ ಯಾವ ದೇವತೆಗಳಿಗಾದರೂ ಇದೆಯೇ?- ಎಂದು ಪ್ರಶ್ನಿಸಿದ್ದಾರೆ- ದಾಸರಾಯರು. ॥೨೪॥

## ಪದ್ಯ-೨೫

**ಮೂಲ :**

**ವಿಜಯಸಾರಥಿ ಎಂದು ಗರುಡ ।**
**ಧ್ವಜನ ಮೂರ್ತಿಯ ಭಕ್ತಿಪೂರ್ವಕ ।**
**ಭಜಿಸುತಿಪ್ಪ ಮಹಾತ್ಮರಿಗೆ ಸರ್ವತ್ರದಲಿ ಒಲಿದು ॥**
**ವಿಜಯದನು ತಾನಾಗಿ ಸಲಹುವ ।**
**ಭುಜಗಭೂಷಣಪೂಜ್ಯ ಚರಣಾಂ ।**
**ಭುಜ ವಿಭೂಷಿತ ಭುವನಮೋಹನರೂಪ ನಿರ್ಲೇಪ ॥೨೫॥**

**ಅವತರಣಿಕೆ:-**

ಗರುಡಧ್ವಜನಾದ ಆ ಮಂಗಳಮೂರ್ತಿಯನ್ನು ಭಕ್ತಿಪೂರ್ವಕವಾಗಿ ನಿರಂತರ ಭಜಿಸುತ್ತಿಪ್ಪ ಮಹಾತ್ಮರನ್ನು ಸಲಹುವನೆಂದೂ, ಅವರಿಗೆ ಅಪಜಯ ವಿಲ್ಲವೆಂದೂ ತಿಳಿಸುತ್ತಾರೆ. ॥೨೫॥

**ಪ್ರತಿಪದಾರ್ಥ:-**

**ವಿಜಯ ಸಾರಥಿ** — ಪಾರ್ಥಸಾರಥಿಯಾದ ಶ್ರೀಹರಿಯೇ ಎಂದು. **ಗರುಡಧ್ವಜನಮೂರ್ತಿಯ**—ಗರುಡನನ್ನೇ ತನ್ನ ಲಾಂಛನವನ್ನಾಗಿ ಉಳ್ಳ ಶ್ರೀಮನ್ನಾರಾಯಣನ ದಿವ್ಯಮಂಗಳವಿಗ್ರಹನನ್ನು, **ಭಕ್ತಿಪೂರ್ವಕ**— ಭಕ್ತಿಪುರಸ್ಸರವಾಗಿ, **ಭಜಿಸುತಿಪ್ಪ** — ಸ್ತೋತ್ರರೂಪದಿಂದ ಕೊಂಡಾಡುತ್ತಿರುವ, **ಮಹಾತ್ಮರಿಗೆ**— ಮಹಾನುಭಾವರಾದ ಭಗವದ್ಭಕ್ತರಿಗೆ, **ಸರ್ವತ್ರದಲ್ಲಿ** — ಎಲ್ಲಾ ಪ್ರಕಾರಗಳಲ್ಲಿಯೂ, **ಒಲಿದು** — ಅನುಗ್ರಹಮಾಡಿ,

**ವಿಜಯದನು ತಾನಾಗಿ** — ಜಯಪ್ರದನು ಸ್ವಯಮಾಗಿ, **ಸಲಹುವ** = ಸಂರಕ್ಷಿಸುವನು. **ಭುಜಗಭೂಷಣ ಪೂಜ್ಯ** — ಸರ್ಪದಿಂದಲಂಕೃತನಾದ ಮಹರುದ್ರದೇವರಿಂದ ಪೂಜಿತನಾದ. **ಚರಣಾಂಬುಜ** — ಪಾದಪದ್ಮಗಳುಳ್ಳ, **ವಿಭೂತಿದ** — ಸ್ವಸ್ವರೂಪಾನಂದಾಭಿವ್ಯಕ್ತಿರೂಪವಾದ ನಿತ್ಯಾನಂದವನ್ನು ಜೀವರಿಗೆ ನೀಡುವವನಾಗಿ, **ಭುವನಮೋಹಕರೂಪ** = ಬ್ರಹ್ಮಾಂಡಗತಸಕಲ ಜೀವರಿಗೆ ಮೋಹವನ್ನುಂಟುಮಾಡುವ ರೂಪ ಸೌಂದರ್ಯಾದಿಗಳಿಂದ ಪೂರ್ಣನಾದ, **ನಿರ್ಲೇಪ** — ಸಮಸ್ತ ಜಡಜೀವರಿಂದ ಅತ್ಯಂತ ವಿಲಕ್ಷಣನಾದ ಶ್ರೀಪರಮಾತ್ಮನು-ಎಂದು ತಾತ್ಪರ್ಯ. ॥೨೫॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮನ ಭಜಿಸುವವರಿಗೆ ಅಪಜಯವಿಲ್ಲೆಂದು ಹೇಳತಾರೆ. ಸರ್ಪಭೂಷಣನಾದ ರುದ್ರದೇವರಿಂದ ಪೂಜಿತವಾದ ಪಾದಕಮಲಗಳುಳ್ಳವನೇ. ರಮಾ-ಬ್ರಹ್ಮಾದಿ ಸರ್ವಜೀವರೂ ಮೋಹಪಡತಕ್ಕ ದಿವ್ಯ ಸುಂದರವಾದ ರೂಪವುಳ್ಳವನೇ. ಅರ್ಜುನನಿಗೆ ಸಾರಥಿಯಾಗಿ, ಕಾರ್ಯ ಮಾಡಿದವನೇ ಎಂತ. ಈ ಪ್ರಕಾರ ಶ್ರೀಪರಮಾತ್ಮನ್ನ ಸ್ಮರಣ ಮಾಡತಾ. ಗರುಡದೇವರು ಧ್ವಜವಾಗಿ ಉಳ್ಳ ಶ್ರೀನಾರಾಯಣ ದೇವರನ್ನೇ ಹೃದಯಾಕಾಶದಲ್ಲಿ ನಿಲ್ಲಿಸಿ, ಏಕಾಗ್ರಚಿತ್ತದಿಂದ ಪರಮಸ್ನೇಹಪೂರ್ವಕ ಭಕ್ತಿಯಿಂದ ಭಜನಿ ಮಾಡುವಂಥಾ ದಿವ್ಯಜ್ಞಾನಿಗಳಿಗೆ ಸಮಸ್ತವಾದ ಏಕಾದಶೇಂದ್ರಿಯಗಳಲ್ಲಿ ವ್ಯಾಪ್ತನಾಗಿದ್ದು, ತಥಾ ಬ್ರಹ್ಮಪರ್ವತದಲ್ಲಿ ಇದ್ದು, ಇಂದ್ರಿಯಜಯವನ್ನು, ಚತುಃ ಜಯವನ್ನು ತನಗೆ ತಾನಾಗಿ ಕೊಟ್ಟು, ಅಪರೋಕ್ಷದಿಂದ ಒಲಿದು, ಆಗಾಮಿ-ಸಂಚಿತಗಳಿಂದ ಲೇಪರಹಿತರನ್ನಾಗಿ ಮಾಡಿ, ಪ್ರಾಂತಕ್ಕೆ ಲಿಂಗಭಂಗ ಐದಿಸಿ, ಸ್ವಸ್ವರೂಪಾನಂದ ಅಭಿವ್ಯಕ್ತಿರೂಪವಾದ

ಐಶ್ವರ್ಯವನ್ನು ಕೊಡೋವನಾಗತಾನೆ, ಇಹದಲ್ಲಿ ದಿವ್ಯಜ್ಞಾನವೇನು, ಐಶ್ವರ್ಯವೇನು, ಕೊಟ್ಟು ಸಂರಕ್ಷಣ ಮಾಡತಾನೆ, ಆದ್ದರಿಂದ, ಸರ್ವಾರಿಷ್ಟ ನಿವೃತ್ತಿ. ಇಷ್ಟಪ್ರಾಪ್ತಿ-ಆಗಬೇಕಾದರೆ, ಶ್ರೀಪರಮಾತ್ಮನ ಸ್ಮರಣ ಆರಾಧನ ಹೊರ್ತು. ಬ್ಯಾರೆ ಇಲ್ಲ- ಎಂತ ತಾತ್ಪರ್ಯ. ಆದ್ದರಿಂದ, ಸರ್ವಪ್ರಕಾರದಿಂದಲೂ ಶ್ರೀದೇವರನ್ನ ಭಜಿಸಿದರೆ, ಸಂರಕ್ಷಣಮಾಡತಾನೆ ಎಂತ ಭಾವವು. ॥೨೫॥

**೨. ಭಾವದರ್ಪಣ**

ವಿಜಯ । ಅರ್ಜುನ ಸಾರಥಿ ॥೨೫॥

## ೩. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ

'ವಿಜಯ' ಇತಿ ॥ **"ಗರುಡಧ್ವಜಃ"**- ಓಂ ಮನಾಂಸಿ ಆತೂಂಷಿ ಚ ಕಣ್ವಪಂಕ್ತಿಂ ನ ಘಾ ವಿಶದ್ಯವಸಾನಾತ್ ಯುದಸ್ಮರಂ ಶತಮೂರ್ತೇಃ ಜ್ಯೇಷ್ಠ ನಸೋತ್ರೋರಿಂದ್ರಾಯಃ॥ ॥ಓಂ॥ ಗಚ್ಛತಿ ಅನಗಿಚ್ಛತಿ ಇತಿ ಗೋ ಜ್ಞಾನೀ॥ ಶೇನ ರುಃ ಯುದ್ಧಂ ತತ್ರ ಡೋಧ್ವನಿಃ॥ ಸ್ವಾಪೇಕ್ಷಯಾ ಅಧಿಗುಣಪುಂಸಾ ನಿಯುಧ್ಯ ತಜ್ಜಯೇನ ನಗತಿ ಸ್ವಾಧಿಕಪುಮಸಹಿಷ್ಣುಃ ॥೨೫॥

## ಕನ್ನಡಾರ್ಥ

**"ಗರುಡಧ್ವಜ"** – ಗ ಎಂದರೆ, ಜ್ಞಾನವಂತನು, ಆದುದರಿಂದ 'ರು' ಯುದ್ಧದಲ್ಲಿ, 'ಡಂ' ಧ್ವನಿಯುಂಟ ಚಿಹ್ನವುಳ್ಳವನು- ಎಂದು ಅರ್ಥ, ತನಗಿಂತಲೂ ಅಧಿಕ ಗುಣವುಳ್ಳವನೊಡನೆ ಯುದ್ಧಮಾಡಿ, ಅವನನ್ನು ಜಯಿಸಿ, ಆದರಿಂದ ನಾಶಮಾಡುತಾನೆ. ಎಂದರೆ, ಯುದ್ಧದಲ್ಲಿ ತನಗಿಂತ ಅಧಿಕ ಪುರುಷನಿಲ್ಲದಂತೆ ಮಾಡುವವನೆಂದು ತಾತ್ಪರ್ಯ. ॥೨೫॥

## ೪. ಭಾವಪ್ರಕಾಶಿಕೆ

ಗರುಡಧ್ವಜನಾದ ಶ್ರೀಕೃಷ್ಣಮೂರ್ತಿಯನ್ನು ಪಾರ್ಥಸಾರಥಿ- ಎಂದು ಭಕ್ತಿಪೂರ್ವಕವಾಗಿ ಭಜಿಸುವ ಮಹಾತ್ಮರಿಗೆ ಪರಮಾತ್ಮನು ಪ್ರಸನ್ನನಾಗಿ, ಅವರಿಗೆ ಎಲ್ಲಾ ಕಾರ್ಯಗಳಲ್ಲೂ ಜಯವನ್ನು ಕೊಡಿಸಿ ರಕ್ಷಿಸುವನು. ರುದ್ರಾದಿ ದೇವತೆಗಳನ್ನು ಭಜಿಸಿದರೆ, ಎಂತಹ ವರವು ದೊರಕುವುದೆಂದರೆ, ರುದ್ರದೇವರು ಪರಮಾತ್ಮನಿಗೆ ಭೃತ್ಯರಾದುದರಿಂದ, ಮಹಾರಾಜನ ಸಾಕ್ಷಾ ಪ್ರಸಾದಕ್ಕೂ, ಅವನ ಭೃತ್ಯನ ಪ್ರಸಾದಕ್ಕೂ ಎಷ್ಟು ಭೇದವಿರುವುದೋ ಇಲ್ಲೂ ಅಷ್ಟೇ ಭೇದವಿರುವುದೆಂದು ತೋರಿಸುವುದಕ್ಕಾಗಿ ಭುಜಗಭೂಷಣ ಪೂಜ್ಯ ಚರಣಾಂಬುಜನೆಂದರು. ರುದ್ರದೇವರಿಂದ ಪೂಜ್ಯವಾದ ಪಾದಕಮಲಗಳುಳ್ಳವನೆಂದ ಮೇಲೆ, ರುದ್ರದೇವರು ಭೃತ್ಯರೆಂದು ಬೇರೆ ಹೇಳಬೇಕ? ಆದ್ದರಿಂದ ವಿಭೂತಿಪನೆಂದರು; ಇಹಪರಗಳಲ್ಲೂ ಪರಮಾತ್ಮನು ಕೊಡುವ ಐಶ್ವರ್ಯಕ್ಕೆ ಹಾನಿ ಇಲ್ಲವು. ಮಿಕ್ಕವರು ಕೊಟ್ಟರೂ, ಅಲ್ಪಫಲವನ್ನು ಕೊಡುವರು, ಪರಮಾತ್ಮನು ಮಹಾಫಲವನ್ನು ಕೊಡುವನೆಂಬ ತಾತ್ಪರ್ಯ. ಬ್ರಹ್ಮ, ವಿಷ್ಣು, ಮಹೇಶ್ವರರು- ಮೂವರೂ ವರಗಳನ್ನು ಕೊಡುವವರೇ ಆದರೂ (ಭಾಗವತ ದಶಮಸ್ಕಂಧ ಉತ್ತರಾರ್ಧದಲ್ಲಿ ೯೧ನೆಯ ಅಧ್ಯಾಯ. "ಸದ್ಯಃ ಶಾಪ ಪ್ರಸಾದಾಂಗ ಶಿವೋ ಬ್ರಹ್ಮ ನಚಾಚ್ಯುತಃ" ರುದ್ರದೇವರಾಗಲಿ, ಬ್ರಹ್ಮದೇವರಾಗಲೀ ಇವರುಗಳು ಪ್ರಸನ್ನರಾಗಬೇಕಾದರೂ, ಕೋಪಿಸಿಕೊಳ್ಳಬೇಕಾದರೂ ತಕ್ಷಣ, ತಕ್ಷಣದಲ್ಲೇ ಅಂದರೆ, ಸ್ವಲ್ಪವಾದ ತಪಸ್ಸಿಗೆ ಮೆಚ್ಚಿ ತಕ್ಷಣವೇ ವರವನ್ನು ಕೊಡುವರು, ಸ್ವಲ್ಪ ಅಪರಾಧಕ್ಕೆ ಕುಪಿತರಾಗಿ ಶಾಪವನ್ನೂ ಕೊಡುವರು, ಇವೆರಡೂ ಸ್ಥಿರವಾದುದಲ್ಲ, ರುದ್ರ ದೇವರು ಕೊಟ್ಟ ವರವನ್ನು ವಾಯುದೇವರು ಶ್ರೀಪರಮಾತ್ಮನೂ ಸಹ ನಾಶ ಮಾಡುವರು, ಬ್ರಹ್ಮದೇವರ ವರವನ್ನೂ ಕೆಲವು ಕಡೆ ವಾಯುದೇವರೂ, ಕೆಲವು ಸ್ಥಳಗಳಲ್ಲಿ ಪರಮಾತ್ಮನೂ ಧ್ವಂಸ ಮಾಡುವರು, ಪರಮಾತ್ಮನೂ ಕೊಟ್ಟ ವರಕ್ಕೆ ಹಾನಿ ಇಲ್ಲವೆಂದು ಭಾಗವತಾದಿ ವಚನವಿರುವುದರಿಂದ, ಆ ಆಧಾರದ ಮೇಲೆ ಈ ಅರ್ಥವು ಇಲ್ಲಿ ಬರೆಯಲ್ಪಟ್ಟಿದೆ. ॥೨೫॥

### ೫. ಶ್ರೀ ಗುರುಹೃದಯ ಪ್ರಕಾಶಿಕೆ

ವಿಜಯಸಾರಥಿ ಎಂದೆನಿಸುವ ಗರುಡಧ್ವಜ ಶ್ರೀಕೃಷ್ಣನ ಅರ್ಜುನನ ಸಾರಥಿರೂಪವನ್ನ ಭಕ್ತಿಪೂರ್ವಕ ಉಪಾಸನೆ ಮಾಡುವ, ಮಹಾತ್ಮರೆಂಬ ಮುಖ್ಯಾಧಿಕಾರಿಗಳಿಗೆ ಒಲಿದು, ಸರ್ವತ್ರ ವಿಜಯ ಕೊಟ್ಟು ರಕ್ಷಿಸುವನು. ಭುಜಗಭೂಷಣನೆಂಬ ರುದ್ರಪೂಜಿತ ಚರಣಕಮಲನು. ತ್ರಿಭುವನ ಮೋಹನನೆಂಬ ಪರಮಸೌಂದರ್ಯರೂಪನು. ನಿರ್ಲೇಪ-ಎಂದರೆ, ಅಕಾಶದಂತೆ ಸಂಪರ್ಕ ರಹಿತನೆಂದರ್ಥ. ॥೭೫॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಕುರುಕ್ಷೇತ್ರದ ಮಹಾಸಮರದಲ್ಲಿ ಪರಮಕರುಣಾಳುವಾದ ಶ್ರೀಕೃಷ್ಣನು ಪಾಂಡವರಿಗೆ ದೌತ್ಯರೂಪವಾದ ಸೇವೆಯನ್ನು ಮಾಡಿದನು. ಪಂಚಪಾಂಡವರಲ್ಲಿ ಮಧ್ಯಮ ಪಾಂಡವನಾದ ಅರ್ಜುನನಲ್ಲಿ ಶ್ರೀಪರಮಾತ್ಮನ ವಿಭೂತಿರೂಪ ಅಧಿಕ, ವಿಜಯನಾಮಕನಾದ ಅರ್ಜುನನಿಗೆ ಸಾರಥಿಯಾಗಿ ರಥವನ್ನು ನಡೆಸಿದನು, ಬಂಡಿಬೋವನನಾದ ಶ್ರೀಕೃಷ್ಣನು **ವಿಜಯ ಸಾರಥಿಯು.**

೨. ಅಂತಹ ವಿಜಯಸಾರಥಿಯಾದ ಶ್ರೀಕೃಷ್ಣನಿಗೆ ಗರುಡನು ವಾಹನನು, ಇದರಿಂದ **ಗರುಡಧ್ವಜಮೂರ್ತಿ** ಎಂದಿದ್ದಾರೆ.

"ಗ" - ಎಂದರೆ, ಜ್ಞಾನವಂತನು. "ರು" – ಎಂದರೆ ಯುದ್ಧದಲ್ಲಿ. (ರಣ ಎಂಬರ್ಥ) "ಡಃ" - ಎಂದರೆ, ಧ್ವನಿಯೆಂಬ ಚಿಹ್ನೆವುಳ್ಳವನು. ಎಂಬರ್ಥ, ತನಗಿಂತಲೂ ಅಧಿಕಗುಣವುಳ್ಳವನೊಡನೆ ಯುದ್ಧಮಾಡಿ, ಅವನನ್ನು ಜಯಿಸಿ, ಆದರಿಂದ ನಾದ ಮಾಡುತಾನೆ, ಎಂದರೆ-ಯುದ್ಧದಲ್ಲಿ ತನಗಿಂತ ಅಧಿಕ ಪುರುಷನಿಲ್ಲದಂತೆ ಮಾಡುವವನೆಂದು ತಾತ್ಪರ್ಯ.

೩. ಗರುಡವಾಹನನಾದ ಶ್ರೀಕೃಷ್ಣನು ವಿಜಯಸಾರಥಿ- ಎಂಬ ಉತ್ತಮ ಜ್ಞಾನಾನುಸಂಧಾನದಿಂದ ಆ ಪರಮಮಂಗಳಮೂರ್ತಿಯನ್ನು ಭಕ್ತಿಭರಿತರಾಗಿ ಭಜಿಸುತ್ತಿರುವ ಮಹಾಮಹಿಮರಿಗೆ ಸರ್ವಪ್ರಕಾರದಲ್ಲಿ ಒಲಿದು ಅನುಗ್ರಹಿಸುವನು. ಅದೇ ರೀತಿಯಲ್ಲಿ, ಪಿಂಡಾಂಡ ರೂಪವಾದ ಈ ಸ್ಥೂಲ ದೇಹದಲ್ಲಿ ಸಕಲೇಂದ್ರಿಯಗಳಲ್ಲಿ ವ್ಯಾಪ್ತನಾಗಿರುವ ಆ ಸರ್ವೇಶ್ವರನನ್ನು ಬ್ರಹ್ಮಜ್ಞಾನಿಗಳು ಅನವರತ ಕೊಂಡಾಡುತ್ತಿರುವರು. ತದ್ದ್ವಾರ, ಅವರಿಗೆ ಭಗವದನುಗ್ರಹರೂಪವಾದ ಪ್ರಸಾದ ಪ್ರಾಪ್ತಿ.

೪. **ವಿಜಯ**-ಎಂದರೆ. ಗೆಲುವು ಅಥವಾ ಜಯವೆಂದರ್ಥ, ಕರ್ಮವಶರಾಗಿ ಜನನಮರಣಾಬ್ಧಿರೂಪವಾದ ಈ ಸಂಸಾರವೆಂಬ ದುಸ್ತರವಾದ ಜಲಧಿಯನ್ನು ದಾಟಿಸಿ, ಸಜ್ಜನರು ಪ್ರತಿಬಂಧಕರೂಪವಾದ ಕರ್ಮ ಕೋಟಲೆಯನ್ನು ಪರಿಹರಿಸಿ, ಅವರಿಗೆ ಸ್ವರೂಪಗತ ಆನಂದಾವಿರ್ಭಾವರೂಪವಾದ ನಿತ್ಯಾನಂದರೂಪವಾದ ಮೋಕ್ಷಾನಂದವನ್ನು ಕೊಡುವನೆಂದರ್ಥ, ಈ ಭಾವದಿಂದಲೇ ದಾಸರಾಯರು **ವಿಜಯದನು ತಾನಾಗಿ**-ಎಂದಿದ್ದಾರೆ.

೫. ಸರ್ಪರಿಂದ ಅಲಂಕೃತನಾದ ಮಹರುದ್ರದೇವರು **ಭುಜಗಭೂಷಣರು.** ಅಂತಹ ಭುಜಗಭೂಷಣರಾದ ಭವಾನಿಪತಿಯಿಂದ ಪೂಜ್ಯನಾದವನು, ಪರಮಪುರುಷನಾದ ಶ್ರೀಹರಿ. ರುದ್ರಪೂಜಿತ ಚಾರುಚರಣಾರವಿಂದವುಳ್ಳ ಆ ಚತುರ್ದಶಭುವನಾಧೀಶನು ಪರಮ ಐಶ್ವರ್ಯವಂತನು (ವಿಭೂವಿದ) ಭುವನಮೋಹನರೂಪನು, ಆ ಭುಜಗಶಯನನು ಸಕಲ ಚರಾಚರ ವಸ್ತುಗಳಿಂದ ಅತ್ಯಂತ ಭಿನ್ನನಾಗಿ, ಸರ್ವೋತ್ತಮನಾಗಿದ್ದಾನೆ. (ನಿರ್ಜೀವ).
॥೨೫॥

## ಪದ್ಯ-೨೬

**ಮೂಲ :**

> **ಅನಭಿಮತ ಕರ್ಮಪ್ರವಹಸೊಳ ।**
> **ಗನಿಮಿಷಾದಿ ಸಮಸ್ತಚೇತನ ।**
> **ಗಣವಿಹುದು ತತ್ಫಲಗಳುಣ್ಣದೆ ಸೃಷ್ಟಿಸದ ಮುನ್ನ ॥**
> **ವನಿತೆಯಿಂನೊಡಗೂಡಿ ಕರುಣಾ ।**
> **ವನಧಿ ನಿರ್ಮಿಸಿ ತಮ್ಮ ತಮ್ಮಯ ।**
> **ಅನುಚಿತೋಚಿತ ಕರ್ಮಫಲಗಳನುಣುತ ಚರಿಸುವರು ॥೨೬॥**

**ಅವತರಣಿಕೆ :**

ಕರ್ಮಪ್ರವಾಹರೂಪವಾದ ಸಂಸಾರಸಾಗರದಲ್ಲಿ ಕರ್ಮವಶರಾಗಿ ಜೀವರು ಸಂಚರಿಸುತ್ತಿದ್ದಾರೆಂದು ತಿಳಿಸುತ್ತಾರೆ. ॥೨೬॥

**ಪ್ರತಿಪದಾರ್ಥ :**

**ಅನಭಿಮತ** = ಅಭಿಮತವಲ್ಲದ (ಜೀವರಿಗೆ ಬೇಕಾದರಿರುವ-ಅನಪೇಕ್ಷಿತವಾದ). **ಕರ್ಮಪ್ರವಹಸೊಳಗೆ** = ಕರ್ಮವೆಂಬ ಪ್ರವಾಹದಲ್ಲಿ (ಕರ್ಮಬಂಧಿತರಾಗಿ) **ಅನಿಮಿಷಾದಿ** = ದೇವತೆಗಳೇ ಮೊದಲಾದ. **ಸಮಸ್ತ ಚೇತನಗಣವು** = ಸಕಲತ್ರಿವಿಧಜೀವರುಗಳ ಸಮೂಹವು. **ಸೃಷ್ಟಿಸದ ಮುನ್ನ** = ಜೀವರನ್ನು ಸೃಷ್ಟಿಸಿ ತರುವುದಕ್ಕಿಂತ ಮುಂಚಿನ ಸ್ಥಿತಿಯಲ್ಲಿ. (ಅಸೃಜ್ಯಾವಸ್ಥೆಯಲ್ಲಿ). **ತತ್ಫಲಗಳುಣದೆ** = ಆ ಅನಾದಿಕರ್ಮಜನ್ಯವಾದ ಫಲಗಳನ್ನು ಭೋಗಿಸದೇ. **ಇಹುದು** = ಇರೋದಾಗಿವೆ. **ಕರುಣಾವನಧಿ** = ದಯಾಸಾಗರನಾದ ಶ್ರೀಹರಿಯು. **ವನಿತೆಯುಂನೊಡಗೂಡಿ** = ತನ್ನ ಪತ್ನಿ ಲಕ್ಷ್ಮೀದೇವಿಯಿಂದ ಸಹಿತನಾಗಿ. **ನಿರ್ಮಿಸಿ** = ಸಾಧನಕ್ಕಾಗಿ ಜೀವರಿಗೆ

ಸ್ಥೂಲದೇಹಗಳನ್ನು ಕೊಡಲಾಗಿ, **ತಮ್ಮ ತಮ್ಮಯ** = ಆ ಜೀವರು ಲಿಂಗದೇಹಗತ ತಮ್ಮ ಸ್ವಭಾವ ಯೋಗ್ಯತೆಗಳಿಗನುಗುಣವಾದ ಅನಾದಿ ಕರ್ಮಾನುಸಾರ, **ಅನುಚಿತ ಉಚಿತ** = ಪಾಪ ಮತ್ತು ಪುಣ್ಯರೂಪವಾದ, **ಕರ್ಮಫಲಗಳನು** = ಕರ್ಮಜನ್ಯಫಲಗಳನ್ನು, **ಉಣುತ** = ಭೋಗಿಸುತ್ತ **ಚರಿಸುವರು** = ಕರ್ಮಪ್ರವಾಹದಲ್ಲಿ ಜನನಮರಣಾಖ್ಯವಾದ ಸಂಸಾರದ ಚಕ್ರದಲ್ಲಿ ಸುತ್ತುತ್ತಿರುವರು. ॥೨೬॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಜೀವರು ಭೋಗಿಸತಕ್ಕ ಕರ್ಮ ಎಂಬುದು ಅನಾದಿ ಎಂತಲೂ, ಅಕ್ಕಿಮ್ಯಾಲೆ ಹೊಟ್ಟು ಇದ್ದಂತೆ ಜೀವನಿಗೆ ಲಿಂಗಶರೀರ ಅನಾದಿಯಾದರೂ, ಸಂಸೃತಿ–ಎಂಬ ಬಾಹ್ಯ ಸುಖದುಃಖಭೋಗ ಸೃಷ್ಟ್ಯನಂತರವೇ ಹೊರತು, ತತ್ಪೂರ್ವದಲ್ಲಿ ಇಲ್ಲವೆಂತ ಹೇಳುತಾರೆ.

ಜೀವರನ್ನ ಸೃಷ್ಟಿಗೆ ತಾರದೇ ಇರೋದಕ್ಕೆ ಪೂರ್ವ ಅಸೃಜ್ಯರಾಶಿಯಲ್ಲಿ ಜೀವರು ಅನಾದಿಲಿಂಗದಿಂದ ಸಹಿತರಾಗಿಯೂ, ಆ ಲಿಂಗಗತ, ಸ್ವರೂಪ ವಿವಕ್ಷಯಾ ಅಭಿವ್ಯಕ್ತವಿಲ್ಲದ್ದಾಗಿಯೂ ಇರತಕ್ಕ, ಪ್ರವಾಹತ್ವಯೋಗ್ಯತಾ ದಿಂದ ಇರತಕ್ಕ ಕರ್ಮಬಂಧನದೊಳಗೆ ಅಸೃಜ್ಯರಾಶಿಗತರಾದ, ದೇವತೆಗಳೇ ಮೊದಲಾದ ಸಮಸ್ತರಾದ ಚೇತನಾಚೇತನಗಣ–ತ್ರಿವಿಧ ಜೀವಸಮೂಹ, ಆ ಅನಾದಿ ಕರ್ಮಫಲಗಳ ಭೋಜನ ಮಾಡದೇ ಇರೋದಾಗಿ ಅದೆ, ಉದಕದ ಸ್ವಭಾವ ಪ್ರವಾಹರೂಪವಾದದ್ದು, ಅದರೂ ಗಟವಿಶೇಷದಲ್ಲಿ ವಿದ್ಯಮಾನ ವಾದ ಉದಕ ಪ್ರವಹಿಸದೇ ನಿಂತು ಇದ್ದಂತೆ, ಅನಾದಿಲಿಂಗಾಖ್ಯಘಟದಲ್ಲಿ ಕರ್ಮಾಖ್ಯ ಉದಕ ಪ್ರವಹಿಸದೇ ತದ್ಯೋಗ್ಯತಾದಿಂದ ಇರೋದಾಗಿ ಅದೆ, ಕರುಣಾಸಮುದ್ರನಾದ ಶ್ರೀನಾರಾಯಣದೇವರು ತನ್ನ ಪತ್ನಿ ಲಕ್ಷ್ಮೀದೇವೇ

ರಿಂದ ಕೂಡಿಕೊಂಡು, ಅವರವರ ನಿಜವಾದ ಗತಿ ಕೊಡೋದಗೋಸ್ಕರ, ಅವರವರು ಸಾಧನ ಮಾಡಿಕೊಂಬೋದಗೋಸ್ಕರ ಸ್ಥೂಲದೇಹದಿಂದ ಅಸೃಜ್ಯರ ಸೃಷ್ಟಿಮಾಡೋಣವೇ, ಆ ಅಸೃಜ್ಯರಾದ ಜೀವರುಗಳು ತಮ್ಮ ತಮ್ಮ ಲಿಂಗಗತ ಅನಾದಿಕರ್ಮಗಳ ಅನುಸರಿಸಿ, ಶಾಖೋಪಶಾಖೆಗಳಾಗಿ ಬೆಳೆದ ಆಗಾಮಿ-ಸಂಚಿತಾಖ್ಯಪಾಪಕರ್ಮಗಳ, ಪುಣ್ಯಕರ್ಮಗಳ ಈ ಉಭಯವಿಧ ಕರ್ಮಫಲಗಳನ್ನು ಭೋಜನ ಮಾಡುತಾ, ಬ್ರಹ್ಮಾಂಡದೊಳಗೆ ಸಂಚಾರ ಮಾಡುವರು, ಸೃಷ್ಟಿಗೆ ಪೂರ್ವದಲ್ಲಿ ಕರ್ಮಫಲಗಳ ಉಂಬೋದಿಲ್ಲ ಎಂತಲೂ, ಸೃಷ್ಟಿಸಲ್ಪಟ್ಟನಂತರ, ಕರ್ಮಫಲಗಳ ಉಣತಾರೆಂತಲೂ ಹೇಳಿರೋಣದರಿಂದ, ಸೃಷ್ಟಿಗೆ ಪೂರ್ವದಲ್ಲಿ ಕರ್ಮ ಶಕ್ತ್ಯಾತ್ಮನ ಜೀವರಿಗೆ ಅದೆ, ಪ್ರವಾಹರೂಪದಿಂದ ವ್ಯಕ್ತವಿಲ್ಲದ ಕಾರಣವೇ ಫಲವಿಲ್ಲ, ಗಾಢನಿದ್ರಾಕಾಲವತ್-ಎಂತ ತಾತ್ಪರ್ಯ. ಕರ್ಮಫಲಭೋಗ ದಾವಾಗ ಹೇಳವರೋ, ಆಗ್ಗೆ ಪ್ರವಾಹತ್ವ ಪ್ರಾಪ್ತಿ, ಪ್ರಾಲೆ ಪ್ರವಾಹ ಶಬ್ದಕ್ಕೆ ಕೃತ್ಯವೇನೆಂದರೆ, ಪ್ರವಾಹತ್ವ ಯೋಗ್ಯತಾವಿಶಿಷ್ಟ ವೆಂದು ಭಾವವು. ॥೨೬॥

## ೨. ಭಾವದರ್ಪಣ

ಸೃಷ್ಟಿಯ ಆದಿಭಾಗದಲ್ಲೇನೆ ಕರುಣಾಸಮುದ್ರನಾದ ಶ್ರೀಹರಿ ರಮಾ ಸಮೇತನಾಗಿ ಜೀವರಲ್ಲಿದ್ದು, ಅನಿಮಿಷ-ಎಂದರೆ, ರುದ್ರ ಮೊದಲು ಮಾಡಿ ದೇವತಾಗಣಗಳು, ಆದಿಶಬ್ದದಿಂದ ಮನುಷ್ಯಗಣ, ದೈತ್ಯಗಣಗಳನ್ನ ಸಹ ಸೃಷ್ಟಿಮಾಡಿ, ಅಭಿಮತವಲ್ಲದೇ ಇದ್ದಂಥಾ ಸುಖದುಃಖಾತ್ಮಕ ಕರ್ಮ ಪ್ರವಾಹದಲ್ಲಿ ಹಾಕಿ, ದ್ವಂದ್ವಕರ್ಮಗಳು ಉಣಿಸುತ್ತಾನೆಂದು ಹೇಳುತ್ತಾರೆ। ಅನಭಿಮತ। ಮುನ್ನ ಮುಂಚೆ, ನಿರ್ಮಿಸಿ, ಸೃಷ್ಟಿಮಾಡಲಾಗಿ, ಅನುಚಿ-ತೋಚಿತ- ಒಳ್ಳೆಯ ಕೆಟ್ಟದ್ದು- ಎಂಬರ್ಥ. ॥೨೬॥

## ೩. ಶ್ರೀವ್ಯಾಸದಾಸ ಸಿದ್ಧಾಂತಕೌಮುದೀ

'ಅನಭಿಮತ' ಇತಿ॥ ಅಸೃಜ್ಯಕಾಲೇ, ಮುನ್ನ- ಮುಂಚೆ. ॥೨೬॥

## ಕನ್ನಡಾರ್ಥ

"ಸೃಷ್ಟಿಸಿದ ಮುನ್ನ"-ಎಂದರೆ, "ಅಸೃಜ್ಯಕಾಲದಲ್ಲಿ"-ಎಂದು ಅರ್ಥ.

ಅಸೃಜ್ಯಅವಸ್ಥೆಯಲ್ಲಿ ಕರ್ಮಗಳಿದ್ದರೂ, ಅವುಗಳ ಫಲಗಳನ್ನು ಉಪಭೋಗಿಸದೆ ಚೇತನಗಣಗಳಿರುತ್ತವೆ. ಸೃಷ್ಟಿಯಿಂದ ಅವರವರ ಕರ್ಮ-ಫಲಗಳನ್ನು ಅವರವರು ಉಪಭೋಗಿಸುತ್ತ, ಸಂಸಾರನಿರತರಾಗುತ್ತಾರೆ- ಎಂದು ತಾತ್ಪರ್ಯ. ॥೨೬॥

**೪. ಭಾವಪ್ರಕಾಶಿಕೆ :**

ಜೀವರನ್ನು ಸೃಷ್ಟಿಗೆ ಬಾರದ ಮುಂಚೆ, ಅನಾದಿಕಾಲೀನವಾದ ಕರ್ಮದಿಂದ ಬದ್ಧರಾಗಿದ್ದರೂ, ಕರ್ಮವನ್ನು ಮಾಡುವ ಇಚ್ಛೆಯು ಇರುವುದಿಲ್ಲ, ಕರ್ಮಫಲವನ್ನನುಭವಿಸುವುದಿಲ್ಲ. ತಮ್ಮ ಯೋಗ್ಯತೆ ಇಂತ ಹುದೆಂದೂ ಗೊತ್ತಾಗುವುದಿಲ್ಲ, ಇಂತಹ ಜೀವರು ಸಾತ್ವಿಕ ರಾಜಸ ಭೇದದಿಂದ ದೇವತೆಗಳು, ದೈತ್ಯರು, ಮನುಷ್ಯರು- ಮೊದಲಾದ ಜಾತಿಯಲ್ಲಿ ಹುಟ್ಟಿ, ಕರ್ಮವನ್ನು ಮಾಡಲು ಯೋಗ್ಯರಾದ ರಾಶಿಗಳು ಅನೇಕವಿರುವವು ಕರುಣಾಸಮುದ್ರನಾದ ಶ್ರೀಹರಿಯು, ತನ್ನ ಪತ್ನಿಯಾದ ರಮಾದೇವಿ ಯಿಂದೊಡಗೂಡಿ, ದೇವ, ದೈತ್ಯ, ಮನುಷ್ಯಾದಿಗಳನ್ನು ಸೃಷ್ಟಿಸಲು, ಅವರವರ ಯೋಗ್ಯತಾನುಸಾರವಾಗಿ ಪುಣ್ಯ ಪಾಪದ ಕರ್ಮಗಳನ್ನು ಮಾಡಿ ಫಲಗಳನ್ನು ಭುಂಜಿಸುತ್ತ, ಭೂಮಿ, ಸ್ವರ್ಗ, ನರಕಾದಿಗಳಲ್ಲಿ ಸಂಚರಿಸುವರು. ॥೨೬॥

**೫. ಶ್ರೀಗುರುಹೃದಯ ಪ್ರಕಾಶಿಕೆ.**

ಆಕ್ಕ ಹೊಟ್ಟನಂತೆ ಜೀವರಿಗೆ ಲಿಂಗಶರೀರ ಅನಾದಿಯಾದರೂ, ಸಂಸೃತಿ- ಎಂಬ ಬಾಹ್ಯ ಸುಖ-ದುಃಖಭೋಗ ಸೃಷ್ಟ್ಯನಂತರವೇ ಹೊರ್ತು, ತತ್ಪೂರ್ವದಲ್ಲಿ ಇಲ್ಲವೆಂತ ತಿಳಿಸುತ್ತಾರೆ, ಅನಭಿಮತ ಎಂದು,

ಅನಭಿಮತ ಕರ್ಮಪ್ರವಹದೊಳು- ಎಂದರೆ, ಜೀವಬಂಧಕೇಚ್ಛಾ ದೇವರಲ್ಲಿ ನಿತ್ಯವಾದಾಗ್ಯೂ, ಸೃಷ್ಟಿಗೆ ಮುಂಚೆ ಅನಾದಿಕರ್ಮಫಲ ಜೀವರಿಗೆ ಕೊಡಲೊಲ್ಲೆ- ಎಂಬ ನಿತ್ಯೇಚ್ಛೆ ಇರುವುದರಿಂದ. ಸೃಷ್ಟಿಗೆ ಪೂರ್ವಕಾಲದಲ್ಲಿ ಅನಿಮಿಷರೆಂಬ ದೇವತಾ, ಜೀವಗಣವೇ ಮೊದಲಾದ ಸಮಸ್ತಜೀವಗಣವೂ ಅನಾದಿಕರ್ಮವೆಂಬ ಮನೋರಥರೂಪಕರ್ಮಗಳ ಫಲವೆಂಬ ಸುಖ-ದುಃಖಗಳನ್ನು ಅನುಭವಿಸದೇ ಇರುವರು. ವನಿತೆ- ಎಂಬ ಶ್ರೀಲಕ್ಷ್ಮಿಯಿಂದ ಕೂಡಿ, ಕರುಣಾಸಮುದ್ರನಾದ ದೇವರು, ನಿರ್ಮಿಸೆ- ಎಂದರೆ, ಲಿಂಗದೇಹಗತಗುಣವೈಷಮ್ಯದಿಂದ ಅನಿರುದ್ಧವೆಂಬ ಸೂಕ್ಷ್ಮದೇಹ ಮೊದಲು ಸ್ಥೂಲದೇಹ ಸಹಾ ಕೊಟ್ಟು, ಅಭಿಮಾನ ಹುಟ್ಟಿಸಿ, ತದನಂತರ ತಮ್ಮ ತಮ್ಮ ಅನುಚಿತೋಚಿತವೆಂಬ ಪುಣ್ಯ ಪಾಪ ಕರ್ಮಗಳನ್ನು ಅನುಭವಿಸುತ್ತಾ ದೇಹಗಳಲ್ಲಿ ಸಂಚರಿಸುವರು.

**ವಿಶೇಷಾರ್ಥ—**

ಜೀವರಿಗೆ ಅನಾದಿಕರ್ಮ ಎಲ್ಲಿಯದು, ಸಂಸಾರ ಹೇಗೆ ಬಂತು- ಎಂಬ ಆಕ್ಷೇಪಕ್ಕೆ ಸಮಾಧಾನ - ಅನಾದಿಲಿಂಗಶರೀರದಿಂದ (ಮನಸಾ) ಜೀವರು ಅಸೃಜ್ಯಾವಸ್ಥೆಯಲ್ಲಿಯೂ ಕರ್ಮ ಮಾಡುತ್ತಿರುವುದನ್ನು ಕರುಣಾಳುವಾದ ಸ್ವಾಮಿಯು ನೋಡಿ, **'ಏನಮುದ್ಧರಾಮಿ'**-ಎಂದು ಸ್ಥೂಲದೇಹವನ್ನು ಸೃಷ್ಟಿಕಾಲದಲ್ಲಿ ಕೊಟ್ಟು, ಸ್ಥೂಲಕರ್ಮಮೂಲಕ ಸುಖ-ದುಃಖಾದಿಗಳನ್ನು ಕೊಟ್ಟು, ಸ್ವಾಭಾವಿಕ ಭಗವದ್ಭಕ್ತಿ ದ್ವೇಷಾದಿಗಳನ್ನು ಸಾಧನದಿಂದ ವೃದ್ಧಿಮಾಡಿ, ಪೂರ್ಣವಾದ ನಂತರವೇ, ತತ್ತದ್ಯೋಗ್ಯಗತಿಗಳನ್ನು ಕೊಡುವುದರಿಂದ, ದೇವರು ಅನಿಮಿತ್ತಬಂಧು, ವೈಷಮ್ಯಾದಿ ದೋಷರಹಿತ ಗುಣಪೂರ್ಣನೆಂಬುದೇ ಮುಖ್ಯಸಮಾಧಾನ.

**ಪ್ರಮಾಣ–**

**ಹಂಸಾವಹಂ ಚ ತ್ವಂ ಚಾರ್ಯ ಸಖಾಯೌ ಮಾನಸಾಯ ನೌ ।**
**ಅಭೂತಾಮಂತರಾವೋಕಸ್ಸಹಸ್ರ ಪರಿವತ್ಸರಾನ್ ॥**

ಎಂಬ ಭಾಗವತಾರ್ಥ ವಿವರಿಸಿತು ॥೨೬॥

# ಸರ್ವವ್ಯಾಖ್ಯಾನಸಾರಸಂಗ್ರಹ

೧. ಅಸೃಜ್ಯರಾಶಿಯಲ್ಲಿರುವ ಜೀವರ ವಿಚಾರವನ್ನು ತಿಳಿಸುತ್ತಾರೆ- ಪ್ರಸಕ್ತ ಪದ್ಯದಿಂದ, ಶ್ರೀಹರಿಯು ತನ್ನ ಇಚ್ಛಾರೂಪವಾದ ಸಂಕಲ್ಪದಂತೆ, ಜೀವರನ್ನು ಸೃಷ್ಟಿಸಿ, ತರುವುದಕ್ಕೆ ಮುಂಚೆ, ಇರುವ ಸ್ಥಿತಿಯು - **ಅಸೃಜ್ಯಸ್ಥಿತಿ** - ಎನಿಸುವುದು.

ಜೀವರ ಸ್ವರೂಪ ದೇಹವು ಅಪ್ರಾಕೃತ- ಅನಾದಿ ಮತ್ತು ನಿತ್ಯ. ಅಸೃಜ್ಯಾವಸ್ಥೆಯಲ್ಲಿರುವ ಸಮಸ್ತಜೀವರು ಲಿಂಗದೇಹಯುಕ್ತರಾಗಿದ್ದಾರೆ, ಲಿಂಗದೇಹವು ಪ್ರಾಕೃತಗುಣಧರ್ಮಸಂಯುಕ್ತವಾದದ್ದು, ತ್ರಿಗುಣಾತ್ಮಕವಾದದ್ದು, ೧೬ ಕಳೆಗಳಿಂದ ಕೂಡಿದೆ. ಜೀವರ ಸ್ವರೂಪದೇಹಕ್ಕೆ ಆವರಣರೂಪದಲ್ಲಿ ಪರಿಚ್ಛೇದತ್ರಯವುಳ್ಳ ಲಿಂಗದೇಹವು ಇದೆ, ಸ್ವರೂಪದೇಹಕ್ಕೂ ಮತ್ತು ಲಿಂಗದೇಹಕ್ಕೂ ನಡುವೆ ಸಾವಕಾಶವಿರುವುದರಿಂದ, ಪರಸ್ಪರ ಸಂಪರ್ಕವಿಲ್ಲ. ಲಿಂಗದೇಹವು ಅನಾದಿಕರ್ಮಬೀಜಗಳ ನೆಲೆಯಾಗಿದೆ.

ಅಘಟನಾಘಟನಾಸಕ್ತನಾದ ಅಪ್ರಮೇಯನು, ಕರ್ಮದ **ಸಂಪರ್ಕ**ವನ್ನು ಜೀವರಿಗೆ ಉಂಟು ಮಾಡುವನು, ತನ್ನ ಇಚ್ಛೆಯಿಂದ ಸಾವಕಾಶವಾಗಿ ಪೊಂದಿರುವ ಲಿಂಗದೇಹವನ್ನು ಸ್ವರೂಪ ದೇಹಕ್ಕೆ ನಿರವಕಾಶವನ್ನಾಗಿ ಮಾಡುವನು, ಈ ಪ್ರಕ್ರಿಯೆಗೆ **ಲಿಂಗೋಪಧಾನ** ಅಥವಾ **ಲಿಂಗೋಪಚಯ**-ಎಂದು ಹೆಸರು. ಇದಕ್ಕಿಂತ ಮುಂಚೆ, ಸ್ವರೂಪದೇಹಗತ ಜೀವರಿಗೆ ಮುಂದೊದಗುವ ಕರ್ಮ ಬಂಧನದ ವಿಚಾರವನ್ನು ಶ್ರೀಹರಿಯು ತಿಳಿಯಗೊಡುವುದಿಲ್ಲ, ಜೀವರಿಗೆ ಅಭಿಮತವಾಗದಿ, ಈ ಪ್ರಸಂಗವಿಶೇಷವನ್ನು - **ಅನಭಿಮತ** – ಎಂದಿದ್ದಾರೆ ದಾಸರಾಯರು. ಆದರೆ, ಜೀವರಿಗೆ ತಮ್ಮ ತಮ್ಮ ಯೋಗ್ಯವಾದ ಗತಿಯನ್ನು ಹೊಂದುವ ಇಚ್ಛಾರೂಪವಾದ ಜ್ಞಾನವನ್ನು ಬಿಂಬಕ್ರಿಯಾದ್ವಾರಾ ಕರ್ಮಬಂಧನವ

ನ್ನುಂಟುಮಾಡುವನು, ಪ್ರಕೃತಿಯ ಉಪಾದಾನಕಾರಣದಿಂದ ಜೀವರಿಗೆ ನಾನು- ನನ್ನದು- ಎಂಬ ಅಹಂಭಾವ ಮೂಡುವುದು, ಇದೇ ಜೀವರ ಪ್ರಪ್ರಥಮ ಜನ್ಮಕ್ಕೆ ಕಾರಣವಾಗುವುದು, ಇದು ಅನಾದಿಕರ್ಮದ ರಹಸ್ಯವು.

೨. ಕರ್ಮವು ಗುಣಜನ್ಯವಾದದ್ದು, ಮೂಲಪ್ರಕೃತಿಯು ತ್ರಿಗುಣಾತ್ಮಕವಾದದ್ದು, ಸತ್ತ್ವ-ರಜತಮ- ಎಂಬ ಗುಣತ್ರಯಗಳಿಂದ ವಿಭಕ್ತವಾಗಿದೆ. ಸತ್ತ್ವಗುಣ ಪ್ರಾಚುರ್ಯದಿಂದ ಸತ್ಕರ್ಮಗಳ ಅಭಿವ್ಯಕ್ತಿ, ಇದರ ಫಲವೇ ಪುಣ್ಯ. ರಜೋಗುಣಪ್ರಾಚುರ್ಯದಿಂದ ಮಿಶ್ರ ಕರ್ಮಗಳ ಅಭಿವ್ಯಕ್ತಿ. ಇದರ ಫಲವು ಪುಣ್ಯ-ಪಾಪ ಮಿಶ್ರವಾದ ಮಿಶ್ರಫಲ, ತಮೋಗುಣದ ಪ್ರಾಚುರ್ಯದಿಂದ ಅಭಿವ್ಯಕ್ತವಾಗುವ ದುಷ್ಕರ್ಮಗಳ ಫಲರೂಪವೇ ಪಾಪವು, ಈ ರೀತಿ, ಜೀವರನ್ನು ಕರ್ಮಬಂಧನಕ್ಕೆ ಒಳಪಡಿಸಿ, ಆ ಕರ್ಮಪತಿಯು ಅನಭಿಮತಕರ್ಮಪ್ರವಾಹದಲ್ಲಿ ತೊಡಗಿಸುವನು, ಈ ಕರ್ಮಪ್ರವಾಹವೇ ದುಸ್ತರವಾದ ಸಂಸಾರವೆಂಬ ಮಹಾಸಾಗರವು.

೩. ನಿದ್ರಾವಿಹೀನರಾದ ದೇವತಾವರ್ಗಕ್ಕೆ - **ಅನಿಮಿಷರು** - ಎಂದು ಹೆಸರು, (ನಿಮಿಷ-ರೆಪ್ಪೆ, ಅನಿಮಿಷ-ರೆಪ್ಪೆ ಇಲ್ಲದವರು, ಅಂದರೆ, ನಿದ್ರಾವಿಹೀನರು). **ಆದಿ**-ಶಬ್ದದಿಂದ ಸಾತ್ವಿಕ-ರಾಜಸ-ತಾಮಸ- ಎಂಬ ತ್ರಿವಿಧ ಜೀವರುಗಳೂ ಗ್ರಾಹ್ಯ, ಅನಭಿಮತಕರ್ಮಪ್ರವಾಹದಲ್ಲಿ ಸಮಸ್ತ ಚೇತನರನ್ನೂ (ಸೃಷ್ಟಿಗೆ ತರುವ) ತೇಲಿಬಿಡುತ್ತಾನೆ. ಕರ್ಮಸ್ವರೂಪಿಯಾದ ಆ ಕಮಲನಾಭನು, ಸೃಷ್ಟಿಗೆ ಬರುವುದಕ್ಕಿಂತ ಮುಂಚೆ, ಅಂದರೆ, ಅಸೃಜ್ಯಾಕೃತಿಯಲ್ಲಿ, ಆ ಸಮಸ್ತಜೀವಗಣಕ್ಕೆ ಅನಾದಿಲಿಂಗದೇಹ, ಸಾವಕಾಶವಾಗಿ ಹೊಂದಿದ್ದು, ಗುಣಸಂಪರ್ಕವಿಲ್ಲದಿರುವುದರಿಂದ, ಕರ್ಮಜನ್ಯವಾದ ಫಲಗಳನ್ನು ಭೋಗಿಸದೇ ಇರುವರು, ಈ ವಿಷಯವನ್ನು ದಾಸರಾಯರು-**ಸೃಷ್ಟಿಸದ ಮುನ್ನ ತತ್ಫಲಗಳನು ಉಣದೆ**-ಎಂದಿದ್ದಾರೆ.

೪. ಜೀವರಿಗೆ ಕರ್ಮಬಂಧನವನ್ನುಂಟುಮಾಡಿ, ತದ್ವಾರಾ, ಸಂಸೃತಿ ಎಂಬ ಭವಸಾಗರದಲ್ಲಿಟ್ಟು, ಕ್ರಮಕ್ರಮವಾಗಿ ಅನಾದಿಕರ್ಮದ ಪರಂಪರೆಯನ್ನು ಅನೇಕ ಜನ್ಮಗಳ ದ್ವಾರಾ ಕಳೆಯುತ್ತಾ, ಅಂತ್ಯದಲ್ಲಿ ಕರ್ಮದಿಂದ ಅನಾದಿನಿತ್ಯರಾದ ಜೀವರನ್ನು ವಿಮುಕ್ತಗೊಳಿಸಿ, ಅವರ ಸ್ವರೂಪಗತ ಆನಂದಾವಿರ್ಭಾವರೂಪವಾದ ನಿತ್ಯವಾದ ಮುಕ್ತಿ, ಸುಖವನ್ನು ದಯಪಾಲಿಸುವನು, ಇದರಿಂದ, ಶ್ರೀಪರಮಾತ್ಮನನ್ನು **ಕರುಣಾನಿಧಿ**-ಎಂದಿದ್ದಾರೆ. (ದಯಾಸಾಗರಸಂದರ್ಭ)

೫. ಅನಾದಿಕರ್ಮವನ್ನು ಉಪಾದಾನಕಾರಣ ಮಾಡಿಕೊಂಡು, ಅನಿಮಿತ್ತಬಂಧುವಾದ ಅಚ್ಯುತನು, ಸಮಸ್ತಜೀವರಿಗೆ ಬಿಂಬನಾಗಿದ್ದು, ಅವರನ್ನು ಅರಕ್ಷಣ ಬಿಡದೇ, ಜನ್ಮಗಳಿಗೆ ಕಾರಣವಾದ ಅನಿರುದ್ಧಶರೀರವನ್ನು ನಿರ್ಮಿಸಿ, ತದ್ವಾರಾ, ಅಂಕುರರೂಪವಾದ ಸ್ಥೂಲದೇಹಗಳನ್ನು ಕೊಟ್ಟು, ಸ್ಥೂಲದೇಹಗತ ಸಕಲೇಂದ್ರಿಯಗಳಲ್ಲಿ ತಾನು ಲಕ್ಷ್ಮೀಸಮೇತನಾಗಿದ್ದು, ಇಂದ್ರಿಯಗಳಲ್ಲಿ ಪ್ರಕಾಶಕತೋವ್ಯಾಪ್ತನಾದ ಜೀವನ ದ್ವಾರಾ, ಸಕಲ ಕರ್ಮಗಳನ್ನೂ ಮಾಡಿ ಮಾಡಿಸುತ್ತಿರುವನು.

೬. ಸ್ಥೂಲದೇಹೇಂದ್ರಿಯಗತ ಇಂದ್ರಿಯಗಳ ದ್ವಾರಾ, ಕರ್ಮಾಭಿವ್ಯಕ್ತಿ, ತ್ರಿವಿಧಜೀವರು ತಮ್ಮ ತಮ್ಮ ಸ್ವರೂಪಯೋಗ್ಯತಾನುಸಾರ, ಅನಾದಿಕರ್ಮಗಳನ್ನು ಅನುಸರಿಸಿ, ಪುಣ್ಯ ಮಿಶ್ರ-ಪಾಪಕಾರ್ಯಗಳನ್ನು (ಅನುಚಿತೋಚಿತ) ಎಂಬ ಪ್ರೇರಣೆಯಂತೆ ಮಾಡುತ್ತಾ, ಆಯಾಯಾ ಕರ್ಮಜನ್ಯವಾದ ಫಲಗಳನ್ನು ಭೋಗಿಸುತ್ತಾ, ಜನನಮರಣಾಖ್ಯವಾದ ಈ ಸಂಸಾರವೆಂಬ ಚಕ್ರದಲ್ಲಿ ಸುತ್ತುತ್ತಿರುವರು, ಶ್ರೀಹರಿಯ ಪ್ರಸಾದರೂಪವಾದ ಕಾರುಣ್ಯದಿಂದ, ಜೀವರಿಗೆ ಸಂಸಾರಾಖ್ಯಚಕ್ರದ ಪರ್ಯಟನೆಯಿಂದ ವಿಮೋಚನೆ. ॥೨೬॥

## ಪದ್ಯ-೨೭

**ಮೂಲ :**

**ಝುಲ್ಲಡಿಯ ನೆಳಲಂತೆ ತೋರ್ಪದು ।**
**ಎಲ್ಲ ಕಾಲದಿ ಭವದ ಸೌಖ್ಯವು ।**
**ಎಲ್ಲಿ ಪೊಕ್ಕರು ಬಿಡದೆ ಬೆಂಬತ್ತಿಹುದು ಜೀವರಿಗೆ ॥**
**ಒಲ್ಲೆನೆಂದರೆ ಬಿಡದು ಹರಿನಿ ।**
**ರ್ಮಾಲ್ಯ ನೈವೇದ್ಯವನು ಭುಂಜಿಸಿ ।**
**ಬಲ್ಲವರ ಕೂಡಾಡು ಭವದುಃಖಗಳನೀಡಾಡು ॥೨೭॥**

**ಅವತರಣಿಕೆ :**

ಸಂಸಾರ ಸುಖದ ಚಿತ್ರವನ್ನು ವಿವರಿಸುತ್ತಾರೆ- ಪ್ರಸಕ್ತ ಪದ್ಯದಿಂದ. ॥೨೭॥

**ಪ್ರತಿಪದಾರ್ಥ :**

**ಭವದ ಸೌಖ್ಯವು** = ಈ ಸಂಸಾರದ ಸುಖವೆಂಬುದು, **ಝುಲ್ಲಡಿಯ ನೆಳಲಂತೆ** — ಬಿಸಿಲು-ನೆರಳು ಎರಡರಿಂದ ಸಹಿತವಾದ ಝುಲ್ಲಡಿಯ ಛಾಯೆಯಂತೆ, **ಎಲ್ಲ ಕಾಲದಿ** — ಈ ಸೃಷ್ಟಿಸ್ಥಿತಿಯಲ್ಲಿ ಯಾವಾಗಲೂ, **ತೋರ್ಪದು** — ಗೋಚರವಾಗುವುದು, **ಜೀವರಿಗೆ** — ಸೃಜ್ಯರಾದ ಜೀವರುಗಳಿಗೆ, **ಎಲ್ಲಿ ಪೊಕ್ಕರು ಬಿಡದೆ** — ಎಲ್ಲಿಗೂ ಹೋದರೂ ಬಿಡದೆ, (ಯಾವ ಜನ್ಮಗಳಲ್ಲಿದ್ದರೂ), **ಬೆಂಬತ್ತಿಹುದು** — ಬೆನ್ನು ಹತ್ತಿಕೊಂಡು ಇರುವುದು (ಜೀವರನ್ನು ಎಡಬಿಡದೆ ಅನುಸರಿಸುವುದು), **ಒಲ್ಲೆನೆಂದರೆ** — ನನಗೆ ಈ ಸಂಸಾರ ಬೇಡವೆಂದರೂ, **ಬಿಡದು** — ಜೀವರನ್ನು ಬಿಡುವುದಿಲ್ಲ, **ಹರಿ ನಿರ್ಮಾಲ್ಯ** — ಶ್ರೀಹರಿಗೆ ಸಮರ್ಪಣಮಾಡಿದ ಪುಷ್ಪ, ತುಳಸೀ

ಮುಂತಾದ ವಸ್ತುಗಳನ್ನು, **ನೈವೇದ್ಯವನು** – ದೇವಾರ್ಪಿತವಾದ ಭೋಜ್ಯ ಪದಾರ್ಥಗಳನ್ನು, **ಭುಂಜಿಸಿ** – ಸ್ವೀಕಾರಮಾಡಿ, **ಬಲ್ಲವರ** – ಬ್ರಹ್ಮಜ್ಞಾನಿಗಳ, **ಕೂಡಾಡು** – ಸಂಗವನ್ನು ಮಾಡು. **ಭವದುಃಖಗಳನ್ನು** – ಸಂಸಾರ ಜನ್ಯವಾದ ದುಃಖಗಳಿಂದ, **ಈಡಾಡು** – ವಿಮುಕ್ತನಾಗು. ॥೨೭॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ.

ಸಂಸಾರಸುಖ- ಎಂಥಾದ್ದೆಂದರೆ- ಅದರನ್ನ ಹೇಳತ್ತಾರೆ. ಜೀವರಿಗೆ ಸಂಸಾರಸುಖವೆಂಬುವು ರ್ಥುಲ್ಲಡಿಯು ನೆಳಲಿನೋಪಾದಿಯಲ್ಲಿ - ಎಂದರೆ, ರ್ಥುಲ್ಲಡಿಯು ನೆಳಲು- ಎಂಬುದು ಬಿಸಿಲು-ನೆಳಲು ಎರಡರಿಂದ ಸಹಿತವಾಗಿ ಇರತದೆ. ಇದರೋಪಾದಿಯಲ್ಲಿ, ಸುಖ-ದುಃಖಗಳಿಂದ ಮಿಶ್ರವಾಗಿರುವ ಈ ಸಂಸಾರವಿಷಯಾಸಕ್ತರಾದ ಅಜ್ಞಾನಿಗಳಿಗೂ, ಜ್ಞಾನಿಗಳಿಗೂ ಸುಖ ದೋಪಾದಿಯಲ್ಲಿ ತೋರತಾ ಇರತದೆ. ಈ ಸಂಸಾರವೆಂಬುದು ಸುಖ ದುಃಖದಿಂದ ಮಿಶ್ರವಾಗಿ ಸರ್ವದಾ, ಶ್ರೀಪರಮಾತ್ಮನ ವ್ಯತಿರಿಕ್ತ ಎಲ್ಲಿ ಹೋದ ಕಾಲಕ್ಕೂ, ದಾವ ದೇವತೆಗಳನ್ನು ಮೊರೆ ಹೋದ ಕಾಲಕ್ಕೂ, ಬಿಡಧಾಂಗೆ ಸ್ವಜ್ಯರಾದ ಪ್ರಾಣಿಗಳಿಗೆ ನೆರಳಿನೋಪಾದಿಯಲ್ಲಿ ಬೆನ್ನು ಹತ್ತಿಕೊಂಡು ಇರತದೆ. ಈ ಸಂಸಾರ ಎಂಬುದು, ಬ್ಯಾಡಾ ಎಂದರೂ ಬಿಡೋದಿಲ್ಲ. ಸಂಸಾರ ದಾವದೆಂದರೆ, ದಾರಾ-ಪುತ್ರಾದಿಗಳಿಂದ ಸಹಿತವಾದ ಸಂಸಾರವಲ್ಲ. ಅಹಂ-ಮಮತಾ ಎಂಬ ಸಂಸಾರ, ಈ ಸಂಸಾರ ಜೀವರನ್ನ ಜನನ-ಮರಣಕ್ಕೆ ಕಾರಣ ಮಾಡತಕ್ಕಂಥಾದ್ದು, ಆದೇಡಿಯಿಂದ, ಇಂಥಾ ಸಂಸಾರವನ್ನ ಬಿಟ್ಟು, ನಿಸ್ಪೃಹನಾಗಿ ನಪುನರಾವರ್ತಿಜನ್ಮ ಐದಬೇಕಾದರೆ, ಅಪರೋಕ್ಷಜ್ಞಾನಿಗಳಾಗಿ, ಪ್ರಾಕೃತವಾದ ಸಂಸಾರ- ಹೇಯ ಎಂತ, ಭಗವನ್ಮಹಿಮಾ ಚಂದಾಗಿ ತಿಳಿದ ಜ್ಞಾನಿಗಳ ಸಹವಾಸ ಮಾಡಬೇಕು.

ಇನ್ನು, ಶ್ರೀವಿಷ್ಣು ಸರ್ವೋತ್ತಮನೆಂಬ ಉಪಾಸನದಿಂದಲೂ. ದೇವರಿಗೆ ಸಮರ್ಪಣ ಮಾಡಿದ ಶ್ರೀತುಳಸಿ, ಪುಷ್ಪ ಶಿರಸಾ ಧಾರಣಮಾಡಿ, ದೇವರಿಗೆ ಸಮರ್ಪಿಸಿದ ಪದಾರ್ಥಗಳ ಭೋಜನಮಾಡಿ, ಶ್ರೀಶ ಸರ್ವೋತ್ತಮ ನೆಂದು- ಸದಾ ಉಪಾಸನ ಮಾಡಿ, ಸಂಸಾರದುಃಖದಿಂದ ಮುಕ್ತನಾಗಿ ಅತ್ಯರ್ಥಪ್ರಸಾದವನ್ನು ಹೊಂದೋಣವನಾಗು ಎಂತ ಹೇಳಿದ್ದಾರೆಂಬ ತಾತ್ಪರ್ಯ. ॥೨೭॥

೩. ಭಾವದರ್ಪಣ.

ಜದರ ಜರಡಿ ಛಿದ್ರಯುಕ್ತವಾದದ್ದು. ಇದರ ಛಾಯಾ ಬಿಸಿಲಿನ ಕೂಡಿರಶಕ್ಯದ್ದು. ಇದರಂತೆ, ಸುಖದುಃಖಾತ್ಮಕವಾದ ಸಂಸಾರ- ಇಂಥಾ ಹೇಯವಾದದ್ದು, ನಿಷ್ಟುರವಾದ ಗತಿ ಕೊಡತಕ್ಕದ್ದಷ್ಟೆ। ಇಂಥಾದರನ್ನು ನಂಬಿ, ಸಾಲಮಾಡಿ ಸಕ್ಕರೆ ತಿಂದಂತೆ, ಎಂದರೆ, ಸಾಲಗಾರರು ಹ್ಯಾಗೆ ವಿಚಿತ್ರ ಉಪದ್ರವ ಕೊಡುತ್ತಾರೋ, ತದ್ವತ್ ಯಮನು ಬಾಧೆ ಕೊಡುತ್ತಾನೆ. ತತ್ವಯುಕ್ತ ಭಗವದ್ಗುಣಾನುವಾದಮಾಡಿ ಸದ್ಗತಿ ಹೊಂದಿರೆಂದು- ಕೃಪೆಯಿಂದ ಹೇಳುತ್ತಾರೆ। ಜಲ್ಲಡಿ. ॥೨೭॥

೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

'ರಫಲ್ಲಡ' ಇತಿ॥ ರಫರಡ॥ 'ಬೆಂ'- ಬೆನ್ನು॥ ಪೂರ್ವೇಣ ಅನ್ವಯಃ ॥೨೭॥

## ಕನ್ನಡಾರ್ಥ

'ಬೆಂಬಿಡದು'-ಎಂದರೆ, ಬೆನ್ನು ಬಿಡಲಾರದು- ಎಂದು ಅರ್ಥ. ಇಲ್ಲಿ "ಬೆಂಬಿಡದೆ ಹತ್ತಿಹುದು"- ಎಂದು ಯೋಜಿಸಬೇಕು. ಅಂದರೆ, ಬೆನ್ನನ್ನು ಬಿಡಲಾರದೇ ಇರುವುದೆಂಬ ಅರ್ಥವು ಲಭಿಸುತ್ತದೆ. ॥೨೭॥

## ೨. ಭಾವಪ್ರಕಾಶಿಕೆ

ರಘುಪ್ಪಡಿಯು ನೆಳಲು ಛಿದ್ರಗಳು ಬಹಳವಾಗಿರುವುದರಿಂದ ನೆಳಲು ಸ್ವಲ್ಪವಾಗಿಯೂ, ಬಿಸಿಲು ಹೆಚ್ಚಾಗಿಯೂ ಕಂಡುಬರುವುದು. ಅದರಂತೆ ಸಂಸಾರದಲ್ಲಿ ದುಃಖ ಬಹಳವಾಗಿಯೂ, ಸುಖ ಸ್ವಲ್ಪವಾಗಿಯೂ ಇರುವದೆಂಬ ತಾತ್ಪರ್ಯ. ಹೀಗೆ ದುಃಖವೇ ಹೆಚ್ಚಾಗಿರುವುದರಿಂದ, ಸುಖವು ಅತ್ಯಲ್ಪವಾಗಿರುವುದು. ಅದೂ ಸ್ಥಿರವಲ್ಲ. ಇದರಿಂದ, ಉಂಟಾಗುವ ಸುಖವು ಎಂತಹುದೆಂದರೆ, ಸಾಲವನ್ನು ಮಾಡಿ ಸಕ್ಕರೆ ತಿನ್ನುವಾಗ ಹೇಗೆ ಸಕ್ಕರೆ ತಿನ್ನುವಾಗ ಸ್ವಲ್ಪ ಸುಖ ಕಂಡುಬಂದರೂ, ಸಾಲಗಾರನು ಬಂದು ಸಾಲವನ್ನು ಬೇಡಿ ಪೀಡಿಸುವಾಗ, ಬಹಳ ಕಷ್ಟವು ಕಂಡುಬರುವದೋ, ಹಾಗೆ ಸಂಸಾರದಲ್ಲೂ ಸ್ತ್ರೀಯಾದಿ ಭೋಗಗಳಿಂದ ಅಲ್ಪವಾದ ಸುಖವು ಕಂಡುಬಂದರೂ, ಅನಂತರದಲ್ಲಿ, ಅಪಾರವಾದ ದುಃಖವನ್ನನುಭವಿಸಬೇಕಾಗುವುದು. ಆದ್ದರಿಂದ, ಅಯೋಗ್ಯರ ಸಹವಾಸವನ್ನೂ ಸಂಭಾಷಣೆಯನ್ನೂ ಬಿಟ್ಟು, ಜ್ಞಾನಿಗಳ ಸಹವಾಸವನ್ನೂ ಮಾಡಿ, ಶ್ರೀಲಕ್ಷ್ಮೀಪತಿಯಾದ ಶ್ರೀಪರಮಾತ್ಮನ ಗುಣಗಣಂಗಳನ್ನು ಶ್ರವಣಾದಿಗಳನ್ನು ಮಾಡುತ್ತಾ, ಪರಮಪದವಿಯನ್ನು ಸಂಪಾದಿಸು. ॥೨೭॥

## ೩. ಶ್ರೀ ಗುರುಹೃದಪ್ರಯಕಾಶಿಕೆ

ಹೀಗೆ ಬಂದಿರುವ ಅನಾದಿಸಂಸಾರಪರಿಹಾರಾರ್ಥವಾಗಿ ಸರ್ವದಾ ಸರ್ವತ್ರ ಹರಿಸ್ಮರಣೆರೂಪ ಸಮರ್ಪಣೆ ಮಾಡಬೇಕೆಂದು- ನಿರೂಪಿಸುತ್ತಾರೆ- ರಘುಪ್ಪಡಿ ಎಂದು.

ರಘುಪ್ಪಡಿ- ಎಂಬ ನುಚ್ಚು ಕೆಳಗೆ ಬಿದ್ದು, ಘಟ್ಟ ಅಕ್ಕಿಮಾತ್ರ ಮೇಲೆ ಉಳಿಯುವ ಅನೇಕ ಸಣ್ಣ ಸಣ್ಣ ಕಂಡಿಗಳಿರುವ ಮಂದರಿ- ಎಂಬ ಪಾತ್ರೆಯ ಕೆಳಗಿನ ನೆರಳೂ ಎರಡರಿಂದಲೂ ಕೂಡಿರುವಂತೆ ಸುಖ-ದುಃಖಗಳಿಂದ ಮಿಶ್ರವಾಗಿರುವ ಈ ಸಂಸಾರ ವಿಷಯಾಸಕ್ತರಾದ ಅಜ್ಞಾನಿಗಳಿಗೂ, ಜ್ಞಾನಿಗಳಿಗೂ ಸುಖದೋಪಾದಿಯಲ್ಲಿ ತೋರುತ್ತದೆ. ಇದು ಶ್ರೀಪರಮಾತ್ಮನ ವ್ಯತಿರಿಕ್ತ

ಎಲ್ಲಿ ಹೋದರೂ, ಜೀವರನ್ನು ಬೆನ್ನುಹತ್ತಿ ಸ್ವರ್ಗ, ಮರ್ತ್ಯ ಪಾತಾಳದೊಳಗಿನ್ನೆಲ್ಲರೂ ಬಿಡದಿರುವುದು. ಅಸ್ವತಂತ್ರರಾದ್ದರಿಂದ ಒಲ್ಲೆನೆಂದರೆ ಜೀವರಿಗೆ ಬಿಡದು. ಆದ್ದರಿಂದ, ಇದನ್ನು ಬಿಡಿಸುವ ಸ್ವತಂತ್ರನಾದ ಶ್ರೀಹರಿಯ ದಯೆ ಬೇಕಾಗಿರುವುದರಿಂದ, ಆ ಸ್ವಾಮಿಯನ್ನು ಬಲ್ಲ ಜ್ಞಾನಿಗಳ ಕೂಡ ಇದ್ದು, ಸೇವಾದಿಗಳನ್ನು ಮಾಡುತ್ತಾ, ಹರಿನಿರ್ಮಾಲ್ಯ ನೈವೇದ್ಯವನ್ನೇ ಭುಂಜಿಸಿ, ಜ್ಞಾನಸಿದ್ಧಿ ಸಂಪಾದಿಸಿ, ಭವವೆಂಬ ಸಂಸ್ಕೃತಿಬಂಧ ಪರಿಹರಿಸಬೇಕೆಂದರ್ಥ. ಈಡ್ಯಾಡು-ಎಂಬ ಕ್ರಿಯೆ, ಇಡು-ಧಾತುವಿನಿಂದ ಹುಟ್ಟಿದ್ದು. ಇಡಂ-ಎಂದರೆ ಪರಿಬಿಡೆಂದರ್ಥ.

**ಪ್ರಮಾಣ – ತ್ವಯೋಪಭುಕ್ತ ಸ್ರಗ್ಗಂಧ ವಾಸೋಲಂಕಾರ ಚರ್ಚಿತಾಃ ।**
**ಉಚ್ಛಿಷ್ಟಭೋಜನೋದಾಸಾಸ್ತವ ಮಾಯಾಂ ಜಯೇಮಹಿ ॥**

ಎಂಬ ಭಾಗವತಾರ್ಥವು ವಿವರಿಸಿತು. ॥೨೭॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಧಾನ್ಯಗಳನ್ನು ಗಟ್ಟಿವಸ್ತುವನ್ನು ಜೊಳ್ಳಿನಿಂದ ಪ್ರತ್ಯೇಕಿಸಲು, ಉಪಯೋಗಿಸುವ ಉಪಕರಣ ವಿಶೇಷಕ್ಕೆ- '**ಜರಡಿ**' ಎಂದು ಹೆಸರು. ಇದನ್ನು **ಝಲ್ಲಡಿ**ಯೆಂದು ಹೇಳಿದ್ದಾರೆ. ಜರಡಿಗೆ ರಂಧ್ರಗಳಿರುವುವು. ಬಿಸಿಲಿನಲ್ಲಿ ಒಂದು ಜರಡಿಯನ್ನು ಹಿಡಿದರೆ, ಅದರ ತಳದಲ್ಲಿ ಬೆಳಕು-ನೆರಳುಗಳಿಂದ ಮಿಶ್ರವಾಗಿರುವ ಛಾಯೆ ಉಂಟಾಗುವುದು.

೨. ಸಂಸಾರಜನ್ಯವಾದ ಸೌಖ್ಯವನ್ನು, ಅಂತಹ ಝಲ್ಲಡಿಯ ನೆರಳಿಗೆ ಹೋಲಿಸಿದ್ದಾರೆ. ಕ್ಷಣಿಕವಾದ ಸುಖ, ಬೆಳಕಿನ ಪ್ರಕಾಶವಿದ್ದಂತೆ. ಅದರ ಹಿಂದೆ, ಯಾವಾಗಲೂ ಕಾದು ಕುಳಿತಿರುವ ದುಃಖಸಮೂಹಗಳು ನೆರಳಿದ್ದಂತೆ. ಹೀಗೆ ಸುಖ-ದುಃಖಗಳಿಂದ ಮಿಶ್ರವಾಗಿದೆ- ಸಂಸಾರದ ಜೀವನ.

೩. ರಘುಪತಿಯು ನೆರೆಸಿದಂತೆ ತೋರ್ವ ಈ ಸಂಸಾರ ಜನ್ಯಸೌಖ್ಯವು ಸೃಷ್ಟಿಗೆ ಒಳಪಟ್ಟ ಜೀವರಿಗೆ ಸರ್ವಕಾಲಗಳಲ್ಲಿ ಸರ್ವಾವಸ್ಥೆಗಳಲ್ಲಿ ಎಡಬಿಡದೆ ಅನುಸರಿಸಿರುವುದು. ಛಾಯೂವಸ್ತುವನ್ನು ಅನುಸರಿಸುವಂತೆ ಗುಣಜನ್ಯವಾದ ಕರ್ಮಫಲವು ಜೀವರನ್ನು ಎಲ್ಲಿ ಹೊಕ್ಕರೂ, ಯಾರನ್ನು ಆಶ್ರಯಿಸಿದರೂ, ಅದರ ನಿವಾರಣೆಗೆ ಎಷ್ಟು ಪ್ರಯತ್ನಿಸಿದರೂ, ಬೆಂಬಿಡದೆ ಬೆನ್ನು ಹತ್ತಿರುವುದು.

೪. ಸಂಸಾರಜನ್ಯವಾದ ಸುಖದುಃಖಗಳು, ಅದರ ವಿಷಚಕ್ರವ್ಯೂಹಕ್ಕೆ ಸಿಕ್ಕಿರುವ ಜೀವರನ್ನು ಒಲ್ಲೆನೆಂದರೂ ಬಿಡಲೊಲ್ಲವು. ಜೀವರಿಗೆ ಅಪೇಕ್ಷಿತವಲ್ಲದಿದ್ದರೂ. ಅವುಗಳ ಸಂಸರ್ಗ ಅನಿವಾರ್ಯವು.

೫. ಶ್ರೀಹರಿಯೇ ಕರ್ಮಬಂಧಕನು. ಆ ಕಾರಣದಿಂದ ಅವನೇ ಜೀವರಿಗೆ ಕರ್ಮವಿಮೋಚಕನೂ ಹೌದು. ಅವನ ಪರಮಪ್ರಸಾದರೂಪವಾದ ಕಾರುಣ್ಯವಿಶೇಷವಿಲ್ಲದೇ, ಕರ್ಮಕೋಟಲೆಗಳಿಂದ ಜೀವನು ವಿಮುಕ್ತನಾಗಲಾರ. ಶ್ರೀಹರಿಯು ಪರಮಪ್ರಸಾದರೂಪವಾದ ಅನುಗ್ರಹವು ಅವನಿಗೆ ಸರ್ವಕರ್ಮ ಸಮರ್ಪಣೆ ಮಾಡುವ ದ್ವಾರದಿಂದಲೂ, ಅವನಿಗೆ ಅರ್ಪಿತವಾದ ತುಲಸೀ, ಗಂಧ, ಪುಷ್ಪ-ಮುಂತಾದ ನಿರ್ಮಾಲ್ಯಗಳನ್ನು ಧರಿಸುವುದರಿಂದಲೂ, ಸಮಸ್ತ ಭೋಜನಯೋಗ್ಯವಾದ ಸುಭೋಜ್ಯ ವಸ್ತುಗಳಲ್ಲಿ ಅಂತರ್ಯಾಮಿಯಾಗಿರುವ ಭಗವದ್ರೂಪಗಳಿಗೂ ಸ್ವಬಿಂಬನಿಗೂ ಐಕ್ಯಚಿಂತನಾದ್ವಾರಾ, ಅರ್ಪಿಸುವ ದೇವರ ನೈವೇದ್ಯವನ್ನು ಭುಂಜಿಸುವುದರಿಂದಲೂ, ಸಕಲ ಸಚ್ಛಾಸ್ತ್ರಗಳನ್ನು ಗುರೂಪದೇಶದ್ವಾರಾ ತಿಳಿದು, ಅಧ್ಯಯನ, ಪ್ರವಚನಾದಿಗಳಿಂದ ಮನನ ಮಾಡಿಕೊಂಡು, ಆ ಜ್ಞಾನರೂಪವಾದ ಸತ್ತತ್ವಗಳನ್ನು ಸದಾ ಜೀವನದಲ್ಲಿ ಅನುಷ್ಠಾನ ಮಾಡುತ್ತಿರುವ ಬ್ರಹ್ಮಜ್ಞಾನಿಗಳ (ಬಲ್ಲವರ ಕೂಡಾಡು) ಸಂಗಸುಖದಿಂದಲೂ ಒದಗುವುದು. ಆಗ ಶ್ರೀಹರಿಯ ಪರಮಪ್ರಸಾದದಿಂದ ಕರ್ಮವಿಮೋಚನೆಯಾಗಿ, ಲಿಂಗಭಂಗದ್ವಾರಾ, ಭವಾಖ್ಯದುಃಖಗಳು ದೂರವಾಗುವುವು-ಎಂದು ತಾತ್ಪರ್ಯ. ॥೨೭॥

## ಪದ್ಯ-೨೮

**ಮೂಲ :**

ಕುಟ್ಟಿ ಕೊಯಿದುದನಟ್ಟು ಇಟ್ಟುದ ।
ಸುಟ್ಟು ಕೊಟ್ಟುದ ಮುಚ್ಚಲಘ ಹಿ ।
ಟ್ಟಟ್ಟು ಮಾತ್ಸ್ಪದು ವಿಠ್ಠವಿಠ್ಠಲುಂಡುಚ್ಛಿಷ್ಟ ಸಜ್ಜನರ ॥
ಬಿಟ್ಟು ತನ್ನಯ ಹೊಟ್ಟೆಗೋಸುಗ ।
ಥಟ್ಟನುಣುತಿಹ ಕೆಟ್ಟ ಮನುಜರ ।
ಕಟ್ಟಿ ಒಯ್ದು ಮಹಟ್ಟಣಸೊಳೊತ್ತಟ್ಟಲಿಡುತಿಹನು ॥೨೮॥

**ಅವತರಣಿಕೆ:-**

ವಿಠ್ಠಲನ ನಾಮಸ್ಮರಣ ಮಾತ್ರದಿಂದ ಸಕಲ ಪಾಪಸಮೂಹಗಳು ಪರಿಹಾರವಾಗುತ್ತವೆಂದು ದೃಷ್ಟಾಂತಪೂರ್ವಕ ವಿವರಿಸುತ್ತಾರೆ. ॥೨೮॥

**ಪ್ರತಿಪದಾರ್ಥ :**

**ಕೊಯಿದುದನು** = ಕೊಯ್ಯಲ್ಪಟ್ಟ ಧಾನ್ಯಗಳನ್ನು. **ಅಟ್ಟು** = ಅಷ್ಟನ್ನು **ಕುಟ್ಟಿ** = ಒರಳಿನಲ್ಲಿ ಹಾಕಿ ಒನಕೆಗಳಿಂದ ಚೆನ್ನಾಗಿಕುಟ್ಟಿ. **ಆದ** = ಅವರಿಂದ ಬಂದ ಅಕ್ಕಿಯ (ಧಾನ್ಯದ) ಚೂರುಗಳನ್ನು. **ಇಟ್ಟು** = ಒಲೆಯ ಮೇಲಿಟ್ಟು. **ಸುಟ್ಟು** = ಅಗ್ನಿಯ ಸಂಸರ್ಗದಿಂದ ಪಚನಮಾಡಿ. **ಆದ** = ಪಕ್ವವಾದ ಅನ್ನವನ್ನು. **ವಿಠ್ಠಲ** = ಸಕಲ ಪಾಪಪರಿಹಾರಕನಾದ ಶ್ರೀಪರಮಾತ್ಮನಿಗೆ. **ಕೊಟ್ಟು** = ಅನುಸಂಧಾನಪೂರ್ವಕ ಸಮರ್ಪಣದ್ವಾರಾ ನೈವೇದ್ಯಮಾಡಿ. **ಉಂಡು** = ಪರಮಾತ್ಮ ತದ್ಗತ ಸ್ವಾಖ್ಯರಸವನ್ನು ಸ್ವೀಕರಿಸಿದ ತರುವಾಯ. **ಉಚ್ಛಿಷ್ಟ** = ಉಳಿದ ಪದಾರ್ಥವನ್ನು ಭೋಜನ

ಮಾಡುವ. **ಸಜ್ಜನರ** = ಸಾತ್ವಿಕಚೇತನರನ್ನು. **ಅಘ** - ಪಾಪಸಮೂಹಗಳು. **ಮುಟ್ಟಲು** = ಮುಟ್ಟುವುದೇ ಇಲ್ಲ. **ಹಿಟ್ಟಿಟ್ಟು ಮೂಳ್ಪದು** = ಚೂರ್ಣೀಕೃತವನ್ನಾಗಿ ನಾಶಮಾಡುವುವು. **ಬಿಟ್ಟು** ಅದನ್ನು ಬಿಟ್ಟು. **ತನ್ನಯ ಹೊಟ್ಟೆಗೋಸುಗ** – ನಿವೇದನರಹಿತನಾಗಿ. ಕೇವಲ ತನ್ನ ಉದರಪೋಷಣೆಗಾಗಿ, **ಥಟ್ಟನೆ** – ಜಾಗ್ರತೆಯಾಗಿ. (ಹೊಟ್ಟೆ ತುಂಬಿಸಿಕೊಳ್ಳುವುದಕ್ಕಾಗಿ). **ಉಣುತಿಹ** = ಭೋಜನಮಾಡುವ, **ಕಟ್ಟ ಮನುಜರ** = ದುರ್ಜನರನ್ನು. **ಕಟ್ಟಿ** = ಯಮದೂತರು ಪಾಶಗಳಿಂದ ಕಟ್ಟಿ. **ಒಯ್ದು** = ಯಮಪಟ್ಟಣಕ್ಕೆ ಕರೆದುಕೊಂಡು ಹೋಗುವರು. **ಯಮನ** = ಯಮದೇವರು. **ಪಟ್ಟಣದೊಳ್** = ನರಕಗಳಿರುವ ಪ್ರದೇಶದಲ್ಲಿ, **ಒತ್ತಟ್ಟಲಿ** = ಯಾತನಾ ಅನುಭವಿಸುವ ಪ್ರದೇಶದಲ್ಲಿ (ನರಕದಲ್ಲಿ). **ಇಡುತಿಹನು** = ಇಡುವವನಾಗುತ್ತಾನೆ. ॥೨೦॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪಾಪಪರಿಹಾರಮಾರ್ಗ ಹೇಳುತಾರೆ.

ಕೊಯ್ಯಲ್ಪಟ್ಟ ಧಾನ್ಯಗಳ ಯಾವತ್ತೂ, ಅಷ್ಟೂನೂ. ಒರಳಿನಲ್ಲಿ ಹಾಕಿ, ಒನಕೆಗಳಿಂದ ಕುಟ್ಟಿ ತಂಡುಲ ಮಾಡಿ, ಆ ತಂಡುಲವನ್ನು ಒಲಿಮ್ಯಾಲೆ ಇಟ್ಟು, ಅಗ್ನಿದ್ವಾರಾ ಪಚನ ಮಾಡಿ, ಅದರನ್ನ ಪಾಪಪರಿಹಾರಕನಾದ ಪರಮಾತ್ಮಗೆ ಅನುಸಂಧಾನದಿಂದ ಸಮರ್ಪಣ ಪೂರ್ವಕ ಕೊಟ್ಟು, ಪರಮಾತ್ಮ ತದ್ಗತ ತನ್ನ ಸ್ವಾತ್ವಿಕರಸವನ್ನುಂಡು. ತನಗೆ ಯೋಗ್ಯವಲ್ಲದ (ಪರಮಾತ್ಮಗೆ) ಉಚ್ಛಿಷ್ಟ ಸಾಂಕೇತವಾದ ಜಡಪದಾರ್ಥ ಜಡರಸ. ಅಧಿಕಾರಿಯಾದವ ತನ್ನ ಜಿಹ್ವೇಂದ್ರಿಯದ್ವಾರಾ ಭೋಜನ ಮಾಡಲು, ಇಂಥಾ ಸಜ್ಜನರಾದವರ ಪಾಪಗಳು ಚೂರ್ಣೀಕೃತವಾಗಿ ನಾಶ ಮಾಡಲ್ಪಡುವುವು.

ಪೂರ್ವೋಕ್ತ ಪ್ರಕಾರ, ಅನುಸಂಧಾನದಿಂದ ನಿವೇದನಮಾಡಿ, ಭೋಜನ ಮಾಡೋದು ಬಿಟ್ಟು, ನಿವೇದನ ಇಲ್ಲದೇನೇ, ತನ್ನ ಉದರ ಪೋಷಣೆಗೋಸ್ಕರ ಬ್ಯಾಗನೆ ಉಣುತ್ತಾ ಇರತಕ್ಕ ಪಾಪಿಷ್ಠರಾದ ಮನುಷ್ಯರ, ದೇಹತ್ಯಾಗಾನಂತರ ಯಮದೂತರು ಪಾಶಗಳಿಂದ ಕಟ್ಟಿಕೊಂಡುಹೋಗಿ, ಯಮದೇವರ ವಶ ಮಾಡುತ್ತಾರೆ. ಯಮದೇವರು ನರಕಪಟ್ಟಣಗತವಾದ ಒಂದು ಪ್ರದೇಶ ವಿಶೇಷದಲ್ಲಿ ಇರತಕ್ಕ ನರಕದೊಳು, ದೂತರಿಗೆ ಆಜ್ಞಾಪಿಸಿ, ಇಡಿಸೋವನಾಗುತ್ತಾರೆ. ನಿವೇದನಕ್ರಮ ನೈವೇದ್ಯಸಂಧಿಯಲ್ಲಿ ಹೇಳಿದ ಪ್ರಕಾರ, ಅನುಸಂಧಾನ ಮಾಡಿ, ಭೋಜನಮಾಡಿದರೆ, ಪಾಪಗಳು ನಾಶವಾಗುತವೆ- ಎಂತ ತಾತ್ಪರ್ಯ.

**ಪ್ರಮಾಣ- ಯಜ್ಞಶಿಷ್ಟಾಶಿನಃ ಸಂತೋ ಮುಚ್ಯಂತೇ ಸರ್ವಕಿಲ್ಬಿಷೈಃ ।**
**ಭುಂಜತೇ ತೇ ತ್ವಘಂ ಪಾಪಾಃ ಯೇ ಪಚಂತ್ಯಾತ್ಮಕಾರಣಾತ್ ॥**
॥೨೮॥

### ೩. ಭಾವದರ್ಪಣ

ಕೊಟ್ಟಂಥ ಭತ್ತ ಕುಟ್ಟಿ, ಅವನ್ನು ಅಟ್ಟು-ಅಂದರೆ, ಅಡಿಗೆ ಮಾಡಿ, ಸುಟ್ಟು- ಅಂದರೆ, ವೈಶ್ವದೇವ ಮಾಡಿ, ಕೊಟ್ಟು- ಎಂದರೆ, ಸ್ತೋತ್ರಮ ಬ್ರಾಹ್ಮಣ ಅಥವಾ ಅತಿಥಿ ಅಭ್ಯಾಗತಾಂತರ್ಗತ ಶ್ರೀಹರಿಗೆ ಭೋಜನ ಮಾಡಿಸಿ, ತದುಚ್ಛಿಷ್ಟ ಸ್ವೀಕಾರ ಮಾಡಿದರೆ, ಅವನ ಪಾಪ ಸುಟ್ಟು ಹೋಗುತ್ತದೆಂತಲೂ. ಹೀಗೆ ಮಾಡದೆ, ಸ್ವೋದರಂಭರಣಾರ್ಥ ಉಪಯೋಗ ಮಾಡಿದರೆ, ಯಮದೇವರು ಶಿಕ್ಷಿಸುತ್ತಾರೆಂತಲೂ ಹೇಳುತ್ತಾರೆ। ಕುಟ್ಟಿ। ಪೊಟ್ಟು-ಹೊಟ್ಟು, ಒತ್ತಟೆ ಒಂದುಕಡೆ. ॥೨೮॥

### ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಪಂಚಸೂನಾಃ ಅತ 'ಕುಟ್ಟಿ' ಇತಿ॥ ಅಟ್ಟು-ಬೇಸೋದು. ॥೨೮॥

## ಕನ್ನಡಾರ್ಥ

ನಿತ್ಯ ನಡೆಯುವ ಜೀವನಾಧಾರಕ ಪಂಚಹಿಂಸೆಗಳನ್ನು ಹೇಳಿ ಅವುಗಳ ನಾಶೋಪಾಯವನ್ನು ತಿಳಿಸುತ್ತಾಗ- 'ಕುಟ್ಟಿ' ಎಂಬುದಾಗಿ. ಅಟ್ಟುವುದು ಬೀಸುವುದು (ಪದ್ಯಾರ್ಥವು ಸುಲಭವಿದೆ). ॥೨೮॥

### ೪. ಭಾವಪ್ರಕಾಶಿಕೆ

ಈ ಸಂಸಾರ ಸುಖವು ರತ್ನ ಲ್ಲಡಿಯ ನೆಳಲಂತೆ. ಅತ್ಯಲ್ಪ ಸುಖವು- ದುಃಖಪೂರ್ಣವಾಗಿರುವುದು. ಆದ್ದರಿಂದಲೇ, ಭಾಗವತ ಸಪ್ತಮಸ್ಕಂದದಲ್ಲಿ ಪ್ರಹ್ಲಾದನು ಸ್ತೋತ್ರಮಾಡುವಾಗ- "ಕಾಮಾಯನೇ ಸಕಲಯೋನಿಪದುಃಖ ದುಃಖಂ". ತ್ರಸ್ತೋಽಸ್ಮ್ಯಹಂ ಕೃಪಣವತ್ಸಲ ದುಃಸಹೋಗ್ರ ಸಂಸಾರ ಚಕ್ರದನಾತ್ಕೃಶತಾಂ ಪ್ರಣೀತಃ॥ ಯಸ್ಮಾತ್ಪ್ರಿಯಾಪ್ರಿಯವಿಯೋಗ ಸಯೋಗ ಜನ್ಮ ಶೋಕಾಗ್ನಿನಾ ಸಕಲ ಯೋನಿಷು ದಹ್ಯಮಾನಃ॥ ದುಃಖೌಷಧಂ ತದಪಿ ದುಃಖಮತದ್ಧಿಯಾಯಂ ಭೂಮನ್ ಭ್ರಮಾಮಿವದಮೇ ತವ ದಾಸ್ಯ ಯೋಗಂ"॥ ಕೈಯಲ್ಲಿ ತುಂಬಿ ಹಿಡಿದವನು ತಿಂದಿ ಹತ್ತಿ ತುರಿಸಿಕೊಳ್ಳುವಾಗ, ಸ್ವಲ್ಪಸುಖವು ಕಾಣಬಂದರೂ, ತುರಿಸಿ ಆದಮೇಲೆ ಉರಿಹತ್ತಲು ಹೇಗೆ ಬಾಯಿ ಬಡಿದುಕೊಳ್ಳುವಷ್ಟು ದುಃಖಪಡುವನೋ ಅಂತಹಾ ಸುಖದುಃಖ ಗಳೇ ಈ ಸಂಸಾರದಲ್ಲಿ ಕಾಣುವುದು. ಎಲೈನರಸಿಂಹ ! ನಿನ್ನ ಈ ಭಯಂಕರವಾದ ರೂಪವನ್ನು ಕಂಡು ನಾನು ಭಯಪಡುವುದಿಲ್ಲ. ಮಹಾ ಉಗ್ರವಾದ, ಸಹಿಸಲಶಕ್ಯವಾದ ಸಂಸಾರಚಕ್ರದಲ್ಲಿ ತಗಲಿ, ಎಷ್ಟು ಕಷ್ಟವನ್ನನುಭವಿಸ ಬೇಕಾಗುವುದೋ- ಎಂದು ಆ ಒಂದಕ್ಕೆ ನಾನು ಬಹಳ ಭಯಪಡುವೆನು. ಅದರಲ್ಲಿ ಹೆಚ್ಚಿನ ದುಃಖವೇನೆಂದರೆ- ಯಾವ ವಸ್ತು ನಮಗೆ ಪ್ರಿಯವೆಂದು ತಿಳಿದು, ನಾವು ಅದನ್ನು ಬಿಡಬಾರದೆಂದಿರುವೆವೋ ಅದು ನಮ್ಮನ್ನು ಬಿಟ್ಟು ಹೋಗುವುದು. ಯಾವುದು ನಮಗಾಗದೆಂದು ನಾವು ನಿರಾಕರಿಸುತ್ತಿರುವೆವೋ

ಅದು ನಮ್ಮನ್ನು ಬಿಡಲೊಲ್ಲದು, ಇದಲ್ಲದೆ, ಜನನ ಮರಣ ರೂಪವಾದ ದುಃಖ, ಹೀಗೆ ಯಾವ ಯೋನಿಯಲ್ಲಿ ಹುಟ್ಟಿದರೂ, ಶೋಕಾಗ್ನಿಯಿಂದ ದಹ್ಯಮಾನನಾಗಿ ಕಷ್ಟಪಟ್ಟೇ ತೀರಬೇಕು. ಆ ದುಃಖಪರಿಹಾರಕ್ಕೆ ಏನಾದರೂ ಮಾರ್ಗ ಮಾಡಿದರೂ, ಅದರಿಂದಲೂ ದುಃಖವೇ ಬರುವುದು. ಆದ್ದರಿಂದ, ಆ ಸಂಸಾರಕ್ಕೆ ಹೆದರಿ, ನಿನ್ನನ್ನು ಮೊರೆಹೊಕ್ಕಿರುವೆನು; ಹೇ ಪ್ರಭೋ, ನಿನ್ನ ದಾಸ್ಯವನ್ನು ಕೊಟ್ಟು ನನ್ನನ್ನುದ್ಧರಿಸು! ಎಂತ ಕೇಳಿಕೊಂಡಿರುವನು. ಆದ್ದರಿಂದಲೇ, ದಾಸಾರ್ಯರು ಬಹಳ ದುಃಖಮಯವಾದ ಸಂಸಾರವಿದೆಂದು ಹೇಳಿದರು. ಇದನ್ನು ಪ್ರಕಾರಾಂತರದಿಂದ ಪರಿಹರಿಸಿಕೊಳ್ಳಲು ಸಾಧ್ಯವಿಲ್ಲ. ಸುಖದುಃಖರೂಪವಾದ ಪ್ರಾಚೀನಕರ್ಮವು ಇವನು ಎಲ್ಲಿ ಹೋದರೂ ಬಿಡದೆ, ಇವನನ್ನು ಅನುಸರಿಸಿಕೊಂಡೇ ಇರುವುದು. ಆದ್ದರಿಂದ ದಾಸಾರ್ಯರು- "ಪ್ರಾಚೀನ ಕರ್ಮವಿದು ಬಿನ್ನಬಿತದು"- ಎಂದು ಪದ ಮಾಡಿರುವರು. ಆದ್ದರಿಂದ, ಐಹಿಕದ ಅಲ್ಪಸುಖಕ್ಕಾಶೆಪಡದೆ, ಶಾಶ್ವತಸುಖರೂಪವಾದ ಮುಕ್ತಿಗೋಸ್ಕರವಾಗಿ, ಪರಮಾತ್ಮನ ಪಾದಸ್ಪರ್ಶವಾದ ತುಳಸೀಪುಷ್ಪಗಳನ್ನು ಆಘ್ರಾಣಿಸುತ್ತಾ, ಹರಿನೈವೇದ್ಯವನ್ನುಣ್ಣುತ್ತಾ, ಸಜ್ಜನರ ಸಂಗದಿಂದ ಕಾಲ ಕಳೆಯುತ್ತಾ, ಹರಿಕಥಾ ಶ್ರವಣಾದಿಗಳನ್ನು ಮಾಡಿ, ಸಂಸಾರದಿಂದ ಮುಕ್ತನಾಗಬೇಕೆಂಬ ತಾತ್ಪರ್ಯ. ನಿರ್ಮಾಲ್ಯವನ್ನಾಘ್ರಾಣಿಸುವುದು, ನೈವೇದ್ಯವನ್ನು ಸ್ವೀಕರಿಸುವುದೆಂಬ ಎರಡೇ ಅಲ್ಲ. ಇದನ್ನು ಉಪಲಕ್ಷಣವಾಗಿ ತೆಗೆದುಕೊಂಡು, ಕರಚರಣಾದಿ ಎಲ್ಲಾ ಇಂದ್ರಿಯಗಳನ್ನು ಭಗವತ್ಸೇವಾಕ್ಕೆ ಉಪಯೋಗಿಸಬೇಕೆಂಬ ತಾತ್ಪರ್ಯ. ಭಾಗವತ ನವಮಸ್ಕಂದದಲ್ಲಿ ಇಂದ್ರಿಯಗಳನ್ನು ಉಪಯೋಗಿಸುವ ಪ್ರಕಾರವನ್ನು ಹೇಳಿರುವರು.

ಅದೆಂತೆನೆ:- ಸವೈ ಮನಃ ಕೃಷ್ಣಪಾದಾರವಿಂದಯೋರ್ವಚಾಂಸಿ ವೈಕುಂಠ ಗುಣಾನುವರ್ಣನೇ॥ ಕರೌ ಹರೇರ್ಮಂದಿರ ಮಾರ್ಜನಾದಿಷು ಶ್ರುತಿಂ ಚಕಾರಾಚ್ಯುತ ಸತ್ಕಥೋದಯೇ॥ ಮುಕುಂದ ಲಿಂಗಾಲಯ ದರ್ಶನೇ ದೃಶೌ ತದ್ಭೃತ್ಯಗಾತ್ರ ಸ್ಪರ್ಶೇಂಗಸಂಗಂ। ಘ್ರಾಣಂ ಚ ತತ್ಪಾದ ಸರೋಜ ಸೌರಭ ಶ್ರೀಮತ್ತುಲಸ್ಯಾಂ ರಸನಾಂ ತದರ್ಪಿತೇ॥ ಪಾದೌ ಹರೇಃ ಕ್ಷೇತ್ರಪದಾನು ಸರ್ಪ

ಣೆ ಶಿರೋ ಹೃಷೀಕೇಶಪದಾಭಿವಂದನೇ॥ ಕಾಮಂತು ದಾಸ್ಯೇ ನ ತು ಕಾಮ ಕಾಮ್ಯಯಾ ತಥೋತ್ತಮಶ್ಲೋಕ ಜನಾಶ್ರಯಾಂ ರತಿಂ॥" ಅಂಬರೀಷ ರಾಜನು ಇದ್ದ ಸ್ಥಿತಿಯನ್ನು ಹೇಳುವರು. ಮನಸ್ಸನ್ನು ಕೃಷ್ಣನ ಪಾದಾರವಿಂದದಲ್ಲಿ ಇಟ್ಟಿದ್ದನು. ವಾಕ್ಯವನ್ನು ವೈಕುಂಠನಾಮಕ ಪರಮಾತ್ಮನ ಗುಣಗಳನ್ನು ಅನುವಾದನ ಮಾಡಲು ಉಪಯೋಗಿಸಿದ್ದನು. ಕರಗಳನ್ನು ಪರಮಾತ್ಮನ ಮನೆಯನ್ನು ಕಸ ತೆಗೆದು ಸಾರಿಸುವುದಕ್ಕೆ ಉಪಯೋಗಿಸಿದ್ದನು. ಕಿವಿಗಳನ್ನು ಪರಮಾತ್ಮನ ಕಥಾಶ್ರವಣಕ್ಕೂ, ಕಣ್ಣುಗಳನ್ನು ಪ್ರತಿಮಾದಿಗಳ ದರ್ಶನಕ್ಕೂ, ಪರಮಾತ್ಮನ ಭೃತ್ಯರ ಸ್ಪರ್ಶನಕ್ಕಾಗಿ ಎಂದರೆ ಅಂಗಸಂಗಕ್ಕಾಗಿ, ಮೂಗುಗಳನ್ನು ಪರಮಾತ್ಮನಿಗೆ ಸಮರ್ಪಿಸಿದ ತುಳಸೀ ಮೊದಲಾದವುಗಳನ್ನು ಆಘ್ರಾಣಿಸುವುದಕ್ಕೂ, ನಾಲಿಗೆಯನ್ನು ಪರಮಾತ್ಮನ ನೈವೇದ್ಯವನ್ನು ಭುಂಜಿಸುವುದಕ್ಕೂ, ಪಾದಗಳನ್ನು ಶ್ರೀಹರಿಯ ತೀರ್ಥಕ್ಷೇತ್ರಗಳ ಸಂಚಾರಕ್ಕೂ, ಶಿರಸ್ಸನ್ನು ಹೃಷೀಕೇಶನ ಪಾದಗಳಲ್ಲಿ ನಮಸ್ಕಾರ ಮಾಡುವುದಕ್ಕೂ ಉಪಯೋಗಿಸಿದ್ದನು. ಕಾಮವನ್ನು-ಎಂದರೆ, ಇಚ್ಛೆಯನ್ನು ಪರಮಾತ್ಮನ ದಾಸ್ಯದಲ್ಲಿಟ್ಟಿದ್ದನು. ರತಿಸುಖವೆಂದರೆ, ಉತ್ತಮ ಶ್ಲೋಕನಾದ ಪರಮಾತ್ಮನ ಭಕ್ತಜನರ ಸಹವಾಸದಿಂದಲೇ ಸುಖವನ್ನು ಹೊಂದುತ್ತಿದ್ದನು-ಎಂದು ಹೇಳುವರು. ಹೀಗೆ ಎಲ್ಲಾ ಇಂದ್ರಿಯಗಳನ್ನು ಭಗವತ್ಸೇವಾಕ್ಕೆ ಉಪಯೋಗಿಸಬೇಕೆಂಬ ತಾತ್ಪರ್ಯ. ॥೨೮॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ

ಹರಿಸಮರ್ಪಿತ ನೈವೇದ್ಯವೆಂಬದನ್ನು ವಿವರಿಸುತ್ತಾರೆ- ಕುಟ್ಟಿ ಎಂದು. ಗದ್ದೆಯನ್ನ ಕೊಯ್ದು, ನೆಲ್ಲು ಕುಟ್ಟಿ ತೆಗೆದ ಅಕ್ಕಿಯನ್ನು ಅಟ್ಟು ಎಂದರೆ, ಪಾಕಮಾಡಿ. ಇಟ್ಟುದ ಅಂದರೆ, ಪ್ರತಿಮಾದಿ ಸನ್ನಿಹಿತ ದೇವರಮುಂದೆ ಇಟ್ಟು. ನೈವೇದ್ಯಮಾಡಿದ್ದನ್ನು ಸುಟ್ಟು - ಎಂದರೆ, ಅಗ್ನ್ಯಂತರ್ಗತ ಪರಶುರಾಮಾರ್ಪಣೆ ವೈಶ್ವದೇವಶೇಷವನ್ನು, ಕೊಟ್ಟುದ ಅಂದರೆ, ಅತಿಥಿ-ಅಭ್ಯಾಗ

ತರೆಂಬ ಚೇತನಾಧಿಷ್ಠಾನದಲ್ಲಿ ಸಮರ್ಪಿಸಿದ ಶೇಷಾನ್ನವನ್ನ ಮುಟ್ಟಲು ಅಂದರೆ. ಸ್ವಜನ ಸಹಿತ ಭುಂಜಿಸಲು, ಅದು ವಿಠ್ಠಲನೆಂಬ ಅಜ್ಞಜನೋದ್ಧಾರಕಸ್ವಾಮಿ ಭುಂಜಿಸಿದ ಉಚ್ಛಿಷ್ಟವಾದ್ದರಿಂದ. ಅಘವೆಂಬ ಪಾಪವನ್ನು ಬಿಟ್ಟಿಟ್ಟು ಮಾಳ್ಪುದು-ಎಂದರೆ, ಪ್ರತಿ ಪ್ರತಿ ಮಾಡಿ ಪರಿಹರಿಸುವುದೆಂದರ್ಥ. ಬಿಟ್ಟು-ಎಂದರೆ, ಮೇಲೆ ಹೇಳಿದ ನೈವೇದ್ಯ ವೈಶ್ವದೇವ ಅತಿಥಿಶೇಷಗಳನ್ನು ಬಿಟ್ಟು, ತನ್ನ ಹೊಟ್ಟೆಗೋಸುಗ ಧಾನ್ಯಸಂಪಾತಿಸಿ- ಎಂದರೆ. ಅಡಿಗೆಯಾದ ಕೂಡಲೇ ಭೋಜನಮಾಡುವ ದುಷ್ಟಜನರನ್ನು, ಯಮಪಾಶದಿಂದ ಕಟ್ಟಿ ಒಯ್ದು-ಎಂದರೆ. ನರಕಕ್ಕೆ ತೆಗೆದುಕೊಂಡುಹೋಗಿ, ಒತ್ತಟ್ಟಿರುತಿಹರು ಎಂದರೆ. ಯಾವುದಾದರೂ ಒಂದು ನರಕದಲ್ಲಿ ಹಾಕುವರೆಂದರ್ಥ.

**ಯಜ್ಞಶಿಷ್ಟಾಶಿನಸ್ಸಂತೋ ಮುಚ್ಯಂತೇ ಸರ್ವಕಿಲ್ಬಿಷೈಃ ।**
**ಭುಂಜತೇ ತೇ ತ್ವಘಂ ಪಾಪಾಃ ಯೇ ಪಚಂತ್ಯಾತ್ಮಕಾರಣಾತ್ ॥**

ಎಂಬ ಗೀತಾರ್ಥ ವಿವರಿಸಿದೆ. ಅಟ್ಟು-ಎಂಬ ಕ್ರಿಯೆ, ಅಡುಧಾತುವಿನಿಂದ ಹುಟ್ಟಿ, ಅಡಿಗೆ ಮಾಡು-ಎಂಬರ್ಥವನ್ನು ಕೊಡುತ್ತದೆ. ॥೨೯॥

## ಸರ್ವವ್ಯಾಖ್ಯಾನಸಾರ ಸಂಗ್ರಹ

೧. ಗದ್ದೆಗಳಲ್ಲಿ ಧಾನ್ಯಗಳನ್ನು ಮೊದಲು ಕೊಯ್ಯುತ್ತಾರೆ, (ಕೊಯಿದು) ನಂತರ, ಆ ಧಾನ್ಯವನ್ನು ಒಗಳಿಗೆ ಹಾಕಿ, ಒನಕೆಗಳಿಂದ ಕುಟ್ಟುವರು. (ಕುಟ್ಟಿ), ಕುಟ್ಟುವಾಗ ಕಾಳುಗಳನ್ನು ಹೊಟ್ಟಿನಿಂದ ಪ್ರತ್ಯೇಕಿಸಿ, ಚೂರ್ಣೀಕೃತವಾಗುವುವು. ಶುದ್ಧವಾದ ಕಾಳನ್ನು ಚೆನ್ನಾಗಿ ತೊಳೆದು, ಅದನ್ನೂ ಒಲೆದುಮೇಲಿಟ್ಟು, ಬೇಯಿಸುವರು. (ಅಟ್ಟು ಇಟ್ಟಿದ), ಪಕ್ವವಾದ ಅನ್ನವನ್ನು (ಭೋಜ್ಯವಸ್ತುಗಳನ್ನು) ದೇವರ ಮುಂದೆ ಇಟ್ಟು, ಭೋಜ್ಯಪದಾಂತರ್ಗತವಾದ ಭಗವದ್ರೂಪಗಳನ್ನು ಸ್ವಬಿಂಬನಲ್ಲಿ ಐಕ್ಯಚಿಂತನಾಪೂರ್ವಕ ನೈವೇದ್ಯಮಾಡುವರು, (ಕೊಟ್ಟಿದ), ಅನಂತರ, ನಿವೇದಿತವಾದ ಭೋಜ್ಯವಸ್ತುಗಳನ್ನು ಅತಿಥಿ ಅಭ್ಯಾಗತರಿಗೆ ಬಡಿಸಿ, ಪಂಕ್ತಿಪಾವನನಾಗಿ ಭೋಜನೆ

ಮಾಡಬೇಕು. ಸುಟ್ಟು-ಎಂದರೆ, ವೈಶ್ವದೇವಹೋಮದ್ವಾರಾ. ಅಗ್ನಿಯಲ್ಲಿ ತುಪ್ಪದಿಂದ ಹೋಮಮಾಡಬೇಕು. ಇದಕ್ಕೆ "ಪಂಚಸೂನಾಪ್ರಾಯಶ್ಚಿತ್ತ"-ವೆನ್ನುವರು (ಪಂಚಸೂನ = ಐದು ವಿಧವಾದ ದೋಷಗಳು- ಕೊಯ್ಯುವುದು-ಕುಟ್ಟುವುದು-ತೊಳೆಯುವುದು- ಪಕ್ವವಾಗಿ ಬೇಯಿಸುವುದು-ಹೋಮ ಮಾಡುವುದು).

೨. ಹೀಗೆ, ನಿರಂತರ ಭೋಜನಮಾಡುವ ಅಧಿಕಾರಿಗಳಿಗೆ, ಅಜ್ಞಜನೋದ್ಧಾರಕನೂ, ಜ್ಞಾನಾನಂದಮಯನೂ, ಸಕಲಪಾಪಪರಿಹಾರಕನೂ ಆದ ನಿರ್ಮಲಾನಂದಪರಮಾತ್ಮನು ಅವರ ಸಕಲಪಾಪಗಳನ್ನು ಸುಟ್ಟು ಪಾವನನ್ನಾಗಿ ಮಾಡುವನು. (ಮುಟ್ಟಲಿಫ ಹಿಟ್ಟುಟ್ಟು ಮಾಳ್ಪುದು). ದೇವರ ನೈವೇದ್ಯವಾದನಂತರ, ಭಗವದರ್ಪಿತವಾದ ಉಚ್ಛಿಷ್ಟವನ್ನು ಉಣ್ಣಬೇಕು.

೩. ಹಾಗೆ ಮಾಡದೆ, ಕೇವಲ ಉದರಂಭರಣಕ್ಕಾಗಿ, ಮಾಡಿದ ಅಡಿಗೆಯನ್ನು ನೈವೇದ್ಯ-ವೈಶ್ವದೇವವಿಲ್ಲದೇ, ಹಾಗೆಯೇ ಜಾಗ್ರತೆಯಾಗಿ ಹೊಟ್ಟೆಬಾಕನಂತೆ ಉಣ್ಣುವ ದುರ್ಮಾನವರನ್ನು (ಹೊಟ್ಟೆಗೋಸುಗ ಘಟ್ಟನೆ ಉಣುತಿಹ ಕೆಟ್ಟಮನುಜರ) ಯಮದೂತರು ಪಾಶದಿಂದ ಕಟ್ಟಿ, ಯಮಧರ್ಮರಾಯನ ಮುಂದೆ ದರದರ ಎಳೆದು ತರುವರು. ಆಗ, ಯಮನು ನರಕಗತ ಪಟ್ಟಣವಾಸವನ್ನು ಅವರಿಗೆ ಕೊಟ್ಟು, ನರಕಯಾತನೆಯನ್ನು ಕೊಡುವನು-ಎಂದು ಪ್ರಸಕ್ತಪದ್ಯದ ತಾತ್ಪರ್ಯ. ॥೨೮॥

## ಪದ್ಯ-೩೯

**ಮೂಲ:-**

**ಝುಳ್ಳಡಿಯ ನೆಳಲಂತೆ ಭವಸುಖ ।**
**ತಲ್ಲಣಗೊಳಿಸುವುದು ನಿಶ್ಚಯ ।**
**ವಲ್ಲ ಸಾಲವ ಮಾಡಿ ಸಕ್ಕರೆ ಮೆದ್ದ ತೆರನಂತೆ ॥**
**ಕ್ಷುಲ್ಲಕರ ಕೂಡಾಡದಲೆ ಶ್ರೀ ।**
**ವಲ್ಲಭನ ಸದ್ಗುಣಗಣಂಗಳ ।**
**ಬಲ್ಲವರ ಕೂಡಾಡಿ ಸಂಪಾದಿಸು ಪರಂಪದವ ॥೩೯॥**

**ಅವತರಣಿಕೆ :**

ಹೇಯವಾದ, ಕ್ಷಣಭಂಗುರವಾದ ಸುಖವುಳ್ಳ ಸಂಸಾರಸುಳಿಯಲ್ಲಿ ಸಿಲುಕದೆ. ಶ್ರೀವಲ್ಲಭನ ಭಕ್ತರ ಸಂಗಸುಖವನ್ನು ಮಾಡಬೇಕೆಂದು- ತಿಳಿಸುತ್ತಾರೆ. ॥೩೯॥

**ಪ್ರತಿಪದಾರ್ಥ :**

**ಝುಳ್ಳಡಿಯ ನೆಳಲಂತೆ** = ಜರಡಿಯ ನೆರಳಿನೋಪಾದಿಯಲ್ಲಿ. **ಭವಸುಖ** ಸಂಸಾರಜನ್ಯವಾದ ಆನಂದವು, **ತಲ್ಲಣಗೊಳಿಸುವುದು** ಮನಸ್ಸನ್ನು ಚಂಚಲದಿಂದ ವಿಕಾರಗೊಳಿಸುವುದು. **ನಿಶ್ಚಯವಲ್ಲ** = ಈ ಸಂಸಾರ ಸುಖ ಆಜನ್ಮಪರ್ಯಂತ ನಿಶ್ಚಯವಾಗಿ ಇರುವುದಿಲ್ಲ. **ಸಾಲವ ಮಾಡಿ** = ಸಾಲವನ್ನು ಮಾಡಿ. **ಸಕ್ಕರೆ ಮೆದ್ದ ತೆರನಂತೆ** = ಸಕ್ಕರೆಯನ್ನು ತಿಂದಂತೆ. **ಕ್ಷುಲ್ಲಕರ ಕೂಡಾಡದಲೆ** = ಅಹಂಮಮತಾಗ್ರಸ್ತರಾದ ದುಷ್ಟರ ಸಹವಾಸ ಮಾಡದಲೆ. **ಶ್ರೀವಲ್ಲಭನ** ಲಕ್ಷ್ಮೀಪತಿಯಾದ ಶ್ರೀಹರಿಯ. **ಸದ್ಗುಣಗಣಂಗಳ** =

ಅನಂತ ಕಲ್ಯಾಣ ಗುಣಸಮೂಹಂಗಳ, **ಬಲ್ಲವರ** — ಭಗವದ್ಭಕ್ತರ, **ಕೂಡಾಡಿ** — ಸಂಗಡವಿದ್ದು. **ಪರಂಪದವ** — ಉತ್ತಮವಾದ ಮೋಕ್ಷಪದವಿಯನ್ನು, **ಸಂಪಾದಿಸು** - ಪಡೆಯುವಿ. ॥೨೯॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಸಂಸಾರವೆಂಬುದು ಹೇಯ. ಭಗವದ್ಭಕ್ತರ ಕೂಡಿ, ಸದ್ಗತಿ ಸಂಪಾದಿಸಬೇಕೆಂತ ಹೇಳುತಾರೆ.

ಬಿಸಿಲು, ನೆರಳು-ಈ ಎರಡರಿಂದ ಯುಕ್ತವಾಗಿ ಇರತಕ್ಕದ್ದು, ಝಳ್ಳಿಡಿಯ ನೆಳಲು. ಸಂಸಾರದ ಸುಖ ಎಂದರೆ, ಇದು ಸುಖ-ದುಃಖದಿಂದ ಮಿಶ್ರವಾದದ್ದರಿಂದ, ಮನಸ್ಸನ್ನು ನಾನಾ ಪ್ರಕಾರವಾಗಿ ವಿಕಾರ ಪಡಿಸಿ, ಕಷ್ಟ ಜನ್ಮಪಡಿಸುವುದು. ಈ ಸಂಸಾರಸುಖ ಆಮರಣಾಂತ ನಿಶ್ಚಯವಾಗಿ ಇರೋದಿಲ್ಲ ಮತ್ತು ಇದಕ್ಕೆ ದೃಷ್ಟಾಂತ-ಅಂಗಡಿಯಲ್ಲಿ ಸಾಲವನ್ನ ಮಾಡಿ ಸಕ್ಕರಿ ತಂದು ಅದರನ್ನ ಭೋಜನ ಮಾಡಿದರೆ, ಜಿಹ್ವೆಗೆ ರುಚಿಕೊಟ್ಟು ಮನಸ್ಸಿಗೆ ಹರುಷವಾಗತದೆ. ಸಾಲಗಾರ ಬಂದು, ಹಣ ಕೇಳಿದಾಗ ಗತಿ ಇಲ್ಲದೆ ಸಾಲಗಾರನಿಂದ ಹಿಂಸಿತನಾಗಿ, ಮನಸ್ಸಿಗೆ ದುಃಖವಾಗೋದಾಗತದೆ. ಇಷೋಪಾದಿಯಲ್ಲಿ ದಾರಾ, ಪುತ್ರ ಧನ ಧಾನ್ಯ ಆಗರಾದಿಗಳ ನೋಡಿ- 'ನಾನು ಸಂಪಾದನೆ ಮಾಡಿದೆ, ನನ್ನದು' -ಅಂಬೋಣ ದಾಪಪದೆ, ಅದೇ ಸಂಸಾರಕ್ಕೆ ಕಾರಣ. ಇದರಿಂದ, ಭೋಗಪದಾರ್ಥಗಳು ಇರೋವರಿಗ್ಯೂ ಸಂತೋಷವಾಗಿರತದೆ. ಅವುಗಳು ನಷ್ಟವಾಗೋಣದರಿಂದ ದುಃಖವಾಗತದೆ. ಆದ್ದರಿಂದ, ಅಹಂಮಮತಾದಿಗಳಿಂದ ಮದಿಸಿದ ದುಷ್ಟಜನರ ಸಂಗಾತ ಕೂಡಿದರೆ, ಅಹಂಮಮತಾಜ್ಞಾನ ಅತಿಶಯವಾಗಿ ದುಃಖಕ್ಕೆ ಕಾರಣವಾಗಿ ಕೆಟ್ಟುಹೋಗತಾರಾದ ಕಡಿಯಿಂದ, ಇಂಥಾ ದುಷ್ಟರ ಸಹವಾಸ ಮಾಡದಲೆ ಇರಬೇಕು. ಇನ್ನೂ

ಹ್ಯಾಂಗಿರಬೇಕು- ಎಂಥಾವರ ಸಹವಾಸ ಮಾಡಬೇಕೆಂದರೆ- ಲಕ್ಷ್ಮೀಪತಿಯಾದ ಶ್ರೀಪರಮಾತ್ಮನ ನಿರ್ದುಷ್ಟಗಳಾದ ಕಲ್ಯಾಣಗುಣಸಮೂಹಂಗಳ ತಿಳಿದು. ಮಮತಾಜ್ಞಾನರಹಿತರಾಗಿ. ಸರ್ವವೂ ಈಶಾಧೀನವೆಂದು ತ್ರಿಕರಣಶುದ್ಧಿಯಿಂದ ಇರುವ ಭಗವದ್ಭಕ್ತರ ಸಂಗಡ ಇದ್ದು. ಸಂಚಾರಮಾಡಿ, ಅವರಿಂದ ದಿವ್ಯಜ್ಞಾನೋಪದಿಷ್ಟನಾಗಿ, ಸಾಧನ ಮಾಡಿ. ಉತ್ತಮವಾದ ಮೋಕ್ಷವವನ್ನು ಸಂಪಾದನ ಮಾಡು- ಎಂತ ತಾತ್ಪರ್ಯ. ॥೨೯॥

## ೨ ಭಾವದರ್ಪಣ

ಜಲ್ಲಿಡಿ- ಎಂದರೆ, ಕೀಟವಿಶೇಷ. ಅದರ ನೆಳಲು. ಅದರ ಸಂಗಡಲೇ ಹ್ಯಾಗೆ ಹೋಗುತ್ತದೋ, ತದ್ವತ್ ನಮ್ಮ ಸಂಸಾರ, ನಮ್ಮ ಬೆನ್ನೀ ಹತ್ತಿರುತ್ತದೆಂದು ಸದೃಷ್ಟಾಂತದಿಂದ ತೋರಿಸಿ, ಜ್ಞಾನಿಗಳ ಸಹವಾಸಮಾಡಿ. ಭವ ನೀಗು ಎಂದು ಹೇಳುತ್ತಾರೆ । ಜಲ್ಲಡಿ । ಬೆಂಬೊತ್ತಿ-ಬೆನ್ನುಹತ್ತಿ. ॥೨೯॥

## ೩. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ

ಇದರಲ್ಲಿ ಈ ಪದ್ಯ ಕೊಟ್ಟಿಲ್ಲ.

## ೪. ಭಾವಪ್ರಕಾಶಿಕೆ

ನಾವು ಅಡಿಗೆ ಮಾಡುವ ಅನ್ನದಲ್ಲಿ ಐದುವಿಧವಾದ ಹತ್ಯಾದೋಷವು ಬರುವದು. ನೆಲ್ಲನ್ನು (ಭತ್ತವನ್ನು) ಕೊಯ್ಯುವುದು. ೧. ತೂಳಿಸುವುದು ೨. ಕುಟ್ಟುವುದು ೩. ಪುಟುಹಾಕುವುದು ೪. ಬೇಯಿಸುವುದೆಂಬ ಪಂಚಸೂನಾ ದೋಷವು ಬರುವುದು. ಆ ದೋಷಪರಿಹಾರಕ್ಕೋಸ್ಕರ. ಅಡಿಗೆ ಮಾಡಿದ ಮೇಲೆ ದೇವರ ನೈವೇದ್ಯಮಾಡಿ ವೈಶ್ವದೇವವನ್ನು ಮಾಡಬೇಕು. ಆದರ ಮೇಲೆ ಅತಿಥಿ ಭೋಜನವು ಮಾಡಿಸಿ, ಬ್ರಾಹ್ಮಣಾಂತರ್ಗತ ಶ್ರೀಪರಮಾತ್ಮ

ನಿಗೆ ಸಮರ್ಪಿಸಿ ಆ ಶೇಷಾನ್ನವನ್ನು ನಾವು ಭೋಜನಮಾಡಿದರೆ, ಈ ಪಾಪಗಳೆಲ್ಲವೂ ಪರಿಹಾರವಾಗುವುವು. ನೈವೇದ್ಯ, ವೈಶ್ವದೇವವಿಲ್ಲದೆ ಅಡಿಗೆಯನ್ನು ತಾನೇ ಉಂಡರೆ, "ಆತ್ಮಾರ್ಥಂ ಪಾಚಿತಮನ್ನಂ ಅಮಿಷಮಿತ್ಯುಚ್ಯತೆ"- ತನಗೋಸ್ಕರ ಮಾಡಿದ ಅಡಿಗೆಯು ಮಾಂಸಕ್ಕೆ ಸಮವೆಂದು, ಧರ್ಮಶಾಸ್ತ್ರದಲ್ಲಿ ಹೇಳಿರುವರು. ಆದ್ದರಿಂದ, ಯಾವ ನೀಚಪುರುಷನು ಮಾಡಿದ ಅಡಿಗೆಯನ್ನು ತಕ್ಷಣ ಉಂಡುಬಿಡುವನೋ, ಅವನನ್ನು ಯಮದೂತರು ವೈದು ನರಕದಲ್ಲಿ ಹಾಕಿಬಿಡುವರು. ಆದ್ದರಿಂದ, ವೈಶ್ವದೇವ-ಮೊದಲಾದವುಗಳನ್ನು ಮಾಡಿಯೇ ಭುಂಜಿಸಬೇಕೆಂಬ ಭಾವ. ॥೨೯॥

## ॥ ಶ್ರೀಗುರುಹೃದಯ ಪ್ರಕಾಶಿಕೆ

ನೈವೇದ್ಯಾದಿ ಶೇಷಭೋಜನ ಮಾತ್ರಸಾಲದು. ಶಾಸ್ತ್ರವಿಚಾರ ಪೂರ್ವಕ ತಿಳಿದು, ದೇವರ ಪ್ರಾರ್ಥನೆ ಅತ್ಯಾವಶ್ಯಕವೆಂದು ತಿಳಿಸುತ್ತಾರೆ- ಜಾಗು-ಎಂದು.

ಜಾಗು ಮಾಡದೆ- ಎಂದರೆ, ಹಸ್ತಚಮತ್ಕಾರವೆಂಬ ಹಸ್ತಲಾಘವ ಮೊದಲಾದ ವಿದ್ಯೆ. ತತ್ಕಾಲಜನರಂಜನೆಯಾದ ಚಮತ್ಕಾರ ಮಾತುಗಳು. ಮಹಾರಾಜಾ, ಮಹಾಸ್ವಾಮಿ-ಎಂಬುದೇ ಮೊದಲಾಗಿ ಚಾಟುವಾಕ್ಯದಿಂದ ಕಾಲ ವ್ಯರ್ಥಕಳೆಯುವ. ಭೋಗದಾಸೆ-ಎಂಬ ದೇಹಸೌಖ್ಯಾಪೇಕ್ಷೆಯನ್ನು ದುಃಖ ಮಿಶ್ರ ಅಶಾಶ್ವತವೆಂದು ತಿಳಿದು. ನೀಗಿ-ಅಂದರೆ, ವರ್ಜಿಸಿ, ಪರಮಾನುರಾಗದಲ್ಲಿ ಅಂದರೆ, ಶ್ರೀಹರಿಗುರುಗಳಲ್ಲಿ ದೃಢಭಕ್ತಿಯಿಂದ ಭೋಗಿಶಯನನೆಂಬ ಶೇಷಶಯನನಾದ ದೇವರ ಆಗರದ ಹೆಬ್ಬಾಗಿಲಲ್ಲಿ, ಅಂದರೆ, ದೇವರ ಮನೆ- ಎಂಬ ವೈಕುಂಠಾದಿ ಲೋಕಕ್ಕೆ ತೆರಬಾಗಿಲಂತೆ, ಮಾರ್ಗಪ್ರದರ್ಶಕರಾಗಿರುವ ಜ್ಞಾನಿಗಳ ಮುಂದೆ ನಿಂತು, ಕೂಗುತಲೆ-ಅಂದರೆ, ಪ್ರಾರ್ಥಿಸುತ್ತಿರಬಾಗಿ-ಅಂದರೆ, ನಮಸ್ಕರಿಸಿ ದೇವರನ್ನು ತಿಳಿದು, ಅಥವಾ ಜ್ಞಾನ್ಯಂತರ್ಯಾಮಿ ಸ್ವಾಮಿಯನ್ನು ಕುರಿತು ಕರುಣಾಸಮುದ್ರನೇ ! ಭವರೋಗವೆಂಬ

ಜನನ, ಮರಣ ಕ್ಲೇಶಕ್ಕೆ ಭೇಷಜವೆಂಬ ಪರಿಹಾರಕ ವೈದ್ಯನೇ ! ಸ್ವಾಮೀ ಕೈಕೊಟ್ಟು ಉದ್ಧರಿಸೆಂದು ಬೇಡಿಕೊಳ್ಳಲು. ಭಾಗವತರಿಗೆ ಅರಸನಾದ ಅಂದರೆ, ಭಕ್ತಸ್ವಾಮಿ ಶ್ರೀಹರಿಯು ಬೇಗ ಒದಗುವನು-ಎಂದರೆ, ತ್ವರೆಯಾಗಿ ಜ್ಞಾನಕ್ಕೆ ಸಿಲುಕುವನು ಎಂದರ್ಥ. ಚಾಕಚಕ್ಯವೆಂಬ ಸಂಸ್ಕೃತಶಬ್ದದ ತದ್ಭವಶಬ್ದ-ಜಾಗು. ಜಾಗು-ಎಂಬುದು, ಸೀಂಜ್ ಪ್ರಾಪಣೇ-ಎಂಬ ಧಾತುವಿನಿಂದ ನೀಗು-ಎಂಬ ಕನ್ನಡ ಕ್ರಿಯಾಪದ ಹುಟ್ಟಿತೆಂದು ತಿಳಿಯಬೇಕು. ॥೨೯॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಸಂಸಾರಜನ್ಯವಾದ ಸುಖಸಮೂಹಗಳು ಕೇವಲ ಕ್ಷಣಿಕ. ಜೀವನದ ಆಗಸದಲ್ಲಿ ಮಿಂಚಿನಂತೆ ಸುಳಿದು, ತಕ್ಷಣವಮಾಯವಾಗುವುದು, ನಂತರ ಸಾಂದ್ರವಾದ ಕತ್ತಲೆ. ಅಂದರೆ, ದುಃಖಗಳ ಪರಂಪರೆ. ಮುಂದೆ ಬರುವ ದುಃಖಸೂಚಕವಾದ ಭವಸೌಖ್ಯವು ಕ್ಷಣಭಂಗುರ. ಈ ಕಾರಣದಿಂದ, ಭವಸೌಖ್ಯವನ್ನು **ಝಲ್ಲಡಿಯನೆಳಲಂತೆ** – ಎಂದಿದ್ದಾರೆ. ಒಂದು ಜರಡಿ (ಪಂದರಿ)ಯಲ್ಲಿ ಅನೇಕ ರಂಧ್ರಗಳಿರುತ್ತವೆ. ಅದರ ಮೂಲಕ ಬಿಸಿಲು ಹಾದು ಹೋಗುವಾಗ, ಜರಡಿಯ ಕೆಳಗೆ ಬೆಳಕು-ನೆರಳು ಮಿಶ್ರಿತವಾದ ಛಾಯೆ ಉಂಟಾಗುತ್ತದೆ. ಅದರಂತೆ, ಜೀವನವು ಸುಖ-ದುಃಖ ಮಿಶ್ರಿತ ಎಂದಿದ್ದಾರೆ.

೨. ಈ ಭವಸೌಖ್ಯ, ನಮ್ಮ ಮನಸ್ಸಿನ ನೆಮ್ಮದಿಯನ್ನು ಕೆಡಿಸುವುದು. ಏಕೆಂದರೆ- ಸುಖದ ಹಿಂದೆ ದುಃಖವು ಕಾದಿರುವುದು. ಸುಖಾನುಭವದಿಂದ ಉಂಟಾದ ಆನಂದವು ದುಃಖದಲ್ಲಿ ಮಾಯವಾಗುವುದು. ಇದರಿಂದ ಮನಸ್ಸು **ತಲ್ಲಣಗೊಳಿಸುವುದು**-ಎಂದಿದ್ದಾರೆ. ಈ ಅನುಭವ ನಿಶ್ಚಯವಾದದ್ದು. ಅನುಭವಕ್ಕೆ ಬರುವ ವಿಷಯ ಯಾವಾಗಲೂ ಸತ್ಯಭೂತವಾದದ್ದು.

೩. ಸುಖದುಃಖ ಮಿಶ್ರಿತವಾದ ಜೀವನಕ್ಕೆ ಬಹು ಸೊಗಸಾದ ದೃಷ್ಟಾಂತವನ್ನು ದಾಸರಾಯರು ಕೊಡುತ್ತಾರೆ. ನಮಗೆ ತಿನ್ನಲು ಸಕ್ಕರೆ ಬೇಕು. ನಮ್ಮಲ್ಲಿ ಅದನ್ನು ಕೊಳ್ಳಲು ಹಣವಿಲ್ಲ. ಸಾಲವನ್ನು ಮಾಡಿ, ಸಕ್ಕರೆಯನ್ನು ಕೊಂಡು, ಮಧುರ ಪದಾರ್ಥಗಳನ್ನು ತಯಾರಿಸಿಕೊಂಡು ತಿನ್ನುತ್ತೇವೆ. ತಿನ್ನುವವರೆಗೂ ಆನಂದಾನುಭವ, ಸಾಲವನ್ನು ತೀರಿಸಬೇಕಾದರೆ, ದುಃಖಾನುಭವ.

೪. ಇದರ ಪರಿಹಾರಕ್ರಮವನ್ನು ಸೂಚಿಸುತ್ತಾರೆ-ದಾಸವರ್ಯರು. ದುಷ್ಟಸ್ವಭಾವದ ದುರ್ಜನರ ಸಂಗವನ್ನು ಪರಿತ್ಯಾಗ ಮಾಡಬೇಕು. ಅಂದರೆ, ಕ್ಷುಲ್ಲಕರ ಕೂಡಾಡದಲೇ ಇರಬೇಕು. ಕ್ಷುಲ್ಲಕ ಬುದ್ಧಿಯುಳ್ಳವರ ಸಂಗವು ದುಃಖಕ್ಕೆ ಕಾರಣ. ಅದು ಮನಸ್ಸಿನ ಕ್ಲೇಶಗಳಿಗೆ ಹೇತುವಾಗಿದೆ.

೫. ರಮಾಪತಿಯಾದ ಶ್ರೀಹರಿಯ ಅನಂತಕಲ್ಯಾಣಗುಣ ಸಮೂಹಗಳನ್ನು ಯಾರು ಅನುಸಂಧಾನ ಪೂರ್ವಕ ತಿಳಿದು, ಮಹಾತ್ಮ್ಯಜ್ಞಾನದಿಂದ ಭಜಿಸುತ್ತಿರುತ್ತಾರೋ, ಅಂತಹ ಭಗವದ್ಭಕ್ತರ (ಬಲ್ಲವರ) ಸಂಗಸುಖವನ್ನು ಬಯಸು, ಮಾಡು. ಅವರೊಡನೆ ಕೂಡಾಡಿ, ಬಲ್ಲವರ ಸಂಗಸುಖದಿಂದ ನಿತ್ಯಾನಂದವನ್ನು ಹೊಂದು. ಕೊನೆಯಲ್ಲಿ, ಸಾಧನಾಪೂರ್ತಿಯಾದ ನಂತರ, ಸ್ವರೂಪಗತ ಆವಿರ್ಭಾವರೂಪವಾದ ಮೋಕ್ಷಾನಂದವನ್ನು (ಪರಂಪದವ) ಭಗವದನುಗ್ರಹದಿಂದ ಹೊಂದು-ಎಂದು ಬಾಳಿನ ಸಾರ್ಥಕ್ಯವನ್ನು ತಿಳಿಸಿದ್ದಾರೆ-ಪರಮಜ್ಞಾನಿವರ್ಯರಾದ ದಾಸರಾಯರು. ॥೨೯॥

## ಪದ್ಯ-೩೦

**ಮೂಲ :**

**ಜಾಗುಮಾಡದೆ ಭೋಗದಾಸೆಯ ।**
**ನೀಗಿ ಪರಮನುರಾಗದಲಿ ವರ ।**
**ಭೋಗಿಶಯನನ ಆಗರದ ಹೆಬ್ಬಾಗಿಲಲಿ ನಿಂದು ॥**
**ಕೂಗುತಲಿ ಶಿರಬಾಗಿ ಕರುಣಾ ।**
**ಸಾಗರನೆ ಭವರೋಗಭೇಷಜ ।**
**ಕೈಗೊಡೆಂದೆನೆ ಬೇಗ ಒದಗುವ ಭಾಗವತರರಸ ॥೩೦॥**

**ಅವತರಣಿಕೆ :**

ಜೀವನದ ಭೋಗದಾಸೆಯನ್ನು ತ್ಯಜಿಸಿ, ವರಭೋಗಿಶಯನನ್ನು ಭಜಿಸುತ್ತಾ, ಭವರೋಗ ಭೇಷಜನನ್ನು ಕೊಂಡಾಡುತ್ತಿರು-ಎಂದು ಉಪದೇಶಿಸುತ್ತಾರೆ. ॥೩೦॥

**ಪ್ರತಿಪದಾರ್ಥ :**

**ಜಾಗುಮಾಡದೆ** = ಸ್ವಲ್ಪವೂ ತಡಮಾಡದೇ, ಅಂದರೆ, ಜಾಗ್ರತೆಯಾಗಿ, **ಭೋಗದಾಸೆಯ** = ವಿಷಯಾದಿಗಳಲ್ಲಿರುವ ಭೋಗದ ಇಚ್ಛೆಯನ್ನು, **ನೀಗಿ** = ಬಿಟ್ಟು, (ಆಶಾತ್ಯಾಗಪೂರ್ವಕ) **ಪರಮನುರಾಗದಲಿ** = ಅತ್ಯಂತ ಶ್ರದ್ಧಾಭಕ್ತಿಗಳಿಂದ. **ವರಭೋಗಿಶಯನನ** = ಸರ್ವಶ್ರೇಷ್ಠರಾದ ಶೇಷದೇವರನ್ನೇ ಹಾಸಿಗೆಯನ್ನಾಗಿ ಮಾಡಿಕೊಂಡಿರುವ ಶ್ರೀಮನ್ನಾರಾಯಣನ. **ಆಗರದ** = ಗೃಹಸಾಂಕೇತವಾದ ಸ್ಥೂಲದೇಹದ (ಸ್ಥೂಲದೇಹವೇ ದೇವದೇವನ ಮಂದಿರವು) **ಹೆಬ್ಬಾಗಿಲಲಿ** = ಮುಖ್ಯದ್ವಾರವಾದ ಬಾಯಿಯಲ್ಲಿ.

**ನಿಂದು** = ನಿಶ್ಚಲವಾದ ಮನಸ್ಸಿನಿಂದ ಯುಕ್ತನಾಗಿ (ಏಕಾಗ್ರ ಚಿತ್ತನಾಗಿ). **ಕೂಗುತಲಿ** = ಶ್ರೀಹರಿಯ ನಾಮೋಚ್ಚಾರಣೆ ಮಾಡುತ್ತಾ. **ಶಿರಬಾಗಿ** = ದೀನತೆಯಿಂದ ಶ್ರೀಹರಿಯ ಚರಣಾರವಿಂದಗಳಲ್ಲಿ ಚಿತ್ತವನ್ನಿಟ್ಟು. **ಕರುಣಾಸಾಗರನೆ** = ದಯಾಸಮುದ್ರನೇ. **ಭವರೋಗಭೇಷಜ** = ಸಂಸಾರವೆಂಬ ರೋಗಕ್ಕೆ ವೈದ್ಯನಾಗಿರುವವನೇ. **ಕೈಕೊಡೆಂದನೆ** = ಕರಾವಲಂಬನವಿತ್ತು, ಸಲಹು ಎಂದರೆ. **ಭಾಗವತರರಸ** = ಭಕ್ತರಿಗೆ ಪ್ರಭುವಾದ ಶ್ರೀಹರಿಯು. **ಬೇಗ ಒದಗುವ** = ಶೀಘ್ರವಾಗಿ ಬಂದು, ಪ್ರತ್ಯಕ್ಷಗೋಚರನಾಗಿ ಕಾಪಾಡುವನು. ॥೨೮॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ವಿಷಯತ್ಯಾಗಮಾಡಿ, ಶ್ರೀಪರಮಾತ್ಮನ ಭಜಿಸಬೇಕೆಂತ ಹೇಳುತ್ತಾರೆ.

ಅಹಂ-ಮಮತಾಯುಕ್ತನಾಗಿ ವಿಷಯಭೋಗಾದಿಗಳೇನು, ಆಶಾವೇನು ಇವುಗಳು-ಲಿಂಗಭಂಗವಾಗೋವರಿಗೂ ಬಿಡೋದಿಲ್ಲ. ಭೋಗಿಸೇ ತೀರಬೇಕು. ಅಹಂ-ಮಮತಾಯುಕ್ತನಾಗಿ ಭೋಗ ಮಾಡಿದರೆ, ದುಃಖಾಭಿವೃದ್ಧಿಯೂ, ಪಾಪಾಭಿವೃದ್ಧಿಯೂ ಆಗತದೆ. ತದ್ವತ್ ಆಶಾವು. ಆದ್ದರಿಂದ. ಆಶಾತ್ಯಾಗದಿಂದ ಸರ್ವವೂ ಈಶಾಧೀನ-ಎಂತ ತಿಳಿದು, ಯದೃಚ್ಛಾಲಾಭದಿಂದ ತುಷ್ಟನಾಗಿ, ಅತ್ಯಂತವಾದ ಆಸಕ್ತಿಯಿಂದ, ಶ್ರದ್ಧಾದಿಂದ, ಶ್ರೇಷ್ಠರಾದ ಶೇಷದೇವರು ಹಾಸಿಗೆಯಾಗುಳ್ಳ ಶ್ರೀನಾರಾಯಣಗೆ ಮಾನಿಸಾಂಕೇತವಾದ ಸ್ಥೂಲದೇಹದ ಮುಖ್ಯದ್ವಾರವಾದ ಬಾಯಿಯಲ್ಲಿ, ನಿಶ್ಚಂಚಲವಾದ ಭಕ್ತಿಯಿಂದ ಮನಸ್ಸು ನಿಂತು, ಹೃದಯಾಂತರ್ಗತ ಶ್ರೀಪರಮಾತ್ಮನ ನಾಮೋಚ್ಚಾರಣ ಘಟ್ಟ್ಯಾಗಿ ಮಾಡುತ್ತಾ, ಕೇವಲ ದೀನನಾಗಿ, ಮನಸ್ಸನ್ನು ಶ್ರೀದೇವರ ಪಾದದಲ್ಲಿ ಇಟ್ಟು, ನಮಸ್ಕಾರ ಮಾಡಿ, ಕರುಣಾಸಮುದ್ರನೇ, ಸಂಸಾರಾಬ್ಧಿರೋಗಕ್ಕೆ ಔಷ

ಧರೂಪನಾದವನೇ. ಜ್ಞಾನ ಭಕ್ತಿ ವೈರಾಗ್ಯಾದಿ ಇವನ್ನ ಕೊಡು—ಎಂತೆಂ ದರೆ, ಅದರನ್ನ ಕೊಟ್ಟು, ತದ್ದ್ವಾರಾ, ಸಾಧನ ಪೂರ್ತಿಮಾಡಿಸಿ, ಭಗವದ್ಭಕ್ತರಿಗ ಸ್ವಾಮಿಯಾದ ಶ್ರೀಪರಮಾತ್ಮ, ಶೀಘ್ರವಾಗಿ ಪ್ರತ್ಯಕ್ಷದಿಂದ ಗೋಚರನಾಗ ತಾನೆ-ಎಂತ ತಾತ್ಪರ್ಯ. ॥೩೦॥

### ೨. ಭಾವದರ್ಪಣ

ನಿಷ್ಕಾಮಉಪಾಸನೆ ಮಾಡುತ್ತ ಹೇಳುತ್ತಾರೆ— ಹಾಗುಮಾಡದೆ। ಹಾಗು-ಆಲಸ್ಯ. ಅನುರಾಗ-ಪ್ರೇಮಭಕ್ತಿ. ಅಗರ-ಮನೆ. ಹೆಬ್ಬಾಗಿಲು-ತಲೆಬಾಗಿಲು. ಭೇಷಜ-ವೈದ್ಯ. ॥೩೦॥

### ೩. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ

'ಹಾಗು' ಇತಿ॥ಆಲಸ್ಯ॥ 'ಸೀಗಿ' ಬಿಟ್ಟು॥ ಭವರೋಗ ಭೇಷಜ ವೈದ್ಯ. ಓಂ ಯೂಯಂ ಪಾತ ಸ್ವಸ್ತಿಭಿಃ ಸದಾ ನಃ॥ ಅನ ಇಂದ್ರೋ ದುರುದಾನ ಉಸಾದಳಿಕ್ಷಿಕೃದವಸೇ ಯಾಸದುಗ್ರಃ ಓಜಿಷ್ಠೇಭಿಃ॥ಓಂ॥ ಅಸ್ಮದಜ್ಞಾನಾದಿ ರುಜಾಂ, ಉಗ್ರಃ ಕ್ರೂರಶ್ಚೇತಿ ವೈದ್ಯಃ. ॥೩೦॥

## ಕನ್ನಡಾರ್ಥ

ಹಾಗು ಎಂಬುದಕ್ಕೆ ಆಲಸ್ಯವೆಂದು ಇಲ್ಲಿ ಅರ್ಥ. 'ಸೀಗಿ'-ಎಂದರೆ, ಬಿಟ್ಟು-ಎಂದು ಅರ್ಥ. ಭವರೋಗಭೇಷಜವೆಂಬ ಪದವು ಸಹಸ್ರನಾಮಗಳಲ್ಲಿಯು 'ವೈದ್ಯ'- ಎಂಬುದರ ಅರ್ಥ. ಅಂದರೆ, ಅಜ್ಞಾನ ಮುಂತಾದ ನಮ್ಮಲ್ಲಿರುವ ರೋಗಗಳಿಗೆ ಉಗ್ರವಾದ ಪರಿಹಾರಕನು-ಎಂದು ಅರ್ಥ. ॥೩೦॥

### ೪. ಭಾವಪ್ರಕಾಶಿಕೆ.

ಸಂಸಾರದಲ್ಲಿ ನಶ್ವರವಾದ, ವಿಷಯ ದಭಿಲಾಷೆಯನ್ನು ಬಿಟ್ಟು, ಆಲಸ್ಯ ಮಾಡದೆ, ಪರಮಭಕ್ತಿಯಿಂದ ಶೇಷಶಾಯಿಯಾದ ಶ್ರೀಪರಮಾತ್ಮನ ಆಲಯದ ತಲಬಾಗಿಲಿನಲ್ಲಿ ನಿಂತು, ಉಚ್ಚವಾದ ಸ್ವರದಿಂದ, ಎತ್ತಿ ಕರುಣಾಸಮುದ್ರನೇ! ಭವರೋಗಭೇಷಜ! ಕೈಗೊಡು!- ಎಂದು, ಬೇಡಲು, ಭಕ್ತರಿಗೆ ಅರಸನಾದ ಶ್ರೀಹರಿಯು ತಕ್ಷಣವೇ ಬಂದೊದಗುವನು. ॥೩೦॥

### ೫. ಶ್ರೀಗುರುಹೃದಯ ಪ್ರಕಾಶಿಕೆ.

ಈ ಪದ್ಯಮೊದಲು ಮೂರುಪದ್ಯದಿಂದ ಗುರು, ಶಾಸ್ತ್ರಜ್ಞಾನ ಮೂಲಕವಾಗಿಯೇ ದೇವರು ದೊರಕುವನು- ಎಂಬುದನ್ನು ದೃಢಪಡಿಸಿ ತಿಳಿಸುತ್ತಾರೆ- ಏನುಕರುಣಾಸಿಂಧುವೋ ಎಂದು ಮೊದಲು ಮಾಡಿ.

ದಯಾಸಿಂಧುವಾದ ದೇವರಿಗೆ ತನ್ನ ಭಕ್ತರಲ್ಲಿ ಏನು ಕೃಪೆಯೋ? ಅಂದರೆ, ಬಹುದಯ ಉಂಟೆಂದರ್ಥ. ಸದ್ಭಕ್ತಜನರು ಅತಿ ನಿಕೃಷ್ಟ ದುಷ್ಕರ್ಮ ಮಾಡಿದರೂ ಸ್ವೀಕರಿಸಿ, ಅಂದರೆ, ತಪ್ಪು ಎಣಿಸದೆ, ಭಕ್ತಿಯನ್ನೇ ಅಂಗೀಕರಿಸಿ ರಕ್ಷಿಸುವನು. ಪರಮಕರುಣಾಳುವಾದ ದಶರಥ ಸೂನುವೆಂಬ- ಶ್ರೀರಾಮನು, ತನ್ನ ನಾಮಸ್ಮರಣೆಯಲ್ಲಿಯೇ ಆಸಕ್ತನಾದ, ಬಹು ಪ್ರಾಣಿ ಹಿಂಸಕನಾದ, ಲುಬ್ಧಕನೆಂಬ ಬೇಡರವನಿಗೆ, ಸುಜ್ಞಾನವೆಂಬ ತನ್ನ ಸಾಕ್ಷಾತ್ಕಾರವನ್ನು ಕೊಟ್ಟು, ವಾಲ್ಮೀಕಿಋಷಿಯನ್ನು ಮಾಡಿ, ರಾಮಾಯಣವೆಂಬ ತನ್ನ ಕಥೆಯನ್ನು (ಚರಿತ್ರ) ಹೇಳಿಸಿದನಾದ್ದರಿಂದ, ಬಹುದಯಾಶಾಲಿ-ಎಂಬುದಕ್ಕೆ ಇದೇ ದೃಷ್ಟಾಂತವೆಂದರ್ಥ. ॥೩೦॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಮಾನವ ಜನ್ಮ ಬಹು ದೊಡ್ಡದು, ಅದು ಅಲಭ್ಯಲಭ್ಯ, ಭಗವದನುಗ್ರಹ ವಿಶೇಷದಿಂದ, ಈ ಮಾನವಜನ್ಮ ಬಂದಾಗ, ಆಲಸ್ಯ ಮಾಡದೆ (ಜಾಗು ಮಾಡದೆ), ಜೀವನವನ್ನು ಸಾರ್ಥಕವಾಗಿ ಕಳೆಯಬೇಕು,

ಕೇವಲ ವಿಷಯೋಪಭೋಗಗಳಲ್ಲಿ ಇಂದ್ರಿಯಗಳನ್ನು ಇಡದೆ, ಶ್ರೀಹರಿಯ ಚಿಂತನೆಯನ್ನು ನಿರಂತರ ಮಾಡುತ್ತಿರಬೇಕು. ವಿಷಯಸುಖಗಳು ಕ್ಷಣಭಂಗುರ, ದೇಹಾರೋಗ್ಯ-ಮನಸ್ಸಿನ ನೆಮ್ಮದಿಗಳನ್ನು ಕೆಡಿಸುವವು.

೨ ಹೀಗೆ ಆಶಾತ್ಯಾಗವನ್ನು ಮಾಡಿ, ಭೋಗಲಾಲಸೆಗಳನ್ನು ನೀಗಿ, ಶ್ರೇಷ್ಠವಾದ ಆದರ ಪ್ರೇಮಗಳಿಂದ ಆ ಅನಂತಶಯನನನ್ನು ನೆನೆಯುತ್ತಿರಬೇಕೆಂದು ದಾಸವರ್ಯರ ಉಪದೇಶಾಮೃತ. ಪರಮಾನುರಾಗದಿಂದ ಆವರ ಭೋಗಿಶಯನನನ್ನು ಭಜಿಸುತ್ತಿರಬೇಕು.

೩. ಸಾಧನಶರೀರವೆಂಬ ಈ ಸ್ಥೂಲದೇಹವು ದೇವದೇವನ ಮಂದಿರವು. ಅದೇ ಪರಭೋಗಿಶಯನನ ಆಗರವು. (ಮನೆಯು) ಅದರ ಮುಖ್ಯದ್ವಾರವು ಈ ಸ್ಥೂಲದೇಹಗತ ಬಾಯಿಯು. ಅದರಲ್ಲಿ ಆಸಕ್ತ ಮನಸ್ಕನಾಗಿ, ನಾಲಿಗೆಯಿಂದ ಆ ನಾರಾಯಣನ ದಿವ್ಯನಾಮೋಚ್ಚಾರಣೆಯನ್ನು ನಿರಂತರವೂ ಮಾಡುತ್ತಿರಬೇಕು. (ಆಗರದ ಹೆಬ್ಬಾಗಿಲಲಿ ನಿಂತು)

೪. ನಾಲಿಗೆಯಿಂದ ನಾಮಸ್ಮರಣೆಯನ್ನು ಘಟ್ಟಿಯಾಗಿ ಉಚ್ಚರಿಸುತ್ತಾ (ಕೂಗುತ್ತಲಿ), ನಮ್ಮ ಚಿತ್ತವನ್ನು ಶ್ರೀಹರಿಯ ಚರಣಾರವಿಂದಗಳಲ್ಲಿ ಸ್ಥಿರೀಕರಿಸಬೇಕು (ಶಿರಬಾಗಿ). ಆಗ ಭಕ್ತವತ್ಸಲನಾದ ದಯಾಸಾಗರನು ಕೃಪಾವಲೋಕನದಿಂದ ಕಾಪಾಡುವನು.

೫. ಈ ಸಂಸಾರವೆಂಬುದೇ ಒಂದು ದೊಡ್ಡ ರೋಗವು. ಜನ್ಮ-ಜನ್ಮಾಂತರಕ್ಕೂ ಅಂಟಿದ ಅಪರಿಹಾರ್ಯವಾದ ರೋಗವು. ಇದನ್ನು "ಭವರೋಗ" - ಎಂದಿದ್ದಾರೆ. ಅಂತಹ ಭವರೋಗವನ್ನು ಪರಿಹರಿಸುವ ಏಕೈಕ ವೈದ್ಯನೆಂದರೆ- ಭವರೋಗಭೇಷಜನಾದ ಭಗವಂತನು. "ಭೇಷಜ"- ಎಂದರೆ, ವೈದ್ಯನೆಂದರ್ಥ.

೬. ಹೇ ಸರ್ವೋತ್ತಮನಾದ ಶ್ರೀಹರಿ, ನೀನು ದಯಾಸಂಪನ್ನನು, ಭವರೋಗಭೇಷಜನು, ದೀನನಾದ ನನ್ನ ಮೇಲೆ ದಯಮಾಡು"-ಎಂದು ಏಕಾಗ್ರಚಿತ್ತತೆಯಿಂದ ಭಜಿಸಿದರೆ, ತಕ್ಷಣ ತನ್ನ ಕರಾವಲಂಬನವಿತ್ತು

ಸಲಹುವನು. ಭಗವದ್ಭಕ್ತರಿಂದ ಶಿಕ್ಷಿತನಿಗೆ ಪ್ರಭುವು ಶ್ರೀಹರಿಯು (ಭಾಗವತದರ್ಶನ). ಭಗವದ್ಭಕ್ತರ ಪ್ರಾರ್ಥನೆಗೆ ಒಲಿಯುವ, ಭಾಗವತರ ದಾಸನು ತನ್ನ ಭಕ್ತರ ಅವಸರಕ್ಕೆ ಬಂದು ಒದಗಿ, ರಕ್ಷಿಸುವನೆಂದು ಪ್ರಸಕ್ತ ಪದ್ಯದ ತಾತ್ಪರ್ಯವು. ॥೩೦॥

## ಪದ್ಯ-೩೧

**ಮೂಲ:-**

**ಏನು ಕರುಣವೊ ತನ್ನವರಲಿ ದ ।**
**ಯಾನಿಧಿಗೆ ಸದ್ಭಕ್ತಜನರತಿ ।**
**ಹೀನಕರ್ಮವ ಮಾಡಿದರು ಸರಿ ಸ್ವೀಕರಿಸಿ ಪೊರೆವ ॥**
**ಪ್ರಾಣಹಿಂಸಕ ಲುಬ್ಧಕಗೆ ಸು ।**
**ಜ್ಞಾನ ಭಕ್ತಿಗಳಿತ್ತು ದಶರಥ ।**
**ಸೂನು ವಾಲ್ಮೀಕಿ ಮುನಿಯ ಮಾಡಿದ ಪರಮಕರುಣಾಳು ॥೩೧॥**

**ಅವತರಣಿಕೆ :**

ಪರಮಕರುಣಾಶಾಲಿಯಾದ ಶ್ರೀಪರಮಾತ್ಮನು ತನ್ನ ಏಕಾಂತ ಭಕ್ತರು ಹೀನ ಕರ್ಮಗಳನ್ನು ಮಾಡಿದರೂ ಸರಿ, ಅದನ್ನು ಸ್ವೀಕರಿಸಿ, ಅವರನ್ನು ಸಲಹುವನೆಂದು ವಾಲ್ಮೀಕಿಋಷಿಗಳ ದೃಷ್ಟಾಂತದಿಂದ ವಿವರಿಸುತ್ತಾರೆ. ॥೩೧॥

**ಪ್ರತಿಪದಾರ್ಥ :**

**ದಯಾನಿಧಿಗೆ** ಪರಮಕರುಣಾಸಾಗರವಾದ ಶ್ರೀಹರಿಗೆ. **ತನ್ನವರಲಿ** = ತನ್ನ ಏಕಾಂತಭಕ್ತಜನರಲ್ಲಿ. **ಏನು ಕರುಣವೊ** = ಅತಿಶಯವಾದ

ಕಾರುಣ್ಯವೆಷ್ಟೋ?. **ಸದ್ಭಕ್ತಜನರು** – ಶ್ರೀಹರಿಯಲ್ಲಿ ಸುದೃಢಸ್ನೇಹ ರೂಪವಾದ ಭಕ್ತಿಯುಳ್ಳ ಸಜ್ಜನರ, **ಅತಿ ಹೀನಕರ್ಮವ** ಮಹತ್ತರವಾದ ದುಷ್ಕರ್ಮವನ್ನು. **ಮಾಡಿದರು ಸರಿ** = ಮಾಡಿದರೂ ಸರಿಯೇ. **ಸ್ವೀಕರಿಸಿ** = ಅದನ್ನು ಸ್ವೀಕಾರ ಮಾಡಿ. ಅಂದರೆ, ಅದರ ಪರಿಹಾರ ಮಾಡಿ. **ಪೊರೆವ** – ಸಂರಕ್ಷಿಸುವನು. **ಪ್ರಾಣಹಿಂಸಕ** = ಅರಣ್ಯದಲ್ಲಿದ್ದು, ಜನರಿಗೆ ನಾನಾ ವಿಧವಾದ ಹಿಂಸೆಯನ್ನು ಕೊಡುತ್ತಿದ್ದ. **ಲುಬ್ಧಕಗೆ** = ಬೇಡರವನಿಗೆ. **ಸುಜ್ಞಾನ ಭಕ್ತಿಗಳನ್ನು** ನಾರದರ ದ್ವಾರಾ ಸಮೀಚೀನವಾದ ಜ್ಞಾನವನ್ನು ಕೊಟ್ಟು. **ದಶರಥಸೂನು** = ದಶರಥನ ಪುತ್ರನಾದ ಶ್ರೀರಾಮಚಂದ್ರನು. **ಪರಮಕರುಣಾಳು** = ಶ್ರೇಷ್ಠನಾದ ದಯಾವಂತನು. **ವಲ್ಮೀಕಿ ಋಷಿಯ ಮಾಡಿದ** – ಶ್ರೀಮದ್ರಾಮಾಯಣಚರಿತ್ರೆಯನ್ನು ಕಾವ್ಯರೂಪದಿಂದ ಬರೆಯಿಸಿ. ಹೇಳಿಸಿ, ಜಗತ್ತಿನಲ್ಲಿ ಆದಿಕವಿ ವಾಲ್ಮೀಕಿ-ಎಂದು ಪ್ರಖ್ಯಾತಿ ಪಡಿಸಿದನು. ॥೩೧॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಭಕ್ತರಲ್ಲಿ ಅತಿಶಯವಾದ ಕರುಣಾವುಳ್ಳವನು- ಶ್ರೀಪರಮಾತ್ಮನೆಂದು ಹೇಳುತ್ತಾರೆ. ಅಪರಿಮಿತತ್ಯಾಗ, ಮಾಹಾತ್ಮ್ಯಜ್ಞಾನಪೂರ್ವಕ ಸುದೃಢ ಸ್ನೇಹ ದಾವದದೇ- ಇದೇ ಸದ್ಭಕ್ತಿ. ಇಂಥಾ ಸದ್ಭಕ್ತಿಯುಳ್ಳ ಜನರು ಬಹುದುಷ್ಕೃತ್ಯ ಮಾಡಿದರೂ ಸಹ, ಅವರನ್ನ ದೂರ ಮಾಡದೆ, ಸ್ವೀಕಾರ ಮಾಡಿ ರಕ್ಷಿಸುತ್ತಾನೆ. ಆದ್ದರಿಂದ, ದಯಾಸಮುದ್ರನಾದ ಶ್ರೀಪರಮಾತ್ಮನಿಗೆ ಪೂರ್ವೋಕ್ತ ಗುಣೋಪೇತರಾದ ಭಕ್ತರಲ್ಲಿ ಅತಿಶಯವಾದ ಕಾರುಣ್ಯವುಳ್ಳವನೆಂದು ತಾತ್ಪರ್ಯ. ದೃಷ್ಟಾಂತ – ಅರಣ್ಯದಲ್ಲಿ ಇದ್ದು ಮಾರ್ಗಸಂಚಾರಿಗಳಾದ ಜನಗಳಿಗೆ ಹಿಂಸಾವನ್ನು ಮಾಡತಕ್ಕ ವ್ಯಾಧರವನಿಗೆ (ಬೇಡರವನಿಗೆ). ಇವ

ಮಹಾಪಾಪಕೃತ್ಯ ಮಾಡಿದ ಕಾಲಕ್ಕೂ, ಈ ಮನುಷ್ಯಗೆ ನಾರದಮುನಿಗಳ ದ್ವಾರಾ, ಸಮೀಚೀನಜ್ಞಾನ ಪಾಲಿಸಿ, ದಶರಥರಾಯನ ಮಗನಾದ ತಾನು, ಶ್ರೀರಾಮಚಂದ್ರನಾದ ತಾನು, ರಾಮಾವತಾರದಲ್ಲಿ ಮಾಡಿದ ಚರಿತ್ರೆಗಳ, ತನ್ನ ಅಸದೃಶಗಳಾದ ಮಹಾಮಹಾತ್ಮ್ಯಗಳ ರಾಮಾಯಣರೂಪದಿಂದ, ಅವನ ಅಂತರ್ಗತನಾಗಿ ಇದ್ದು, ರಾಮಾಯಣ ಕಾವ್ಯವನ್ನು ಮಾಡಿಸೋವನಾದ. ಈ ಬ್ಯಾಡನ್ನ ವಾಲ್ಮೀಕಿಮುನಿಗಳು- ಅಂತ ಅನಿಸೋವನಾದ. ಅತ ಏವ, ಭಕ್ತರ ದೋಷಗಳ ಎಣಿಸದೆ, ಪಾಲಿಸತಾನೆ-ಅಂತ ತಾತ್ಪರ್ಯ. ॥೩೧॥

## ೩. ಭಾವದರ್ಪಣ

ಲುಬ್ಧಕ- ಅಂದರೆ, ವ್ಯಾಧ, ವಾಲ್ಮೀಕಿಮುನಿ ಎನಿಸಿದವನಿಂದ ರಾಮಾಯಣ ಹೇಳಿಸಿದನೆಂದು ಹೇಳುತ್ತಾರೆ। ಏನು। ರಘುಸೂನು- ರಘುಕುಲೋತ್ಪನ್ನ ಶ್ರೀರಾಮ॥. ॥೩೧॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ

"ಏನು" ಇತಿ. ॥೩೧॥

## ಕನ್ನಡಾರ್ಥ

ದಯಾಮಯಿ ಸ್ವಭಾವವಿದ್ದುದರ ಮೂಲಕ, ಭಕ್ತರ ಅಪರಾಧಗಳನ್ನೆಲ್ಲ ಕ್ಷಮಿಸಿ, ಅವರನ್ನು ಅನುಗ್ರಹಿಸಿ, ಉದ್ಧರಿಸುವನೆಂಬ ಮಹಿಮೆಯನ್ನು ದೃಷ್ಟಾಂತ ಪುರಸ್ಸರ ವರ್ಣಿಸುತ್ತಾರೆ- ಈ ಪದ್ಯದಿಂದ. ॥೩೧॥

## ೪. ಭಾವಪ್ರಕಾಶಿಕೆ :

ದಯಾನಿಧಿಯಾದ ಶ್ರೀಹರಿಗೆ ತನ್ನಭಕ್ತರಲ್ಲಿ ಇರುವ ಕಾರುಣ್ಯವನ್ನು

ಎಷ್ಟೆಂದು ವರ್ಣಿಸುವ ! ಅವರು ಏನೇ ನೀಚ ಕರ್ಮಗಳನ್ನು ಮಾಡಿರಲಿ. ಅವುಗಳನ್ನು ಕ್ಷಮಿಸಿ, ಆ ಪಾಪರಾಶಿಗಳನ್ನು ಭಸ್ಮಮಾಡಿ, ಅವರನ್ನು ರಕ್ಷಿಸುವನು. ಹಾಗೆ ಯಾರನ್ನು ರಕ್ಷಿಸಿದನೆಂದರೆ-ವಾಲ್ಮೀಕಿ ಋಷಿಗಳು ಪೂರ್ವದಲ್ಲಿ ಬೇಡಜಾತಿಯವರಾಗಿದ್ದು, ಮಾರ್ಗಸ್ಥರಾದ ಜನರನ್ನು ಹೊಡೆದು, ದ್ರವ್ಯಗಳನ್ನು ಅಪಹರಿಸುತ್ತಾ, ಹೊಟ್ಟೆಗೋಸ್ಕರ ಅನೇಕ ಪ್ರಾಣಿಗಳನ್ನು ಕೊಲ್ಲುತ್ತಿದ್ದರು ಇವರಿಗೆ ದಿವ್ಯಜ್ಞಾನವನ್ನು ಕೊಡಿಸಿದನು. ಅದು ಹೇಗೆಂದರೆ. ಮಾರ್ಗಸ್ಥರನ್ನು ಹೊಡೆಯುವಾಗ ಆಕಸ್ಮಿಕವಾಗಿ ಒಬ್ಬ ಋಷಿಗಳು ದೊರಕಲು, ಅವರ ದರ್ಶನಮಾತ್ರದಿಂದ ಅವನಿಗೆ ಸದ್ಬುದ್ಧಿ ಹುಟ್ಟುವಂತೆ ಮಾಡಿ. ತನಗೆ ಉಪದೇಶ ಕೊಡಬೇಕೆಂದು ಕೇಳಿದ ಬೇಡನಿಗೆ, ಋಷಿಗಳು ಪಾಪಿಯಾದ ಬೇಡನಿಗೆ ಮಂತ್ರವನ್ನು ಉಪದೇಶ ಕೊಡಲು ಇಷ್ಟವಿಲ್ಲದೆ, ರಾಮ ಶಬ್ದವನ್ನು ವಿಪರೀತವಾಗಿ ಮರಾ- ಎಂದು ಉಪದೇಶ ಮಾಡಿ ಹೋಗಲು ಅವನು ಮರಾ ಮರಾ ಮರಾ ಎಂದು ಜಪಿಸುತ್ತಿದ್ದು. ಆದರಿಂದಲೇ, ಅವನಲ್ಲಿ ಪರಮಾತ್ಮನು ಪರಮಾನುಗ್ರಹಮಾಡಿ ದಿವ್ಯಜ್ಞಾನವನ್ನುಂಟು ಮಾಡಿಸಿ. ಕಡೆಗೆ ನಾರದರ ಮುಖದಿಂದ ರಾಮಚರಿತ್ರೆಯನ್ನು ಶ್ರವಣಮಾಡಿ ಬ್ರಹ್ಮದೇವರ ಆಜ್ಞಾಪ್ರಕಾರ ಏಳುಕಾಂಡ ರಾಮಾಯಣವನ್ನು ಸೃಷ್ಟಿಸಿದರು. ಅದೇ ವಾಲ್ಮೀಕಿ ರಾಮಾಯಣವೆಂಬ ಲೋಕದಲ್ಲಿ ಪ್ರಖ್ಯಾತಿ ಪಡೆದಿರುವುದು. ಇಂತಹ ನೀಚ ಜಾತಿಯವನಿಗೆ ಈ ಜ್ಞಾನವು ಆಗಬೇಕಾದರೆ ಸಂಪೂರ್ಣವಾದ ಭಗವದನುಗ್ರಹವು ಹೊರತು ಆಗುವದೆಂತು ? ಆದುದರಿಂದಲೇ ಪರಮ ದಯಾಳುವೆಂದು ಹೇಳಿರುವರು. ॥೩೦॥

## ೪. ಶ್ರೀಗುರುಹೃದಯ ಪ್ರಕಾಶಿಕೆ

ಭಕ್ತಿಪಾರವಶ್ಯದಿಂದ ತಮ್ಮ ಮನಸ್ಸಿನಲ್ಲಿ ಗೋಚರನಾದ ದೇವರನ್ನು ಪ್ರಾರ್ಥಿಸುತ್ತಾರೆ-ಮೂಢ ಎಂದು.

ಸ್ತೋತ್ರಮಾಡಲಿಕ್ಕೆ ನಿನ್ನನ್ನು ತಿಳಿಯಲರಿಯದ್ದರಿಂದ. ಮೂಢಮಾನವ

ನಾನು. ಹೇ ಸ್ವಾಮಿ! ಸ್ವಪ್ನದಲ್ಲಾದರೂ ಧರ್ಮಾದಿ ಪುರುಷಾರ್ಥಗಳನ್ನು ಕೇಳಿಕೊಳ್ಳದ ಹಾಗೆ ನನ್ನನು ನಿಷ್ಕಾಮುಕನನ್ನಾಗಿ ಮಾಡು. ಎಲ್ಲಾಕಾಲದಲ್ಲೂ ಇನಿತೆಂದು ದೈನ್ಯದಿಂದ ಸದಾ ಬೇಡಿಕೊಂಬೆನು. ಇಷ್ಟನ್ನೇ ದೈನ್ಯವೆಂಬ ಕಿಂಕರಭಾವದಿಂದ ಕೇಳಿಕೊಳ್ಳುತ್ತೇನೆ-ಎಂದರ್ಥ. ಕೊಡಬೇಕೆಂದು ನಿನ್ನ ಚಿತ್ತಕ್ಕೆ ಬಂದರೆ, ಜನ್ಮ ಜನ್ಮದಲ್ಲೂ ಮರೆಯದೆ, ನಿನ್ನ ನಿರ್ಮಲ ಸದ್ಗುಣಗಳನ್ನು ಕೊಂಡಾಡಿ, ಸಂತೋಷಿಸುವ ಭವದ್ಭಕ್ತರ ಸಂಗಡ ನಾನು ಇರುವ ಹಾಗೆ ಮಾಡು. ॥೩೦॥

## ಸರ್ವವ್ಯಾಖ್ಯಾನಸಾರ ಸಂಗ್ರಹ

೧. ತನ್ನನ್ನೇ ನಂಬಿ, ನಿರಂತರವೂ ತನ್ನನ್ನೇ ಭಜಿಸುತ್ತಿರುವ ಏಕಾಂತ ಭಕ್ತರಲ್ಲಿ ಶ್ರೀಹರಿಯ ಕಾರುಣ್ಯ ಅಪಾರವಾದದು! ಆ ದಯಾಸಾಗರನಿಗೆ ತನ್ನ ಭಕ್ತರಲ್ಲಿ ಅದೆಷ್ಟು ಕರುಣವೋ-ಎಂದು ಉದ್ಗಾರ ತೆಗೆದಿದ್ದಾರೆ—ದಾಸರಾಯರು !

೨. ಮಹಾತ್ಮ್ಯಜ್ಞಾನಪೂರ್ವಕವಾಗಿ, ಸ್ನೇಹರೂಪವಾದ ಅವಿಚ್ಛಿನ್ನವಾದ ಭಕುತಿಯನ್ನು ಶ್ರೀಹರಿಯ ಚರಣಕಮಲಗಳಲ್ಲಿ ಇಟ್ಟಿರುವ ಸದ್ಭಕ್ತ ಜನರು ಪ್ರಮಾದವಶದಿಂದಲಾಗಲೀ, ಪ್ರಾಸಂಗಿಕವಾಗಲೀ, ಯಾವಕಾರಣದಿಂದಲಾಗಲೀ ದುಷ್ಕರ್ಮಗಳನ್ನು ಮಾಡಿದರೂ ಸರಿಯೆ, ಅವುಗಳನ್ನು ತಕ್ಷಣ ಪರಿಹರಿಸಿ, ಅವರನ್ನು ಶುದ್ಧರನ್ನಾಗಿ ಪವಿತ್ರೀಕರಿಸಿ, ಸಂರಕ್ಷಿಸುವ ಪರಮ ಕರುಣಾಳು ಆ ಕಂಜನಾಭನು ! "ಸ್ವೀಕರಿಸಿ"-ಎಂದರೆ, ಆ ದುಷ್ಕರ್ಮಗಳನ್ನು ಪರಿಹಾರಮಾಡಿ ಎಂದರ್ಥ. ಸರ್ವತಂತ್ರಸ್ವತಂತ್ರನಾದ ಆ ಸರ್ವೇಶ್ವರನು ಪಾಪಪರಿಹಾರಕತ್ವಗುಣವನ್ನು ಪ್ರದರ್ಶಿಸಿ, ತದ್ವಾರಾ ದೋಷದೂರರನ್ನಾಗಿ ಸ್ವಭಕ್ತರನ್ನು ಮಾಡುವನು- ಎಂದರ್ಥ. ಪುಣ್ಯಕರ್ಮಗಳನ್ನು ವೃದ್ಧಿಗೈಸಿ, ಪಾಪಕರ್ಮಗಳ ಫಲಗಳನ್ನು ಕೊಡದೆ, ಸ್ವಭಕ್ತರನ್ನು ಸಂರಕ್ಷಿಸುವ ಮಹಿಮಾ ಸಂಪನ್ನನು ಮಾರಮಣನು !

೩. ಇದಕ್ಕೆ ವಾಲ್ಮೀಕಿಋಷಿಯ ದೃಷ್ಟಾಂತವನ್ನು ಕೊಡುತ್ತಾರೆ. ವಾಲ್ಮೀಕಿಯು ಹಿಂದೆ ಬೇಡರವನಾಗಿದ್ದ. ವ್ಯಾಧಜನ್ಮತಾಳಿದ್ದ (ಬುಜ್ಜಕ). ಅರಣ್ಯಮಾರ್ಗದಲ್ಲಿ ಬರುವ ಪ್ರಯಾಣಿಕರಿಗೆ ಪ್ರಾಣಹಿಂಸಕನಾಗಿದ್ದ. ಅವರ ತಲೆ ಒಡೆದು, ಹಣವನ್ನು ದೋಚುತ್ತಿದ್ದ. ಒಮ್ಮೆ, ನಾರದಮುನಿಗಳ ಸಮಾಗಮವಾಯಿತು ಆ ವ್ಯಾಧನಿಗೆ. ಪ್ರಾಣಹಿಂಸಕನೂ, ಕ್ರೂರಿಯೂ ಆಗಿದ್ದ ಆ ಲುಬ್ಧಕನಿಗೆ ರಾಮತಾರಕೋಪದೇಶವನ್ನು ಮಾಡಿದರು. ನಿರಕ್ಷರಕುಕ್ಷಿಯಾದ ಅವನಿಗೆ, ನಾರದರು ಮರವನ್ನು ತೋರಿಸಿ, "ಮರ-ಮರ"- ಎಂದು ಜಪಿಸೆಂದು ಹೇಳಿದರು. ಹಾಗೆಯೇ, ವ್ಯಾಧನು ತಪೋನಿರತನಾಗಲು, "ರಾಮ-ರಾಮ"- ಎಂಬ ನಾಮೋಚ್ಚಾರಣೆ ಅವನ ಬಾಯಿಂದ ಬಂದಿತು.

ಆಗ ದಶರಥಪುತ್ರನಾದ ಶ್ರೀರಾಮಚಂದ್ರನು ಆ ವ್ಯಾಧನಿಗೆ ತನ್ನ ದರ್ಶನಭಾಗ್ಯವನ್ನು ಕರುಣಿಸಿದನು. ಆ ಪರಮಕರುಣಾಳುವಾದ ದಾಶರಥಿಯು ಅವನಿಗೆ ಸಮೀಚೀನವಾದ ಜ್ಞಾನ ಭಕ್ತಿ ಭಾಗ್ಯಗಳನ್ನು ನೀಡಿ, ಶ್ರೀಮದ್ರಾಮಾಯಣಕಥನವನ್ನು ಕಾವ್ಯರೂಪದಲ್ಲಿ ಅವನಿಂದ ಬರೆಯಿಸಿ, ಕ್ರೂರಿಯಾಗಿದ್ದ (ದುರ್ಜನ) ವ್ಯಾಧನನ್ನು "ಆದಿಕವಿ ವಾಲ್ಮೀಕಿ"- ಎಂದು ಜಗದ್ವಿಖ್ಯಾತ ಕವಿಪುಂಗವನನ್ನಾಗಿ ಮಾಡಿದನು.

ಆ ವ್ಯಾಧನು ಸ್ವರೂಪತಃ ಸಾತ್ವಿಕನು. ಕರ್ಮವಶನಾಗಿ ಕ್ರೂರಿಯಾಗಿ ಪ್ರಾಣಹಿಂಸಕನಾಗಿದ್ದನು. ಆತನನ್ನು ಉದ್ಧರಿಸಲೋಸುಗ, ನಾರದ ಮಹಾಮುನಿಗಳನ್ನು ಕಳುಹಿಸಿ, ಅವರ ದ್ವಾರಾ, ತಪೋಪದೇಶ ಮಾಡಿಸಿ, ಅವನ ಸಮಸ್ತಪಾಪಕರ್ಮಗಳನ್ನು ಪರಿಹರಿಸಿ, ಉದ್ಧರಿಸಿದ ಪ್ರಸಂಗವಿಶೇಷವನ್ನು ಈ ಸುಂದರ ದೃಷ್ಟಾಂತದಿಂದ ವಿವರಿಸುತ್ತಾರೆ. ॥೩೦॥

## ಪದ್ಯ-೩೨

**ಮೂಲ :**

**ಮೂಢಮಾನವ ಎಲ್ಲ ಕಾಲದಿ ।**
**ಬೇಡಿಕೊಂಬನಿಕೆಂದು ದೈನ್ಯದಿ ।**
**ಬೇಡದಂದದಿ ಮಾಡು ಪುರುಷಾರ್ಥಗಳ ಸ್ವಪ್ನದಲಿ ॥**
**ನೀಡುವಡೆ ನಿನ್ನಮಲಗುಣ ಕೊಂ ।**
**ಡಾಡಿ ಹಿಗ್ಗುವ ಭಾಗವತರೊಡ ।**
**ನಾಡಿಸೆನ್ನನು ಜನುಮಜನುಮಗಳಲ್ಲಿ ಮರೆಯದೆ ॥೩೨॥**

**ಅವತರಣಿಕೆ :**

ಮೂಢರಾದ ಮಾನವರು ಕಾಮಾದಿ ಪುರುಷಾರ್ಥಗಳನ್ನು ಬೇಡುವರು. ಭಗವದನುಗ್ರಹಪ್ರಾಪ್ತಿಗಾಗಿ ಹಂಬಲಿಸುವ ಸುಜನರು ಸ್ವಪ್ನದಲ್ಲಿಯೂ ಪುರುಷಾರ್ಥಗಳನ್ನು ಬೇಡುವುದಿಲ್ಲ. ಶ್ರೀಹರಿಯ ನಿರ್ದೋಷವಾದ ಗುಣಸ್ತೋತ್ರಗಳನ್ನು ನಿರಂತರವೂ ಉಪಾಸನೆ ಮಾಡುತ್ತಿರುವ ಭಾಗವತರ ಸಂಗಸುಖವನ್ನು ನೀಡೆಂದು ಶ್ರೀಹರಿಯಲ್ಲಿ ಪ್ರಾರ್ಥಿಸಬೇಕೆಂದು ಹೇಳುತ್ತಾರೆ- ದಾಸರಾಯರು. ॥೩೨॥

**ಪ್ರತಿಪದಾರ್ಥ:-**

**ಮೂಢಮಾನವ**--ಅಜ್ಞಾನಿಗಳಾದ ಮಾನವನು. **ದೈನ್ಯದಿ** – ಕೇವಲ ದೀನಭಾವನೆಯಿಂದ, **ಎಲ್ಲ ಕಾಲದಿ** – ಸರ್ವಕಾಲಗಳಲ್ಲಿ. **ಇನಿತೆಂದು** – ಈ ಪ್ರಕಾರ, ಎಂದರೆ-ಐಹಿಕವಾದ ಕ್ಷಣಭಂಗುರವಾದ ಸುಖಗಳನ್ನು ಕೊಡಬೇಕ

ಎಂತ, **ಬೇಡಿಕೊಂಬ**—ದೇವರಲ್ಲಿ ಪ್ರಾರ್ಥಿಸುತ್ತಾನೆ. **ನೀಡುವಡೆ**—ನೀನು ಕೊಡುವ ಪಕ್ಷದಲ್ಲಿ, **ಸ್ವಪ್ನದಲಿ**—ಸ್ವಪ್ನದಲ್ಲಾದರೂ, **ಪುರುಷಾರ್ಥಗಳ**—ಧರ್ಮಾದಿ ಚತುರ್ವಿಧ ಪುರುಷಾರ್ಥಗಳನ್ನು. **ಬೇಡದಂದದಿ ಮಾಡು**—ಅಪೇಕ್ಷಿಸದಂತೆ ಮಾಡುವವನಾಗು. **ನಿನ್ನ ಅಮಲಗುಣ**—ನಿನ್ನ ನಿರ್ದೋಷಗಳಾದ ಅನಂತ ಶುಭಗುಣ ಸಮೂಹಗಳನ್ನು. **ಕೊಂಡಾಡಿ**—ಭಜಿಸುತ್ತಾ. **ಹಿಗ್ಗುವ** — ಆನಂದೋದ್ರೇಕದಿಂದ ನಲಿದಾಡುವ. **ಭಾಗವತರೊಡನೆ**—ಭಗವದ್ಭಕ್ತರ ಸಹವಾಸದಲ್ಲಿ, **ಜನುಮ ಜನುಮಗಳಲ್ಲಿ**—ಪ್ರತಿ ಪ್ರತಿ ಜನ್ಮಗಳಲ್ಲಿ. **ಮರೆಯದೇ**—ಮರೆಯದೇ. **ಆಡಿಸೆನ್ನನು**—ನನ್ನನ್ನು ಸಂಚರಿಸುವಂತೆ ಮಾಡು. (ಸತ್ಸಂಗ ಸುಖವನ್ನು ದಯಪಾಲಿಸು). ॥೬.೨॥

## ವ್ಯಾಖ್ಯಾನಗಳು

### ೧ ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ದೇವರನ್ನ ಪ್ರಾರ್ಥನಾ ಮಾಡತಕ್ಕ ಕ್ರಮವನ್ನು ಹೇಳುತಾರೆ. ಅಜ್ಞಾನದಿಂದ ಯುಕ್ತನಾದ ಮನುಷ್ಯ, ಕೇವಲ ದೀನನಾಗಿ, ಸದಾ ಸರ್ವಕಾಲದಲ್ಲಿ ಈ ಪ್ರಕಾರ, ಎಂದರೆ, ಐಹಿಕವಾದ ಅನಿತ್ಯವಾದ ಸುಖಗಳ ಕೊಡಬೇಕು—ಎಂತ ಶ್ರೀದೇವರನ್ನ ಬೇಡಿಕೊಂಬೋವನಾಗುತಾನೆ. ಭಗವದ್ಭಕ್ತನು ಪೂರ್ವೋಕ್ತ ಅಜ್ಞಾನಿಜನರೊಪಾದಿಯಲ್ಲಿ. ಐಹಿಕಸುಖಗಳ ಕೊಡು ಎಂತ ದೇವರನ್ನ ಬೇಡೋನೆ- ಎಂದರೆ, ಬೇಡಲಾರನು. ಸ್ವಪ್ನದಲ್ಲಾದರೂ ಧರ್ಮಾದಿ ಚತುರ್ವಿಧ ಪುರುಷಾರ್ಥಗಳ ಅಪೇಕ್ಷಿಸದಂತೆ ಮಾಡು-ಎಂತಲೂ, ಜ್ಞಾನ ಭಕ್ತ್ಯಾದಿಗಳ ಅಭಿವೃದ್ಧಿ ಮಾಡು ಎಂತಲೂ ಇನ್ನೂ, ಶ್ರೀಪರಮಾತ್ಮನಾದ ನಿನ್ನ ನಿರ್ದೋಷಗಳಾದ ಕಲ್ಯಾಣಗುಣಗಳನ್ನ. ಮಹಾಮಾಹಾತ್ಮ್ಯವನ್ನ ಉಚ್ಚಾರ ಮಾಡುತಾ ಸಂತೋಷಪಡತಕ್ಕ ಭಗವದ್ಭಕ್ತರೊಡನೆ ಪ್ರತಿಪ್ರತೀ ಜನ್ಮಗಳಲ್ಲಿ ಮರಿಯದೇನೆ, ನನ್ನ ಸಂಚಾರಮಾಡಿಸೋವನಾಗು- ಎಂತಲೂ, ಮಿಥ್ಯಾ

ಜ್ಞಾನಿಗಳ ಸಹವಾಸ ದಯಪಾಲಿಸಬೇಕು- ಎಂತಲೂ ಪ್ರಾರ್ಥನಾ ಮಾಡತಾರೆಂತ ತಾತ್ಪರ್ಯ. ॥೨.೨॥

## ೩. ಭಾವದರ್ಪಣ

ವೈಷಯಿಕಸುಖ ಕೇಳಧಾಗೆ ಮಾಡು। ಸಜ್ಜನ ಸಹವಾಸ ಕೊಡೆಂದು ಕೇಳು ತ್ತಾರೆ ಮೂಢ. ॥೩.೨॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

'ಮೂಢ' ಇತಿ. ॥೩.೨॥

## ಕನ್ನಡಾರ್ಥ

ಸ್ವಪ್ನದಲ್ಲಿಯೂ ಸಹ ಪುರುಷಾರ್ಥಗಳನ್ನು ಕೇಳುವಂತೆ ಮಾಡದೇ, ಭಗವದ್ಗುಣಗಾನ ನಿರತರಾದ ಭಾಗವತರ ಸಂಗವೊಂದನ್ನು ಜನ್ಮಜನ್ಮಗಳ ಲ್ಲಿಯೂ ದಯಪಾಲಿಸೆಂದು ಕೇಳಬೇಕೆನ್ನುತ್ತಾರೆ, ಈ ಪದ್ಯದಿಂದ. ॥೩.೨॥

## ೬. ಭಾವಪ್ರಕಾಶಿಕೆ

ಅಜ್ಞಾನಿಗಳು ಮಾತ್ರವೇ ದೀನರಾಗಿ, ಇದು ಬೇಕು ಅದು ಬೇಕೆಂದು, ವಿಷಯ ಸುಖವನ್ನು ಬೇಡುವರು. ಜ್ಞಾನಿಗಳು ನಾಲ್ಕು ವಿಧ ಪುರುಷಾರ್ಥ ದಲ್ಲಿ ಸೇರಿದ ಮುಕ್ತಿಯನ್ನಾದರೂ ಬೇಡುವರೆ ! ಭಾಗವತ ತೃತೀಯ ಸ್ಕಂಧದಲ್ಲಿ- "ಸಾಲೋಕ್ಯ ಸಾರ್ಷ್ಟಿ ಸಾಮೀಪ್ಯ ಸಾರೂಪ್ಯೈಕತ್ವಮಿತ್ಯುತ ॥ ದೀಯಮಾನಂನ ಗೃಹ್ಣಂತಿ ವಿನಾಮತ್ಸೇವನಂ ಜನಾಃ ॥ ಸಾಲೋಕ್ಯವೆಂದರ ಪರಮಾತ್ಮನ ಲೋಕದಲ್ಲಿ ಎಲ್ಲಾದರೂ ಇರುವುದು. ಸಾರ್ಷ್ಟಿ, ಪರಮಾತ್ಮನಿಗೆ

ಸಮಾನವಾದ ಐಶ್ವರ್ಯ ಹೊಂದುವುದು, ಸಾಮೀಪ್ಯ- ಸಮೀಪದಲ್ಲೇ ವಾಸ ಮಾಡುವುದು, ಸಾರೂಪ್ಯ- ಪರಮಾತ್ಮನಂತೆ ರೂಪವನ್ನು ಹೊಂದುವುದು. ಏಕತ್ವ-ಪರಮಾತ್ಮನ ಶರೀರದಲ್ಲಿ ಪ್ರವೇಶ ಮಾಡಿ ಯಾವುದಾದರೂ ಒಂದು ಅಂಗದ ಸುಖವನ್ನನುಭವಿಸುವದೆಂಬ ಐದು ವಿಧ ಮುಕ್ತಿಯನ್ನು ಕೂಡ ನನ್ನ ಏಕಾಂತ ಭಕ್ತರು ಬೇಡುವುದಿಲ್ಲ. ನನ್ನ ಸೇವೆಯನ್ನು ಮಾತ್ರವೇ ಬೇಡುವರೆಂದು ದೇವಹೂತಿಗೆ ಕಪಿಲನಾಮಕ ಪರಮಾತ್ಮನು ಹೇಳಿರುವರು, ಅದೇ ಅಭಿಪ್ರಾಯವನ್ನೇ ಇಲ್ಲಿ ಸೂಚಿಸಿರುವರು. ದಾಸಾರ್ಯರೂ ಅದನ್ನೇ ಬೇಡುತ್ತಾರೆ: ವಿಷಯಸುಖವನ್ನಾಗಲಿ, ನಿನ್ನನ್ನು ಬೇಡದಂತೇ ಮಾಡು-ಎಂಬ ಒಂದು ವರವನ್ನೂ, ನಿನ್ನ ನಿರ್ದುಷ್ಟವಾದ ಮಹಿಮೆಯನ್ನು ಕೊಂಡಾಡುತ್ತಿರುವ ಭಾಗವತ ಸಹವಾಸವನ್ನು ಸರ್ವದಾ ಕೊಡೆಂದು. ಈ ಎರಡು ವರಗಳನ್ನು ಮಾತ್ರ ಬೇಡುವೆನು- ಎಂದು ಬೇಡಿರುವರು. ಈ ವಾಕ್ಯದಿಂದ ಇವೆರಡೂ ಅವಶ್ಯವಾಗಿ ಬೇಡತಕ್ಕವೆಂದು ಸೂಚಿಸಿದರು. ॥೩೨॥

## ೫. ಶ್ರೀ ಗುರುಹೃದಪ್ರಿಯಕಾರಿಕೆ

ಚತುರ್ವಿಧಪುರುಷಾರ್ಥ ಕೊಡುವ ವಾಸುದೇವಾದಿ ಚತುರ್ಮೂರ್ತಿ ಇರಲು ಅವನನ್ನು ಬಿಟ್ಟು, ಬಲ್ಲವರೆಂಬ ಏಕಾಂತಭಕ್ತರು ಇತರ ಪುರುಷಾರ್ಥಗಳನ್ನು ಬೇಡುವರೆ? ಅಂದರೆ. ಸರ್ವಥಾ ಕೇಳುವುದಿಲ್ಲವೆಂದರ್ಥ. ಮುಕ್ತಿವಿಹೀನರೆಂಬ ಸಮ್ಯಜ್ಞಾನಶೂನ್ಯರು ಐಹಿಕಸುಖ ಶಾಶ್ವತವೆಂದು ತಿಳಿದು ಉಗ್ರರಾಗಿ, ಜಗತ್ಪತಿಯ ಪಾದಾಬ್ಜಗಳ ನಿಷ್ಕಾಮನೆಯಿಂದ ಭಜಿಸದೆ, ಭವವೆಂಬ ಸಂಸೃತಿಯಲ್ಲಿ ಶ್ರಮಪಡುವರು. ॥೩೨॥

# ಸರ್ವವ್ಯಾಖ್ಯಾನಸಾರಸಂಗ್ರಹ

೧. ಜೀವನಲ್ಲಿ ವಿಷಯಭೋಗಗಳನ್ನು ಅಪೇಕ್ಷಿಸುವ ಜನರು ಮೂಢ

ಮಾನವರು. ಅಜ್ಞಾನಿಗಳಾದ ಅವರು ಸರ್ವಕಾಲಗಳಲ್ಲಿ ಭಗವಂತನನ್ನು ದೈನ್ಯದಿಂದ ವಿಷಯೋಪಭೋಗವನ್ನು ಕೊಡೆಂದು ಪ್ರಾರ್ಥಿಸುವರು.

೩. ಜ್ಞಾನಿಗಳಾದ ಸಾಧಕರು ಸ್ವಪ್ನದಲ್ಲಿಯೂ ಕೂಡ ಧರ್ಮಾದಿ ಪುರುಷಾರ್ಥಗಳನ್ನು ಬೇಡುವುದಿಲ್ಲ. ಆ ಕೈವಲ್ಯಭೋಗಸುಖವು ಅವರಿಗೆ ಬೇಡ. " ಆ ಕೈವಲ್ಯಭೋಗಸುಖ ಅವರಿಗೆ ಬೇಕೇ? " - ಎಂದಿದ್ದಾರೆ ದಾಸರಾಯರು– " ರಂಗಾನಿನ್ನ ಕೊಂಡಾಡುವ ಮಂಗಳಾತ್ಮರಾ "-ಎಂಬ ತಮ್ಮ ಕೀರ್ತನೆಯೊಂದರಲ್ಲಿ.

ಪುರುಷಾರ್ಥಗಳನ್ನು ಸ್ವಪ್ನದಲ್ಲಿಯೂ ಸಹ ಬೇಡದಂತೆ ಕರುಣಿಸು-ಎಂದು ಮೊರೆಯಿಡುತ್ತಾರೆ, ಆ ಕಾಮಿತಾರ್ಥಪ್ರದನಲ್ಲಿ !

೪. ಒಂದು ಪಕ್ಷ, ನೀನು ನೀಡಬೇಕೆಂದಿದ್ದರೆ, ನೀನು ಅನುಗ್ರಹಿಸುವುದಾದರೆ-"ನಿನ್ನ ನಿರ್ದೋಷವಾದ, ಅನಂತಕಲ್ಯಾಣಗುಣಗಳ ಸಮೂಹವನ್ನು ನಿರಂತರವೂ ಕೊಂಡಾಡಿ ಹಿಗ್ಗುತ ನಲಿದಾಡುತ್ತಿರುವ ನಿನ್ನ ಭಗವದ್ಭಕ್ತರ ಸಂಗಸುಖವನ್ನು ನೀಡು. ನಿನ್ನನ್ನು ಅವರ ಸತ್ಸಹವಾಸದಲ್ಲಿ ಸೇರಿಸು. ಅವರೊಡನಾಡಿಸು. ಯಾವ ಜನ್ಮ ಬರಲಿ, ಸಜ್ಜನರ ಸಂಗದೊಳಿಡಿಸೆನ್ನ ರಂಗ. ಅವರ ಸಂಗದಿಂದ ಲಿಂಗದೇಹಭಂಗವಾಗಲಿ"-ಎಂದು ಆತುರರಾಗಿ ಮೊರೆಯಿಡುತ್ತಾರೆಂದು-ಪ್ರಸಕ್ತಪದ್ಯದ ತಾತ್ಪರ್ಯವು.

ಇದರಿಂದ, ಕ್ಷುಲ್ಲಕರ ಸಂಗವನ್ನು ತ್ಯಜಿಸಿ, ಸಜ್ಜನರ ಸಂಗಸುಖವನ್ನು ಬಯಸು. ಅವರ ಸತ್ಸಹವಾಸವು ಸರ್ವವಂದ್ಯನಾದ ಶ್ರೀಹರಿಯ ಸಾನ್ನಿಧ್ಯವನ್ನು ಸೇರಲು ಮಾರ್ಗವಾಗುವುದೆಂದು ತಿಳಿಸುತ್ತಾರೆ, ಇದರಿಂದ ಭಾಗವತರ ಸಂಗದ ಮಹತ್ವವು ಗೊತ್ತಾಗುವುದು. ॥೩೨॥

## ಪದ್ಯ-೩೩

**ಮೂಲ :**

**ಚತುರವಿಧ ಪುರುಷಾರ್ಥರೂಪನು ।**
**ಚತುರಮೂರ್ತ್ಯಾತ್ಮಕನಿರಲು ಮ ।**
**ತ್ತಿತರ ಪುರುಷಾರ್ಥಗಳ ಬಯಸುವರೇನು ಬಲ್ಲವರು ॥**
**ಮತಿವಿಹೀನರು ಅಹಿಕ ಸುಖ ಶಾ ।**
**ಶ್ವತವಿದೆಂದರಿದನುದಿನದಿ ಗಣ ।**
**ಪತಿ ಮೊದಲಾದನ್ಯ ದೇವತೆಗಳನೆ ಭಜಿಸುವರು ॥೩೩॥**

**ಅವತರಣಿಕೆ:-**

ವಾಸುದೇವಾದಿ ಚತುರ್ಮೂರ್ತ್ಯಾತ್ಮಕನಾದ ಪರಮಾತ್ಮನು ಚತುರ್ವಿಧ ಪರಮಪುರುಷಾರ್ಥಪ್ರದನಾಗಿರುತ್ತಿರಲು, ಅವನನ್ನು ಬಿಟ್ಟು, ಕೇವಲ ಐಹಿಕಸುಖಗಳಲ್ಲಿಯೇ ಆಸಕ್ತಮನಸ್ಸುಳ್ಳವರಾಗಿ, ಮತಿವಿಹೀನರು ಗಣಪತಿ- ಮೊದಲಾದ ಇತರ ದೇವತೆಗಳನ್ನು ಸರ್ವೋತ್ತಮತ್ವೇನ ಭಜಿಸುತ್ತಾರೆಂದು ತಿಳಿಸುತ್ತಾರೆ. ॥೩೩॥

**ಪ್ರತಿಪದಾರ್ಥ :**

**ಚತುರವಿಧ ಪುರುಷಾರ್ಥರೂಪನು** = ಸಾಯುಜ್ಯ - ಸಾರೂಪ್ಯ - ಸಾಲೋಕ್ಯ - ಸಾಮೀಪ್ಯ- ಎಂಬ ನಾಲ್ಕುವಿಧಗಳಾದ ಮೋಕ್ಷಪದವಿಯನ್ನು ನೀಡುವ ರೂಪಾತ್ಮಕನಾದ, **ಚತುರಮೂರ್ತ್ಯಾತ್ಮಕನಿರಲು** = ಅನಿರುದ್ಧ ಪ್ರದ್ಯುಮ್ನ - ಸಂಕರ್ಷಣ ಮತ್ತು ವಾಸುದೇವ- ಎಂಬ ನಾಲ್ಕುವ್ಯೂಹ

ರೂಪಗಳಿಂದ ವಿರಾಜಮಾನನಾಗಿರುವ ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣ ನಿರುತ್ತಿರಲಾಗಿ. **ಮತ್ತಿತರ** = ಇವುಗಳ ಬಿಟ್ಟು ಉಳಿದ. **ಪುರುಷಾರ್ಥಗಳ** - ಅಶಾಶ್ವತವಾದ ಐಹಿಕ ಸುಖಗಳನ್ನು ಕೊಡುವ ಬೇಡಿಕೆಗಳನ್ನು. **ಬಲ್ಲವರು** = ಶ್ರೀಪರಮಾತ್ಮನ ಮಹಾತ್ಮ್ಯವನ್ನು ತಿಳಿದ ಅಂತರಂಗಭಕ್ತರು. **ಬಯಸುವರೇನು** = ಅಪೇಕ್ಷಿಸುತ್ತಾರೆಯೇ ? - ಅಂದರೆ, ಎಂದೆಂದಿಗೂ ಇಲ್ಲವೆಂದು ತಾತ್ಪರ್ಯ. **ಮತಿವಿಹೀನರು** = ಜ್ಞಾನಶೂನ್ಯರಾದ ಮನುಷ್ಯರು. **ಅಹಿಕಸುಖ** = ಅನಿತ್ಯವಾದ ಪ್ರಾಪಂಚಿಕ ಸುಖಗಳನ್ನು. **ಶಾಶ್ವತವೆಂದು ಅರಿತು** = ಶಾಶ್ವತವೆಂಬುದಾಗಿ ತಿಳಿದುಕೊಂಡು. **ಅನುದಿನದಿ** = ಪ್ರತಿದಿವಸದಲ್ಲಿಯೂ. **ಗಣಪತಿ ಮೊದಲಾದ** = ಗಣೇಶ, ರುದ್ರ, ಸ್ಕಂಧ, ಸೂರ್ಯ, ಅಗ್ನಿ-ಮೊದಲಾದ. **ಅನ್ಯದೇವತೆಗಳನೆ** = ಸರ್ವೋತ್ತಮನಾದ ಶ್ರೀಹರಿಯ ವ್ಯತಿರಿಕ್ತ. ಇತರ ದೇವತೆಗಳನ್ನೇ ಸರ್ವೋತ್ತಮರೆಂದು ತಿಳಿದು. **ಭಜಿಸುವರು** = ಐಹಿಕ ಸುಖಸಂಪತ್ತಿಗಾಗಿ ಅರ್ಚಿಸಿ, ಕೊಂಡಾಡಿ ಪೂಜಿಸುವರು. ॥೩೩॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಜ್ಞಾನಿಗಳ ಮಾರ್ಗ, ಅಜ್ಞಾನಿಗಳ ಮಾರ್ಗ ಹೇಳುತ್ತಾರೆ.

ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ- ಈ ನಾಲ್ಕು ವ್ಯೂಹರೂಪಗಳಿಂದ ಪ್ರಕಾಶಮಾನನಾದ ಶ್ರೀಲಕ್ಷ್ಮೀಪತಿಯಾದ ಶ್ರೀನಾರಾಯಣದೇವರು, ಸಾಯುಜ್ಯ, ಸಾಮೀಪ್ಯ, ಸಾರೂಪ್ಯ, ಸಾಲೋಕ್ಯ- ಈ ನಾಲ್ಕು ವಿಧಗಳಾದ ಸುಖಗಳು-ಎಂದರೆ, ಭಕ್ತರಾದ ಮನುಷ್ಯರಿಗೆ ಪ್ರಯೋಜನಕರಗಳಾದ ಸುಖಗಳು ಕೊಡತಕ್ಕ ಭಗವದ್ರೂಪಗಳು ಇವು. ಈ ವ್ಯೂಹರೂಪನಾದ ಶ್ರೀಪರಮಾತ್ಮ ಇರಲಿಕ್ಕಾಗಿ, ಬಾಂಡಾರಿಗೂ

ಅನ್ನಗಳಾದ ಐಹಿಕಗಳಾದ ಅನಿತ್ಯಗಳಾದ ಪ್ರಯೋಜನಗಳ. ಅಂತರಂಗ ಜ್ಞಾನಿಗಳಾದ ಭಕ್ತರಾದ ಪುರುಷರುಗಳು ಪರಮಾತ್ಮನ್ನ ಕುರಿತು ಬೇಡುವರೆ- ಎಂದರೆ, ಬೇಡಲಾರರು ಎಂತ ತಾತ್ಪರ್ಯ. ಜ್ಞಾನತೂನ್ಯರಾದ ಪುರುಷರು ಅನಿತ್ಯವಾದ ಐಹಿಕಸುಖ. ಅಜ್ಞಾನದಿಂದ ಶಾಶ್ವತವೆಂತ ತಿಳಿದುಕೊಂಡವರಾಗಿ, ಪ್ರತಿದಿನದಲ್ಲೂ. ಶ್ರೀಪರಮಾತ್ಮನ್ನ ಬಿಟ್ಟು, ಗಣೇಶ ರುದ್ರ, ಸೂರ್ಯ- ಇನ್ನೂ ಅನೇಕರಾದ. ಇನ್ನೂ ಕ್ಷುದ್ರದೇವತೆಗಳಾದ ಗಂಗಮ್ಮ, ಯಲ್ಲಮ್ಮ- ಈ ದೇವತೆಗಳು ಸರ್ವಾರ್ಥಪ್ರದರು ಎಂತಲೂ. ಇನ್ನೂ ಈ ದೇವತೆಗಳೇ ಗತಿಪ್ರದರು- ಎಂತಲೂ, ದಾರಢ್ಯದಿಂದ ಸರ್ವೋತ್ತಮತ್ವೇನ ಭಜನೆ ಮಾಡತಾರೆ, ಅಂದರೆ, ಇವರಿಗೆ ಐಹಿಕದಲ್ಲಿ ಸ್ವಲ್ಪ ಸುಖ ತೋರಿದಾಂಗೆ ಇರತದೆ ತೋರತು. ಪರಿಣಾಮದಲ್ಲಿ ಇರೋದಿಲ್ಲ. ಶ್ರೀಪರಮಾತ್ಮನ್ನ ಭಜಿಸಿದವರು, ಐಹಿಕ ಪಾರತ್ರಿಕದಲ್ಲೂ ಮಹಾಫಲ ಹೊಂದಿ ಸುಖಪಡತಾರೆಂದು ತಾತ್ಪರ್ಯ. ॥೬೩॥

**೨. ಭಾವದರ್ಪಣ.**

ನೀನು ಪ್ರತ್ಯಕ್ಷನಾಗೋದೇ ಸಕಲ ಪುರುಷಾರ್ಥಗಳೆಂದು ಹೇಳುತ್ತಾರೆ। ಚತುರವಿಧ। ಧರ್ಮ ಅರ್ಥ ಕಾಮ ಮೋಕ್ಷ- ಚತುರ್ಮೂರ್ತ್ಯಾತ್ಮಕ ಅನಿರುದ್ಧಾದಿ ನಾಲ್ಕು ರೂಪಗಳೇ ಎಂಬರ್ಥ. ॥೬೩॥

**೩. ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

'ಚತುರ' ಇತಿ॥ "ಅನಿರುದ್ಧಾದಿಃ" ॥೨.೩॥

## ಕನ್ನಡಾರ್ಥ

ನಾರಾಯಣನನ್ನೇ ಚತುರ್ವಿಧಪುರುಷಾರ್ಥರೂಪನೆಂದು ಚತು

ಮೂರ್ತಿಗಳಿಂದ ಸಜ್ಜನರು ಭಜಿಸುವರು. ಅನಿರುದ್ಧ ಮುಂತಾದುವುಗಳು ಆ ಚತುಮೂರ್ತಿಗಳು. ॥೩೩॥

## ೪. ಭಾವಪ್ರಕಾಶಿಕೆ

ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥ ಸ್ವರೂಪನಾದ, ಅನಿರುದ್ಧ, ಪದ್ಯುಮ್ನ, ಸಂಕರ್ಷಣ, ವಾಸುದೇವನೆಂಬ ನಾಲ್ಕು ರೂಪಾತ್ಮಕನಾದ ಪರಮಾತ್ಮನಿರಲು, ಜ್ಞಾನಿಗಳು ಇತರ ಪುರುಷಾರ್ಥಗಳನ್ನು ಅಪೇಕ್ಷಿಸುವರೆ? ಬುದ್ಧಿ ಇಲ್ಲದವರು ಐಹಿಕ ಸುಖವನ್ನೇ ಶಾಶ್ವತವನ್ನಾಗಿ ಭಾವಿಸಿ, ಪ್ರತಿದಿವಸದಲ್ಲೂ ಗಣಪತಿ ಮೊದಲಾದ ಅನ್ಯದೇವತೆಗಳನ್ನು ಭಜಿಸಿ, ಅಲ್ಪವಾದ ನಶ್ವರ ಸುಖವನ್ನು ಬೇಡುವರು. ಜ್ಞಾನಿಗಳೆಂದಿಗೂ ಹಾಗೆ ಮಾಡುವರಲ್ಲವೆಂದು ಭಾವನೆ. ॥೩೩॥

## ೫. ಶ್ರೀಗುರುಹೃದಯ ಪ್ರಕಾಶಿಕೆ

ಸ್ವಭಾವ ವ್ಯಕ್ತಿ ಮಾಡುವುದರಿಂದ, ದೇವರು ನಿರ್ದೋಷನೆಂದು- **ಓಂ ವೈಷಮ್ಯ ನೈರ್ಘೃಣ್ಯೇ ನ ಸಾಪೇಕ್ಷತ್ವಾತ್ ತಥಾಹಿ ದರ್ಶಯತಿ**- ಎಂಬ ಬ್ರಹ್ಮಸೂತ್ರದಲ್ಲಿ ಹೇಳಿರುವ ಪ್ರಕಾರವಾಗಿ, ಪರಮಾತ್ಮನಿಗೆ ವೈಷಮ್ಯ - ನೈರ್ಘೃಣ್ಯಾದಿ ದೋಷಗಳು ಇಲ್ಲವೆಂದು ದೃಢಪಡಿಸಿ, ಈ ಸಂಧಿಯ ಅರ್ಥವನ್ನು ಪೂರ್ತಿ ಮಾಡುತ್ತಾರೆ- ಒಮ್ಮೆ ಎಂದು.

ಸುಧರ್ಮನಾಮಕನಾದ ಅಂದರೆ, ಎಲ್ಲರನ್ನೂ ಧರಿಸಿ ಮನ್ನಿಸುವುದರಿಂದ, ಸುಧರ್ಮನೆಂಬ ಹೆಸರುಳ್ಳ, ವೇದಾಗಮ್ಯ-ಅಂದರೆ, ವೇದಾಭಿಮಾನಿಗಳಿಂದಲೂ ಕೂಡಾ ಪಾರಗಾಣದ ಗುಣಗಳುಳ್ಳ ಶ್ರೀಜಗನ್ನಾಥವಿಠ್ಠಲನೆಂಬ ಸ್ವಾಮಿಯು ಸುಮ್ಮನೆ ಅಂದರೆ, ತನಗೆ ಯಾರಿಂದೇನೂ ಉಪಯೋಗ ಅನುಪಯೋಗ ಇಲ್ಲದಿದ್ದರೂ, ಅಥವಾ ಸ್ವಸಾಧನೆಯಲ್ಲಿ ಅಶಕ್ತರಾದವರಿಗೂ ಶಕ್ತ್ಯಾದಿಗಳನ್ನು

ವ್ಯಕ್ತಿಮಾಡಿ. ಅವರ ಸಾಧನ ಪೂರ್ತಿ ಮಾಡಿ. ತಾನೇ ಅನಿಮಿತ್ತ ಬಂಧುವಾಗಿ. ಬ್ರಹ್ಮದೇವರ ನೂರು ವರ್ಷವೆಂಬ ಕಲ್ಪದ ಕೊನೆಯಲ್ಲಿ ತ್ರಿವಿಧಜೀವರಿಗೂ ಅವರವರ ಸ್ವಭಾವವ್ಯಕ್ತಿ ಎಂಬ ನಿಜಗತಿಯನ್ನು ಕೊಡುವನು. ಕಲ್ಪಮಧ್ಯದಲ್ಲಿ ತ್ರಿವಿಧಜೀವರಿಗೂ ಬಾಹ್ಯ ಸುಖ-ದುಃಖ ಗಳನ್ನು ಕರ್ಮಾನುಸಾರ ಕೊಟ್ಟು ಸದಾ ರಕ್ಷಿಸುವನು. ಆದ್ದರಿಂದ. ದೇವರಿಗೆ ದ್ವೇಷವೆಂಬ ತಮೋಗುಣಜನ್ಯ ಕೋಪವೂ. ಅಸೂಯೆ- ಎಂಬ ಗುಣ ವಿರೋಧವೂ. ವೈಷಮ್ಯವೆಂಬ ವ್ಯತ್ಯಾಸ ವ್ಯಾಪಾರವೂ ಒಂದು ಕಾಲಕ್ಕೂ ಇಲ್ಲವೆಂದರ್ಥ. ॥೨೩॥

## ಸರ್ವವ್ಯಾಖ್ಯಾನಸಾರ ಸಂಗ್ರಹ

೧. ಧರ್ಮ - ಅರ್ಥ - ಕಾಮ - ಮೋಕ್ಷಗಳೆಂಬ ನಾಲ್ಕು, ಚತುರ್ವಿಧ ಪುರುಷಾರ್ಥಗಳೆನಿಸುವುವು. ಪರದಲ್ಲಿ ಸಾಯುಜ್ಯ-ಸಾರೂಪ್ಯ-ಸಾಮೀಪ್ಯ-ಸಾಲೋಕ್ಯ – ಎಂಬ ಮೋಕ್ಷಸ್ಥಿತಿಗಳು ನಾಲ್ಕು ವಿಧಗಳಾಗಿವೆ. ಮುಕ್ತಿ ಪ್ರದನಾದ ಮುಕುಂದನಾಮಕ ಶ್ರೀಹರಿಯು ಈ ಚತುರ್ವಿಧ ಪುರುಷಾರ್ಥ ಗಳನ್ನು ಕ್ರಮವಾಗಿ ಅನಿರುದ್ಧ-ಪ್ರದ್ಯುಮ್ನ-ಸಂಕರ್ಷಣ-ವಾಸುದೇವ-ಎಂಬ ನಾಲ್ಕು ವ್ಯೂಹರೂಪಗಳಿಂದ ವಿದ್ಯಮಾನನಾಗಿದ್ದು, ಮುಕ್ತಿಯೋಗ್ಯ ಚೇತನರಿಗೆ ನೀಡುವನು.

೨. ಅಂತರ, ಚತುರ್ವಿಧಪುರುಷಾರ್ಥರೂಪನಾದ ಅನಿರುದ್ಧಾದಿ ಚತು ರಮೂರ್ತ್ಯಾತ್ಮಕನಾದ ಶ್ರೀಹರಿಯು ಇರುತ್ತಿರಲಾಗಿ, ಪರಮಾತ್ಮನ ಮಹಾತ್ಮ್ಯವನ್ನು ಅರಿತಿರುವ ಅಂತರಂಗದ ಭಕ್ತರು ಶ್ರೀಹರಿಯನ್ನುಳಿದು ಇತರ ದೇವತೆಗಳನ್ನು ಸರ್ವಥಾತ್ಮನಾ ಉಪಾಸಿಸುವುದಿಲ್ಲ.

೩. ಆದರೆ, ಅಜ್ಞಾನಿಗಳಾದ ಮತಿವಿಹೀನರು ಪ್ರಾಪಂಚಿಕಸುಖೋಪ ಭೋಗಗಳಲ್ಲಿಯೇ ಆಸಕ್ತಮನಸ್ಸುಳ್ಳವರಾಗಿರುವರು. ತಮ್ಮ ಇಂದ್ರಿಯ

ಗಳನ್ನು ವಿಷಯಗಳಲ್ಲಿ ಆಸಕ್ತಗೊಳಿಸಿ, ಕೇವಲ ವಿಷಯಾಸಕ್ತರಾಗಿರುವರು. ಐಹಿಕಸುಖಗಳನ್ನೇ ಶಾಶ್ವತವೆಂದು ತಿಳಿದಿರುವರು. ಕ್ಷಣಭಂಗುರವಾದ ವಿಷಯಸುಖಗಳನ್ನು ನಿತ್ಯವೆಂದು ತಿಳಿದಿರುವುದು- ಮುಕ್ತಿವಿಹೀನರ ಭ್ರಮಾತ್ಮಕವಾದ ಜ್ಞಾನವು.

೪. ಕೇವಲ ಐಹಿಕಸೌಖ್ಯಗಳ ಪ್ರಾಪ್ತಿಗಾಗಿ, ಅಜ್ಞಾನಿಗಳು ಗಣಪತಿ-ಸೂರ್ಯ-ರುದ್ರ-ಚಂದ್ರ-ಅಗ್ನಿ — ಮುಂತಾದ ಇತರ ದೇವತೆಗಳನ್ನು ಸರ್ವೋತ್ತಮತ್ವೆನ ಉಪಾಸಿಸುವರು. ಅನ್ಯದೇವತೆಗಳನ್ನು ಸರ್ವೋತ್ತಮದೇವತೆಗಳೆಂದು ನಿರಂತರ ಭಜಿಸುತ್ತಾ, ಪ್ರಾಪಂಚಿಕ ಸುಖಗಳ ಪ್ರಾಪ್ತಿಗಾಗಿ ಅನುದಿನವೂ ಹಂಬಲಿಸುತ್ತಿರುವರು.

ಪರಮಪುರುಷಾರ್ಥರೂಪನಾದ ಪರಮಾತ್ಮನನ್ನು ಬಿಟ್ಟು, ಅನ್ಯ ದೇವತೆಗಳ ಉಪಾಸನಾ ತಾರಕವಲ್ಲವೆಂಬುದು- ಪ್ರಸಕ್ತಪದ್ಯದ ತಾತ್ಪರ್ಯವು. ॥೩.೩॥

## ಪದ್ಯ-೩೪

**ಮೂಲ :**

**ದ್ರುಹಿಣ ಮೊದಲಾದಮರಗಣ ಸ ।**
**ನ್ಮಹಿತ ಸರ್ವಪ್ರಾಣಿಗಳ ಹೃ ।**
**ದ್ಗುಹನಿವಾಸಿ ಗಭೀರ ಸರ್ವಾರ್ಥಪ್ರದಾಯಕನು ॥**
**ಅಹಿಕ ಪಾರತ್ರದಲಿ ವಿಹಿತಾ ।**
**ವಿಹಿತ ಕರ್ಮಗಳರಿತು ಫಲಸ ।**
**ನ್ನಿಹಿತನಾಗಿದ್ದೆಲ್ಲರಿಗೆ ಕೊಡುತಿಪ್ಪ ಸರ್ವಜ್ಞ ॥೩೪॥**

**ಅವತರಣಿಕೆ :**

ಬ್ರಹ್ಮದೇವರೇ ಮೊದಲಾದ ಸಮಸ್ತ ಜೀವರಾಶಿಗಳ ಹೃತ್ಕಮಲ

ಮಂದಿರನಾಗಿ ಸಜ್ಜನರ ಹೃತ್ತಾಪವನ್ನು ಕಳೆಯುವ ಕಾಮಿತಾರ್ಥಪ್ರದನು. ಜೀವರಿಗೆ ಅವರವರ ಯೋಗ್ಯತೆ ಸ್ವಭಾವಗಳಿಗನುಸಾರವಾಗಿ. ಇಹ ಮತ್ತು ಪರಗಳಲ್ಲಿ ಫಲಪ್ರದನಾಗಿದ್ದಾನೆಂದು ತಿಳಿಸುತ್ತಾರೆ. ॥೩೪॥

**ಪ್ರತಿಪದಾರ್ಥ :**

**ಗಭೀರ** = ಗಂಭೀರವಾದ ಸರ್ವತ್ರ ಗುಣಪೂರ್ಣನಾಗಿ ವ್ಯಾಪ್ತನಾಗಿರುವ ಶ್ರೀಪರಮಾತ್ಮನು. **ದ್ರುಹಿಣ ಮೊದಲಾದ** = ಬ್ರಹ್ಮದೇವರೇ ಆದಿಯಾಗಿ, **ಅಮರಗಣ** = ದೇವತಾಗಣದಿಂದ, **ಸನ್ಮಹಿತ** = ಚೆನ್ನಾಗಿ ಸಂಪೂಜ್ಯನಾದವನಾಗಿದ್ದು. **ಸರ್ವಪ್ರಾಣಿಗಳ** = ಬ್ರಹ್ಮಾದಿ ತೃಣಾಂತ ಸಕಲಜೀವರುಗಳ. **ಹೃದ್ಗುಹನಿವಾಸಿ** = ಹೃದ್ಗುಹಾಖ್ಯ ಪದ್ಮದಲ್ಲಿ ಬಿಂಬರೂಪದಿಂದ ಆವಾಸನಾಗಿದ್ದುಕೊಂಡು. **ಸರ್ವಾರ್ಥಪ್ರದಾಯಕನು** = ಸಕಾಮ-ನಿಷ್ಕಾಮರೂಪವಾದ ಕರ್ಮಗಳಿಗೆ ತಕ್ಕಂತೆ ಫಲಪ್ರದನಾಗಿದ್ದು. **ಸನ್ನಿಹಿತನಾಗಿದ್ದು** = ಅವರವರ ಸ್ಥೂಲದೇಹಗತನಾಗಿದ್ದು. **ವಿಹಿತ** = ಜೀವರುಗಳ ದ್ವಾರಾ ಬಿಂಬಕ್ರಿಯಾರೂಪದಿಂದ ಮಾಡಲ್ಪಡುವ ಪುಣ್ಯಕರ್ಮಗಳು (ವಿಧಿಪೂರ್ವಕ ಕಾರ್ಯಗಳು). **ಅವಿಹಿತ** = ಪಾಪಕರ್ಮಗಳು (ನಿಷೇಧ ರೂಪವಾದ) **ಕರ್ಮಗಳನು ಅರಿತು** = ಕರ್ಮವಿಶೇಷಗಳನ್ನು ಸರ್ವಜ್ಞನಾದ ತಾನು ತಿಳಿದವನಾಗಿ. **ಅಹಿಕ** = ಇಹಲೋಕದಲ್ಲಿ (ಈ ಪ್ರಪಂಚದಲ್ಲಿ). **ಪಾರತ್ರ್ಯದಲಿ** = ಪರಲೋಕಗಳಲ್ಲಿ (ಮೋಕ್ಷದಲ್ಲಿ). **ಸರ್ವಜ್ಞ** = ಸರ್ವವನ್ನೂ ತಿಳಿದ ಶ್ರೀಹರಿಯು. **ಎಲ್ಲರಿಗೆ** = ಸರ್ವಜೀವರಿಗೆ, **ಕೊಡುತಿಪ್ಪ** = ನೀಡುವವನಾಗಿದ್ದಾನೆ. ॥೩೪॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಗಣಪತ್ಯಾದಿ ದೇವತೆಗಳ ಭಜಿಸಿದರೂ ಸಹ, ಸರ್ವಾಂತರ್ಯಾಮಿಯಾಗಿ ಶ್ರೀಪರಮಾತ್ಮ ಫಲಪ್ರದನೆಂದು ತಿಳಿಯಬೇಕೆಂದು ಹೇಳುತಾರೆ.

ಗಂಭೀರನಾದ ಸರ್ವತ್ರ ಪೂರ್ಣವ್ಯಾಪ್ತನಾದ ಶ್ರೀಪರಮಾತ್ಮ ಬ್ರಹ್ಮದೇವರೇ ಮೊದಲಾದ ದೇವತಾಗಣದಿಂದ ಚೆನ್ನಾಗಿ ಪೂಜ್ಯನಾದವ. ಬ್ರಹ್ಮಾದಿ ತೃಣಾಂತ ತ್ರಿವಿಧಜೀವರುಗಳ ಹೃದಯಾಖ್ಯಗುಹಾದಲ್ಲಿ ಬಿಂಬನಾಗಿ ಆವಾಸನಾದವ. ದೇವತೆಗಳನ್ನು ಭಜಿಸಿದವರಿಗೆ ಆಯಾ ದೇವತಾಂತರ್ಗತನಾಗಿಯೂ, ತನ್ನ ಭಜಿಸಿದವರಿಗೆ ದೇವತಾದ್ವಾರದಿಂದಲೂ, ಈ ಪ್ರಕಾರ ಸರ್ವಜೀವರಿಗೆ ಸಕಾಮ- ನಿಷ್ಕಾಮರೂಪವಾದ ಕರ್ಮಗಳಿಗೆ ಪ್ರಯೋಜನವಾದ ಫಲಪ್ರದಾಯಕನು. ಅವರವರ ಸ್ಥೂಲದೇಹಗಳಲ್ಲಿದ್ದು, ಅವರವರು ಬಿಂಬಕ್ರಿಯಾದ್ವಾರಾ ಮಾಡತಕ್ಕ ಪುಣ್ಯಕರ್ಮಗಳು. ಪಾಪ ಕರ್ಮಗಳು- ಇವುಗಳನ್ನ ತಿಳಿದು, ಇಹಲೋಕ- ಪರಲೋಕ ಈ ಎರಡೂ ಸ್ಥಳಗಳಲ್ಲಿ ಸರ್ವಜ್ಞನಾದ ಶ್ರೀಪರಮಾತ್ಮ. ಸರ್ವಜೀವರಿಗೆ ಸುಖ–ದುಃಖ ಫಲಗಳ ಕೊಡುವವನಾಗುತಾನೆ, ಆದಕಾರಣ, ಅನ್ಯದೇವತೆಗಳ ಭಜಿಸಿದ ಕಾಲಕ್ಕೂ, ಶ್ರೀಪರಮಾತ್ಮ ಸರ್ವತ್ರ ವ್ಯಾಪ್ತನಾಗಿ, ಸರ್ವಾಧಿಷ್ಠಾನದಲ್ಲಿದ್ದು, ಫಲ ಕೊಡತಾನೆಂತ ತಾತ್ಪರ್ಯ. ॥೩೪॥

## ೨. ಭಾವದರ್ಪಣ

ದ್ರುಹಿಣ। ಬ್ರಹ್ಮಾ. ಗಭೀರ ಗಂಭೀರ ॥೩೪॥

## ೩. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಈ ವ್ಯಾಖ್ಯಾನದಲ್ಲಿ ಈ ಪದ್ಯ ಕೊಟ್ಟಿಲ್ಲ. ॥೩೪॥

## ೪. ಭಾವಪ್ರಕಾಶಿಕೆ

ಬ್ರಹ್ಮಾದಿ ದೇವತೆಗಳಿಂದ ಪೂಜ್ಯನಾದ, ಸರ್ವಪ್ರಾಣಿಗಳ ಹೃದಯಾಕಾಶಸ್ಥನಾದ, ಸರ್ವರ ಸಕಲಮನೋಭೀಷ್ಟವನ್ನೂ ಪೂರೈಸುವ ಸರ್ವಜ್ಞನಾದ ಶ್ರೀಹರಿಯು, ಸರ್ವಪ್ರಾಣಿಗಳ ಪುಣ್ಯ ಪಾಪಕರ್ಮಗಳನ್ನು

ತಿಳಿದು, ಅವರವರ ಯೋಗ್ಯತಾನುಸಾರವಾಗಿ, ಅವರವರಲ್ಲಿ ಸನ್ನಿಹಿತನಾಗಿದ್ದು, ಫಲವನ್ನು ಕೊಡುತ್ತಿರುವನು. ॥೩೪॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಶ್ರೀಪರಮಾತ್ಮನು ಬ್ರಹ್ಮಾದಿ ಸಮಸ್ತದೇವತಾಗಣಗಳಿಂದ ಪೂಜ್ಯನು ಮತ್ತು ಸಂಸ್ತುತ್ಯಮಾನನು. **ದ್ರುಹಿಣ**-ಎಂದರೆ, ಶ್ರೀಪದ್ಮನಾಭನ ನಾಭಿಕಮಲಸಂಜಾತರಾದ ಚತುರ್ಮುಖ ಬ್ರಹ್ಮದೇವರು. ಜನನ-ಮರಣ ವಿದೂರರಾದ ಅಮೃತಪಾನಿಗಳಾದ ದೇವತೆಗಳು **ಅಮರರು. ಸನ್ಮಹಿತ**— ಎಂದರೆ, ಅವರಿಂದ ಸ್ತುತ್ಯಮಾನನೆಂದರ್ಥ.

೨. ಸಮಸ್ತ ಅಮರಗಣ ಸನ್ಮಹಿತನಾದ ಅಪ್ರಮೇಯನು, ತ್ರಿವಿಧರಾದ ಸಕಲಚೇತನರ ಹೃದ್ಗುಹಾನಿವಾಸಿಯಾಗಿ, ಅವರ ಹೃತ್ಪದ್ಮವೆಂಬ ಮಂದಿರಸದನನಾಗಿದ್ದಾನೆ.

೩. ಶ್ರೀಹರಿಯು ಶುಭಚರಿತನು, ದೈತ್ಯಭಯಂಕರನು. ಸಮುದ್ರದಂತೆ ಗಂಭೀರಗುಣಯುಕ್ತನು, ಸರ್ವಪ್ರಕಾರಗಳಲ್ಲಿಯೂ ಪೂರ್ಣನು, ಪೂರ್ಣನಿತ್ಯಾನಂದಮಯನು. ತನ್ನ ಅಂತರಂಗಭಕ್ತರಿಗೊಲಿದು, ಅವರ ಸಕಲಕಾಮಿತಾರ್ಥಗಳನ್ನು ಈಡೇರಿಸುವ ಕಾಮಧೇನುಸದೃಶನು.

೪. ಅಂತಹ ಸರ್ವಾರ್ಥಪ್ರದಾಯಕನು, ಸಮಸ್ತಜೀವರ ಸ್ಥೂಲ ದೇಹಗತ ಇಂದ್ರಿಯಗಳಲ್ಲಿ ಸನ್ನಿಹಿತನಾಗಿರುವನು. ಆಯಾಯಾ ಜೀವರು ತಮ್ಮ ಅನಾದಿಸ್ವಭಾವಕ್ಕನುಗುಣವಾಗಿ, ಶ್ರೀಹರಿಯು ಬಿಂಬಕ್ರಿಯಾನುಸಾರ ಮಾಡುತ್ತಿರುವ, ಸಕಲವಿಹಿತ ಮತ್ತು ಅಹಿತಕರ್ಮಗಳಿಗೆ ತಕ್ಕ ಫಲಗಳನ್ನು ಕೊಡುವನು. ಕರ್ಮಗಳಲ್ಲಿ, ವಿಹಿತ ಅಹಿತ-ಮಿಶ್ರ- ಎಂದು ಮೂರು ಪ್ರಕಾರ, ವಿಧಿಬದ್ಧವಾದ ಪುಣ್ಯಕಾರ್ಯಗಳು ವಿಹಿತಕರ್ಮ

ಗಳೆನಿಸುವುವು. ನಿಷೇಧರೂಪವಾದ ಪಾಪಕರ್ಮಗಳು ಅಹಿತವೆನಿಸುವುವು. ಪುಣ್ಯ-ಪಾಪ ಮಿಶ್ರವಾಗಿರುವ ಕರ್ಮಗಳು ಮಿಶ್ರಗಳು. ಈ ಮೂರು ವಿಧವಾದ ಕರ್ಮಗಳ ಅನುಷ್ಠಾನವು, ಬಿಂಬನ ಪ್ರೇರಣಾನುಸಾರ ಜೀವರ ದ್ವಾರಾ ನಡೆಯುತ್ತಿರುವುವು, ಎಲ್ಲವನ್ನು ಬಲ್ಲ ಸರ್ವಜ್ಞನಾಮಕನಾದ ಸರ್ವೇಶ್ವರನು ಆಯಾಯಾ ಫಲಗಳನ್ನು, ಆಯಾಯಾ ಜೀವರಿಗೆ ಅವರ ಸಾಧನಕ್ಕನುಗುಣವಾಗಿ, ಇಹದಲ್ಲಿಯೂ ಮತ್ತು ಪರದಲ್ಲಿಯೂ ಕೊಡುವ ಕಾಮಿತಾರ್ಥಪ್ರದನಾಗಿದ್ದಾನೆ. ಶ್ರೀಹರಿಗೆ ವೈಷಮ್ಯ ನೈರ್ಘೃಣ್ಯ-ಇತ್ಯಾದಿ ದೋಷಗಳಿಲ್ಲ. ಜೀವರ ಸ್ವಭಾವಕ್ಕನುಗುಣವಾದ ಕರ್ಮಾಚರಣೆ, ಅದಕ್ಕನುಸಾರವಾಗಿ ಫಲಪ್ರದತ್ವ. ಜೀವರ ಸ್ವರೂಪ ಯೋಗ್ಯತೆ - ಅವರ ಸ್ವರೂಪವನ್ನು ಅನಾದಿಯಿಂದ ಆವರಿಸಿರುವ ಕರ್ಮ-ಫಲಪ್ರದತ್ವ-ಎಲ್ಲವೂ ಭಗವದಧೀನ. ಅವನ ಬಿಂಬಕ್ರಿಯಾದ್ವಾರವೇ, ಕರ್ಮಾಭಿವ್ಯಕ್ತಿ. ಅದಕ್ಕೆ ತಕ್ಕಂತೆ ಫಲಭೋಕ್ತೃತ್ವ. ಈ ಗುಣಧರ್ಮಗಳು ಪರಂಪರಾಗತವಾಗಿ ನಡೆಯುತ್ತಲೇ ಇರುವುವು. ॥೩೪॥

## ಪದ-೩೫

ವು. ಅ:-

ಒಮ್ಮೆಗಾದರು ಜೀವರೊಳು ವೈ ।
ಷಮ್ಯ ದ್ವೇಷಾಸೂಯೆ ಸ್ನೇಹ ಮ ।
ಹಾಮಹಿಮಗಿಲ್ಲ ನಿರುಪಾಧಿಕ ಪೂರ್ವಕಲೋಕಗಳ ॥
ಬ್ರಹ್ಮಕಲ್ಪಾಂತದಲಿ ವೇದಾ ।
ಗಮ್ಯ ಶ್ರೀಜಗನ್ನಾಥವಿಠಲ ।
ಸುಮ್ಮನೀವನು ತ್ರಿವಿಧರಿಗೆ ಅವರವರ ನಿಜಗತಿಯ ॥೩೫॥

**ಅವತರಣಿಕೆ:-**

ಸರ್ವದೋಷವಿದೂರನಾದ ಶ್ರೀಪರಮಾತ್ಮನಿಗೆ ಸಾತ್ವಿಕರಲ್ಲಿ ಸ್ನೇಹ ವಾಗಲೀ, ರಾಜಸರಲ್ಲಿ ಅಸೂಯೆ ಅಥವಾ ಉದಾಸೀನ ಭಾವವಾಗಲೀ, ತಮೋಯೋಗ್ಯಜೀವರಲ್ಲಿ ದ್ವೇಷವಾಗಲೀ ಯಾವಾಗಲೂ ಇಲ್ಲ. ವೈಷಮ್ಯ ನೈರ್ಘೃಣ್ಯ- ಎಂಬುವ ದೋಷಗಳು, ನಿರ್ದೋಷನಾದ ನಿರಂಜನನಿಗೆ ವೈಷಮ್ಯ ನೈರ್ಘೃಣ್ಯಾದಿ ಯಾವ ದೋಷಗಳೂ ಇಲ್ಲ. ಬ್ರಹ್ಮಕಲ್ಪಾಂತದಲ್ಲಿ ವೇದಗಮ್ಯನಾದ ಶ್ರೀಜಗನ್ನಾಥವಿಠ್ಠಲನು ತ್ರಿವಿಧಜೀವರುಗಳಿಗೆ ಅವರವರ ಗತಿಯನ್ನು ಯಾವ ಅಪೇಕ್ಷೆಯೂ ಇಲ್ಲದೆ, ಸಹಜವಾಗಿ ಕೊಡುವನು-ಎಂದು ಪ್ರಸಕ್ತಸಂಧಿಗತ ಈ ಅಂತ್ಯಪದ್ಯದಿಂದ ತಿಳಿಸುತ್ತಾ, ಸಂಧಿಗತ ವಿಷಯ ವನ್ನು ಉಪಸಂಹರಿಸುತ್ತಾರೆ. ॥೨೫॥

**ಪ್ರತಿಪದಾರ್ಥ:-**

**ಮಹಾಮಹಿಮೆಗೆ** — ಅಸದೃಶಮಹಿಮಾಸಂಪನ್ನನಾದ ಶ್ರೀಪರ ಮಾತ್ಮನಿಗೆ. **ಜೀವರೊಳು** — ತ್ರಿವಿಧಜೀವರುಗಳಲ್ಲಿ, **ಒಮ್ಮೆಗಾದರು** — ಯಾವಕಾಲದಲ್ಲೂ, **ದ್ವೇಷ** — ತಮೋಯೋಗ್ಯರಲ್ಲಿ ದ್ವೇಷಭಾವ, **ಅಸೂಯೆ** — ನಿತ್ಯಸಂಸಾರಿಗಳಲ್ಲಿ ಉದಾಸೀನ ಭಾವವಾಗಲೀ, **ಸ್ನೇಹ** — ಮುಕ್ತಿಯೋಗ್ಯ ಚೇತನರಲ್ಲಿ ಅಂತಃಕರಣ ಭಾವವಾಗಲೀ, **ವೈಷಮ್ಯ** — ಈ ವಿಧವಾದ ಪಕ್ಷಪಾತವೆಂಬ ಭಾವವು, **ಇಲ್ಲ** — ಇಲ್ಲವೇ ಇಲ್ಲ. **ವೇದಾಗಮ್ಯ** — ವೇದದಿಂದ ಸಾಕಲ್ಯೇನ ಗೋಚರನಲ್ಲದ, ಅದರೆ, ವೇದ ಪ್ರತಿಪಾದ್ಯನಾದ, **ಶ್ರೀಜಗನ್ನಾಥವಿಠಲ** — ಕಾಂತಿಸಂಪನ್ನನಾದ, ಶುಭ ಚರಿತನಾದ ಜಗತ್ತಿಗೇ ಪ್ರಭುವಾದ ಜಗದೀಶ್ವರನು, **ಲೋಕಗಳ** — ಸಾಧನ ಪರಿಪಕ್ವರಾದ ತ್ರಿವಿಧ ಜೀವರುಗಳನ್ನು, **ಬ್ರಹ್ಮಕಲ್ಪಾಂತದಲಿ** ಬ್ರಹ್ಮ ಕಲ್ಪದ ಅಂತ್ಯಕಾಲದಲ್ಲಿ, **ನಿರುಪಾಧಿಕಪೂರ್ವಕ** — ಉಪಾಧಿರಹಿತವಾಗಿ

ಮಾದಿ (ಉಪಾಧಿ ರೂಪದಲ್ಲಿರುವ ಲಿಂಗಭಂಗದ್ವಾರಾ). **ತ್ರಿವಿಧಜೀವರಿಗೆ** — ಸಾತ್ವಿಕ-ರಾಜಸ-ತಾಮಸರೆಂಬ ಜೀವತ್ರಯರಿಗೆ. **ಅವರವರ ನಿಜ ಗತಿಯ** — ಅವರವರ ಅನಾದಿ ಸ್ವರೂಪಭೂತವಾದ ಸುಖ, ಸುಖ-ದುಃಖ ಮತ್ತು ದುಃಖ-ರೂಪ ಮೂರು ವಿಧವಾದ ಗತಿಗಳನ್ನು. **ಸುಮ್ಮನೀವನು**— ವ್ಯತ್ಯಾಸವಿಲ್ಲದಂತೆ ಕೊಡುವನು. ॥[illegible]॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ.

ಶ್ರೀಪರಮಾತ್ಮಗೆ ಜೀವರಲ್ಲಿ ವೈಷಮ್ಯಾದಿಗಳು ಇಲ್ಲ ಎಂತ ಹೇಳತ್ತಾರೆ.

ಅಸದೃಶವಾದ ಮಹಾಮಹಿಮಾವುಳ್ಳ ಶ್ರೀಪರಮಾತ್ಮಗೆ ತ್ರಿವಿಧರಾದ ಜೀವರೊಳು ದಾವಕಾಲದಲ್ಲಾಗಲೀ, ತಮೋಯೋಗ್ಯರಲ್ಲಿ ದ್ವೇಷವೇನು, ನಿತ್ಯಸಂಸಾರಿಗಳಲ್ಲಿ ಉದಾಸೀನವೇನು, ಮುಕ್ತಿಯೋಗ್ಯರಲ್ಲಿ ಅಂತಃಕರಣವೇನು-ಏತಾದೃಶವಾದ ಪಕ್ಷಪಾತವೆಂಬುದು ಇಲ್ಲ, ಆದ್ದರಿಂದ, ನಿರ್ದೋಷನು. ವೇದದಿಂದ ಸಾಕಲ್ಯೇನ ಗೋಚರನಲ್ಲದ, ಕಾಂತಿಸಂಪನ್ನನಾದ, ಜಗತ್ತ್ರಿಗೇ ಸ್ವಾಮಿಯಾದ. ಪಾಪಪರಿಹಾರಕನಾದ ಶ್ರೀಪರಮಾತ್ಮನು, ತ್ರಿವಿಧ ಜೀವರೊಳಗೆ ಸಾಧನಪರಿಪಕ್ವರಾದ ತ್ರಿವಿಧಜೀವರುಗಳನ್ನು ಬ್ರಹ್ಮಕಲ್ಪದ ಅಂತ್ಯಭಾಗದಲ್ಲಿ ಉಪಾಧಿಕ-ಎಂದರೆ, ಅನಾದಿ ಲಿಂಗದೇಹ, ಇದರನ್ನ ಬಿಡಿಸಿ, ಉಪಾಧಿಯಿಲ್ಲದೆ ತ್ರಿವಿಧಜೀವರಿಗೆ ಅವರವರ ಅನಾದಿಸ್ವರೂಪಕ್ಕೆ ಅನುಸರಿಸಿದ ನಿಜವಾದ, ಮೂರಾದಂಥ ಗತಿಯನ್ನು ಆಯಾ-ಸ್ವರೂಪಾನುಸಾರ, ವೈಷಮ್ಯಾದಿಗಳ ಮಾಡವೇನೇ, ತಾನು ವೈಷಮ್ಯರಹಿತನಾಗಿ ಸುಮ್ಮನೆ ಕೊಡೋವನಾಗುತಾನೇ ಹೊರತು. ವೈಷಮ್ಯದಿಂದ ಗತಿ ವ್ಯತ್ಯಾಸ ಮಾಡೋದಿಲ್ಲವಾದ್ದರಿಂದ. ಶ್ರೀಪರಮಾತ್ಮಗೆ ಜೀವರಲ್ಲಿ ವೈಷಮ್ಯಾದಿಗಳು ಇಲ್ಲ- ಎಂದು ತಾತ್ಪರ್ಯ.

ಶ್ರೀಪರಮಾತ್ಮನ ಮಹಾತ್ಮ್ಯಗಳ ತಿಳಿದು, ಭಗವದುಪಾಸನ ಮಾಡುವವರು ಸಕಲದುರಿತದಿಂದ ನಿವಾರಿತರಾಗಿ, ಇಹದಲ್ಲಿ ಮಹದೈಶ್ವರ್ಯಾದಿಗಳಿಂದ ಸುಖಪಟ್ಟು, ಪಾರತ್ರಿಕದಲ್ಲಿ ಮೋಕ್ಷಾದಿ ಪರಪದಾರ್ಥಗಳ ಹೊಂದ ತಾರೆಂತ ನಿರೂಪಣವಿರುವ ಪ್ರಯುಕ್ತ, **ಈ ಸಂಧಿಗೆ ಸಕಲದುರಿತನಿವಾರಣ ಸಂಧಿ**- ಎಂತ ನಾಮ ॥೩೫॥

**ಹಂಸ ಮೊದಲು ಹದಿನೆಂಟು ರೂಪಗಳ ಯುಗರ್ಥ ವಿವರ ಮಾಡಲಾಗಿದೆ.**

೧ **ಹಂಸ** – ಹಂತಿ ತಮ ಇತಿ ಹಂಸಃ । ಹನ ಹಿಂಸಾಗತ್ಯೋಃ । ಯೇ ಗತ್ಯರ್ಥಕಾಸ್ತೇ। ಜ್ಞಾನಾರ್ಥಕಾಃ ತಮಃ ಪರಿಹಾರಕಃ। ಶ್ವಾಸನಿಯಾಮಕಃ। ಜ್ಞಾನಸ್ವರೂಪ ಇತಿ ಚ ಹಂಸಶಬ್ದೇನ ಶ್ವಾಸಜ್ಞಾನಾದಪೋ ಲಕ್ಷ್ಯಂತೇ ಅರ್ಶಾಧಿಭ್ಯೋ ಅಚ್ ಪ್ರತ್ಯಯಃ । ತನ್ನಿಯಾಮಕತ್ವಂ । ಅಥವಾ ಸಂಸಾರ ಬಂಧಂ ಹಂತೀತಿ ಹಂಸಃ। ಪೃಷೋದರಾದಿತ್ವಾತ್ಸಾಧುತ್ವಂ। ಸರ್ವಶರೀರೇಷು ಹಂತಿ ಗಚ್ಛತೀತಿ ಹಂಸಃ ॥

**ಹಂಸರೂಪ ಇರೋ ಸ್ಥಾನಗಳು**-1. ತಮಃ ಪರಿಹಾರಕನಾಗಿಯೂ, 2. ಅಶೇಷದೋಷದೂರನಾಗಿಯೂ, 3. ಶ್ವಾಸಾಂತರ್ಗತನಾಗಿಯೂ, ಶ್ವಾಸನಿಯಾಮಕನಾಗಿಯೂ, 4. ಜ್ಞಾನಾನಂದಮಯನಾಗಿಯೂ, 5. ಸಂಸಾರಬಂಧಮೋಚಕನಾಗಿಯೂ, 6. ಸರ್ವಶರೀರಾಂತರ್ವರ್ತಿಯಾಗಿಯೂ ಇತ್ಯಾದಿ ಅಧಿಷ್ಠಾನಗಳಲ್ಲಿ ಹಂಸರೂಪಿಯಾದ ಪರಮಾತ್ಮ ಇರುತಾನೆ.

೨. **ಶುಚಿಸತ್**–ಶುಚಿತ್ವಾತ್ ಶುಚಿಃ। ಶೋಚತಿ ಶುಧ್ಯತೀತಿ ಶುಚಿಃ। ಶುಚೌ ತಿಷ್ಠತೀತಿ ಶುಚಿಃ। ಕಲಿಂ ಶೋಚಯತೀತಿ ಶುಚಿಃ। **ನಿರಂಜನತಯಾ ಶುಚಿಃ। ಶುಚಿರ್ನಾಮಾ ವಾಯುಃ ತಸ್ಮಿನ್ ತಿಷ್ಠತೀತಿ ಶುಚಿಃ।** ಸತ್ ಶುದ್ಧಸತ್ವಾಶ್ರಯ ಇತಿ ಶುಚಿಸತ್ ॥

**ಶುಚಿಸತ್‌ನಾಮಕ ಪರಮಾತ್ಮ ಇರೋಸ್ಥಾನ**

1. ಶುಚಿಶುದ್ಧನಾಗಿಯೂ, 2. ಶುಚಿಮಾಡತಕ್ಕವನಾಗಿಯೂ, 3. ಶುಚ್ಯಾಶ್ರಯನಾಗಿಯೂ, 4. ಕಲಿಯನ್ನು ಕಳವಳಪಡಿಸುವವನಾಗಿಯೂ,

b. ನಿರ್ದೋಷನಾಗಿಯೂ, ಶುಚಿಸತ್‌ರೂಪ ಶುಚಿನಾಮಕ ವಾಸುದೇವರಲ್ಲಿ ಇರೋದಾಗಿ ಇದೆ.

೩. **ವಸುಃ** ವಸಂತಿ ಸರ್ವಭೂತಾನ್ಯತ್ರ ತೇಷ್ವಯಮಪಿ ವಸತೀತಿ ವಸುಃ। ವಸೂನಾಮುಖ್ಯ ಪಾವಕ ಇತ್ಯುಕ್ತೇ ... ವಾ ವಸುಃ। ವಸ ನಿವಾಸೇ ॥

**ವಸುರೂಪ ಪರಮಾತ್ಮ ಇರೋ ಸ್ಥಾನ-**

a. ಸರ್ವಭೂತಗಳಿಗೂ ತಾನು ಆಶ್ರಯನಾಗಿಯೂ, b. ಸರ್ವರಲ್ಲಿಯೂ ಮಾಡತಕ್ಕವ ತಾನು ವಾಸನಾಗಿಯೂ. c. ವಸೂನಾಮುಖ್ಯ ಪಾವಕಃ- ಎಂತ ಶ್ರೀಗೀತಾ ನಿರೂಪಿತ ವಸು ನಾಮಕನಾಗಿಯೂ, ಇತ್ಯಾದಿ ಕಾರಣದಿಂದ ಪರಮಾತ್ಮ **ವಸು** ಎಂತ ಕರಸಿದ. ಇನ್ನು, ರತ್ನಗಳಲ್ಲಿ, ಧನಗಳಲ್ಲಿ, ಕಿರಣಗಳಲ್ಲಿ ಇದ್ದಾನೆ. ಈಮೂರು ಸ್ಥಳಗಳಲ್ಲಿ ಇಂತಕ್ಕ ದೇವರಿಗೆ ವಸು-ಎಂತ ನಾಮ.

೪. **ಅಂತರಿಕ್ಷಸತ್**- ಅಂತಃ ಈಕ್ಷಣೀಜಗದಸ್ಮಿನ್ ನಿತ್ಯಂ ಅಂತರಿಕ್ಷಂ। ತಸ್ಮಿನ್ ತಿಷ್ಠತೀತಿ ಅಂತರಿಕ್ಷಸತ್।

**ಅಂತರಿಕ್ಷಸತ್ ಪರಮಾತ್ಮ ಇರೋಸ್ಥಾನ-**

a. ತನ್ನೊಳು ಸರ್ವ ಜಗತ್ತನ್ನು ಇಟ್ಟುಕೊಂಡಿರುವ ಕಾರಣದಿಂದಲೂ. b. ಇನ್ನು ಬಾಹ್ಯಾಕಾಶದಲ್ಲೂ. c. ಹೃದಯಾಕಾಶದಲ್ಲೂ ಇರೋವನಾಗಿರುವುದರಿಂದಲೂ. ಅಂತರಿಕ್ಷ ಎಂತ-ಕರಸಿದ.

೫. **ಹೋತಾ**- ಜುಹೋತಿ ಹೋತಾ। ಹು ದಾನಾದಾನಯೋಃ ॥

**ಹೋತಾ ನಾಮಕ ಪರಮಾತ್ಮ ಇರೋ ಸ್ಥಾನ-**

a. ಬಾಹ್ಯವಿ ವಿಷಯಗಳನ್ನ ಅನುಭವಿಸನಾತೆಯೂ, ಅನುಭವಕ್ಕೆ ಕೊಡುವವನಾಗಿಯೂ ಇರುವ ಕಾರಣದಿಂದಲೂ, b. ಇನ್ನು ಆಹುತಿ ಕೊಡೋದರಲ್ಲಿಯೂ, ಆಹುತಿ ತೊಗೋಂಬೋವರಲ್ಲಿಯೂ, ಇರೋಣದರಿಂದಲೂ, ಹೋತಾ-ಎಂತ ಕರಸಿದ.

೬. **ವೇದಿಷತ್**- ವೇದ್ಯಾಂ ತಿಷ್ಠತೀತಿ ವೇದಿಷತ್ ॥

**ವೇದಿಷತ್‌ನಾಮಕ ಪರಮಾತ್ಮ ಇರೋಸ್ಥಾನ –**

ಯಜ್ಞಕ್ಕೆ ಅನುಕೂಲವಾದ ಜಗಲಿಯಲ್ಲಿ ಇರೋಣದರಿಂದಲೂ, ವೇದಿ–

ಆದರೆ, ಭೋರ್ಜಗಲಿ. ಇದರಲ್ಲಿ ಪರಮಾತ್ಮ ಇರೋವನಾಗಿರುವುದರಿಂದಲೂ ವೇದಿಷತ್-ಎಂತ ಕರಸೋವನಾದ.

**೭. ಅತಿಥಿಃ**- ಅತ್ತಿ ಚರಾಚರಮಿತಿ ಅತಿಥಿಃ। ಅತತಿ ಸತತಂ ಗಚ್ಛತೀತಿ ಅತಿಥಿಃ। ಅತಿಥಿರೂಪತಯಾ ಸತ್ಕಾರಮರ್ಹತೀತಿ ವಾ ಅತಿಥಿಃ॥

**ಅತಿಥಿನಾಮಕ ಪರಮಾತ್ಮ ಇರೋ ಸ್ಥಾನ-**

a. ಪ್ರಳಯಕಾಲದಲ್ಲಿ ಚರಾಚರಗಳನ್ನ ಭಕ್ಷಿಸುತ್ತಾನಾದ್ದರಿಂದಲೂ, b. ಸರ್ವತ್ರ ಸರ್ವಕಾಲದಲ್ಲೂ ಇರತಕ್ಕವನಾದ್ದರಿಂದಲೂ, c. ಅತಿಥಿನಾಮಕ ಪರಮಾತ್ಮ ಅತಿಥಿಗಳಲ್ಲಿ ಇರೋವನಾದ್ದರಿಂದಲೂ ಪರಮಾತ್ಮ **ಅತಿಥಿ**-ಎಂತ ಕರಸಿದ.

೮. **ದ್ರೋಣಸತ್**- ದ್ರೋಣಕಲಶೇ ತಿಷ್ಠತೀತಿ ದ್ರೋಣಸತ್ ॥

**ದ್ರೋಣಸತ್ ನಾಮಕ ಪರಮಾತ್ಮ ಇರೋಸ್ಥಾನ-**

a. ದ್ರೋಣ ಕಲಶದಲ್ಲಿರೋಣದರಿಂದಲೂ, b. ಅಮೃತವೆಂಬೋ ಸೋಮರಸ ಪಾತ್ರದಲ್ಲಿ ಆವಾಸನಾಗಿರುವುದರಿಂದಲೂ, ಈ ಪರಮಾತ್ಮ **ದ್ರೋಣ**-ಎಂತ ಕರಸೋವನಾದ.

**೯. ನೃಷತ್**- ನೃಷು ಮನುಷ್ಯೇಷು ಪರಮಕಾರುಣಿಕತಯಾ ರಾಮಾದ್ಯವತಾರಂ ಗೃಹೀತ್ವಾ ತೇಷು ತಿಷ್ಠತೀತಿ ನೃಷತ್ ॥

**ನೃಷತ್ ನಾಮಕ ಪರಮಾತ್ಮ ಇರೋ ಸ್ಥಾನ-**

ಈ ಪರಮಾತ್ಮ ಮಾನುಷವತ್ ಅವತಾರ ಮಾಡಿ, ಮನುಷ್ಯರಲ್ಲಿ ಮನುಷ್ಯನಂತೆ ಸಂಚಾರ ಮಾಡಿದ ಕಾರಣ, ಮನುಷ್ಯರಲ್ಲಿದ್ದು, **ನೃಷತ್**-ಎಂತ ಕರಸಿದ.

೧೦. **ವರಸತ್**- ವರೇಷು ಬ್ರಹ್ಮರುದ್ರಾದಿಷು ತಿಷ್ಠನ್ ತತ್ತತ್ಕಾರ್ಯನಿರ್ವಾಹಂ ಕೃತವಾನ್ ವರಸತ್ ॥

**ವರಸತ್ ನಾಮಕ ಪರಮಾತ್ಮ ಇರೋ ಸ್ಥಾನ-**

a. ರೂಪಾಂತರಗಳಿಂದ ಬ್ರಹ್ಮ-ರುದ್ರಾದಿಗಳಲ್ಲಿ ಪ್ರವೇಶನಾಗಿಯೂ, ಬ್ರಹ್ಮರುದ್ರಾದಿಗಳಲ್ಲಿ ಇದ್ದು, ಸೃಷ್ಟಿ-ಲಯಾದಿ ಕಾರ್ಯಗಳ ಮಾಡಿಸತಲೂ, ಈ ಪರಮಾತ್ಮ **ವರಸತ್** ನಾಮದಿಂದ ಇದ್ದಾನೆ.

೧೧. **ಋತಸತ್**- ಋತೇ ಸತ್ಯೇ ಯಥಾರ್ಥರೂಪವೇದೇ ತಿಷ್ಠತೀತಿ

ಋತಸತ್ ॥

**ಋತಸತ್‌ನಾಮಕ ಪರಮಾತ್ಮ ಇರೋ ಸ್ಥಾನ-**

ಇವ ಸತ್ಯವಾದ ವೇದದಲ್ಲಿದ್ದು, ಸತ್ಯವಾದದಿಂದ **ಋತಸತ್**-ಎಂತ ಕರೆದ.

೧೨ **ವ್ಯೋಮಸತ್** - ವಿಶ್ವವ್ಯಾಪ್ತೀತಿ ಸಂಪರಣೇ ವಾ ವ್ಯೋಮವ್ಯಾಪ್ತ ಪ್ರಕೃತಿತಸ್ಮಾತ್ ತಿಷ್ಠತೀತಿ ವ್ಯೋಮಸತ್ ॥

**ವ್ಯೋಮಸತ್‌ನಾಮಕ ಪರಮಾತ್ಮ ಇರೋ ಸ್ಥಾನ-**

1. ಚರಾಚರ ಪ್ರಪಂಚವನ್ನ ಸುತ್ತಿಕೊಂಡಿರುವನಾದ್ದರಿಂದ, **ವ್ಯೋಮ**ಎಂತ ಕರೆದ, 2. ವ್ಯೋಮಶಬ್ದವಾಚ್ಯರಾದ ಶ್ರೀದೇವೇರಲ್ಲಿ ಇರೋವನಾಗಿ ಪರಮಾತ್ಮ-ವ್ಯೋಮಸತ್ ಎಂತಕ ರೆಸಿದ.

೧೩. **ಅಬ್ಜ**-ಅಪ್ಸು ಜಾತಾ ಅಬ್ಜಾಃ । ತನ್ನಿಯಾಮಕಃ।

**ಅಬ್ಜನಾಮಕ ಪರಮಾತ್ಮ ಇರೋ ಸ್ಥಾನ-**

1. ಜಲದಲ್ಲಿ ಮತ್ಸ್ಯಾವತಾರ ಮಾಡಿದವನಾದ್ದರಿಂದಲೂ, 2. ಜಲಚರಾದಿಗಳಲ್ಲಿ ಇರುವದರಿಂದಲೂ, ಪರಮಾತ್ಮ **ಅಬ್ಜ**-ಎಂತ ಕರೆದ.

೧೪. **ಗೋಜ**-ಗೋಷು ಜಾತಾಃ ಗೋಜಾಃ, ತನ್ನೇತಾ **ಗೋಜಃ**

**ಗೋಜನಾಮಕ ಪರಮಾತ್ಮ ಇರೋಸ್ಥಾನ-**

1. ವೇದದಿಂದ ವ್ಯಕ್ತನಾದ್ದರಿಂದಲೂ, 2. ಭೂಮಿಯೋ ಯೋನಿಯಾದ ವೃಕ್ಷಾದಿಗಳಲ್ಲಿಯೂ, 3. ಸ್ವರ್ಗದಲ್ಲಿ ಕಾಮಧೇನುವಿನಲ್ಲಿ ಇರೋಣದರಿಂದಲೂ, ಈ ಈ ಪರಮಾತ್ಮ **ಗೋಜ**-ಎಂತ ಕರೆದ.

೧೫. **ಋತಜ**-ಋತಾಜ್ಜಾತಾ ಋತಜಾಃ ॥

**ಋತಜ ನಾಮಕ ಪರಮಾತ್ಮ ಇರೋ ಸ್ಥಾನ-**

1. ಸತ್ಯವಾದಿಗಳಾದ ತನ್ನ ಭಕ್ತರ ದೆಸೆಯಿಂದ ಸರ್ವೋತ್ತಮನೆಂದು ವ್ಯಕ್ತನಾದವ. 2. ಇನ್ನೂ ಸತ್ಯ ಹೇಳತಕ್ಕ ವೇದದಲ್ಲಿ ಇರೋವನಾಗಿದ್ದಾನೆ. 3. ಮುಕ್ತರಲ್ಲಿ ಇದ್ದಾನೆ. ಆದಕಡಿಯಿಂದ. **ಋತಜ**-ಎಂತ ಕರಸೋವನಾದ.

೧೬. **ಅದ್ರಿಜ-ಪರ್ವತಸಂಸ್ಥಾನಾಧಿಷ್ಠಿತ** ॥

**ಅದ್ರಿಜನಾಮಕ ಪರಮಾತ್ಮ ಇರೋ ಸ್ಥಾನ-**

1. ಪರ್ವತಾದ್ರಿಗಳಲ್ಲಿ ಇರೋಣದರಿಂದಲೂ, 2. ಪರ್ವತಾದ್ರಿಗಳಲ್ಲಿ ಜನಿತ ಜಂತುಗಳಲ್ಲಿ ಇರೋವನಾಗಿರುವುದರಿಂದಲೂ, **ಅದ್ರಿಜ**ನೆಂದೆನಿಸುವ.

೧೭. **ಋತಂ**-ಸತ್ಯನೂ ನಿತ್ಯನೂ ಆದ್ದರಿಂದ, ಇವ **ಋತಂ**- ಎಂತ ಕರಸಿದವನಾಗಿ ಸತ್ಯದಲ್ಲಿ ಇದ್ದಾನೆ.

೧೮. **ಬೃಹತ್** - ಸರ್ವರಿಂದ ದೊಡ್ಡವನಾದರಿಂದ, **ಬೃಹತ್**- ಎಂತ ಕರಸಿದ.

ಸಪ್ತಾವರಣಸಹಿತ ಬ್ರಹ್ಮಾಂಡ, ಅದಕ್ಕೆ ಆಚೇಲಿ ಇರುವ ಸ್ಥಾನ ಪ್ರದೇಶದಲ್ಲಿ. ಅಪರಿಚ್ಛಿನ್ನ ಅಖಂಡನಾಗಿಯೂ ಇರೋವನಾಗಿದ್ದಾನೆ. ಇದಕ್ಕೆ ಪ್ರಮಾಣ **ಶ್ರೀಕಾಠಕೋಪನಿಷದ್ಭಾಷ್ಯದಲ್ಲಿ** ಇರುವುದು-ವಿವರಿಸಲ್ಪಡತದೆ.

ನಿತ್ಯಂ ಹೀನೋಽಖಿಲೈರ್ದೋಷೈಃ ಸಾರರೂಪೋ ಯತೋ ಹರಿಃ ।
ಹಂಸ ಇತ್ಯುಚ್ಯತೇ ತಸ್ಮಾದ್ಧ್ಯಾಯಸ್ಥಃ ಶುಚಿಷದ್ಸ್ಮೃತಃ ॥೧॥
ವಸುಃ ವಸುತ್ವಕೋಕ್ತಃ ಸ ವಿಷ್ಣ್ವಾಪ್ಯಂತರಿಕ್ಷಗಃ ।
ಹೋತಾ ಸರ್ವೇಂದ್ರಿಯಾದಿಸ್ಥೋ ವೇದ್ಯಾಂ ಪೂಜ್ಯಶ್ಚ ವೇದಿಷತ್ ॥೨॥
ಅತ್ಯನ್ನಶ್ಚಾತಿಥಿಃ ಪ್ರೋಕ್ತೋ ಯಸ್ಮಾದನ್ನಂ ಧಮುಚ್ಯತೇ ।
ಸ ದ್ರೋಣಕಲಶೇ ಸೋಮೋಸ್ಥಿತ ಉಕ್ತೋ ದುರೋಣಸತ್ ॥೩॥
ನೃಷು ಸ್ಥಿತಶ್ಚ ದೇವೇಷು ವರೇಷ್ವಪಿ ಸಪವತು ।
ಋತರೂಪೇ ತಥಾ ವೇದೇ ವ್ಯೋಮಾಖ್ಯೇ ಪ್ರಕೃತಾವಪಿ ॥೪॥
ವ್ಯೋತಂ ಜಗದಿದಂ ಯಸ್ಮಾಂ ಸಾ ವ್ಯೋಮ ಶ್ರೀರುದಾಹೃತಾ ।
ಅಬ್ಜ ಗೋಜಾದ್ರಿಜೇಷ್ವೇವ ಅಸ್ತೇ ಅಬ್ಜಾದಿಕಸ್ತತಃ ॥೫॥
ಶಕ್ಯೈರ್ಪರ್ವೇಷು ಮುಕ್ತೇಷು ಗತಾಸ್ತೇ ವಿಷ್ಣುಮಿತ್ಯತಾಃ ।
ವೇದೈರ್ಮಾರ್ಗಿಕೃತಯಾ ಪ್ರೋಕ್ತಂ ಋತಮಿತ್ಯೇವ ಜೋಚ್ಯತೇ ॥೬॥

ಬೃಹತ್ತ್ವಾದ್ಗುಣತ್ವಾಚ್ಚ ಸ ಏವ ಪುರುಷೋತ್ತಮಃ ।
ನ ಕೇವಲಂ ಪ್ರಾಣ ಏವ ಚೇತನಾನಾಂ ವಿಧಾರಕಃ ॥೭॥
ಕಿಂತು ವಿಷ್ಣುಂ ಸಮಾಶ್ರಿತ್ಯ ಪ್ರಾಣೋ ಜೀವಾನ್ ಬಿಭರ್ತ್ಯಯಂ ।
ಅತೋ ಮುಖ್ಯಾಶ್ರಯೋ ವಿಷ್ಣುಶ್ಚೇತನಾನಾಂ ಸ್ವತಂತ್ರತಃ ॥೮॥

**ಕಾಠಕೋಪನಿಷದ್ಭಾಷ್ಯ ಅ. ೨. ಬ್ರಾ. ೨.**

**೨. ಭಾವದರ್ಪಣ**

ಶ್ರೀಹರಿಯು ದ್ವೇಷಾಸೂಯಾರಹಿತನೆಂದು ಹೇಳುತ್ತಾರೆ. । ಒಮ್ಮೆಗಾದರು ಕಲ್ಪಾಂತದಲ್ಲಿ, ಪ್ರಳಯಕಾಲದಲ್ಲಿ ವೇದಾಗಮ್ಯ, ವೇದದಿಂದ ಸಾಕಲ್ಯೇನ ತಿಳಿಯಲಿಕ್ಕೆ ಅಶಕ್ಯ. ॥೩೪॥

**೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ**

ಉಪಸಂಹರತಿ "ಒಮ್ಮೆ" ಇತಿ॥ ಯೋಗ್ಯತಾತಿರೇಕೇಣ ॥
ವಿಷಮತ್ವಂ ಭವೇತ್ ಕ್ವಾಪಿ ಶುಭಾಶುಭವಿಷಯಯೋ ॥೩೩॥

**ಇತಿ ಶ್ರೀಹರಿಕಥಾಮೃತಸಾರ ಟೀಕಾಯಾಂ**
**ಭಕ್ತಾಪರಾಧಸಹಿಷ್ಣು ಸಂಧಿಃ ಸಮಾಪ್ತಃ ॥೩೪॥**

## ಕನ್ನಡಾರ್ಥ

ಈ ಸಂಧಿಯನ್ನು ಮುಗಿಸುತ್ತಾರೆ-'ಒಮ್ಮೆ'-ಎಂಬ ಪದ್ಯದಿಂದ. ॥೩೪॥

**೫. ಭಾವಪ್ರಕಾಶಿಕೆ**

ಪರಮಾತ್ಮನಿಗೆ ಯಾವ ಕಾಲದಲ್ಲೂ ಜೀವರಲ್ಲಿ ದ್ವೇಷವಾಗಲೀ, ಅಸೂಯೆಯಾಗಲೀ, ವಂಚನೆಯಾಗಲೀ ಇಲ್ಲ. ಎಲ್ಲರನ್ನೂ ಸಮವಾಗಿ ತಿಳಿದು ಸಮಾಧಾನಗೊಳಿಸುವನು. ಹಾಗಾದರೆ, ತಮೋ ಯೋಗ್ಯರು, ಮುಕ್ತಿಯೋಗ್ಯ

ರೆಂಬ ಭೇದವೇನು? ಅವರ ಗತಿ ಏನೆಂದರೆ- ತನ್ನ ವಂಚನೆಯಿಂದ ಫಲವ್ಯತ್ಯಾಸ ಮಾಡುವುದಿಲ್ಲ. ಅವರವರು ಮಾಡುವ ಪುಣ್ಯಪಾಪದ ಕರ್ಮಗಳನ್ನನುಸರಿಸಿ. ಮುಕ್ತಿಯೋಗ್ಯರಿಗೆ ಮುಕ್ತಿಯನ್ನೂ, ಮಧ್ಯಮರಿಗೆ, ನಿತ್ಯಸಂಸಾರವನ್ನೂ, ತಮೋಯೋಗ್ಯರಿಗೆ ತಮಸ್ಸನ್ನೂ-ಮೂವರ ಯೋಗ್ಯತಾನುಸಾರ, ಬ್ರಹ್ಮಕಲ್ಪಾವಸಾನದಲ್ಲಿ ಅವರವರಿಗೆ ಕೊಡುವನು. ಇಂತಹ **ಶ್ರೀಜಗನ್ನಾಥ ವಿಠ್ಠಲನು**, ವೇದಗಳಿಂದಲೂ ಸಹ ತಿಳಿಯಲಶಕ್ಯವಾದ ಮಹಿಮೆಯುಳ್ಳವನು. ॥೩೫॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಶ್ರೀಮನ್ನಾರಾಯಣನು ಸರ್ವದೋಷವಿದೂರನು. ಯಾವ ದೋಷವಾಗಲೀ, ಯಾವಕಾಲದಲ್ಲೂ ಲೇಶಮಾತ್ರವಾದರೂ, ಆ ಅನಂತ ಕಲ್ಯಾಣಗುಣಸಂಪನ್ನದಲ್ಲಿ ಇಲ್ಲವೇ ಇಲ್ಲ. ಈ ಅಭಿಪ್ರಾಯವನ್ನು ದಾಸರಾಯರು **ಒಮ್ಮೆಗಾದರು**-ಎಂಬ ಶಬ್ದದಿಂದ ಸೂಚಿಸುತ್ತಾರೆ.

೨. ಪಕ್ಷಪಾತ (ವೈಷಮ್ಯ)-ದ್ವೇಷ-ಉದಾಸೀನಭಾವ- ಅತಿಸ್ನೇಹ-ಎಂಬುವು ದೋಷಗಳು. ಮುಕ್ತಿಯೋಗ್ಯ ಚೇತನರಾದ ಸಾತ್ವಿಕರಲ್ಲಿ ಅವನಿಗೆ ಅಂತಃಕರಣ ಪೂರಿತವಾದ ವಿಶೇಷ ಸ್ನೇಹಭಾವವಿಲ್ಲ. ನಿತ್ಯಸಂಸಾರಿಗಳಾದ ರಾಜಸರಲ್ಲಿ ಉದಾಸೀನ ಭಾವವು ಇಲ್ಲ. ಇದನ್ನು **ಅಸೂಯೆ**-ಎಂದು ಕರೆದಿದ್ದಾರೆ. ಸಾಮಾನ್ಯವಾಗಿ "ಅಸೂಯೆ"-ಎಂದರೆ, "ಮಾತ್ಸರ್ಯ"-ಎಂದರ್ಥವಾಗುವುದು ಇದೇ ಉದಾಸೀನಭಾವ, ತಮೋಯೋಗ್ಯರಾದ **ತಾಮಸರಲ್ಲಿ** ಅವನಿಗೆ ದ್ವೇಷವಿಲ್ಲ. ಮಹಾಮಹಿಮ ಸಂಪನ್ನನಾದ ಮಾಧವನಿಗೆ ಸ್ನೇಹ-ಉದಾಸೀನ-ದ್ವೇಷಗಳೆಂಬ ಪಕ್ಷಪಾತರೂಪವಾದ ದೋಷಗಳು ಎಂದೆಂದಿಗೂ ಇಲ್ಲವೇ ಇಲ್ಲವು.

೩. ಜೀವರ ಸ್ವರೂಪ ದೇಹಕ್ಕೆ ಆವರಣವಾಗಿ ಲಿಂಗದೇಹವು ಉಪಾಧಿ ರೂಪವಾಗಿದೆ. ಲಿಂಗಭಂಗದ್ವಾರಾ, ಜೀವರಿಗೆ ಅನಾದಿಕರ್ಮಾವರಣದಿಂದ

ಮುಕ್ತಿ, ಪರಮಕರುಣಾಳುವಾದ ಪರಮೇಶ್ವರನು ತ್ರಿವಿಧ ಜೀವರಿಗೂ ಲಿಂಗಭಂಗದ್ವಾರಾ, ಅವರವರ ನಿಜಗತಿಯನ್ನು ನೀಡುವನು. ಸಾತ್ವಿಕ ಜೀವರಿಗೆ ವಿರಜಾನದಿಯ ಸ್ನಾನದ್ವಾರಾ, ಮಧ್ಯಮ ಜೀವರಿಗೆ ಶ್ರೀವಾಯು ದೇವರ ಹುಂಕಾರದಿಂದಲೂ, ತಮೋಯೋಗ್ಯಚೇತನರಿಗೆ ಶ್ರೀವಾಯು ದೇವರ ಗದಾಪ್ರಹಾರದಿಂದಲೂ ಲಿಂಗದೇಹವು ಭಂಗವಾಗುವುದೆಂದು ಶಾಸ್ತ್ರಗಳು ತಿಳಿಸುತ್ತವೆ. ಇಂತಹ ಉಪಾಧಿಯನ್ನು ಕಳೆಯುವುದರಿಂದ, **ನಿರುಪಾಧಿಕ ಪೂರ್ವಕ**-ಎಂಬ ಶಬ್ದವನ್ನು ಪ್ರಯೋಗಿಸಿರುವರು.

**೪.** ಬ್ರಹ್ಮದೇವರ ಕಲ್ಪದ ಅಂತ್ಯಸಮಯದ ? (ಬ್ರಹ್ಮ ಕಲ್ಪಾಂತದಲಿ). ಜ್ಞಾನಗಮ್ಯನಾದ ಶ್ರೀಹರಿಯು ಆಯಾಯಾ ಜೀವರ ಸ್ವರೂಪ ಯೋಗ್ಯತೆಗನುಗುಣವಾಗಿ, ಅವರ ಸಾಧನ ಪೂರ್ತಿಯಾದನಂತರ, ಅವರವರ ನಿಜಗತಿಯನ್ನು ಯಾವ ನಿಮಿತ್ತವೂ ಇಲ್ಲದೇ ನೀಡುವನು.

**೫. ವೇದ**-ಎಂದರೆ, ಶ್ರೀಹರಿಯ ವಿಷಯವನ್ನು ತಿಳಿಸುವ ಜ್ಞಾನ ಭಂಡಾರ. ಶ್ರೀಪರಮಾತ್ಮನು ವೇದಪ್ರತಿಪಾದ್ಯನು. ಆದರೂ, ವೇದಾತೀತನು. ವೇದಗಳಿಗೂ ಸಹ (ವೇದಾಭಿಮಾನಿಯಾದ ಲಕ್ಷ್ಮೀದೇವಿಗೂ ಸಹ) ಸಾಕಲ್ಯೇನ ಅಗೋಚರನು. ಅಂತಹ ಜಗತ್ಸ್ವಾಮಿಯಾದ **ಜಗನ್ನಾಥ ವಿಠ್ಠಲ ನಾಮಕ**-ಶ್ರೀಹರಿಯು ತ್ರಿವಿಧಜೀವರಿಗೆ-ಸಾತ್ವಿಕರಿಗೆ ನಿತ್ಯಸುಖ ರೂಪವಾದ ಮುಕ್ತಿಯನ್ನೂ, ನಿತ್ಯಸಂಸಾರಿಗಳಿಗೆ ಸುಖದುಃಖ ಮಿಶ್ರಿತವಾದ ಸಾಂತಾನಿಕ ಲೋಕಗಳನ್ನು ಮತ್ತು ತಮೋಯೋಗ್ಯರಿಗೆ ನಿತ್ಯ ದುಃಖರೂಪವಾದ ಅಂಧತಮಸ್ಸನ್ನು ಕೊಡುವನು. ಇದೇ **ಅವರವರ ನಿಜಗತಿಯು.**

**॥ಪ್ರಸಕ್ತ ಪದ್ಯದ ಸರ್ವವ್ಯಾಖ್ಯಾನಸಾರಸಂಗ್ರಹವು ಪರಿಸಮಾಪ್ತಿಯಾಯಿತು. ॥**

॥ ಶ್ರೀಃ ಹರಿಃ ಓಂ ॥

# ಸಂಧಿ-೨೨ ಸಕಲದುರಿತನಿವಾರಣಸಂಧಿ

## ತಪ್ಪೋಲೆ

| ಕ್ರಮ ಸಂಖ್ಯೆ | ಪುಟ ಸಂಖ್ಯೆ | ಸಾಲಿನ ಸಂಖ್ಯೆ | ತಪ್ಪಾಗಿರುವುದು | ಸರಿಯಾಗಿ ಇರಬೇಕಾದದ್ದು |
|---|---|---|---|---|
| 1 | 2 | 3 | 4 | 5 |
| 1 | 1 | ಪಲ್ಲವಿ ಪದ್ಯ ಸಾಲು-3 | ಭಾಗವದ್ಭಕ್ತರಿನಾದರದಿ | ಭಗವದ್ಭಕ್ತರಿನಾದರದಿ |
| 2 | 6 | 11 | ತಿಳಿಯಜೇಕು | ತಿಳಿಯಬೇಕು |
| 3 | 28 | 18 | ಶಂಖಚಕ್ರ | ಶಂಖಚಕ್ರೇ |
| 4 | 34 | 11 | ಏಳುವುದು | ಏಳುವವು |
| 5 | 35 | 17 | ಬಂದಿದ್ದನು | ಬಂದಿದ್ದರು |
| 6 | 36 | 2 | ಸಗುತ್ತಿದ್ದರು | ನಗುತ್ತಿದ್ದನು |
| 7 | 40 | ಕೊನೆ ಸಾಲು | ಸ್ತ್ರೀಯರುಗಳ | ಸ್ತ್ರೀಯರುಗಳು |
| 8 | 51 | 10 | ಭಾಗವದ್ರೂಪಗಳಲ್ಲಿಯೇ | ಭಗವದ್ರೂಪಗಳಲ್ಲಿಯೇ |
| 9 | 52 | 3 | ಬ್ರಾಹ್ಮಣ್ಯದೇವಸ | ಬ್ರಹ್ಮಣ್ಯದೇವನ |
| 10 | 52 | 9 | ಕುಡಿತಿ | ಕುಡಿತೆ |
| 11 | 53 | 10 | ಸೆಗೆದಿಹ | ಸೆಗೆಹಿದ |
| 12 | 64 | 1 | ಇತ್ಯುಕ್ತಿಃ | ಇತ್ಯುಕ್ತೇಃ |
| 13 | 65 | 16 | ಗಳಲ್ಲಿದ್ದರಿಂವ | ಗಳಲ್ಲದ್ದರಿಂದ |
| 14 | 71 | 1 | ರಮಾಬ್ರಹ್ಮಾಂದಿ | ರಮಾಬ್ರಹ್ಮಾದಿ |
| 15 | 72 | 13 | ಸಂಶುಷ್ಟನಾಗಿ | ಸಂತುಷ್ಟನಾಗಿ |
| 16 | 72 | 18 | ಮಹಾಸುಖಿ | ಮಹಾಸುಖ |
| 17 | 74 | 13 | ಶೀ ಪುರಂದರದಾಸರ | ಶ್ರೀ ಪುರಂದರದಾಸರ |
| 18 | 75 | 6 | ವಾಲ ಖಿಲ್ಯಾದಿ | ವಾಲಖಿಲ್ಯಾದಿ |
| 19 | 76 | 8 | ಸಕಲಚರಾಪಚರ | ಸಕಲಚರಾಚರ |

| 1 | 2 | 3 | 4 | 5 |
|---|---|---|---|---|
| 20 | 80 | 17 | (ಶಿವೋಚ್ಚನೆಂದರ್ಥ) | ಸರ್ವೋಚ್ಚನೆಂದರ್ಥ |
| 21 | 81 | 21 | ಅಚ್ಚುತನು | ಅಚ್ಯುತನು |
| 22 | 82 | 9 | ತ್ರಿಗಣಗಳ | ತ್ರಿಗುಣಗಳ |
| 23 | 82 | 11 | ಅಖಳ ಜಗತ್ತಿಗೆ | ಅಖಿಳ ಜಗತ್ತಿಗೆ |
| 24 | 82 | 20 | ಹೃತ್ಪದ್ಮವೆಂದ | ಹುತ್ಪದ್ಮವೆಂಬ |
| 25 | 83 | 2 | ಧ್ಯಾನದಿಂದ | ಧ್ಯಾನದಿಂದ |
| 26 | 85 | 6 | ಖಂದೂ | ಅಂದು |
| 27 | 87 | 10 | ಕಮುದಿಂದ | ಕಮಲದಿಂದ |
| 28 | 88 | 8 | ಉವರಬಾಧುಗಳಿಂದ | ಉದಕಬಿಂದುಗಳಿಂದ |
| 29 | 89 | 9 | ಆವಿಭಾಗದಲ್ಲಿ | ಆದಿಭಾಗದಲ್ಲಿ |
| [illegible]0 | 93 | ಕೊನೆಯ ಸಾಲು | ತತ್ತ್ವಶ್ಚಬ್ದಾವಾಚ್ಯನಾಗಿ | ತತ್ತ್ವಶ್ಚಬ್ದವಾಚ್ಯನಾಗಿ |
| [illegible] | 94 | 1 | ತತ್ಲೈೀಶರಾದ | ತತ್ತ್ವೇಶರಾದ |
| [illegible]2 | 97 | 8 | ಚ್ಯುತಿಲ್ಲಿದ | ಚ್ಯುತಿ ಇಲ್ಲದ |
| 33 | 99 | 10 | ವಾನಸೀಂದ್ರಿಯ | ಮನಸೇಂದ್ರಿಯ |
| 34 | 99 | 15 | ಭೋಕ್ತ್ಯಗಳಲ್ಲಿದ್ದು | ಭೋಕ್ತೃಗಳಲ್ಲಿದ್ದು |
| 35 | 104 | 16 | ಅವರಿಹಾರ್ಯವಾದ | ಅಪರಿಹಾರ್ಯವಾದ |
| 36 | 100 | 5 | ಸಮೀಜೀನವಾದ | ಸಮೀಚೀನವಾದ |
| 37 | 109 | 17 | ತದದಿಂದ | ಪದದಿಂದ |
| 38 | 109 | ಕೊನೆಯ ಸಾಲು | ಪ್ರಸಾರಕ್ಕೆ | ಪ್ರಸಾದಕ್ಕೆ |
| 39 | 110 | 3 | ಆ ಕಮಲದಳಾಯಪಾಕ್ಷಯ | ಆ ಕಮಲದ–ಳಾಯತಾಕ್ಷನ- |
| [illegible] | 113 | 1 | ವನಿತೋಥ | ಜನಿತೋಥ |
| [illegible] | 115 | 7 | ದೇಹಗತ್ | ದೇಹಗತ |
| 42 | 115 | 12 | ಅರ್ಥ್ಯಿಸಿದೆ | ಅರ್ಥ್ಯಿಸಿದೆ |
| 43 | 115 | 13 | ಐತಶೇಯಭಾಷ್ಯದಲ್ಲಿ | ಐತರೇಯಭಾಷ್ಯದಲ್ಲಿ |
| 44 | 116 | 5 | ಪುತ್ರತ್ರೀನ | ಪುತ್ರತ್ವೇನ |
| 45 | 117 | 2 | "ವೃಷತು" | "ನೃಷತು" |

| 1 | 2 | 3 | 4 | 5 |
|---|---|---|---|---|
| 46 | 122 | 7 | (ಗುಳ್ಳಿಗಳು) | (ಗುಳ್ಳಿಗಳು) |
| 47 | 122 | 8 | ಪ್ರಿಯೂಷ | ಪೀಯೂಷ |
| 48 | 123 | 6 | ರತ್ನಪಿಶೇಷಗಳು | ರತ್ನವಿಶೇಷಗಳು |
| 49 | 131 | 10 | ಸದಾಗಮ್ಯರ್ಕವೇದ್ಯನು | ಸದಾಗಮೈಕವೇದ್ಯನು |
| 50 | 133 | 12 | ಪ್ರತಿಪಾದಿಸುವುದು | ಪ್ರತಿಪಾದಿಸುವವು |
| 51 | 133 | 19 | ಮಷ್ಕಿಪ್ರತೀಕರು | ಮುಖ್ಯಪ್ರತೀಕರು |
| 52 | 139 | 7 | ನಾದುದಿಂದ | ನಾಮದಿಂದ |
| 53 | 142 | 15 | ಅನಾದಿಯೋಗೃತಾ | ಅನಾದಿಯೋಗ್ಯತಾ |
| 54 | 146 | 17 | ಶಕ್ಯರಿಲ್ಲದವನು | ಶಕ್ಯವಿಲ್ಲದವನು |
| 55 | 147 | 6 | ಎನಿಸುತಾರೆ | ಎನಿಸುತ್ತಾನೆ |
| 56 | 157 | 2 | ಎಂದ | ಎಂದು |
| 57 | 161 | 2 | ಉಪಗ್ರಾಮಾಸ್ಥನಾಗಿದ್ದು | ಉಪಗ್ರಾಮಸ್ಥ-ನಾಗಿದ್ದು |
| 58 | 163 | 10 | ಪೂಜಂತವಾದ | ಪೂಜಿತವಾದ |
| 59 | 165 | 6 | ಪ್ರಸಾರಕ್ಕೂ | ಪ್ರಸಾದಕ್ಕೂ |
| 60 | 165 | 15 | ಶಪೋ | ಶಿವೋ |
| 61 | 166 | 18 | ನಾಪಮಾಡುತ್ತಾನೆ | ನಾಶಮಾಡುತ್ತಾನೆ |
| 62 | 167 | 7 | ಕರ್ಮಪಶರಾಗಿ | ಕರ್ಮವಶರಾಗಿ |
| 63 | 167 | ಕೊನೆಯ ಸಾಲು | ವಸ್ತ್ರಗಳಿಂದ | ವಸ್ತುಗಳಿಂದ |
| 64 | 168 | 8 | ತತ್ತ್ವಲಗಳುಣದೆ | ತತ್ತ್ವಲಗಳುಣದೆ |
| 65 | 169 | 17 | ಗಟಪಿಶೇಷರಲ್ಲಿ | ಘಟವಿಶೇಷರಲ್ಲಿ |
| 66 | 171 | 11 | ಅನೀಕವಿರುವುವು | ಅನೇಕವಿರುವವು |
| 67 | 174 | 21 | ಪೊಂದಿದ್ದು | ಪೊಂದಿದ್ದು |
| 68 | 179 | ಶೀರ್ಷಿಕೆ | ಶ್ರೀ ಗುರುಹೃವಪ್ರಯಕಾಶಿಕ | ಶ್ರೀ ಗುರುಹೃದಯ-ಪ್ರಕಾಶಿಕೆ |
| 69 | 180 | 16 | ಮಿಶ್ರಪಾಗಿರುವ | ಮಿಶ್ರವಾಗಿರುವ |
| 70 | 189 | 2 | ಪಂಟಸೂನಾ | ಪಂಚಸೂನು |

| 1 | 2 | 3 | 4 | 5 |
|---|---|---|---|---|
| 71 | 197 | 18 | ನಿಂತು | ಇಟ್ಟು |
| 72 | 199 | 11 | ಎಣಿಸದೆ | ಎಣಿಸದೆ |
| 73 | 200 | 13 | ನಾಲಿಗೆಯಂದ | ನಾಲಿಗೆಯಿಂದ |
| 74 | 200 | 14 | (ಕೂಗುತ್ತಲೇ) | (ಕೂಗುತ್ತಲೇ) |
| 75 | 204 | 1 | ವರ್ಣಿಸುವ | ವರ್ಣಿಸುವೆ |
| 76 | 206 | 18 | ತಪ್ಪೋಪದೇಶ | ತತ್ತ್ವೋಪದೇಶ |
| 77 | 209 | 12 | ಸೇರದೆ | ಸೇರಿದ |
| 78 | 210 | ಶೀರ್ಷಿಕೆ | ಶ್ರೀ ಗುರು-<br>ಹೃದಪ್ರಯಕಾಶಿಕೆ | ಶ್ರೀ ಗುರು-<br>ಹೃದಯಪ್ರಕಾಶಿಕೆ |
| 79 | 211 | 13 | ನಿನ್ನನ್ನು | ನನ್ನನ್ನು |
| 80 | 218 | 4 | ಗಂಭೀರವಾದ | ಗಂಭೀರವಾದ |
| 81 | 220 | 4 | ಶ್ರಿ ಪದ್ಮನಾಭನ | ಶ್ರೀ ಪದ್ಮನಾಭನ |
| 82 | 220 | 15 | ಸರ್ದಾರ್ಥಪ್ರದಾಯಕನು | ಸರ್ವಾರ್ಥಪ್ರದಾಯಕನು |

॥ ಶ್ರೀ ಕೃಷ್ಣಾರ್ಪಣಮಸ್ತು ॥